SPECIAL EDITION

VOL. 09, ISSUE: 05 ⁕ **ಪ್ರತಿಸ್ಪಂದ** ⁕ 29 DEC 2025

ಕೊಡು ಕೊಳ್ಳುವಿಕೆಯ ಸಂಕರ

ಅಧ್ಯಾಯ ಪತ್ರಗಳ ರಚನೆ

ನಾಡಗೀತೆ – ಶತಮಾನದ ಕವಿತೆ

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಜಯ

ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂಧನರವತರಿಸಿದ
ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!
ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ!
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ!
ಕಪಿಲ ಪತಂಜಲ ಗೌತಮ ಜಿನನುತ,
ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ.
ಕುಮಾರವ್ಯಾಸರ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ.
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

ಕರ್ನಾಟಕ ನಾಡಗೀತೆ: ಶತಮಾನದ ಕವಿತೆ

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ.
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ!
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ.

ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025

VOLUME: 09, ISSUE: 05, DECEMBER 2025

ವಿಶೇಷ ಸಂಚಿಕೆ

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispanda@gmail.com
website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
BMS Govt. First Grade College, Huliyar - Kenkere
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

ಕರ್ನಾಟಕದ ಪ್ರಜೆಗಳಾದ ನಾವು,

ನಮ್ಮ ನಾಡು, ನುಡಿ ಮತ್ತು ಸಂಸ್ಕೃತಿ ಕುರಿತು ಸದಾ ಗೌರವ ಹಾಗೂ ಎಚ್ಚರಿಕೆಯನ್ನು ಹೊಂದಿರಬೇಕು. ಯಾವ ಕಿಟಕಿ, ಬಾಗಿಲುಗಳಿಂದ ಬಂದರು ಸ್ವೀಕರಿಸುವ ಗುಣವಿದ್ದ ನಾವು ಜ್ಞಾನವನ್ನು ಮೀರಿ ಎಲ್ಲಾ ಕ್ಷೇತ್ರಗಳಿಗೂ ಅನ್ವಹಿಸುತ್ತಾ ಪರಕೀಯತೆಯ ನಡುವೆ ನಾವೇ ನಲುಗುವ ಹಂತ ತಲುಪಿರುವುದು ನಮ್ಮ ಅಂತಿಮ ಸಂದೇಶ.

1925ರ ಕಾಲಘಟ್ಟದಲ್ಲಿ 21 ವರ್ಷದ ಯುವಕನಾದ ಕುವೆಂಪು ಅವರು ಕರ್ನಾಟಕವನ್ನು ಸಮಗ್ರವಾಗಿ ಅಧ್ಯಯನಮಾಡಿ, ಭಾರತದ ಏಕತೆ ಮತ್ತು ಐಕ್ಯತೆಯೊಂದಿಗೆ ಗೌರವಿಸಿ ನಾಡಗೀತೆ ರಚಿಸಿದರು. ಆ ಹಂತದಲ್ಲಿ ಈ ಕವಿತೆಯು ಈ ನಾಡನ್ನು ಪ್ರತಿನಿಧಿಸುವ ಗೀತೆಯಾಗುವ ಯಾವ ಊಹೆಯೂ ಇರಲಿಲ್ಲ. ಆದರೆ, ಆ ಕಾಲಘಟ್ಟದಲ್ಲಿ ನಾಡು, ನುಡಿ ಹಾಗೂ ದೇಶ ಪ್ರೇಮಗಳ ಕುರಿತು ಅಂದಿನ ಪ್ರತಿಯೊಬ್ಬರ ಗೌರವ ಪ್ರತಿಕ್ರಿಯೆಗಳಾಗಿ ಈ ನಾಡಗೀತೆ ರಚನೆಯಾಯಿತು. ಪುರಾಣ, ಇತಿಹಾಸ, ಸಾಹಿತ್ಯ ಮತ್ತು ಆಧ್ಯಾತ್ಮಗಳನ್ನು ಮೇಳೈಸಿರುವ ಈ ದಾಖಲೆಯು ಕನ್ನಡಿಗರ ಪರಿಪೂರ್ಣ ಹಿರಿಮೆಯನ್ನು ದಾಖಲಿಸುತ್ತದೆ. ಈ ಕುರಿತು 'ಜೀವನ ಪ್ರೀತಿ' ಮಾಲಿಕೆಯ ಎಂಟನೆಯ ಕೃತಿಯಾಗಿ ಆಲೋಚಿಸಿದಾಗ ನಾಡಿನ ಅಧ್ಯಯನಶೀಲರು ಉತ್ತಮ ಪ್ರತಿಕ್ರಿಯೆ ನೀಡಿದರು. ಅದರ ಫಲಶ್ರುತಿಯಾಗಿ ಈ ಮುಂದಿನ ಎಲ್ಲಾ ಬರಹಗಳು ಧ್ವನಿಸಿವೆ.

ಈ ಕೃತಿಯಲ್ಲಿ ಶತಮಾನದ ಕವಿತೆಯಾಗಿ ನಾಡಗೀತೆ, ನಾಡಗೀತೆಯೊಳಗಿನ ನಾಡಿನ ಹಿರಿಮೆ, ಕನ್ನಡ ನಾಡು, ನುಡಿ, ನಡೆ ಚಿಂತನೆ, ನಾಡಗೀತೆಯೊಳಗಿನ ಪ್ರಕೃತಿ– ವರ್ತಮಾನದ ತಲ್ಲಣಗಳು,

ನಾಡಗೀತೆಯೊಡಗೂಡಿದ ಶ್ರೀಸಾಮಾನ್ಯರ ಬದುಕು ಮತ್ತು ಮೆಲುಕು, ಕವಿಗಳ ಕಣ್ಮನದಲ್ಲಿ: ಕನ್ನಡ ನಾಡು – ನುಡಿ, ವಿದ್ಯಾರ್ಥಿಗಳಲ್ಲಿ ನಾಡಗೀತೆ ಅರಿವು: ಪ್ರಸ್ತುತತೆ, ದಕ್ಷಿಣ ಭಾರತದ ರಾಜ್ಯಗೀತೆಗಳ ತೌಲನಿಕ ಅಧ್ಯಯನ(ದಕ್ಷಿಣ ಭಾರತದ ರಾಜ್ಯಗಳನ್ನು ಅನುಲಕ್ಷಿಸಿ), ಕನ್ನಡ ಭಾಷಾ ಏಕೀಕರಣ ಚಳವಳಿಯ ಹಾಡುಗಳು ಈ ಎಲ್ಲಾ ಲೇಖನಗಳು ವರ್ತಮಾನದ ಕನ್ನಡಿಯಲ್ಲಿ ನಾಡಗೀತೆಯನ್ನು ನೋಡುವ, ಆಲೋಚಿಸುವ ಅಧ್ಯಯನಗಳಾಗಿವೆ. ಈ ಅಧ್ಯಯನಗಳು ಓದುಗರಲ್ಲಿ ಹೊಸ ಚಿಂತನೆಗಳಿಗೆ ಸಾಕ್ಷಿಯಾದರೆ ಅದುವೆ ನಮ್ಮ ಈ ಎಲ್ಲಾ ಪ್ರಯತ್ನಕ್ಕೂ ಅರ್ಥ ದೊರೆಯುತ್ತದೆ.

ಡಾ. ರವಿಶಂಕರ್ ಎ.ಕೆ.

(ಜೀವನ ಪ್ರೀತಿ ಮಾಲಿಕೆಯ ಪರವಾಗಿ)

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941

Linking ISSN (ISSN-L): 2320-9941

Key-title: Prathispandha

Title proper: Prathispandha.

Country: India

Medium: Print

Last modification date: 01/09/2014

Type of record: Confirmed

ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ INDEX

1. ಶತಮಾನದ ಕವಿತೆಯಾಗಿ ನಾಡಗೀತೆ

- ಡಾ. ರವಿಶಂಕರ್ ಎ.ಕೆ. **1–9**

2. ನಾಡಗೀತೆಯೊಳಗಿನ ನಾಡಿನ ಹಿರಿಮೆ

– ಡಾ. ಪ್ರಸನ್ನಕುಮಾರ್ ಕೆ. **10–20**

3. ಕನ್ನಡ ನಾಡು, ನುಡಿ, ನಡೆ ಚಿಂತನೆ

– ಡಾ. ಆನಂದ ಎಸ್.ಎನ್. **21–32**

4. ನಾಡಗೀತೆಯೊಳಗಿನ ಪ್ರಕೃತಿ– ವರ್ತಮಾನದ ತಲ್ಲಣಗಳು

– ಡಾ. ಸಂಧ್ಯಾ ಹೆಚ್.ಎಸ್ **33–47**

5. ನಾಡಗೀತೆಯೊಡಗೂಡಿದ ಶ್ರೀಸಾಮಾನ್ಯರ ಬದುಕು ಮತ್ತು ಮೆಲುಕು

– ಡಾ. ಮೇಘನ ಜಿ. **48–58**

6. ಕವಿಗಳ ಕಣ್ಮನದಲ್ಲಿ: ಕನ್ನಡ ನಾಡು – ನುಡಿ

– ಡಾ. ಮಹಾಂತೇಶ ದುರಗಣ್ಣವರ **59–99**

7. ವಿದ್ಯಾರ್ಥಿಗಳಲ್ಲಿ ನಾಡಗೀತೆ ಅರಿವು: ಪ್ರಸ್ತುತತೆ

– ಡಾ. ಡಿ. ವೀರೇಶ **100–105**

8. ದಕ್ಷಿಣ ಭಾರತದ ರಾಜ್ಯಗೀತೆಗಳ ತೌಲನಿಕ ಅಧ್ಯಯನ

(ದಕ್ಷಿಣ ಭಾರತದ ರಾಜ್ಯಗಳನ್ನು ಅನುಲಕ್ಷಿಸಿ)

– ಡಾ. ಸೈಯದ್ ಮುಯಿನ್ **106–119**

9. ಕನ್ನಡ ಏಕೀಕರಣ ಚಳವಳಿಯ ಹಾಡುಗಳಲ್ಲಿ :

ಕನ್ನಡ–ಕನ್ನಡಿಗ–ಕರ್ನಾಟಕ

– ಡಾ. ರವೀಂದ್ರ ಕೆ.ವಿ **120–157**

ಶತಮಾನದ ಕವಿತೆಯಾಗಿ ನಾಡಗೀತೆ

ರಚನೆ : **ಕುವೆಂಪು**

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂಧನರವತರಿಸಿದ
ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!
ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ!
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ!
ಕಪಿಲ ಪತಂಜಲ ಗೌತಮ ಜಿನನುತ,

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಭಾರತ ಜನನಿಯ ತನುಜಾತೆ!
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ.
ಕುಮಾರವ್ಯಾಸರ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ.
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ.
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ!
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ

ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ.

ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!
ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಕರ್ನಾಟಕದ ನಾಡಗೀತೆಯು ಹಲವು ಆಯಾಮದ ಪ್ರಶ್ನೆಗಳನ್ನು ಈ ಶತಮಾನದ ಹೊಸ್ತಿಲಲ್ಲಿ ನಮ್ಮ ಮುಂದಿಡುತ್ತಿದೆ. ನಾಡಗೀತೆ ಎಂದರೆ ನಾಡಿನ ಹಿರಿಮೆಯನ್ನು ಸಾರುವ ಸಂಕೇತಗೀತೆ. ಈ ನಾಡಗೀತೆಯು ರಚನೆಯಾಗುವಾಗ ನಾಡಿನ ಯಾವ ಆಯಾಮವೂ ಇರಲಿಲ್ಲ. ಕರ್ನಾಟಕವು ಇಪ್ಪತ್ತು ಪ್ರಾಂತ್ಯಗಳಲ್ಲಿ ವಿಭಾಗೀಯವಾಗಿತ್ತು. ಇಲ್ಲಿ ನಾಡಿನ ಪರಿಕಲ್ಪನೆ ಹೇಗೆ ಬರಲು ಸಾಧ್ಯ. ಆದರೆ, ಭಾರತೀಯ ಮಣ್ಣಿನಲ್ಲಿ ನೂರಾರು ಶ್ರೇಷ್ಠ ಚಿಂತನೆಗಳು ಭವಿಷ್ಯ ದರ್ಶನದಂತೆ ರಚನೆಯಾಗಿವೆ. ಕಾಳಿದಾಸನು ಭಾರತದ ನಕಾಶೆಯನ್ನೇ ಕಾವ್ಯದಲ್ಲಿ ಮೂಡಿಸಿದ್ದು ಇಂದಿಗೂ ಸಂಶೋಧನೆಗೊಳ್ಳುತ್ತಿರುವ ವಿಚಾರ. ಅರಬಿಂದೋ ಅವರ ಭವಿಷ್ಯ ದರ್ಶನವು ಅದೆಷ್ಟೋ ಸೂಕ್ಷ್ಮ ಸಂವೇದನೆಗಳಿಗೆ ಸಾಕ್ಷಿಯಾಗಿದೆ.

ಇಂತಹ ಸಂದರ್ಭದಲ್ಲಿ ಇಪ್ಪನಾಲ್ಕು ವರ್ಷದ ಸಾಹಿತ್ಯ ಸಂವೇದನೆಗಳ ಆ ಯುವಕ ಕುವೆಂಪು ಅವರಲ್ಲಿ ಈ ಸಮಗ್ರೀಯ ದೃಷ್ಟಿಕೋನ ಬಂದಿರುವುದು ಅಧ್ಯಯನದ ಶಕ್ತಿಯ ಫಲ. ಈ ಅಖಂಡ ಕರ್ನಾಟಕದ ಪರಿಕಲ್ಪನೆ ಇರದಿದ್ದರೂ ಕನ್ನಡ ನಾಡಿನ ಪರಿಕಲ್ಪನೆ ಅಂದಿನ ಹಲವರು ಮೂಡಿರುವುದು ಕಾಣಿಸುತ್ತದೆ. ಉಯಿಲಗೋಳ ನಾರಾಯಣರಾಯರು ಅವರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಆ ವೇಳೆಗೆ ಬೆಳಕು ತುಂಬಿತ್ತು. ಕಾಂಗ್ರೇಸ್ ಅಧಿವೇಶನದಲ್ಲಿ ಬಾಲಕಿ ಗಂಗೂಬಾಯಿ ಹಾನಗಲ್ ಅವರ ಸ್ವರದಲ್ಲಿ ಮೂಡಿ ಕನ್ನಡ ನಾಡಿನ

ಕಲ್ಪನೆ ಮೂಡಿತ್ತು. ಇದೆಲ್ಲವೂ ಇತಿಹಾಸ ಎನಿಸಿದರೂ ಶತಮಾನ ತುಂಬಿರುವ ಈ ಎರಡು ನಾಡಗೀತೆಗಳು ಕನ್ನಡ ನಾಡಿನ ಬೆಳಕನ್ನು ಕುರಿತು ಆಲೋಚಿಸಿದ್ದವು. ಅಂದಿನ ಕರ್ನಾಟಕದ ಹಿರಿಮೆಯನ್ನು ದಾಖಲಿಸಿದ್ದವು. ಆದರೆ, ಇದೇ ನಾಡಗೀತೆ ಈಗ ಹಿರಿಮೆಯ ವಿಚಾರದಲ್ಲಿ ವಿಶ್ವಸಮನ್ವಯದ ತೊಟ್ಟಿಲಾಗಿದೆ.

ಇಂದು ನಾಡಗೀತೆಯನ್ನು ಕೇಳುವ ಮನಸ್ಸು ಇತಿಹಾಸದ ಒಂದು ಹಾಡನ್ನು ಕೇಳುವಂತೆ ಆನಂದಿಸುತ್ತದೆ. ಭಕ್ತಿ ಮೂಡುತ್ತದೆ, ಸ್ವಾಭಿಮಾನ ಮೂಡುತ್ತದೆ. ಮೈಸೂರು ಅನಂತಸ್ವಾಮಿ, ಸಿ.ಅಶ್ವತ್ ಅವರ ಸಂಗೀತವಂತೂ ಇಂದಿಗೂ ನರನಾಡಿಗಳ ವೈಭವದ ಕುರುಹಾಗಿದೆ. ಆದರೆ, ಒಂದು ಕಾಲದ ಇತಿಹಾಸವನ್ನು ದಾಖಲಿಸಿದ ಕವಿತೆಗಳಂತೆಯೇ ಇಂದು ಕೆಲವು ಪ್ರಶ್ನೆಗಳು ನಮಗೆ ಮೂಡುತ್ತವೆ.

ರಾಷ್ಟ್ರ ಮತ್ತು ನಾಡಿನ ಐಕ್ಯತೆ

ನಮ್ಮ ನಾಡಗೀತೆಯನ್ನು ಓದಿದರೆ ಸಾಕು, ಮೊದಲು ದೇಶ ನಂತರ ನಮ್ಮ ನಾಡಿನ ಅನಂತತೆಯ ಸಮ್ಮಿಲನ ಕಾಣುತ್ತದೆ. ದೇಶವನ್ನು ನಮ್ಮ ಕವಚವನ್ನಾಗಿಯೇ ಕುವೆಂಪು ಗಮನಿಸಿದ್ದರು. ಆದರೆ, ರಾಜಕೀಯವಾಗಿ ದೇಶ ಮತ್ತು ನಾಡಿನ ನಡುವೆ ಹಲವು ಅಂತರಗಳನ್ನು ಸೃಷ್ಟಿಸುತ್ತಿರುವುದನ್ನು ನಾವು ಗಮನಿಸಬೇಕಿದೆ. ನಮ್ಮ ತಲೆಮಾರುಗಳು ಸೃಷ್ಟಿಸಿದ ವಿಶ್ವದೊಳಗಣ ನುಡಿಯನ್ನು ಅರಿಯಬೇಕಿದೆ. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ರಚನೆಯಾದಾಗ ಅದು ದೇಶಪ್ರೇಮವನ್ನು ಗಮನಿಸಿರಲಿಲ್ಲ. ನಾಡಿಗೆ ಮಾತ್ರ ಸೀಮಿತವಾಗಿ, ನಾಡಿನ ವಿಚಾರದಲ್ಲಿಯೂ ಅಖಂಡ ಚಿಂತನೆಗಳು ಕಂಡುಬರಲಿಲ್ಲ. ಈ ಕಾರಣದಿಂದ ಯುವಕ ಕುವೆಂಪು ಅವರಲ್ಲಿ ಸಮಗ್ರೀಯ ದೃಷ್ಟಿಕೋನ ಮೂಡಿತು. ಅದು ಅನಂತತೆಯ ಹಾದಿಗೆ ಸಾಕ್ಷಿಯಾಯಿತು.

ಪ್ರಕೃತಿ ಮತ್ತು ಆದರ್ಶ

19ನೇ ಶತಮಾನವು ಪ್ರಕೃತಿ ಮತ್ತು ಆದರ್ಶವನ್ನು ಬದುಕಿನ ಭಾಗವಾಗಿ ಸ್ವೀಕರಿಸಿದ್ದರು. ಗಂಧದನಾಡಾಗಿಯೂ, ಚಂದದ ಬೀಡಾಗಿಯೂ ಶೋಭಿಸಲು ಕಾರಣವಾಗಿತ್ತು. ರಾಘವ ಮಧುಸೂದನರು ಕೂಡ ಹೋರಾಟ, ಸ್ವಾಭಿಮಾನ,

ನಾಡು–ನುಡಿ ಮೊದಲಾದ ಆಯಾಮಗಳಿಗೆ ಮುಖ್ಯವಾಗಿದ್ದರು. ನೂರು ವರ್ಷಗಳೊಳಗೆ ಇವರೆಲ್ಲ ಧರ್ಮದ ಬಲೆಯಲ್ಲಿ ಸಿಲುಕುವ ನಮ್ಮ ವಿಶ್ವಮಾನ್ಯ ಶಿಕ್ಷಣದ ನೈತಿಕತೆಯು ಹಲವು ಆಶ್ಚರ್ಯಗಳನ್ನು ತೆರೆದಿಡುತ್ತದೆ. ಏನೇ ಆದರೂ, ನಮಗೆ ಪುರಾಣ ಕಥೆಗಳಲ್ಲಿ ಮೂಡುವ ಇವರೆಲ್ಲ ಮುಖ್ಯವೇ ಆಗುತ್ತಾರೆ. ಸೀತಾ, ಪಾರ್ವತಿ, ಶಿವ ಮೊದಲಾದಂತೆ ಪುರಾಣ ಪಾತ್ರಗಳು ದೈವಬಿಂಬವನ್ನೂ ಮೀರಿ ನಮ್ಮೊಳಗೆ ಪ್ರಧಾನವಾಗಬೇಕು. ಭಾರತ ದೇಶದ ಅತ್ಯುನ್ನತ ಚರಿತ್ರೆಯಾಗಿ ನಮ್ಮ ಪುರಾಣ ಕಥೆಗಳು ನೀಡುವ ಆದರ್ಶವು ಕನ್ನಡ ಮಣ್ಣಿಗೂ ಸೋಂಕಿದೆ. ಅದು ನಮಗೆಲ್ಲಾ ನೈತಿಕ ಸ್ಥೈರ್ಯಕ್ಕೆ ದಾರಿಯಾಗಬೇಕಿದೆ.

ಸಮಾಜ ಸುಧಾರಣೆ ಮತ್ತು ಸಾಹಿತ್ಯ ರಚನೆ

ಕುವೆಂಪು ನಾಡಗೀತೆಯನ್ನು ರಚಿಸುವ ಉದ್ದೇಶದಲ್ಲಿ ಸ್ಥಾನ, ಶ್ರೇಷ್ಠ ಮೊದಲಾದ ಆಯಾಮಗಳು ಇರಲಿಲ್ಲ. ಈ ಕಾರಣದಿಂದಲೇ ನಾಡಗೀತೆ ಹಲವು ಚರ್ಚೆಗಳಿಗೆ ಕಾರಣವಾಯಿತು. ಹೌದು ನಾಡಗೀತೆಯಲ್ಲಿ ಹಲವು ಹೆಸರುಗಳು ಉಲ್ಲೇಖವಾಗಿಲ್ಲ. ಅವರ ಪರಂಪರೆಯು ಮಾತ್ರ ಮರೆಯಾಗಿಲ್ಲ. ಸಮಾನ ಪರಂಪರೆಗಳನ್ನು ಸಡಿಲಿಸಿ ಇಲ್ಲಿ ಕೆಲವರನ್ನು ದಾಖಲಿಸುತ್ತಾರೆ. ತತ್ತ್ವಜ್ಞಾನಿಗಳು, ಸಿದ್ಧಾಂತ ಸ್ವರೂಪ ಶ್ರೇಷ್ಠರು ಅದೇ ಸಾಲಿನಲ್ಲಿ ನಮ್ಮ ಕನ್ನಡ ಕವಿಗಳು ಉಲ್ಲೇಖಿತರಾಗುತ್ತಾರೆ. ನಾವು ಈ ನಾಡಗೀತೆಯನ್ನು ಅಧ್ಯಯನಕ್ಕೆ ನೀಡುವಾಗ ವಿಸ್ತೃತ ಸ್ವರೂಪವನ್ನು ಕಾಣಿಸಲು ಇಲ್ಲಿ ಅವಕಾಶವಿದೆ. ಕಪಿಲ, ಪತಂಜಲಿ, ಗೌತಮ, ಜಿನ ಮೊದಲಾದಂತೆ ಭಾರತೀಯ ಋಷಿಮುನಿಗಳು ಸಂಸ್ಕೃತದ ಮೂಲಕ ಮಣ್ಣಿನ ಗುಣವನ್ನು ದಾಖಲಿಸಿದ್ದರು. ಈ ವಿಚಾರವನ್ನು ಎಂ. ಚಿದಾನಂದಮೂರ್ತಿಯವರು ಅತ್ಯಂತ ವಿಸ್ತಾರವಾಗಿ ಚರ್ಚಿಸಿದ್ದಾರೆ. ಆದರೆ, ಇವರ ಜೊತೆಯಲ್ಲಿಯೇ ಚರ್ಚಿಸಬಹುದಾದ ಇನ್ನೂ ಹಲವು ಋಷಿಗಳ ಪುರಾಣ ಚರಿತ್ರೆಯನ್ನು ಉಲ್ಲೇಖಿಸಬಹುದು. ವಸಿಷ್ಠ, ಮರೀಚಿ, ಪುಲಸ್ತ್ಯ, ಪುಲಹ, ಅತ್ರಿ, ಅಂಗೀರಸ, ಕೃತು, ಮಾರ್ಕಂಡೇಯ, ಗರ್ಗ್, ಸುಶ್ರುತ, ಚರಕ ಹೀಗೆ ಹಲವು ಹೆಸರುಗಳನ್ನು ಭಾರತೀಯ ಹಿನ್ನಲೆಯಲ್ಲಿ ಗುರ್ತಿಸಬಹುದು. ಇವೆಲ್ಲವೂ ನಾಡಗೀತೆಯ ವಿಸ್ತೃತ ಅಧ್ಯಯನದಲ್ಲಿ ತಿಳಿಸಿದಾಗ ದೇಶದ ಘನತೆಯ ಅರಿವಾಗುತ್ತದೆ. ಮೇಲ್ಕಂಡವರಲ್ಲಿ ಕರ್ನಾಟಕದಲ್ಲಿಯೂ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಬದುಕಿದವರು ಕಂಡುಬರುತ್ತಾರೆ. ಸಂಗೀತದಲ್ಲಿ ಏಳನೇ ಚಕ್ರವನ್ನು ಋಷಿ ಚಕ್ರ ಎನ್ನುವರು. ಇದು ನಾಡು ಮತ್ತು ದೇಶವನ್ನು ಬೆಸೆಯುವ ವಿಚಾರ.

ಕವಿಗಳ ವಿಚಾರದಲ್ಲಿಯೂ ಕುವೆಂಪು ಅಂತಹ ರಾಜಕಾರಣವನ್ನೇನು ನಿರೂಪಿಸಿದೆ, ಕೆಲವರನ್ನು ಪರಂಪರೆಯ ಧಾತೃಗಳಾಗಿ ಉಲ್ಲೇಖಿಸಿದ್ದಾರೆ. ಜನ್ನ, ನಾಗವರ್ಮ, ನಾಗಚಂದ್ರ ಇವರೆಲ್ಲಾ ಪಂಪರ ಸಾಲಿನಲ್ಲಿಯೇ ಕಾನಿಸಬಹುದು. ಬಸವಣ್ಣನವರು ಇಡೀ ವಚನ ಸಾಹಿತ್ಯದ ಪ್ರತಿನಿಧಿಯಾಗಿ ಇಲ್ಲಿ ಕಾಣಿಸುತ್ತಾರೆ. ನೂರಾರು ವಚನಕಾರರ ಉಲ್ಲೇಖಗಳನ್ನು ಇಲ್ಲಿ ತರಲು ಸಾಧ್ಯವಿದೆ. ಅಲ್ಲಮ, ಅಕ್ಕ, ದಾಸಿಮಯ್ಯ ಹೀಗೆ ಚರಿತ್ರೆ ತೆರೆಯಲು ಬಸವಣ್ಣ ಕೀಲಿಕೈ ಅಷ್ಟೇ. ಕುಮಾರವ್ಯಾಸನು ದಾಸಸಾಹಿತ್ಯ, ತತ್ವಪದಕಾರರು, ಸರ್ವಜ್ಞ ಮೊದಲಾದಂತೆ ಜನನುಡಿಯ ಹಿರಿಮೆಗೆ ಸಾಕ್ಷಿ ಕನ್ನಡಿಯಾಗಿರುವುದನ್ನು ಗ್ರಹಿಸಬಹುದು. ಮೊದಲ ಮತ್ತು ಕೊನೆಯ ಸಾಲುಗಳಲ್ಲಿ ಭಾರತೀಯ ಚಿಂತನೆಗಳೊಂದಿಗೆ ನಡುವೆ ಕನ್ನಡದ ನಾಡ ಹಿರಿಮೆಯನ್ನು ಬಂಧನಗೊಳಿಸಿರುವ ಭಾವಕ್ಯತೆಯು ನಾಡಗೀತೆಯ ಹಿರಿಮೆ.

ಆಡಳಿತ – ಕಲೆ – ಆಧ್ಯಾತ್ಮಗಳ ನಡುವೆ ನದಿ ವನಗಳು

ತೈಲಪ, ಹೊಯ್ಸಳರನ್ನು ನಮೂದಿಸಿದ್ದರೂ ಕದಂಬರು, ಗಂಗರು, ಚಾಳುಕ್ಯರು, ವಿಜಯನಗರ ವೈಭವ, ಮೈಸೂರು ಮೊದಲಾದ ರಾಜವಂಶಗಳ ಚರಿತ್ರೆಯನ್ನು ಮರೆಯುವಂತಿಲ್ಲ. ಮೊಘಲ್ ಆಳ್ವಿಕೆಯಾಗಲಿ, ಟಿಪ್ಪು ಆಳ್ವಿಕೆಯಾಗಲಿ ನಡೆಸಿದ ಅಭಿವೃದ್ಧಿ ಕ್ರಾಂತಿಗಳನ್ನು ಈ ನೆಪದಲ್ಲಿ ವಿಸ್ತರಿಸಲೇಬೇಕು. ‘ಕಾರ್ಯ ಕಾರಣ ಸಂಬಂಧ’ದಂತೆ ನಮ್ಮ ರಾಜವಂಶಗಳ ನೈತಿಕ, ಸಮಾಜಿಕ ಬದ್ಧತೆಯನ್ನು ನಾಡಗೀತೆಯ ನೆಪದಲ್ಲಿ ವಿಸ್ತರಿಸಬಹುದು. ಹೇಳುವುದಕ್ಕಿಂತ ಮಾಡುವುದು ಲೇಸು. ರಾಜರು ತಮ್ಮ ಸಾಧನೆಯಲ್ಲಿ ಶ್ರೀಸಾಮಾನ್ಯವಾದ ಒಂದೊಂದು ಸಾಲನ್ನು ಮಾತ್ರ ಶಾಸನವನ್ನಾಗಿಸಿದರು. ಯಾವುದನ್ನು ಜನಗಳ ಮುಂದೆ ಒಪ್ಪಿಸಲಿಲ್ಲ. ಇಂತಹ ಆಡಳಿತವು ಇಂದಿನ ರಾಜಕಾರಣಕ್ಕೆ ತುರ್ತಾಗಿ ಬೇಕಿದೆ. ಡಂಕಣ, ಜಕಣ ಇವರ ಶಿಲ್ಪ ಕಲಾ ಕೊಡುಗೆಯು ಅಮರವಾದುದು. ಬೇಲೂರು, ಹಳೇಬೀಡುಗಳ ವೈಭವವು ಇಂದಿಗೂ ಮಾದರಿಯಾಗಿ ಕಣ್ಣಮುಂದಿದೆ. ಈ

ಮಾದರಿಯನ್ನು ನೆಪವಾಗಿಸಿಕೊಂಡು ನಾಡು ಮತ್ತು ದೇಶಗಳ ಕಲಾ ವೈಭವವನ್ನು ವಿವರಿಸಬಹುದು. ನಮ್ಮ ಭಾರತೀಯ ನೋಟಗಳಲ್ಲಿ ಐದು ನೋಟಗಳು ಕರ್ನಾಟಕದ ಶಿಲ್ಪಿಗಳ ಕೊಡುಗೆಯನ್ನು ವಿಜೃಂಭಿಸುವ ಸಾಧನೆಯು ನಮಗೆ ಇಂದಿಗೂ ಹಿರಿಮೆ ಎನಿಸುತ್ತದೆ. ಚೈತನ್ಯರು, ಪರಮಹಂಸರು ಶಿಷ್ಯ ವಿವೇಕಾನಂದರು ಈ ಭಾರತೀಯ ಪ್ರತಿ ಮನಮನವನ್ನೂ ಪ್ರತಿನಿಧಿಸುವ ಆಧ್ಯಾತ್ಮ ಚಿಂತಕರು. ಇವರ ಸಾಧನೆಯ ಜೊತೆಗೆ ಅರವಿಂದರವರೆಗೂ ವಿಸ್ತರಿಸಬಹುದಾದ ಹಲವು ಚಿಂತನೆಗಳಿವೆ.

ವಿಶ್ವಮಾನವ ಸಂದೇಶ ಮತ್ತು ಕನ್ನಡ ಮನ

ನಾಡಗೀತೆಯು ಪರಿಪೂರ್ಣವಾಗಿ ವಿಶ್ವಮಾನವ ಸಂದೇಶದ ಹಿನ್ನಲೆಯಲ್ಲಿ ರಚನೆಯಾಗಿದೆ. ಕುವೆಂಪು ಈ ವಿಚಾರವನ್ನು 'ಸರ್ವ ಜನಾಂಗದ ತೋಟ' ಎಂದಿದ್ದಾರೆ. ಇಲ್ಲಿ ಸಾಮರಸ್ಯವೇ ಪ್ರಧಾನವಾಗಿದೆ. ಕನ್ನಡಿಗರು ಸದಾ ರಸಿಕರು. ಎಲ್ಲವನ್ನೂ ಪ್ರೀತಿಯಿಂದ ಸ್ವೀಕರಿಸುವ, ಒಳಿತನ್ನೇ ಆಲೋಚಿಸುವ ಆರೋಗ್ಯ ಮನಸ್ಸು ಉಳ್ಳವರು. ಇಲ್ಲಿ ಎಲ್ಲಾ ಧರ್ಮಗಳು ಉದ್ಯಾನದಂತೆ ಕಂಗೊಳಿಸುತ್ತವೆ. ಆದರೆ, ಇದೇ ಧರ್ಮಗಳ ನಡುವೆ ವೈಷಮ್ಯ ಬೆಳೆದರೆ, ಜನಕನಿಗೆ ಹೋಲಿಸಬಹುದಾದ ದೊರೆಗಳು ಅತ್ಯಂತ ಕೆಡುಕಿನ ಆಡಳಿತ ಮಾಡಿದರೆ, ಕನ್ನಡ ಭಾಷೆಯ ಈ ಮನೆಯು, ಇಲ್ಲಿನ ಮಕ್ಕಳ ದೇಹವು ಹೇಗೆ ಆನಂದಿಸಲು ಸಾಧ್ಯ. ವಿಶ್ವಮಾನವ ಸಂದೇಶವು ಪ್ರತಿಯೊಬ್ಬರೂ ಓದಿ, ಅಳವಡಿಸಿಕೊಳ್ಳಬೇಕಾದ ಧರ್ಮ ಸಾರ. ಆಗ ಮಾತ್ರ ನಾಡಗೀತೆಗೆ ಅರ್ಥಬರುತ್ತದೆ. ಈ ಹಿನ್ನಲೆಯಲ್ಲಿ ನಾಡಗೀತೆಯನ್ನು ವರ್ತಮಾನದೊಂದಿಗೆ ವಿಸ್ತರಿಸಬಹುದು. ನಾಡಗೀತೆಯು ಇಂದು ದೇಶ ಮತ್ತು ನಾಡುಗಳ ನಡುವೆ ಎಲ್ಲಾ ವಿಷಯಗಳಲ್ಲೂ ಏಕತೆ ಸಾಧಿಸಿದೆ. ಈ ಏಕತೆಯು ಸಂಸ್ಕೃತಿಯ ಉಳಿಕೆಯ ದೃಷ್ಟಿಯಿಂದ ಕಷ್ಟವಾಗಿರಬಹುದು. ಪಾಶ್ಚಾತ್ಯ ಪ್ರಭಾವವೂ ಇದಕ್ಕೆ ಕಾರಣವಿರಬಹುದು. ಆದರೆ, ಅದೇ ಸಂಸ್ಕೃತಿಯನ್ನು ಭಾರತದ ಭೂಮಿಯುದ್ದಕ್ಕೂ ಪಸರಿಸುವ ಮಹತ್ತರವಾದ ಕಾರ್ಯದಲ್ಲಿ ಅದರ ಶಕ್ತಿ ಮತ್ತು ಸಾಹಸ ಪ್ರಕ್ರಿಯೆಯು ಈ ಏಕತೆಯಲ್ಲಿ ಲಭಿಸಿದೆ.

ಆಧುನಿಕವಾದ ಎಲ್ಲಾ ಆಯಾಮಗಳ ಮೂಲಕ ನಮ್ಮ ಪರಂಪರೆಯನ್ನು ಉಳಿಸುವ, ಬೆಳೆಸುವ ಹಾಗೂ ನೆನಪಿಸುವ ಹಲವು ಮಾರ್ಗಗಳು ಸೃಷ್ಟಿಯಾಗಿವೆ. ಕನ್ನಡ ಸಂಸ್ಕೃತಿಯು ಭಾರತದ ಎಲ್ಲಾ ಜನಮನಕ್ಕೂ ತಲುಪಿಸುವ ಜೊತೆಗೆ ಪ್ರಪಂಚದ ಎಲ್ಲಾ ಭಾಗಗಳಿಗೂ ಸುಲಭವಾಗಿ ತಲುಪಿಸುವ ಸ್ವರೂಪಕ್ಕೂ ಈ ನಾಡಿನ ಸಂಸ್ಕೃತಿಗಳು ಬೆಳೆದಿವೆ.

ಕನ್ನಡ ನಾಡಿನ ಸಂಸ್ಕೃತಿಯು ಕೂಡ ಪ್ರಪಂಚವನ್ನೇ ಪ್ರವಾಸಿ ಕೈಬುಟ್ಟಿಯನ್ನಾಗಿಸಿಕೊಂಡು ಎಲ್ಲರನ್ನೂ ಕರೆದು ತೋರಿಸುತ್ತಿದೆ. ಈ ದೃಷ್ಟಿಯು ಶತಮಾನಗಳ ಹಿಂದೆ ಕುವೆಂಪುನಂತಹ ಯುವಕನ ಮೇಲೆ ಪ್ರಭಾವಿಸಿ, ಕನಸಾಗಿ ಸಂಕೇತಗೊಂಡದ್ದು ವಿಶೇಷ ಎನಿಸುತ್ತದೆ. 1950ರಲ್ಲಿ ಸ್ವರೂಪಗೊಂಡ ಭಾರತದ ಸಂವಿಧಾನವನ್ನು 1925ರ ಕಾಲಘಟ್ಟದಲ್ಲಿಯೇ ಈ ಕವಿಯಲ್ಲಿ ಮೂಡಿರುವುದು, ನಾಡಗೀತೆ, ಜಲಗಾರ ಮತ್ತು ಶೂದ್ರತಪಸ್ವಿಯಂತಹ ವಿಶ್ವಮಾನ್ಯ ಸಾಹಿತ್ಯವನ್ನು ನೀಡಿದ್ದನ್ನು ನಾವು ಮರು ಓದುಗಳ ಮೂಲಕ ನೆನೆಯಲೇಬೇಕು.

ಈ ಮಣ್ಣಿನಲ್ಲಿ ಪುರಾತನಗೊಂಡಿದ್ದ, ಹಸಿಯಾಗಿದ್ದ ರಾಮಾಯಣ, ಮಹಾಭಾರತಗಳನ್ನು ಮರುರಚನೆ ಮಾಡುವ ಮೂಲಕ ಸಂವಿಧಾನದ ಮೂಲ ಆಶಯಗಳನ್ನು ತಮ್ಮ ಕೃತಿಗಳ ಮೂಲಕ ಸ್ಪಷ್ಟಪಡಿಸುವ ಮೂಲಕ ಭಾರತದ ಎಲ್ಲಾ ಭಾಷೆಗಳಿಗೂ ಅನುವಾದ, ನಿರ್ದೇಶನ ಮೊದಲಾದ ಸ್ವರೂಪ ಪಡೆಯುವಂತೆ ಕಾಣಲು ಈ ಸಾಹಿತ್ಯ ಶಕ್ತಿಯೇ ಕಾರಣವಾಯಿತು. ಇಂತಹ ಶ್ರೇಷ್ಟ ರಚನೆಯ ಮಾಡುವ ಮನೋವಿಕಾಸವು ಈ ನಾಡನ್ನು ಇತಿಹಾಸ, ಪುರಾಣ, ಭೌಗೋಳಿಕ, ಪ್ರಾಕೃತಿಕ, ಸಾಹಿತ್ಯ ಮತ್ತು ಆಧ್ಯಾತ್ಮಗಳ ಹಿನ್ನಲೆಯಲ್ಲಿ ಅಧ್ಯಯನ ನಡೆಸಿದ್ದನ್ನು ನಾವು ಗಮನಿಸಬಹುದು. ಅದರ ಫಲಶ್ರುತಿಯಾಗಿ ಕರ್ನಾಟಕದ ನಾಡಗೀತೆಯು ರಚನೆಯಾಗಿದೆ.

ಕರ್ನಾಟಕದ ಭವ್ಯ ಇತಿಹಾಸವನ್ನು ಭಾರತದೊಟ್ಟಿಗೆ ತೆರೆಯುವ ಈ ಗೀತೆಯು ದೇಶದೊಳಗೆ ನಾಡು ಹಿರಿಮೆಗೊಂಡಿರುವುದನ್ನು ಸಂಕೇತಿಸುತ್ತದೆ. 1925ರ ಕಾಲದ ಎಲ್ಲಾ ಮಹತ್ವ ಭೂಮಿಕೆಗಳನ್ನು ಕಾಣಿಸಲು ಯತ್ನಿಸುವ ಕುವೆಂಪು ಅವರಿಗೆ ನಾಡಿನ ಹೊರತಾದ ಯಾವ ಧೋರಣೆಯು ಇರಲಿಲ್ಲ

ಎನಿಸುತ್ತದೆ. ಇದೇ ನಾಡಗೀತೆಯನ್ನು ಇಂದು ನಿರ್ಮಿಸಲು ಹೊರಟರೆ ಹತ್ತಾರು ಪುಟಗಳಿಗೂ ಮಿಗಿಲಾದ ಭವ್ಯತೆ, ಸಾಧನೆಯು ಈ ನೂರು ವರ್ಷಗಳಲ್ಲಿ ಕಾಣಬಹುದು.

ಆದರೆ ಆ ಸಾಧನೆಯ ಹಿಂದೆ ಭವ್ಯತೆಯನ್ನು ಕಳಚುವ ನೂರಾರು ಅನರ್ಥ ಕಾರ್ಯಗಳ ಕಡೆಗೆ ಶ್ರೀಸಾಮಾನ್ಯರು ಎಚ್ಚರಗೊಳ್ಳಬೇಕಿದೆ. ನಮ್ಮ ಜನಪದ, ಸಂಸ್ಕೃತಿ, ಸಾಹಿತ್ಯಗಳನ್ನು ಮುಂದಿನ ತಲೆಮಾರುಗಳಿಗೂ ಅದೇ ಮಾದರಿಯಲ್ಲಿ ಉಳಿಸಬೇಕಿದೆ. ನಾಳೆಗಳಿರಬೇಕಾದ ಸ್ಥಿತಿಯನ್ನು ಇಂದು ಆಲೋಚಿಸದಿದ್ದರೆ ಭವಿಷ್ಯಕ್ಕೆ ನಾಡಗೀತೆಯು 'ಕಲ್ಪಿತ' ಗೀತೆಯಾಗುವ ಸಾಧ್ಯತೆಗಳು ಬರದಿರಲಿ.

ಕನ್ನಡ ನಾಡು–ನುಡಿಗಳ ಭವ್ಯತೆಯು ಹೆಚ್ಚಾಗುವ ಎಚ್ಚರಗಳನ್ನು ಈ ನಾಡಗೀತೆಯು ನಮಗೆ ಭಕ್ತಿ ಹಾಗೂ ಭಾವ ತುಂಬಿದ ಅನುರಾಗಗಳ ಮೂಲಕ ಮೂಡಿಸುತ್ತದೆ. ಆದರೆ, ಅದೇ ನಾಡಗೀತೆಯನ್ನು ಓದುವ, ಅಧ್ಯಯನಮಾಡುವ, ಚರ್ಚಿಸುವ ಪಠ್ಯವನ್ನಾಗಿ ಗಮನಿಸಿದಾಗ ಮಾತ್ರ ಅದರ ತಾತ್ವಿಕ ದರ್ಶನ ಹಾಗೂ ವರ್ತಮಾನದ ಜವಾಬ್ದಾರಿಗಳು ಅರಿವಿಗೆ ಬರುತ್ತವೆ.

ಲೇಖಕರು : ಡಾ. ರವಿಶಂಕರ್ ಎ.ಕೆ
ಸಹಾಯಕ ಪ್ರಾಧ್ಯಾಪಕ
ಸಮಾಜ ವಿಜ್ಞಾನಗಳು ಮತ್ತು ಭಾಷಾ ವಿಭಾಗ
ಕ್ರಿಸ್ತು ಜಯಂತಿ (ಡೀಮ್ಡ್ ಟು ಬಿ) ವಿಶ್ವವಿದ್ಯಾಲಯ, ಬೆಂಗಳೂರು.
ravishankar@kristujayanti.com

***

ನಾಡಗೀತೆಯೊಳಗಿನ ನಾಡಿನ ಹಿರಿಮೆ

'ಕನ್ನಡ ನಾಡು ಸಕಲ ಸುಖಗಳಿಗೂ, ಉತ್ತಮ ಗುಣಗಳಿಗೂ ನಿವಾಸ ಭುಮಿಯಾಗಿದ್ದುದಲ್ಲದೆ; ಧರ್ಮಪರಾಯಣರಾದ ರಾಜರಿಂದಲೂ, ಪ್ರಸಿದ್ಧರಾದ ತತ್ವದರ್ಶಿಗಳಿಂದಲೂ ಭಕ್ತ ಶಿರೋಮಣಿಗಳಿಂದಲೂ, ಮಹಾಶೂರರಿಂದಲೂ, ಪ್ರಬಲರಾದ ವರ್ತಕರಿಂದಲೂ, ಕುಶಲರಾದ ಶಿಲ್ಪಿಗಳಿಂದಲೂ ಸ್ವಾಮಿಭಕ್ತಿ ಶೋಭಿತರಾದ ಸೇವಕರಿಂದಲೂ ಅಲಂಕೃತವಾಗಿದ್ದಿತು'[1]. ಹೀಗಾಗಿಯೇ ಈ ನಾಡನ್ನು ಕವಿಗಳ ನಾಡು, ಚಿನ್ನದ ನಾಡು, ಶ್ರೀಗಂಧ ಬೀಡು, ಕೋಗಿಲೆಗಳ ನಾಡು ಎಂದು ಹೊಗಳದೇ ಇರುವ ಕವಿಗಳಿಲ್ಲ. ಇಲ್ಲಿನ ಕಲಾ ಸಂಪತ್ತು, ಖನಿಜ ಸಂಪತ್ತು, ಸೌಂದರ್ಯ, ಸೊಗಸನ್ನು ಕಂಡು ಬರದೇ ಇರುವ ಜನರಿಲ್ಲ. ಎಲ್ಲರೂ ಈ ನಾಡನ್ನು ಪ್ರೀತಿಯಿಂದ ಹರಸಿ ಬರುತ್ತಾರೆ. ಅಂದು ಇಂದು ಹಾಗೂ ಎಂದೆಂದೂ ಇದು ವಾಸ್ತವ ಸತ್ಯ. 'ಕಬ್ಬಿಗರ ಕಾವ' ಕೃತಿಯ ಕವಿ ಆಂಡಯ್ಯ ತನ್ನ ತಾಯ್ನಾಡನ್ನು ಅಂದರೆ ಈ ನಾಡನ್ನು ಮುಕ್ತಕಂಠದಿಂದ ಈ ರೀತಿಯಾಗಿ ಹೊಗಳುತ್ತಾನೆ;

'ಸಹಸ್ರ ನಾಲಗೆಗಳುಳ್ಳ ಆದಿಶೇಷನಿಗೆ ಕೂಡ ಈ ನಾಡನ್ನು ವರ್ಣಿಸಲು ಸಾಧ್ಯವಿಲ್ಲವಂತೆ!
ಮಲ್ಲಿಗೆಯಲ್ಲದೆ, ಸಂಪಿಗೆಯಲ್ಲದೆ, ದಾಳಿಂಬಮಲ್ಲದೆ, ಚೆಂದೆಂಗಲ್ಲದೆ, ಮಾವಲ್ಲದೆ,

*ಕೌಂಗಲ್ಲದೆ, ಬೇರೆ ಗಿಡಮರಗಳೇ ಅಲ್ಲಿ ಇಲ್ಲವಂತೆ!
ಕೋತಿಗಳು ಕೆಡವಿದ ತೆಂಗಿನಕಾಯಿಯ ಎಳನೀರಿನಿಂದಲೇ ಅಲ್ಲಿನ
ವನವೆಲ್ಲ ಬೆಳೆಯುತ್ತದಂತೆ!"*[2]

ಇಲ್ಲಿನ ಭತ್ತದ ಗದ್ದೆಗಳಂತೂ ತೆನೆಯ ಭಾರದಿಂದ ನೆಲಕ್ಕೆ ಬಾಗಿ ಭೂದೇವಿಗೆ ನಮಸ್ಕರಿಸುವಂತೆ ಕಾಣುತ್ತವೆಂದು ಹೇಳುತ್ತಾ, ಮುಂದುವರೆದು... 'ಅಲ್ಲಿನ ನೀರಹಕ್ಕಿಗಳು ಪರಸ್ಪರ ಕಾದಾಡಿ ನೀರೆರಚಿದುದರಿಂದ ಗಾಳಿ ಅದರಲ್ಲಿ ನೆನೆದು ಮೆತ್ತಗೆ ಬೀಸುತ್ತದೆಯಂತೆ! ವೀಳೆಯದೆಲೆ ಬಳ್ಳಿಗಳು ಹಬ್ಬದ ಗಿಡವಿಲ್ಲ, ಕೊಳಗಳಿಲ್ಲದ ತೋಟವಿಲ್ಲ, ಗಂಡುಕೋಗಿಲೆಗಳಿಲ್ಲದ ಮರವಿಲ್ಲ. ಕಾಲುವೆಗಳಿಲ್ಲದ ತೊರೆಗಳಿಲ್ಲ, ದುಂಬಿಗಳಿಲ್ಲದ ಪುಷ್ಪಗಳಿಲ್ಲ, ಹಂಸಗಳಿಲ್ಲದ ಕೊಳವಿಲ್ಲ, ರತಿಸುಖವಿಲ್ಲದ ವೇಶ್ಯೆಯಿಲ್ಲ, ಕೀರ್ತಿವಂತರಲ್ಲದ ಮಾನವರಿಲ್ಲ! ಕನ್ನಡ ನಾಡಿನ ಜನಜೀವನ ಮಧುರವಾಗಿದೆ'3. ಹೀಗೆ ಈ ನಾಡು ಸಕಲ ಸೌಕರ್ಯಗಳಿಂದ ತುಂಬಿ, ಇಲ್ಲಿನ ಜನರ ಜೀವನ ಸುಖಮಯವಾಗಿದೆಯೆಂದು ಕವಿ ಹಾಡಿ ಹೊಗಳಿದ್ದಾನೆ.

ರವೀಂದ್ರನಾಥ ಠಾಕೂರರು ಈ ರಾಷ್ಟ್ರಕ್ಕೆ ರಾಷ್ಟ್ರಗೀತೆಯನ್ನು ರಚಿಸಿದರು. ಹಾಗೆಯೇ ದೇಶದ ಏಕತೆ, ದೇಶ ಪ್ರೇಮದ ಕಿಚ್ಚನ್ನು ಹೊತ್ತಿಸುವ ಸಲುವಾಗಿ ಬಂಕಿಮಚಂದ್ರ ಚಟರ್ಜಿಯವರು 'ವಂದೇಮಾತರಂ' ಗೀತೆಯನ್ನು ಬರೆದರು. ಇದೇ ರೀತಿ ಕುವೆಂಪುರವರು ಕನ್ನಡ ನಾಡಿನ ಅನನ್ಯತೆಯನ್ನು ಸಾರುವ ಸಲುವಾಗಿ ನಾಡಗೀತೆಯನ್ನು ರಚಿಸಿದರು. ಈ ಗೀತೆಮೂಲಕ ಏಕಕಾಲಕ್ಕೆ ರಾಷ್ಟ್ರವನ್ನೂ, ರಾಜ್ಯವನ್ನು ಕೊಂಡಾಡುವ ಹಾಗೆ ನಾಡಗೀತೆಯನ್ನು ಬರೆದರು. ಇದರಲ್ಲಿ ಭಾರತವನ್ನು ತಾಯಿಯಂತೆಯೂ, ಕರ್ನಾಟಕವನ್ನು ಮಗಳಂತೆಯೂ ತಿಳಿದುಕೊಂಡು ಈ ನಾಡಗೀತೆಯನ್ನು ರಚಿಸಿದ್ದಾರೆ. ಇದು ಕರ್ನಾಟಕದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆಂದರೆ ತಪ್ಪಾಗಲಾರದು.

ಈ ಪದ್ಯವನ್ನು ಕುವೆಂಪುರವರು 1924ರಲ್ಲಿ 'ಕಿಶೋರಚಂದ್ರವಾಣಿ' ಎಂಬ ಕಾವ್ಯನಾಮದಡಿ ಬರೆದರು. 2004ರ ಜನವರಿ 6 ರಂದು ರಾಜ್ಯಸರ್ಕಾರ ಅದನ್ನು 'ನಾಡಗೀತೆ'ಯನ್ನಾಗಿ ಗೌರವಿಸಿ ಅದಕ್ಕೊಂದು ವಿಶೇಷ ಸ್ಥಾನ ನೀಡಿತು.

ಈ ಗೀತೆಗೆ ಮೊಟ್ಟ ಮೊದಲ ಬಾರಿಗೆ ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜನೆ ಮಾಡಿದರು. ನಂತರದ ದಿನಗಳಲ್ಲಿ ಸಿ. ಅಶ್ವಥ್ ಅವರ ಸಂಯೋಜನೆ ಜನಪ್ರಿಯತೆಯನ್ನು ಪಡೆಯಿತು. ಕುವೆಂಪುರವರು ನಾಡಗೀತೆ ಮೂಲಕ 'ಭಾರತಮಾತೆಯನ್ನು ಕುರಿತು ದೇಶಪ್ರೇಮ, ನಾಡಪ್ರೇಮ, ನುಡಿ ಪ್ರೇಮವನ್ನು ತೋರಿದ್ದಾರೆ'[4]. ರಾಷ್ಟ್ರದ ಬಗ್ಗೆ ಮತ್ತು ನಾಡಿನ ಬಗ್ಗೆ ಒಟ್ಟೊಟ್ಟಿಗೆ ಅರ್ಥವನ್ನು ಸ್ಫುರಿಸುವ ಕವಿತೆ, ಪದ್ಯ ಹಾಗೂ ಗೀತೆಗಳು ಬಹುಶಃ ಈ ಮುಂಚೆ ಬಂದಿಲ್ಲ, ಮುಂದೆಯೂ ಬರುವುದಿಲ್ಲವೇನೋ! ಎಂಬ ಅನುಮಾನ ನಮ್ಮನ್ನು ಕಾಡದೀರದು. ಹಾಗೆಯೇ ಇಂತಹ ವಿಶಿಷ್ಟ ದೃಷ್ಟಿಕೋನ, ದೇಶಾಭಿಮಾನವನ್ನು ಹೊಂದಿದ್ದುದರಿಂದಲೇ ಕುವೆಂಪುರವರು ರಾಷ್ಟ್ರಕವಿಯಾಗಿ, ಮೊದಲ ಜ್ಞಾನಪೀಠ ಪ್ರಶಸ್ತಿ ಪಡೆದ ಕೀರ್ತಿಯನ್ನು ಪಡೆದಿದ್ದಾರೆ,

'ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರೆಯಬೇಕೆಂಬುದು ಅವರ ದಿಟ್ಟ ನಿಲುವಾಗಿತ್ತು. ಕುವೆಂಪು ಓರ್ವ ಮಹಾಕವಿ ಮಾತ್ರವಲ್ಲ ಶ್ರೇಷ್ಠ ತಜ್ಞ, ಮಹಾ ದಾರ್ಶನಿಕ, ಮಹಾ ಮಾನವತಾವಾದಿಯಾಗಿದ್ದರು. ಮನುಜಮತ ವಿಶ್ವಪಥವಾಗಬೇಕೆಂದರು. ಎಲ್ಲಾ ಜಾತಿ ಮತ ಪಂಥಗಳ ಎಲ್ಲೇ ಮೀರಿ ವಿಶ್ವಮಾನವ ಪ್ರೇಮ ತೋರಿದರು'[5]. ಇದಲ್ಲದೆ ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿರೆಂದು ವೈಚಾರಿಕತೆಯನ್ನು ಬಿಂಬಿಸಿ, ನಾವು ಮಾಡುವ ಕಾಯಕದಲ್ಲಿ ದೇವರನ್ನು ಕಾಣಬೇಕೆಂದರು. ಇಂತಹ ಕವಿಯು ಬರೆದ 'ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ' ಎಂಬ ಗೀತೆಯನ್ನು ಕನ್ನಡ ನಾಡು, ಕರ್ನಾಟಕ ಸರ್ಕಾರ ಪ್ರಸ್ತುತ ಸಂದರ್ಭದಲ್ಲಿ ನಾಡಗೀತೆಯನ್ನಾಗಿ ಅಧಿಕೃತವಾಗಿ ಘೋಷಿಸಿದೆ.

"ಜಯ ಹೇ ಕರ್ನಾಟಕ ಮಾತೆ
ಜೈ! ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!
ಜೈ! ಸುಂದರ ನದಿವನಗಳ ನಾಡೆ

ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ
ಗಂಧದ ಚಂದದ ಹೊನ್ನಿನ ಗಣಿಯೆ:
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ,
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ
ಕವಿಕೋಗಿಲೆಗಳ ಪುಣ್ಯಾರಾಮ
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ:
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರರಂಗ!
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!

ಜೈ! ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜೈ ಸುಂದರ ನದಿವನಗಳ ನಾಡೆ
ಜಯಹೇ ರಸ ಋಷಿಗಳ ಬೀಡೆ”[6]

ಕನ್ನಡ ನಾಡು ಭವ್ಯ ಪರಂಪರೆಯನ್ನು ಹೊಂದಿರುವ ನಾಡು. ಕದಂಬ, ಗಂಗ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಸಾಮ್ರಾಜ್ಯ ಹಾಗೂ ಮೈಸೂರಿನ ಒಡೆಯರು ಹೀಗೆ ಮುಂತಾದ ರಾಜ ಮನೆತನಗಳಿಂದ ಆಳಲ್ಪಟ್ಟು, ಹಲವು ಕೊಡುಗೆಗಳನ್ನು ಪಡೆದ ರಾಜ್ಯವಾಗಿದೆ. ಈ ನಾಡಿನಲ್ಲಿ ಸುಂದರವಾದ ಹಲವು ನದಿ, ಉದ್ಯಾನವನಗಳಿವೆ, ಅತ್ಯುತ್ತಮ ಪರಿಸರವಿದೆ. ಭಾರತಮಾತೆಯ

ಮಗಳಾಗಿರುವ ಕನ್ನಡ ಮಾತೆ ಇಲ್ಲಿ ವಿವಿಧ ಕಲಾವಿದರಿಗೆ, ರಸ–ಋಷಿಗಳಿಗೆ, ಸೃಜನಶೀಲ ಗುಣವಂತರಿಗೆ ಜನ್ಮ ನೀಡಿದ್ದಾಳೆ. ಭಾರತವು ಭೂದೇವಿಯ ಕಿರೀಟದಲ್ಲಿನ ಒಂದು ಪ್ರಜ್ವಲಿಸುವ ಹೊಸ ಮಣಿಯಂತೆ ಭಾಸವಾಗುತ್ತಾಳೆ. ಅದರಲ್ಲಿ ಕರ್ನಾಟಕವು ಗಂಧದ, ಹೊನ್ನಿನ, ಚಂದದ ಗಣಿಯೆನ್ನಿಸಿಕೊಂಡಿದೆ. ಅಲ್ಲದೆ ಇಲ್ಲಿ ಶ್ರೀರಾಮ, ಕೃಷ್ಣರಂಥಹ ಮಹೀಮಾತೀತಾ ಕಾಲಾಪುರುಷರು ಉದಯಿಸಿದ ನಾಡು ಈ ಭರತಭೂಮಿ. ಅಂಥಹ ಭಾರತಮಾತೆಯ ಮಗಳಾದ ಕರ್ನಾಟಕ ಮಾತೆಗೆ ಜಯವಾಗಲಿ ಎಂದು ಕವಿ ಎಲ್ಲರಲ್ಲೂ ತಾಯಿ ಮತ್ತು ಮಗುವಿನ ವಾತ್ಸಲ್ಯವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಭಾರತ ಮಾತೆಯು ವೇದೋಪನಿಷತ್ತುಗಳ ಮೂಲಕ ಕನ್ನಡಮ್ಮನನ್ನು ಜೋಗುಳ ಹಾಡಿಸಿರುವಂತಹದ್ದು, ಇಂತಹ ಕನ್ನಡನಾಡು ಹಸಿರನ್ನು, ಹಸಿರು ಹೊತ್ತ ಬೆಟ್ಟಗಳ ಸಾಲುಗಳಿಂದ ಕಂಗೊಳಿಸುತ್ತಿದೆ. ಅಲ್ಲದೆ ಇಲ್ಲಿ ಕಪಿಲ, ಗೌತಮ ಬುದ್ಧ, ಜಿನ ಮುನಿಗಳಿಗೆ ಆಶ್ರಯಕೊಟ್ಟು, ಇವರೆಲ್ಲರ ಪ್ರಶಂಸೆಗೆ ಪಾತ್ರಳಾದವಳು ಭಾರತವಾತೆ. ಶಂಕರಾಚಾರ್ಯ, ರಾಮಾನುಜಾಚಾರ್ಯ, ವಿದ್ಯಾರಣ್ಯ ಇಂಥ ಪುಣ್ಯಪುರುಷರನ್ನು ಪಡೆದದ್ದು ಭಾರತವಾತೆಯ ಭಾಗ್ಯ. ಕರ್ನಾಟಕ ವಾತೆಯೂ ಬಸವೇಶ್ವರ, ಮಧ್ವಾಚಾರ್ಯರಂಥ ಪುಣ್ಯಪುರುಷರಿಗೆ ಜನ್ಮ ನೀಡಿದ್ದಾಳೆ. ಅದೆಷ್ಟು ಮಂದಿ ಕವಿಗಳು ರನ್ನ, ಷಡಕ್ಷರಿ, ಪೊನ್ನ, ಪಂಪ, ಲಕ್ಷ್ಮೀಶ, ಜನ್ನ, ಕುಮಾರವ್ಯಾಸರಂತಹ ಕವಿಗಳು ಆಡಿದ ಮಂಗಳಕರ ಪ್ರದೇಶವಿದು. ಹಾಗಾಗಿಯೇ ಕುವೆಂಪುರವರು ಈ ಪ್ರದೇಶವನ್ನು ಕವಿ–ಕೋಗಿಲೆಗಳ ಗೂಡು ಎಂದಿದ್ದಾರೆ. ಅಷ್ಟೇ ಅಲ್ಲದ್ಲೆ; ಗುರುನಾನಕ, ರಮಾನಂದ, ಕಬೀರರಂತಹ ಸಂತಕವಿಗಳು ಉದಿಸಿದ ಭೂಮಿ; ಈ ಭರತಭೂಮಿ. ಇಂಥಹ ಭಾರತಮಾತೆಯ ಪುತ್ರಿ ಕನ್ನಡಾಂಬೆಗೆ ಅತ್ಯಂತ ಪ್ರೀತಿಯಿಂದ, ತುಂಬು ಮನಸ್ಸಿನಿಂದ ಜಯವಾಗಲೆಂದು ಕವಿ ಹರಸಿದ್ದಾರೆ.

ಈ ನಾಡನ್ನಾಳಿರುವಂತಹ ತೈಲಪ, ಹೊಯ್ಸಳ ಮೊದಲಾದ ರಾಜಮನೆತನಗಳು ಇಲ್ಲಿ ರಾರಾಜಿಸಿವೆ. ಅಮರಶಿಲ್ಪಿಗಳಾದ ಡಂಕಣಾಚಾರ್ಯ–ಜಕಣಾಚಾರ್ಯ ಇನ್ನೂ ಅದೆಷ್ಟೋ ಶಿಲ್ಪಿಗಳಿಗೆ, ಕೃಷ್ಣಾ, ಶರಾವತಿ, ತುಂಗಾ, ಕಾವೇರಿಯಂಥಹ ಪುಣ್ಯ ನದಿಗಳಿಗೆ ಈ ನಾಡು ನೆಲೆವೀಡಾಗಿತ್ತು. ಕಾವೇರಿಯ ಮಡಿಲಲ್ಲಿ

ಶ್ರೀರಂಗನಾಥನು ಉದಿಸಿದರೆ, ಭಾರತಮಾತೆಯ ಉದರದಲ್ಲಿ ಚೈತನ್ಯರು, ಪರಮಹಂಸರು, ವಿವೇಕಾನಂಧರಂಥಹ ದಾರ್ಶನಿಕರು ಜನಿಸಿದರು. ಇಂಥಹ ಭವ್ಯ ಭಾರತಮಾತೆಯ ಕುಡಿಗೆ ಜಯವಾಗಲಿ ಜಯವಾಗಲಿ ಎಂದು ಕುವೆಂಪುರವರು ಹುರುಪಿನ ನುಡಿಗಳನ್ನಾಡಿದ್ದಾರೆ. ಈ ಗೀತೆಯ ಮೂಲಕ ನಾಡಿನ ಅಭಿಮಾನಿಗಳಿಗೆ ಅಭಿಮಾನವೆನ್ನುವುದು ಮೈಯಲ್ಲಿ ವಿದ್ಯುತ್ ಸಂಚಾರವಾಗುವ ಹಾಗೆ ಚಿತ್ರಿಸಿದ್ದಾರೆ.

ಈ ದೇಶ ಅತ್ಯಂತ ಪವಿತ್ರವಾದ, ಶಾಂತಿಯುತವಾದ ದೇಶವಾಗಿರುವುದರಿಂದ ಅನೇಕ ಧರ್ಮ ಗುರುಗಳು ಇಲ್ಲಿ ಭೇಟಿಕೊಟ್ಟು ಮೋಕ್ಷ ಪಡೆದು ಹೋಗಿದ್ದಾರೆ. ಹೀಗಾಗಿ ಇಲ್ಲಿ ಹಿಂದೂ, ಕ್ರೈಸ್ತ, ಮುಸಲ್ಮಾನ, ಪಾರಸೀ, ಜೈನ ಮುಂತಾದ ಧರ್ಮಗಳು ತಮ್ಮ ಸಿದ್ಧಾಂತಗಳನ್ನು ಹೊಂದಿವೆ. ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದ ಧರ್ಮ ಪ್ರಭೇಧಗಳನ್ನು ನಾವಿಲ್ಲಿ ಕಾಣಲು ಸಾಧ್ಯ. ಅಂತಹ ಪವಿತ್ರ ಭೂಮಿ ನಮ್ಮದು. ಇಂತಹ ಭೂಮಿಯಲ್ಲಿ ಜನಕ ಮಹಾರಾಜನಂತಹ ಜನಾನುರಾಗಿ ದೊರೆಗಳು ಈ ದೇಶವನ್ನು ಆಳಿ ಅಗಲಿದ್ದಾರೆ. ಇಲ್ಲಿನ ಮಕ್ಕಳು ರಸಿಕರು – ಗಾಯಕರು, ವೈಣಿಕರು, ಕಲೆಯ ಆರಾಧಕರು ಇಂತಹ ಪ್ರತಿಭಾ ಸಂಪನ್ನರಿಗೆ ಭಾರತ ದೇಶವು ಸುಖದ ಬೀಡಾಗಿದೆ. ಇಂಥ ಭಾರತಮಾತೆಯ ಮಗಳಾದ ಕರ್ನಾಟಕಮಾತೆ ಕನ್ನಡನುಡಿ ಕುಣಿದಾಡುವ ಗೃಹವಾಗಿದ್ದಾಳೆ. ಕನ್ನಡ ಮಾತಾಡುವ ತನ್ನ ಮಕ್ಕಳಿಗೆ ತನ್ನ ಸರ್ವಸ್ವವನ್ನೂ ನೀಡಿದ್ದಾಳೆ. ಈ ನಿಟ್ಟಿನಲ್ಲಿ ತಾಯಿ ಭಾರತವು ಮಗಳು ಕರ್ನಾಟಕವಾಗಿದ್ದಾಗ ಇಲ್ಲಿ ಯಾವುದೇ ವೈಮನಸ್ಸಿಲ್ಲ. ತಾಯಿ ಭಾರತಮಾತೆಯಂತೆ ಎಲ್ಲರನ್ನೂ ಸಲಹುವ, ಕರುಣಿಸುವ, ಹಿರಿಮೆಯುಳ್ಳ ನಾಡು ಈ ಕನ್ನಡ ನಾಡು ಎಂದು ಕವಿ ವರ್ಣಿಸುತ್ತಾ, ಇಂತಹ ಕರುಣೆಯನಾಡು, ಕರುನಾಡು ಕರ್ನಾಟಕಕ್ಕೆ ಜಯವಾಗಲಿ ಜಯವಾಗಲಿ ಎಂದು ಹರ್ಷೋದ್ಗಾರವೆತ್ತಿದ್ದಾರೆ.

ಒಟ್ಟಿನಲ್ಲಿ ಈ ಗೀತೆಯನ್ನು ಯಾರು ಹಾಡಿದರೂ, ಅಂತಹವರ ಭಾವನೆಗಳಲ್ಲಿ ನಾಡಿನ ಬಗ್ಗೆ ಪ್ರೀತಿ, ಅಭಿಮಾನ, ಗೌರವ ಮೂಡದೇ ಇರದು. ಇಂತಹ ನಾಡಗೀತೆಯನ್ನು ರಚಿಸಿಕೊಟ್ಟ ಕುವೆಂಪುರವರಿಗೆ ನಾವು ಎಷ್ಟು ಧನ್ಯವಾದಗಳನ್ನು ಹೇಳಿದರೂ ಸಾಲುವುದಿಲ್ಲ.

ನಾಡಿನ ಪ್ರೀತಿ, ಅಭಿಮಾನ ಹಾಗೂ ನಾಡಗೀತೆಯನ್ನು ಪ್ರತಿಯೊಬ್ಬ ಕನ್ನಡಿಗನು, ಕನ್ನಡೇತರ ಬಂಧುಗಳು ಸುಲಭವಾಗಿ ಅರ್ಥೈಸಿಕೊಳ್ಳಬೇಕೆಂಬ ದೃಷ್ಟಿಯಿಂದ ಇತ್ತೀಚೆಗೆ ಈ ಗೀತೆಯಲ್ಲಿ ಕೆಲವು ಸಣ್ಣ ಸಣ್ಣ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲದೆ ಒಂದಿಷ್ಟು ರಾಗವಾಗಿ ಹಾಡುವ ಧಾಟಿ, ಪಲ್ಲವಿಗಳನ್ನು ಬದಲಾವಣೆ ಮಾಡಿಕೊಳ್ಳಲಾಗಿದೆ.

ಗೀತೆಯ ಆರಂಭದಲ್ಲಿ 'ಜೈ' ಎನ್ನುವ ಶಬ್ದವನ್ನು 'ಜಯ' ಎಂದೂ, ಪದ್ಯದ ಮಧ್ಯದಲ್ಲಿ ಕಂಡುಬರುವ 'ಕಬ್ಬಿಗರುದಿಸಿದ' ಎಂಬ ಪದವನ್ನು 'ಕುಮಾರವ್ಯಾಸರ' ಎಂದು ಬದಲಿಸಲಾಗಿದೆ. ಹಾಗೆಯೇ ಪ್ರತಿ ಪಾದದಲ್ಲೂ ಕಂಡು ಬರುವ 'ಜಯ ಹೇ ಕರ್ನಾಟಕ ಮಾತೆ' ಎಂಬ ಚರಣವನ್ನು ತೆಗೆಯಲಾಗಿದೆ.

ಪರಿಷ್ಕೃತ ನಾಡಗೀತೆ:

ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ.
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ.
ರಾಘವ ಮಧುಸೂಧನರವತರಿಸಿದ
ಭಾರತ ಜನನಿಯ ತನುಜಾತೆ,
ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ.
ಕುಮಾರವ್ಯಾಸರ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ.
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ.
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ.

ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ.

ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಮೇಲಿನ ಪರಿಷ್ಕೃತ ನಾಡಗೀತೆಯಲ್ಲಿ ಒಂದಿಷ್ಟು ಸಣ್ಣ ಬದಲಾವಣೆಗಳನ್ನು ಮಾಡಿಕೊಂಡರೂ ಸಹ ಅರ್ಥಕ್ಕೆ ಚ್ಯುತಿಬಾರದಂತೆ ಮಾರ್ಪಾಡುಗಳನ್ನು ಮಾಡಿರುವುದು ಸ್ವಾಗತಾರ್ಹವಾಗಿದೆ. ಇಂದು ಶತಮಾನ ಕಂಡ ಶತಮಾನದ ಕವಿತೆಯಾಗಿದೆ. ಈ ಗೀತೆಯ ಮೂಲಕ ಕರ್ನಾಟಕದ ಸಾಹಿತ್ಯಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಪತ್ತನ್ನು ಬಹಳ ಸೂಕ್ಷ್ಮವಾಗಿ ಕಟ್ಟಿಕೊಡಲಾಗಿದೆ. ಜೊತೆಗೆ ಈ ಸಾಲುಗಳನ್ನು ಒಳಹೊಕ್ಕು ನೋಡಿದಾಗ ಭಾರತದ ಪರಂಪರೆ ನಾಡಿನ ಸಂಸ್ಕೃತಿ, ಭೌಗೋಳಿಕ ಪ್ರದೇಶ, ಪ್ರಕೃತಿ ಸಂಪತ್ತು, ಖನಿಜ ಸಂತ್ತು, ಸಾಂಸ್ಕೃತಿಕ ಸಂಪತ್ತುಗಳ ಸಮಗ್ರ ಅನುಭವ ನಮಗಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ; 'ಜನಗಣಮನ' ಮತ್ತು 'ವಂದೇ ಮಾತರಂ' ಗೀತೆಗಳು ನಮ್ಮಲ್ಲಿ ಹೇಗೆ ರಾಷ್ಟ್ರಪ್ರೇಮ ಅಥವಾ ದೇಶಪ್ರೇಮವನ್ನು ತುಂಬುತ್ತವೆಯೋ ಹಾಗೆ 'ಜಯ ಹೇ ಕರ್ನಾಟಕಮಾತೆ' ನಾಡಗೀತೆಯು ನಮ್ಮೆಲ್ಲರಲ್ಲಿಯೂ ರಾಷ್ಟ್ರಪ್ರೇಮ, ನಾಡಪ್ರೇಮ ಮತ್ತು ಅಭಿಮಾನವನ್ನು ಹೆಚ್ಚಿಸುತ್ತದೆ. ಹಾಗಾಗಿ ರಾಷ್ಟ್ರಗೀತೆ ಮತ್ತು ನಾಡಗೀತೆಗಳು ಈ ರಾಷ್ಟ್ರ ಹಾಗೂ ನಾಡಿನ ಅನನ್ಯತೆಯ ಪ್ರತೀಕಗಳೆಂದು ಹೇಳಬಹುದಾಗಿದೆ. ಹಾಗಾಗಿ 'ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು', 'ಕನ್ನಡಕೆ ಹೋರಾಡು ಕನ್ನಡದ ಕಂದ ಕನ್ನಡವ ಕಾಪಾಡು ನನ್ನ ಆನಂದ'[7] ಎನ್ನುವ ಕುವೆಂಪುರವರ ಮಾತಿನಂತೆ ನಡೆದುಕೊಳ್ಳಬೇಕು. ನಾಡಿನ ಅಸ್ಮಿತೆಯನ್ನು ಹೊಂದಿರುವ ಇಂತಹ ಗೀತೆಗಳನ್ನು ಹಾಡುವಾಗ ಎದ್ದು ನಿಂತು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ, ಜವಾಬ್ದಾರಿಯಾಗಿದೆ. ಆ ಮೂಲಕ ನಮ್ಮ ದೇಶಕ್ಕೆ ಮತ್ತು ತಾಯ್ನಾಡಿಗೆ ತೋರುವ ಗೌರವವಾಗುತ್ತದೆ.

ಕೊನೆ ಟಿಪ್ಪಣಿಗಳು:

1. ಹೀ. ಚಿ ಶಾಂತವೀರಯ್ಯ: ಕನ್ನಡ ಸಾಹಿತ್ಯ ಪರಿಚಯ, ಸಂಪುಟ–1, ಚೇತನ್ ಬುಕ್ಸ್, ಹಂಪಿನಗರ, ಬೆಂಗಳೂರು, 2009. ಪುಟ ಸಂಖ್ಯೆ–05.
2. ತ. ಸು. ಶಾಮರಾಯ: ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. ವರ್ಷ–2012. ಪುಟ ಸಂಖ್ಯೆ–95.
3. ಅದೇ ಪುಸ್ತಕ, ಪುಟ ಸಂಖ್ಯೆ–95.
4. ಹೀ. ಚಿ ಶಾಂತವೀರಯ್ಯ: ಕನ್ನಡ ಸಾಹಿತ್ಯ ಪರಿಚಯ, ಸಂಪುಟ–5, ಚೇತನ್ ಬುಕ್ಸ್, ಹಂಪಿನಗರ, ಬೆಂಗಳೂರು, 2009. ಪುಟ ಸಂಖ್ಯೆ–129.
5. ಅದೇ ಪುಸ್ತಕ, ಪುಟ ಸಂಖ್ಯೆ– 129.
6. ಡಾ. ಎಂ. ಚಿದಾನಂದಮೂರ್ತಿ: ಕರ್ನಾಟಕ ನಾಡಗೀತೆ: ಒಂದು ವಿಶ್ಲೇಷಣೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ–2010. ಪುಟ ಸಂಖ್ಯೆ–1 ಮತ್ತು 2,
7. ಡಾ. ಎಚ್ ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, ಮುದ್ರಣ ವರ್ಷ–2013.

ಲೇಖಕರು : ಡಾ. ಪ್ರಸನ್ನಕುಮಾರ್ ಕೆ
ಸಹಾಯಕ ಪ್ರಾಧ್ಯಾಪಕ
ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ
ಬೆಂಗಳೂರು–89

***

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಕನ್ನಡ ನಾಡು, ನುಡಿ, ನಡೆ ಚಿಂತನೆ

ಸುಮಾರು ಒಂದು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ನಾಡು, ನುಡಿಯನ್ನು ಕುರಿತು ಚಿಂತನೆಗೊಳಪಡಿಸಿದಾಗ ಅನೇಕ ಹೊಸಹೊಸ ವಿಚಾರಗಳು, ಏಳು–ಬೀಳುಗಳು, ಹಿರಿಮೆ–ಗರಿಮೆಗಳು, ವಿಶಾಲ–ವಿಸ್ತಾರಗಳು, ವಿಭಿನ್ನ–ಅನನ್ಯ ನೆಲೆಗಳು ಗಮನಕ್ಕೆ ಬರತೊಡಗಿದವು. ಇವುಗಳನ್ನು ಆಧರಿಸಿ ಕನ್ನಡ ನಾಡು, ನುಡಿ ಮತ್ತು ಕನ್ನಡದ ನಡೆಯನ್ನು ಸೂಕ್ಷ್ಮವಾಗಿ ಗಮನಿಸಿ ಅದರ ಹುಟ್ಟು, ಬೆಳವಣಿಗೆ, ವಿಕಾಸದ ನೆಲೆಗಳನ್ನು ಶೋಧಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕನ್ನಡದ ಜೀವಂತಿಕೆಯ ಹಿಂದಿರುವ ಸಂಜೀವಿನಿ ಗುಣವನ್ನು ಹುಡುಕುವ ಪ್ರಯತ್ನವೂ ಇಲ್ಲಿದೆ. ಇಡೀ ಕನ್ನಡ ಸಾಹಿತ್ಯವನ್ನು ಸಮಗ್ರವಾಗಿ ಗಮನಿಸಿದಾಗ ಶಿಷ್ಟದಿಂದ ಜನಪದದತ್ತ, ಮಾರ್ಗದಿಂದ ದೇಸಿಯತ್ತ, ಪ್ರಧಾನ ಸಂಸ್ಕೃತಿಯಿಂದ ಅಧೀನ ಸಂಸ್ಕೃತಿಗಳತ್ತ, ಏಕತ್ವದಿಂದ ಬಹುತ್ವದತ್ತ, ಪ್ರಭುತ್ವದಿಂದ ಪ್ರಜೆಗಳತ್ತ, ಪಿತೃಯಜಮಾನಿಕೆಯನ್ನು ಪ್ರಶ್ನಿಸಿ ಸಮಾನಹಂಚಿಕೆಯತ್ತ ಸಾಗಿ ಬರುತ್ತಿರುವುದರ ಪಕ್ಷಿನೋಟ ಎದ್ದು ಕಾಣುತ್ತದೆ. ಪ್ರಸ್ತುತ ಲೇಖನದಲ್ಲಿ ಈ ಎಲ್ಲ ವಿಚಾರಗಳನ್ನು ಶೋಧಿಸುವ ಪ್ರಯತ್ನ ಮಾಡಲಾಗಿದೆ.

ಕನ್ನಡ ನಾಡು, ನುಡಿ, ನಡೆ ಬಹು ಪ್ರಾಚೀನವಾದವು. ಕ್ರಿ.ಪೂ.

ಕಾಲದಲ್ಲಿಯೇ ಇವುಗಳ ಕುರಿತು ದಾಖಲೆಗಳು ಚದುರಿದಂತೆ ಇದ್ದರೂ ಅಧ್ಯಯನ ಮೂಲದಿಂದ ಲಭ್ಯವಿವೆ. ಪ್ರಾಚೀನ ಕನ್ನಡ ಭಾಷೆ ಸಂಗಂ ಕಾಲದಲ್ಲಿಯೇ ತಮಿಳು ಭಾಷೆಯ ಮೇಲೆ ಪ್ರಭಾವ ಹೊಂದಿತ್ತು ಎನ್ನಲಾಗಿದೆ.(ನೋಡಿ ಶಂಗಂ ತಮಿಳಿಗಂ ಮತ್ತು ಕನ್ನಡ ನಾಡು–ನುಡಿ, ಷ.ಶೆಟ್ಟರ್) ಆ ಕಾಲದ ಲಭ್ಯ ತಮಿಳು ಕಾವ್ಯಗಳಲ್ಲಿ ಕನ್ನಡ ನಾಡು, ನುಡಿ, ನಡೆ ಕುರಿತು ಉಲ್ಲೇಖಗಳಿವೆ ಎಂದರೆ ಕನ್ನಡ ಭಾಷೆ, ಬದುಕು ಇವುಗಳಿಗೆ ಮೂಲವಾದ ಸಂಸ್ಕೃತಿಯೂ ಅದಕ್ಕಿಂತ ಹಿಂದೆಯೇ ಬೆಳೆಯತೊಡಗಿತ್ತು ಎನ್ನಲಡ್ಡಿಯಿಲ್ಲ. ಕನ್ನಡಿಗರ ಬದುಕಿನ ಸಾಂಸ್ಕೃತಿಕ ಗುಣಲಕ್ಷಣಗಳನ್ನು ತಿಳಿಯಪಡಿಸುವ ಮೊಟ್ಟಮೊದಲ ದಾಖಲೆಗಳೆಂದರೆ ಶಾಸನಗಳು. ಮೌರ್ಯರಿಂದ ಆರಂಭವಾದ ಶಾಸನ ಪರಂಪರೆ ಶಾತವಾಹನರಿಂದ ಮುಂದುವರಿದು ಕದಂಬರು, ಗಂಗರ ಕಾಲದಲ್ಲಿ ಬೆಳೆಯಿತು. ಶಾಸನಗಳು ಕನ್ನಡ ಸಂಸ್ಕೃತಿಯ ನೇರ ಅಕ್ಷರ ದಾಖಲೆಗಳಾದರೆ, ಕಲೆ ವಾಸ್ತುಶಿಲ್ಪಗಳ ನೆಲೆಯಾದ ದೇವಾಲಯಗಳು ಅನೇರ ದಾಖಲೆಗಳಾಗಿವೆ. ಕನ್ನಡ ನಾಡಿನೊಳಗಿನ ಜನರ ಬದುಕನ್ನು ಆವರಿಸಿದ್ದ ಸಂಸ್ಕೃತಿಯು ಅವರ ಈ ಅಭಿವ್ಯಕ್ತಿಯಲ್ಲಿ ವ್ಯಕ್ತಗೊಂಡಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಕನ್ನಡ ನಾಡನ್ನು ಆಳಿದ ಮೊದಲ ಕನ್ನಡಿಗ ದೊರೆಗಳು ಕದಂಬರು. ಇವರು ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಶಾಸನಗಳನ್ನು ಹಾಕಿಸಿದ್ದು ಅವರ ಕನ್ನಡ ಪ್ರೀತಿಗೆ ಸಾಕ್ಷಿ. ರಾಜರ ಆಸ್ಥಾನದಲ್ಲಿ ಸಂಸ್ಕೃತ ಪ್ರಾಬಲ್ಯವುಳ್ಳ ಆ ಕಾಲದಲ್ಲಿ ಕದಂಬ ದೊರೆಗಳು ಕನ್ನಡದಲ್ಲಿ ಶಾಸನ ಹಾಕಿಸಿದ್ದು, ಇಂಗ್ಲೀಷ್ ಪ್ರಾಬಲ್ಯವುಳ್ಳ ಈ ಕಾಲದಲ್ಲಿ ಕನ್ನಡಿಗರು ಇಂಗ್ಲೀಷ್‌ನಲ್ಲಿ ಸಹಿ ಹಾಕುವುದು ಈ ಎರಡನ್ನೂ ಮುಖಾಮುಖಿಯಾಗಿಟ್ಟು ನೋಡುವ ಸಂದರ್ಭ ಇದಾಗಿದೆ. ಶೌರ್ಯದಿಂದ ಹೋರಾಡಿದ ವೀರನನ್ನು ಗೌರವಿಸುವ, ಅವನಿಗೆ ಭೂಮಿಯನ್ನು ದಾನ ನೀಡುವ ಉದಾರ ಸಂಸ್ಕೃತಿಯನ್ನು ಸಾರುವ ಹಲ್ಮಿಡಿ ಶಾಸನ(ಕ್ರಿ.ಶ.450), ‘ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯಂ...’ ಎಂದು ಕನ್ನಡಿಗ ಕಪ್ಪೆ ಅರಭಟ್ಟನ ಗುಣ ಸಾಹಸಗಳನ್ನು ವರ್ಣಿಸುವ ಬಾದಾಮಿ ಶಾಸನ(ಕ್ರಿ.ಶ.700), ಲೌಕಿಕ ಬದುಕಿನ ನಶ್ವರತೆಯನ್ನು ಸಾರಿ ಅಧ್ಯಾತ್ಮದ ಶಾಶ್ವತ ಸಿರಿಯನ್ನು ಎತ್ತಿ ಹಿಡಿಯುವ

ಶ್ರವಣಬೆಳಗೊಳ ಶಾಸನ(ಕ್ರಿ.ಶ.581) ಹೀಗೆ ಆರಂಭ ಕಾಲದಲ್ಲಿಯೇ ಕನ್ನಡ ನಾಡು, ನುಡಿ, ನಡೆ ಕುರಿತ ಸಂಸ್ಕೃತಿಯ ಬೀಜಗಳು ನಾಡಿನ ತುಂಬಾ ಬಿತ್ತಿ ಬೆಳೆಯಲ್ಪಟ್ಟಿದ್ದವು ಎಂಬುದನ್ನು ಸಾಲುಸಾಲು ಶಾಸನಗಳು ಸಾರುತ್ತಿವೆ. ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಮೈಸೂರು ಅರಸರ ಕಾಲದಲ್ಲಿ ಕನ್ನಡ ಶಾಸನಗಳ ಸಂಖ್ಯೆ ಹೆಚ್ಚಿದ್ದಷ್ಟೇ ಅಲ್ಲ, ಮಧ್ಯಪ್ರದೇಶದ ಜುರಾದಿಂದ ತಮಿಳುನಾಡಿನ ಕಂಚಿಯವರೆಗೂ ಹರಡಿದ್ದು ಕನ್ನಡ ನಾಡು, ನುಡಿ, ನಡೆಯ ವೈಶಾಲ್ಯತೆಗೆ ಸಾಕ್ಷಿಯಾಗಿದೆ.

ಕನ್ನಡ ಕವಿಗಳು ಸಂಸ್ಕೃತ ಭಾಷಾಪಾಂಡಿತ್ಯ ಹೊಂದಿದ್ದರೂ ಕನ್ನಡದಲ್ಲಿ ಬರೆಯುವ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯದ ಹಿರಿಮೆ ಗರಿಮೆಯನ್ನು ಹೆಚ್ಚಿಸಿದ್ದಾರೆ. ಇವರು ಸಂಸ್ಕೃತವನ್ನು ಮಾದರಿಯಾಗಿಟ್ಟುಕೊಂಡು ಕನ್ನಡದಲ್ಲಿ ಬರೆಯಲಿಲ್ಲ. ಸಂಸ್ಕೃತದಿಂದ ಕಥಾವಸ್ತುವನ್ನು ತೆಗೆದುಕೊಂಡು ತಮ್ಮದೇ ಶೈಲಿಯಲ್ಲಿ ಕಾವ್ಯ ಕಟ್ಟಿದರು. ಸಂಸ್ಕೃತ ಆದಿಯಾಗಿ ಇಡೀ ಭಾರತೀಯ ಸಾಹಿತ್ಯವನ್ನು ಅಧ್ಯಯನ ಮಾಡಿದರೆ ವಿಭಿನ್ನವಾಗಿ, ಪ್ರಯೋಗಶೀಲವಾಗಿ ಸಾಹಿತ್ಯಸೃಷ್ಟಿಗೆ ತೊಡಗಿದವರೆಂದರೆ ಕನ್ನಡ ಕವಿಗಳು ಎಂದರೆ ತಪ್ಪಾಗಲಾರದು. ಒಂಬತ್ತನೆಯ ಶತಮಾನದ 'ಕವಿರಾಜಮಾರ್ಗ' ಕನ್ನಡ ಜಗತ್ತನ್ನು ವಿಶ್ವಮಟ್ಟದಲ್ಲಿ ಎತ್ತಿಹಿಡಿದ ಮಹಾಕೃತಿಯಾದರೆ, ಪಂಪನ ಲೌಕಿಕ ಆಗಮಿಕ ಕಾವ್ಯಸೃಷ್ಟಿ ಒಂದು ಪರಂಪರೆಯಾಗಿ ಬೆಳೆದದ್ದು ಕನ್ನಡದಲ್ಲಿ ಮಾತ್ರ ಎಂಬುದನ್ನು ಗಮನಿಸಬೇಕು. ಇವನ 'ಆದಿಪುರಾಣ' ಜೈನ ಆಗಮಿಕ ಕಾವ್ಯವಾದರೆ, 'ವಿಕ್ರಮಾರ್ಜುನ ವಿಜಯಂ' ಮಹಾಭಾರತ ಕತೆಯನ್ನು ಸಾರುವ ಲೌಕಿಕ ಕಾವ್ಯವಾಗಿದೆ. ಇವನ ಹಾದಿಯಲ್ಲಿ ಪೊನ್ನ, ರನ್ನ, ನಾಗಚಂದ್ರ ಮೊದಲಾದ ಕವಿಗಳು ಕಾವ್ಯ ರಚಿಸಿದ್ದನ್ನು ಕಾಣುತ್ತೇವೆ. 'ಸಿಂಹಾವಲೋಕನ ಕ್ರಮ'ದಿಂದ ಹೊಸ ಮಾದರಿಯ ಕಾವ್ಯಸೃಷ್ಟಿಗೆ ನಿಂತವನು ರನ್ನ. ಇವನ 'ಗದಾಯುದ್ಧಂ' ನಾಟಕವೂ ಹೌದು, ಕಾವ್ಯವೂ ಹೌದು ಎನ್ನಬಹುದಾದ ಮಾದರಿ ಕೃತಿ. 10ನೆಯ ಶತಮಾನದ ಅತ್ತಿಮಬ್ಬೆ ಜೈನ ಮಹಿಳೆ. ಇವಳು ತನ್ನ ಗಂಡ ಸತ್ತ ಮೇಲೆ ಜೈನ ಧರ್ಮೋದ್ಧಾರಕ್ಕಾಗಿ ತನ್ನ ಬದುಕನ್ನು

ಸಮರ್ಪಿಸಿಕೊಂಡಳು. ಪೊನ್ನನ 'ಶಾಂತಿಪುರಾಣ'ವನ್ನು ಸಾವಿರ ಪ್ರತಿ ಮಾಡಿಸಿ ಹಂಚಿಸಿದಳು. ರನ್ನನಿಗೆ ಆಶ್ರಯ ನೀಡಿ ಪೊರೆದಳು. ಕನ್ನಡ ಸಾಹಿತ್ಯ ಪೋಷಕಿಯಾದ ಇವಳು 'ದಾನ ಚಿಂತಾಮಣಿ' ಎಂಬ ಕೀರ್ತಿಗೆ ಪಾತ್ರಳಾಗಿದ್ದಾಳೆ. ಇವಳ ದಾನಸಂಸ್ಕೃತಿ ಕನ್ನಡ ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಮಹಾಭಾರತ, ರಾಮಾಯಣ ಮಾದರಿಗಳನ್ನು ಪಕ್ಕಕ್ಕಿಟ್ಟು ವಿಭಿನ್ನ ಕಾವ್ಯ ಬರೆದವನು ಒಂದನೆಯ ನಾಗವರ್ಮ. 'ಕರ್ಣಾಟಕ ಕಾದಂಬರಿ' ಮೂಲಕ ಸಂಸ್ಕೃತ ಕಾವ್ಯವನ್ನು ಸ್ವೋಪಜ್ಞತೆಯೊಂದಿಗೆ ರಚಿಸಿ 'ಅನುವಾದ ಸಾಹಿತ್ಯ'ಕ್ಕೆ ಮುನ್ನುಡಿಯಾಡಿದನು. ದುರ್ಗಸಿಂಹನು ಪ್ರಾಣಿಗಳ ಮೂಲಕ ಉಪಾಯದ ಕತೆ ಹೇಳುವ 'ಪಂಚತಂತ್ರ' ಬರೆದರೆ, ನಯಸೇನ ಜನಪದರ ಮಾತಾಗಿದ್ದ ಜೈನಕತೆಗಳನ್ನು ಬರೆದು ವಿಭಿನ್ನನಾದನು. ಕನ್ನಡದ ಪ್ರತಿಯೊಬ್ಬ ಹಳೆಗನ್ನಡ ಕವಿಯೂ ಭಾಷೆ ಮತ್ತು ಸಾಹಿತ್ಯ ನೆಲೆಯಲ್ಲಿ ಪ್ರಯೋಗಶೀಲರಾಗಿ, ಅನನ್ಯತೆಯೊಂದಿಗೆ ಬರೆದಿದ್ದಾರೆ ಎಂಬುದು ಇದರಿಂದ ತಿಳಿದುಬರುತ್ತದೆ.

ಹನ್ನೆರಡನೆಯ ಶತಮಾನದ ವೇಳೆಗೆ ಕನ್ನಡ ಭಾಷೆಯು ಸಾಹಿತ್ಯದ ಮೂಲಕ ಬಹುಮುಖಗಳಲ್ಲಿ ಪ್ರಯೋಗಶೀಲವಾಗಿ ತನ್ನ ಅಭಿವ್ಯಕ್ತಿಯ ಛಾಪನ್ನು ಝಳಪಿಸಿತು. ಕ್ಲಿಷ್ಟತೆಯಿಂದ ಸುಲಭದತ್ತ, ರಾಜಾಶ್ರಯದಿಂದ ಜನಾಶ್ರಯದತ್ತ, ಸಂಸ್ಕೃತ ಮಾರ್ಗನೆಲೆಯಿಂದ ಕನ್ನಡ ದೇಸಿನೆಲೆಯತ್ತ, ಮಹಾಕಾವ್ಯವಸ್ತುವಿನಿಂದ ದೇಸೀಯ ವಸ್ತುವಿನತ್ತ ಸಾಗತೊಡಗಿದ್ದು ಸಾಮಾನ್ಯ ಸಂಗತಿಯಲ್ಲ. ಈ ಕಾಲದ ವಚನಸಾಹಿತ್ಯ ಜಾಗತಿಕ ಸಾಹಿತ್ಯ ನೆಲೆಯಲ್ಲಿ ಸ್ಥಾನ ಪಡೆಯಬಲ್ಲ ವಿಭಿನ್ನಸಾಹಿತ್ಯ ಎನಿಸಿದೆ. ಕನ್ನಡ ಭಾಷೆಯೊಳಗಣ ಈ ಸಾಹಿತ್ಯಸಂಪತ್ತು ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ವ್ಯಾಪಿಸಿ ಪ್ರಸ್ತುತ ಸಂದರ್ಭದಲ್ಲಿಯೂ ಸಲ್ಲುತ್ತಿರುವುದು ಅದರ ಮೌಲಿಕತೆಗೆ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಪಲ್ಲಟಗೊಳಿಸಿ ಜನಸಾಮಾನ್ಯರ ದನಿಯಾಗಿಸಿದ್ದು, ಸಹಜ ಬದುಕಿನ ಅನುಭವ ನುಡಿಗಳನ್ನು ಗಹನವಾಗಿಸಿದ್ದು, ಲಿಂಗಭೇದವಿಲ್ಲದೆ ಸಮಾನ ಅಭಿವ್ಯಕ್ತಿಗೆ ಅವಕಾಶವಿದ್ದುದು ವಚನಸಾಹಿತ್ಯ ಜಾಗತಿಕ ಸಾಹಿತ್ಯದಲ್ಲಿ ಸ್ಥಾನ ಪಡೆಯಲು ಕಾರಣವಾದ ಪ್ರಮುಖ ಅಂಶಗಳಾಗಿವೆ. ಇಂದಿಗೂ ಪ್ರಜಾಪ್ರಭುತ್ವ ಸಂದರ್ಭದಲ್ಲಿ ಇದೇ ವಿಚಾರಗಳಿಗೆ,

ಹೋರಾಟಗಳು, ಚಳವಳಿಗಳು ನಡೆಯುತ್ತಿರುವುದನ್ನು ಗಮನಿಸಿದರೆ 12ನೆಯ ಶತಮಾನ ಏಕೆ ಪ್ರಮುಖ ಘಟ್ಟ ಎಂಬುದು ಅರ್ಥವಾಗುತ್ತದೆ. ಧರ್ಮ, ಸಮಾಜ, ಸಾಹಿತ್ಯ, ಬದುಕು ಇವುಗಳಲ್ಲಾದ ಸ್ಥಿತ್ಯಂತರಗಳು ಇತಿಹಾಸದ ದಿಕ್ಕನ್ನೇ ಬದಲಿಸಿದವು. ಪುರಾಣಗಳನ್ನು ಬಿಟ್ಟು ಭೂಮಿಯ ಮೇಲೆ ಆಗಿಹೋದ ಚಾರಿತ್ರಿಕ ವ್ಯಕ್ತಿಗಳ ಬದುಕನ್ನು ವಸ್ತುವಾಗಿ ತೆಗೆದುಕೊಂಡು ಬರೆಯಬಲ್ಲ ಹೊಸಸಾಹಿತ್ಯ ಹರಿಹರನಿಂದ ಶುರುವಾಗಿದ್ದು ಕನ್ನಡ ನೆಲದ ಸಂಸ್ಕೃತಿಯನ್ನು ಹಸಿರಾಗಿಸಿದ ಜೀವಂತಪ್ರಯತ್ನ ಎನಿಸುತ್ತದೆ. 13ನೆಯ ಶತಮಾನದಲ್ಲಿದ್ದ ಹರಿಹರನು ವಚನಕಾರರನ್ನು ಕುರಿತು ರಗಳೆಗಳಲ್ಲಿ ಬರೆದನು. ಈ ರಗಳೆಗಳು ಶರಣರ ಬದುಕನ್ನಷ್ಟೇ ಚಿತ್ರಿಸಲಿಲ್ಲ; ಆಗಿಹೋದ ಸಮಕಾಲೀನ ಬದುಕನ್ನು ಸಾಹಿತ್ಯದಲ್ಲಿ ಸೆರೆಹಿಡಿದಿವೆ. ಸಾಹಿತ್ಯ ಕಾಣದ ವಸ್ತುವನ್ನು ಕಲ್ಪನೆಯಲ್ಲಿ ಕಡೆಯುವಂತಹದ್ದು ಎಂಬ ಅಭಿಪ್ರಾಯವನ್ನು ಹುಸಿಯಾಗಿಸಿ ಬದುಕಿ ಬೆಳಕಾಗಿ ಹೋದ ವ್ಯಕ್ತಿಗಳನ್ನು ಅಕ್ಷರದಲ್ಲಿ ತಂದು ಹೊಸಬರಹಕ್ಕೆ, ಹೊಸಬಾಳಿಗೆ ಪ್ರೇರಣೆಯಾಗಿದ್ದನ್ನು ಮರೆಯುವಂತಿಲ್ಲ. ಹರಿಹರ, ರಾಘವಾಂಕ ಈ ನೆಲೆಯಲ್ಲಿ ಸ್ತುತ್ಯಾರ್ಹರು.

ಜನ್ನ ಜೈನ ಕವಿ. ಇವನ ಕಾವ್ಯಗಳು ಮನೋವೈಜ್ಞಾನಿಕ ನೆಲೆಯಿಂದ ಕಟ್ಟಲ್ಪಟ್ಟಿವೆ. ಕನ್ನಡ ಸಾಹಿತ್ಯ ಮನೋವಿಜ್ಞಾನದೊಂದಿಗೆ ಅನುಸಂಧಾನ ಮಾಡಿಕೊಂಡದ್ದು 13ನೆಯ ಶತಮಾನದಲ್ಲಿಯೇ ಎಂಬುದನ್ನು ಗಮನಿಸಬಹುದು. 'ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ' ಎರಡೂ ಕಾವ್ಯಗಳು ಹೆಣ್ಣು ಮತ್ತು ಗಂಡಿನ ಸಂಬಂಧದ ನೆಲೆಯಲ್ಲಿ ಏರ್ಪಡಬಹುದಾದ ಎಲ್ಲಾ ಸಾಧ್ಯತೆಗಳನ್ನು ಬಹುಮುಖಗಳಲ್ಲಿ ಚಿತ್ರಿಸಿವೆ. ಇವುಗಳ ಮೂಲಕ ಜನ್ನ ಲೌಕಿಕ ಬದುಕಿನೊಳಗೆ ಸಂಬಂಧಗಳು ಯಾವ ಕಾರಣದಿಂದ ಏರ್ಪಡುತ್ತವೆ ಮತ್ತು ಏನು ಪರಿಣಾಮ ಅನುಭವಿಸುತ್ತವೆ ಎಂಬುದನ್ನು ತಿಳಿಯಪಡಿಸಲು ಪ್ರಯತ್ನಿಸಿದ್ದಾನೆ. ಕನ್ನಡ ಸಾಹಿತ್ಯ ಇಂದಿಗೂ ಈ ನೆಲೆಯಲ್ಲಿ ಬರಹಗಳನ್ನು ಒಳಗೊಳ್ಳುತ್ತಲೇ ಬರುತ್ತಿರುವುದನ್ನು ಕಾಣಬಹುದು. ತ್ರಿವೇಣಿಯವರ ಕಾದಂಬರಿಗಳು ಈ ಹಿನ್ನೆಲೆಯಲ್ಲಿ ಇಲ್ಲಿ ಮುಖ್ಯವೆನಿಸುತ್ತವೆ. ಸಾಮಾಜಿಕ ಬದುಕನ್ನು ನೈತಿಕ ಮಾರ್ಗದರ್ಶನದಲ್ಲಿ ಮುನ್ನಡೆಸುವ ನೆಲೆ ಕನ್ನಡ ಸಾಹಿತ್ಯದಲ್ಲಿದೆ. ಪುಲಿಗೆರೆ ಸೋಮನಾಥನು ಬರೆದ 'ಸೋಮೇಶ್ವರ ಶತಕ' ನೀತಿಸಂಸ್ಕೃತಿಯನ್ನು ಬಿಂಬಿಸುವ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಕೃತಿಯಾಗಿದೆ. ಭಕ್ತಿಯ ನೆಲೆಯಲ್ಲಿ ಬಂದ ದಾಸಸಾಹಿತ್ಯ ಭಕ್ತಿಯ ಮೂಲಕ ಸಾಮಾಜಿಕ ಅಂಕುಡೊಂಕುಗಳನ್ನು ತಿದ್ದಿ ತೀಡುವ ಕೆಲಸ ಮಾಡಿತು. ಇಲ್ಲಿ ಪುರಂದರದಾಸರು, ಕನಕದಾಸರು ಮುಂಚೂಣಿಯಲ್ಲಿ ಕಂಡರು. ಇವರ ಗುರುಗಳಾದ ವ್ಯಾಸರಾಯರು ವ್ಯಾಸಕೂಟ, ದಾಸಕೂಟಗಳನ್ನು ಕಟ್ಟಿ, ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡನ್ನೂ ಉಳಿಸಿ ಬೆಳೆಸುವ ಪ್ರಯತ್ನ ಮಾಡಿ ವೈಷ್ಣವ ಪರಂಪರೆಯನ್ನು ಶ್ರೀಮಂತಗೊಳಿಸಿದರು. ಕರ್ನಾಟಕದಲ್ಲಿ ವೈಷ್ಣವಸಂಸ್ಕೃತಿಯನ್ನು ಜೀವನದ ಒಂದು ಭಾಗವಾಗಿಸುವಲ್ಲಿ ಮಧ್ವಾಚಾರ್ಯರು ಮತ್ತು ರಾಮಾನುಜಾಚಾರ್ಯರು, ಇವರ ಶಿಷ್ಯ ಪರಂಪರೆ ಬಹುವಾಗಿ ಶ್ರಮಿಸಿದೆ. ರಾಮಾನುಜಾಚಾರ್ಯರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ಹೊಯ್ಸಳರಾಜ ಬಿಟ್ಟಿದೇವನನ್ನು ವಿಷ್ಣುವರ್ಧನನ್ನಾಗಿಸಿ ಶ್ರೀವೈಷ್ಣವ ಪರಂಪರೆಗೆ ರಾಜಾಶ್ರಯ ಒದಗಿಸಿ ಅದರ ಬೀಜಗಳನ್ನು ಹುಲುಸಾಗಿ ಬಿತ್ತಿ ಬಹುದೊಡ್ಡ ಬೆಳೆ ತೆಗೆದರು. ಸಾಹಿತ್ಯ ಜನಮುಖಿಯಾಗಬೇಕಾದರೆ ಅದು ಕಥನ ರೂಪದಲ್ಲಿ ಜನರ ಕಿವಿಗಳಿಗೆ ಬೀಳಬೇಕು. ಅಂತಹ ಪ್ರಯೋಗ ಕನ್ನಡ ಸಾಹಿತ್ಯದಲ್ಲಿ ಭಾಗವತ ಕವಿಗಳಿಂದ ಆಯಿತು. ಕುಮಾರವ್ಯಾಸನು ಶ್ರೀಕೃಷ್ಣನ ಕಥನವನ್ನು ಭಾಗವತ ಶೈಲಿಯಲ್ಲಿ ಕಟ್ಟಿ ಹಾಡಿದನು. ಅದು 'ಕನ್ನಡಭಾರತ'ದ ಹುಟ್ಟಿಗೆ ಕಾರಣವಾಯಿತು. ಇಂದಿಗೂ ಗಮಕಿಗಳು ಸುಶ್ರಾವ್ಯವಾಗಿ ಹಾಡುವ ಕಾವ್ಯ ಇದಾಗಿರುವುದನ್ನು ಗಮನಿಸಬಹುದು. ನಂಜುಂಡ ಕವಿಯು ಕಂಪ್ಲಿಯ ರಾಜಕುಮಾರ 'ಕುಮಾರರಾಮ'ನ ಬದುಕನ್ನು ಸಾಂಗತ್ಯದಲ್ಲಿ ಕಾವ್ಯವಾಗಿಸಿದವ. ಐತಿಹಾಸಿಕ ವ್ಯಕ್ತಿಯನ್ನು ಕುರಿತು ಕಾವ್ಯ ಬರೆದು ಇತಿಹಾಸವನ್ನು ಕಾವ್ಯದಲ್ಲಿ ತಂದವ. ಇದು ಸಾಹಿತ್ಯದೊಳಗೆ ಐತಿಹ್ಯಸಂಸ್ಕೃತಿಗೆ ನಾಂದಿಯಾಡಿತು. ಇಲ್ಲಿ ಚಾಮರಸನ 'ಪ್ರಭುಲಿಂಗಲೀಲೆ'ಯೂ ಉಲ್ಲೇಖಾರ್ಹ. ಕನಕದಾಸರು ಸಾಹಿತ್ಯದಲ್ಲಿ ಶೂದ್ರಸಂಸ್ಕೃತಿಯನ್ನು ತಂದರು. ರಾಗಿ ಮತ್ತು ಭತ್ತದ ಪ್ರತಿಮೆಯ ಮೂಲಕ ಸಾಮಾಜಿಕ ಸಂಘರ್ಷವನ್ನು ಕಾವ್ಯದಲ್ಲಿ ತಂದು ಪೌರಾಣಿಕ ಹಿನ್ನೆಲೆಯ ಮೂಲಕ ಅರ್ಥಮಾಡಿಸಿದ ಪರಿ ವಿಶೇಷ. ಶೂದ್ರನೊಬ್ಬ ಕಾವ್ಯ ರಚಿಸಿದ್ದು ಇದುವರೆಗಿನ ವ್ಯವಸ್ಥೆಗೆ ತೋರಿದ ದಿಟ್ಟ ಪ್ರತಿಭಟನೆ. ಇದು ಕುವೆಂಪು ಅವರಿಂದ ಮುಂದುವರಿದುಕೊಂಡು ಬಂದಿತು. ಇದು ದಲಿತ

ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬಹುವಿಸ್ತಾರವಾಗಿ ಬೆಳೆಯಿತು. ಅಂಚಿಗೆ ತಳ್ಳಲ್ಪಟ್ಟ ಅಲಕ್ಷಿತ ಸಮುದಾಯದಿಂದ ಕನ್ನಡ ಬರಹಗಾರರು ಹೊರಹೊಮ್ಮಿ ಬರೆಯತೊಡಗಿದ್ದು ಸಾಮಾನ್ಯ ಸಂಗತಿಯಲ್ಲ.

ಸಂಚಿಯ ಹೊನ್ನಮ್ಮ ಸುಖಸಂಸಾರದ ಹಾದಿಗಳನ್ನು 'ಹದಿಬದೆಯ ಧರ್ಮ' ಸಾಂಗತ್ಯ ಕಾವ್ಯದಲ್ಲಿ ತಂದರೆ, ರತ್ನಾಕರವರ್ಣಿ ದೇಸಿ ಛಂದಸ್ಸಿನಲ್ಲಿ ಮಹಾಕಾವ್ಯ ಬರೆದ. ಪ್ರಯೋಗದ ಎಲ್ಲಾ ಸಾಧ್ಯತೆಗಳು ಕನ್ನಡದೊಳಗೆ ಜರುಗಿವೆ ಎಂದರೆ ಕನ್ನಡ ಕವಿಗಳು ಎಷ್ಟು ಸೃಜನಶೀಲರೂ, ಪ್ರಯೋಗಶೀಲರೂ, ಅನನ್ಯಗುಣಶೀಲರೂ ಆಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. 'ಭರತೇಶ ವೈಭವ' ಮಹಾಕಾವ್ಯ ಜೈನಧರ್ಮಕ್ಕೆ ಸಂಬಂಧಿಸಿದ ಭರತನ ಜೀವನ ಕಥನವಾದರೂ ಜೈನಕವಿಯೊಬ್ಬ ದೇಸಿ ಛಂದಸ್ಸಾದ ಸಾಂಗತ್ಯದಲ್ಲಿ ಮಹಾಕಾವ್ಯ ಬರೆದ ಮೊದಲ ಪ್ರಯತ್ನವಾಗಿದೆ. ರಾಜಾಶ್ರಯದ ಪ್ರಧಾನ ಸ್ಥಾನದಿಂದ ಹೊರಬಿದ್ದ ಜೈನಧರ್ಮ ದೇಸೀಯ ಆಶ್ರಯದಲ್ಲಿ ಉಳಿಯುವುದು ಅನಿವಾರ್ಯವಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.

ಕಾವ್ಯ ಪರಂಪರೆಯಲ್ಲಿ ಸಾಗಿಬಂದ ಪದ್ಯಪ್ರಕಾರವು ಗದ್ಯದತ್ತ ಹೊರಳುವ ಮುನ್ಸೂಚನೆಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾಣಿಸಿಕೊಂಡವು. ಪದ್ಯಸಂಸ್ಕೃತಿಗಿಂತ ಗದ್ಯಸಂಸ್ಕೃತಿ ಮುಂದಿನ ದಿನಗಳಲ್ಲಿ ಪ್ರಾಧಾನ್ಯತೆ ಪಡೆಯುತ್ತದೆ ಎಂಬುದನ್ನು ಅರಿತ ಮುಮ್ಮಡಿಯವರು ತಾವು ಗದ್ಯದಲ್ಲಿ ಬರೆದರು ಮತ್ತು ಆಸ್ಥಾನ ಕವಿ ಕೆಂಪುನಾರಾಯಣನಿಂದಲೂ ಬರೆಸಿದರು. 'ಮುದ್ರಾಮಂಜೂಷ' ಗದ್ಯಕೃತಿ ಐತಿಹಾಸಿಕ ಕಾದಂಬರಿ ಶೈಲಿಯಲ್ಲಿ ಬರೆಯಲ್ಪಟ್ಟ ಕೃತಿಯಾಗಿದೆ. 1823ರ ಕಾಲಕ್ಕೆ ಈ ಪ್ರಯೋಗವಾಗಿದ್ದು ಮುಂದೆ ಬೃಹತ್ತಾಗಿ ಗದ್ಯಬರೆಹ ಬಂದಿದ್ದನ್ನು ನೆನೆಯಬಹುದು. ಭಾರತಕ್ಕೆ ಇಂಗ್ಲೀಷ್ ಮಿಷನರಿಗಳು ಆಗಮಿಸಿ ಭಾರತೀಯ ಸಮಾಜದ ಮೇಲೆ ಪ್ರಭಾವ ಬೀರತೊಡಗಿದವು. ಇದುವರೆಗಿನ ಬದುಕಿನೊಳಗೆ ಹೊಸದೊಂದರ ಪ್ರವೇಶ ತಂದ ಬದಲಾವಣೆಗಳು ಬಹಳೊಷ್ಟು. ಮುಖ್ಯವಾಗಿ ಹರ್ಮನ್ ಮೊಗ್ಲಿಂಗ್ ಮಂಗಳೂರಿನಲ್ಲಿ 1843ರಲ್ಲಿ 'ಮಂಗಳೂರು ಸಮಾಚಾರ' ಪತ್ರಿಕೆಯನ್ನು ಆರಂಭಿಸಿದ್ದು, ಮುದ್ರಣಯಂತ್ರದ ಮೂಲಕ ಕನ್ನಡ ಪುಸ್ತಕಗಳನ್ನು ಮುದ್ರಿಸಿದ್ದು ಹೊಸಕ್ರಾಂತಿಗೆ ನಾಂದಿಯಾಡಿತು. ಕನ್ನಡ

ಲೋಕದೊಳಗೆ ಮುದ್ರಣಸಂಸ್ಕೃತಿ, ಪತ್ರಿಕಾಸಂಸ್ಕೃತಿ ಪ್ರವೇಶ ಪಡೆಯಿತು. ಇದು ಹೊಸ ಕ್ಷೇತ್ರದ ಬೆಳವಣಿಗೆಗೆ ನಾಂದಿಯಾಡಿ ಸಾಹಿತ್ಯದ ದಿಕ್ಕುಗಳ ಅಂಚುಗಳನ್ನು ವಿಸ್ತರಿಸಿತು. ಇದರ ವಿಸ್ತಾರ ಇಂದಿಗೂ ಆಗುತ್ತಲೇ ಇರುವುದನ್ನು ಗಮನಿಸಬಹುದು. ಈ ಮುದ್ರಣ ಸಂಸ್ಕೃತಿ ಕನ್ನಡ ಸಾಹಿತ್ಯವನ್ನು ಓದುವ ಸಂಸ್ಕೃತಿಯನ್ನಾಗಿಸಿ ಬೆಳೆಸಿತು. ಭಾರತೀಯ ಭಾಷೆಗಳ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡು ಜನರ ಮನೆ ಬಾಗಿಲಿಗೆ ತಲುಪಿದವು. ಬಿ. ವೆಂಕಟಾಚಾರ್ಯ ಅವರು ಬಂಗಾಳಿಯಿಂದ, ಗಳಗನಾಥರು ಮರಾಠಿಯಿಂದ ಕಾದಂಬರಿಗಳನ್ನು ಅನುವಾದಿಸಿ ಬಹುದೊಡ್ಡ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾದರು. ಪಂಜೆ ಮಂಗೇಶರಾಯರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎನ್. ಕಾಮತ್, ಕೆರೂರು ವಾಸುದೇವಾಚಾರ್ಯರು, ಬೆಟಗೇರಿ ಕೃಷ್ಣಶರ್ಮ ಮೊದಲಾದವರು ಕತೆ, ಕಾದಂಬರಿಗಳ ಮೂಲಕ ಜನಜೀವನವನ್ನು ಕುರಿತು ಬರೆಯತೊಡಗಿದರು. ಕಣ್ಣ ಮುಂದಿನ ಜನರ ಬದುಕು ಸಾಹಿತ್ಯದಲ್ಲಿ ಕತೆ, ಕಾದಂಬರಿ, ನಾಟಕಗಳಾಗಿ ಬಂದದ್ದು ಬಹುದೊಡ್ಡ ಕ್ರಾಂತಿ. ಕನ್ನಡ ನೆಲದ ಬದುಕು ಸಾಹಿತ್ಯದೊಳಗೆ ಪ್ರವೇಶಿಸಿ ಮಣ್ಣಿನ ವಾಸನೆಯನ್ನು ತಂದಿತು. ಈ ದೇಸಿಸೊಗಡು ಓದುಗರನ್ನು ಅಯಸ್ಕಾಂತದಂತೆ ಸೆಳೆಯಿತು.

ಕಿಟೆಲ್ ಅವರು ಕನ್ನಡ–ಇಂಗ್ಲೀಷ್ ನಿಘಂಟು ರಚಿಸಿದರು. ಧಾರವಾಡದ ಸಂತೆಗಳಿಗೆ ಹೋಗಿ ಜನರಾಡುವ ಮಾತುಗಳನ್ನು ಆಲಿಸಿ, ಸಂಗ್ರಹಿಸಿ, ಕನ್ನಡ ವಿದ್ವಾಂಸರನ್ನು ಭೇಟಿ ಮಾಡಿ ಅವರಿಂದ ಕಾವ್ಯಗಳನ್ನು ಸಂಗ್ರಹಿಸಿ ರೂಪಿಸಿದ ನಿಘಂಟು ಕನ್ನಡಕ್ಕೊಂದು ಬಹುದೊಡ್ಡ ಆಸ್ತಿ. ಇವರ ಈ ಪ್ರಯತ್ನ ಕನ್ನಡದೊಳಗೆ ನಿಘಂಟುಸಂಸ್ಕೃತಿಯೊಂದು ಬೆಳೆಯಲು ಕಾರಣವಾಯಿತು. ಇದರಲ್ಲಿ ಕಿಟೆಲ್ ಸಂಗ್ರಹಿಸಿರುವ ನಾಲ್ಕು ಸಾವಿರ ಗಾದೆಗಳು ಜನಪದ ಸಾಹಿತ್ಯ ಸಂಗ್ರಹಕ್ಕೆ ಪ್ರೇರಣೆಯಾಯಿತು. ಸಿಂಗರಾರ್ಯನು ಕನ್ನಡ ಸಾಹಿತ್ಯದಲ್ಲಿ ನಾಟಕಸಂಸ್ಕೃತಿಯನ್ನು ಅಧಿಕೃತವಾಗಿ ಆರಂಭಿಸಿದನು. ಸಂಸ್ಕೃತ ನಾಟಕ ಪರಂಪರೆಯಿಂದ ಪ್ರೇರಿತನಾದ ಇವನು ಕನ್ನಡದಲ್ಲಿ ಮೊದಲ ನಾಟಕ 'ಮಿತ್ರವಿಂದಾಗೋವಿಂದ' ಬರೆದನು. ಇದು ಕನ್ನಡದಲ್ಲಿ ಸಾಮಾಜಿಕ, ಐತಿಹಾಸಿಕ, ಹಾಸ್ಯ ನಾಟಕಗಳ ಬೆಳವಣಿಗೆಗೆ

ನಾಂದಿಯಾಡಿತು. ಮೈಸೂರು ಸಂಸ್ಥಾನ ನಾಟಕ ಕಂಪನಿಗಳಿಗೆ ಪ್ರೋತ್ಸಾಹ ನೀಡಿ ವೃತ್ತಿನಾಟಕ ರಂಗಭೂಮಿ ಬೆಳೆಯಲು ಕಾರಣವಾಯಿತು. ಸಂಸ ಅವರು ಐತಿಹಾಸಿಕ ನಾಟಕಗಳನ್ನು, ಟಿ.ಪಿ.ಕೈಲಾಸಂ, ಶ್ರೀರಂಗ, ಪರ್ವತವಾಣಿಯವರು ಸಾಮಾಜಿಕ ನಾಟಕಗಳನ್ನು ಬರೆದು ಹವ್ಯಾಸಿನಾಟಕ ರಂಗಭೂಮಿಯಲ್ಲಿ ಪ್ರಯೋಗಿಸಿದರು. ನಾಟಕ ಕ್ಷೇತ್ರದಲ್ಲಿ ಬಹಳೊಷ್ಟು ಪ್ರಯೋಗಗಳು ನಡೆದು ನಾಟಕ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದ್ದನ್ನು ಗಮನಿಸಬಹುದು. ಗಲಗಲಿ ಅವ್ವ, ಹರಪನಹಳ್ಳಿ ಭೀಮವ್ವ ಮೊದಲಾದ ತತ್ವಪದಕಾರ್ತಿಯರನ್ನೊಳಗೊಂಡು ನಂಜನಗೂಡು ತಿರುಮಲಾಂಬ, ಆರ್.ಕಲ್ಯಾಣಮ್ಮ, ತಿರುಮಲೆ ರಾಜಮ್ಮ ಮೊದಲಾಗಿ ಕನ್ನಡ ಸಾಹಿತ್ಯದೊಳಗೆ ಮಹಿಳಾ ಸಾಹಿತ್ಯ ಶಾಖೆಯನ್ನು ನಿಧಾನವಾಗಿ ತೆರೆಯತೊಡಗಿದರು. ಕೊಡಗಿನ ಗೌರಮ್ಮ ಹೆಣ್ದನಿಯನ್ನು ಕನ್ನಡ ಸಾಹಿತ್ಯದೊಳಗೆ ಟೋನ್ ಆಗಿ ತಂದ ದಿಟ್ಟ ಬರಹಗಾರ್ತಿ, ಕನ್ನಡಕ್ಕೆ ದಕ್ಕಿದ ಅದ್ಭುತ ಮಹಿಳಾ ಪ್ರತಿಭೆ. ಇದೇ ಸಾಲಿನಲ್ಲಿ ಬಂದ ತ್ರಿವೇಣಿ, ಎಂ.ಕೆ.ಇಂದಿರಾ, ಅನುಪಮ ನಿರಂಜನ ಮೊದಲಾದವರು ಕತೆ, ಕಾದಂಬರಿಗಳ ಮೂಲಕ ಸ್ತ್ರೀಸಾಹಿತ್ಯ ಚಿಂತನೆಗಳನ್ನು ಕನ್ನಡ ನಾಡಿನೊಳಗೆ ಹರಡಿದರು. ವೀಣಾ ಶಾಂತೇಶ್ವರ, ವೈದೇಹಿ ಅವರು ಸ್ತ್ರೀವಾದದ ಹಿನ್ನೆಲೆಯಲ್ಲಿ ಬರೆಯತೊಡಗಿದರು. ಸಾರಾ ಅಬೂಬಕ್ಕರ್, ಮಮ್ತಾಜ್ ಬೇಗಂ, ರಜಿಯಾ, ಬಾನು ಮುಷ್ತಾಕ್ ಮೊದಲಾದವರು ಮುಸ್ಲಿಂ ಜಗತ್ತಿನೊಳಗಣ ಸ್ತ್ರೀಸಂವೇದನೆಗಳನ್ನು ಕನ್ನಡ ಸಾಹಿತ್ಯದೊಳಗೆ ತಂದರು. ದಲಿತ ಬಂಡಾಯ ಸಾಹಿತ್ಯ ಕಾಲದಲ್ಲಿ ಜನರಾಡುವ ಆಡುಭಾಷೆ ಸಾಹಿತ್ಯದೊಳಗೆ ಸ್ಥಾನ ಪಡೆಯಿತು. ರಾವ್ ಬಹದ್ದೂರ್ ಅವರ ಗ್ರಾಮಾಯಣ, ಚದುರಂಗರ ವೈಶಾಖ, ರಾಘವೇಂದ್ರ ಪಾಟೀಲರ ತೇರು, ಗೀತಾ ನಾಗಭೂಷಣರ ಬದುಕು ಕಾದಂಬರಿಗಳು, ದೇವನೂರ ಮಹಾದೇವರ ಕಥನಗಳು ಮೊದಲಾದವನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಇಡಿಯಾಗಿ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಕನ್ನಡ ನಾಡಿನ ಬದುಕು, ಭಾಷೆ, ಸಂಸ್ಕೃತಿ ಬಹುತ್ವದ ನೆಲೆಯಲ್ಲಿ ವ್ಯಕ್ತವಾಗಿರುವುದು ಮೊದಲ ನೋಟಕ್ಕೆ ಗೋಚರವಾಗುತ್ತದೆ. ಶಾಸನಗಳು ಕಟ್ಟಿಕೊಟ್ಟ ಜೀವನಸಂಸ್ಕೃತಿ,

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಕವಿರಾಜಮಾರ್ಗ ದಾಖಲಿಸಿರುವ ಕನ್ನಡಸಂಸ್ಕೃತಿ, ಚಂಪೂ ಕವಿಗಳು ನಿರ್ಮಿಸಿದ ಜೈನಸಂಸ್ಕೃತಿ, ವಚನಕಾರರು ಕಟ್ಟಿದ ಶರಣಸಂಸ್ಕೃತಿ, ಶತಕಕವಿಗಳು ನೀಡಿದ ನೀತಿಸಂಸ್ಕೃತಿ, ವಚನಕಾರ್ತಿಯರು ಮುಂದಿಟ್ಟ ಲಿಂಗಸಮಾನ ಸಂಸ್ಕೃತಿ, ದಾಸರು ಹಾಡಿದ ವೈಷ್ಣವಸಂಸ್ಕೃತಿ, ಕುಮಾರವ್ಯಾಸನ ಭಾಗವತಸಂಸ್ಕೃತಿ, ಲಕ್ಷ್ಮೀಶನ ಕಥನಸಂಸ್ಕೃತಿ, ನಂಜುಂಡ ಕವಿಯ ಐತಿಹ್ಯಸಂಸ್ಕೃತಿ, ಕನಕದಾಸರು ಕಟ್ಟಿದ ಶೂದ್ರಸಂಸ್ಕೃತಿ, ಸಂಚಿಯ ಹೊನ್ನಮ್ಮರ ಸೌಖ್ಯಸಂಸ್ಕೃತಿ, ಒಂದನೆಯ ನಾಗವರ್ಮನಿಂದ ಆರಂಭವಾದ ಅನುವಾದಸಂಸ್ಕೃತಿ, ಆಂಡಯ್ಯ ಪ್ರಯೋಗಿಸಿದ ಅಚ್ಚಗನ್ನಡಸಂಸ್ಕೃತಿ, ಸರ್ವಜ್ಞನು ಬಿತ್ತಿದ ಜನಸಂಸ್ಕೃತಿ, ತತ್ವಪದಕಾರರು ಸಾರಿದ ಜೀವನಸಂಸ್ಕೃತಿ, ಸಿಂಗರಾರ್ಯನು ನಿರ್ಮಿಸಿದ ನಾಟಕಸಂಸ್ಕೃತಿ, ಕೆಂಪುನಾರಾಯಣನಿಂದ ಗದ್ಯಸಂಸ್ಕೃತಿ, ಹರ್ಮನ್ ಮೊಗ್ಲಿಂಗ್ ತಂದ ಮುದ್ರಣಸಂಸ್ಕೃತಿ ಮತ್ತು ಪತ್ರಿಕಾಸಂಸ್ಕೃತಿ, ಕಿಟೆಲ್ ಕೊಟ್ಟ ನಿಘಂಟುಸಂಸ್ಕೃತಿ ಹೀಗೆ ಸಾವಿರ ವರ್ಷಗಳಿಂದ ಹರಿದುಬರುತ್ತಿರುವ ಕನ್ನಡವು ಬಹುಸಂಸ್ಕೃತಿಗಳ ನೆಲೆಯಿಂದ ವಿಸ್ತಾರವಾಗಿ, ವೈವಿಧ್ಯಮಯವಾಗಿ, ಪ್ರಯೋಗಾತ್ಮಕವಾಗಿ ಹಬ್ಬಿ ಸಾಗುತ್ತಿದೆ. 'ಅಭಿವ್ಯಕ್ತಿ ಸ್ವಾತಂತ್ರ್ಯ' ಎಂಬುದು ಕನ್ನಡ ನಾಡು, ನುಡಿ, ನಡೆಯೊಳಗೆ ವ್ಯಕ್ತವಾಗುತ್ತಲೇ ಬೆಳೆದಿರುವುದು ಇದರಿಂದ ತಿಳಿದುಬರುತ್ತದೆ. ಪ್ರತಿ ಕವಿಯೂ ಇತರ ಕವಿಗಳಿಗಿಂತ ಭಿನ್ನ ಮತ್ತು ಅನನ್ಯ. ಏಕೆಂದರೆ ಅವನು ಹಿಂದಿನದರ ಮುಂದುವರಿಕೆಯಾಗಿ ಉಳಿಯಲು ಇಷ್ಟಪಟ್ಟವನಲ್ಲ. ಈ ಗುಣ ಒಂದು ಭಾಷೆಯನ್ನಾಗಲಿ, ಸಾಹಿತ್ಯವನ್ನಾಗಲಿ ಹೊಸತನದಲ್ಲಿ ಕಾಪಿಟ್ಟುಕೊಂಡು ಬರಲು ಕಾರಣವಾಗುತ್ತದೆ. ಈ ಗುಣಶೀಲ ವ್ಯಕ್ತಿತ್ವ ಇಂದಿನ ಕನ್ನಡಿಗರಿಗೆ ಆದರ್ಶಪ್ರಾಯವಾಗಬೇಕಿದೆ. ಕನ್ನಡ ಸಂಸ್ಕೃತಿ ಜೀವನದಿಯಾಗಿ ಮುಂದುವರಿಯಬೇಕಾದರೆ, ವಿಶ್ವಪ್ರಜ್ಞೆಯಾಗಿ ಹೊರಹೊಮ್ಮಬೇಕಾದರೆ, ಎಲ್ಲವನ್ನೂ ಒಳಗೊಂಡು ಕನ್ನಡವಾಗಿ ವ್ಯಕ್ತಗೊಳ್ಳುವುದರ ಮೂಲಕ ಅದು ಸಾಧ್ಯ ಎಂಬುದು ನನ್ನ ನಿಲುವು.

ಕನ್ನಡಿಗ ಎಂಬುವವನು/ಳು ಯಾವ ಭಾಷೆಯನ್ನಾದರೂ ಕಲಿಯಲಿ,

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಯಾವ ಭಾಷೆಯಲ್ಲಾದರೂ ಮಾತನಾಡಲಿ, ಬರೆಯಲಿ ಆದರೆ ತನ್ನೆಲ್ಲಾ ಜ್ಞಾನ ವಿಸ್ತಾರತೆಯನ್ನು, ಅನುಭವ ಸಂಪತ್ತನ್ನು, ಜೀವನ ನೋಟವನ್ನು, ತಾನು ಕಂಡುಕೊಂಡ ತತ್ವನೆಲೆಯನ್ನು ಕನ್ನಡದಲ್ಲಿ ವ್ಯಕ್ತಪಡಿಸುವ, ಕರ್ನಾಟಕವನ್ನು ಪ್ರತಿನಿಧಿಸುವ, ಕನ್ನಡಿಗರಿಗಾಗಿ ಅವಕಾಶ ತೆರೆಯುವುದರ ಮೂಲಕ ಕನ್ನಡ ನಾಡು, ನುಡಿ, ನಡೆಗೆ ದೊಡ್ಡ ಆಸ್ತಿ ಆಗಲು ಸಾಧ್ಯ. ಪ್ರತಿಯೊಬ್ಬ ಕನ್ನಡಿಗನ ಮಾತು ಕನ್ನಡದ ಸಂಪತ್ತು. ಅವನ ಭಾಷಾ ಬಳಕೆಯ ಬೆಳವಣಿಗೆ ಕನ್ನಡ ಭಾಷೆಯ ಬೆಳವಣಿಗೆ. ಕನ್ನಡಿಗರು ಕನ್ನಡ ಸಾಹಿತ್ಯವನ್ನು ಹೆಚ್ಚುಹೆಚ್ಚು ಓದುವವರು, ಬರೆಯುವವರು ಎಂದಾದರೆ, ಅದು ಕನ್ನಡ ಸಾಹಿತ್ಯ ಸಮೃದ್ಧಿಯ ಲಕ್ಷಣ. ಕನ್ನಡಿಗ ಇಡೀ ಪ್ರಪಂಚದ ಯಾವುದೇ ದೇಶದಲ್ಲಿ, ಸ್ಥಳದಲ್ಲಿ ಇದ್ದರೂ(ಕರ್ನಾಟಕವನ್ನೂ ಒಳಗೊಂಡು) ಅಲ್ಲಿ ಕನ್ನಡ ಡಿಂಡಿಮ ಬಾರಿಸಿದರೆ, ಕನ್ನಡ ಕಟ್ಟುವ ಕೆಲಸ ಮಾಡಿದರೆ, ಕನ್ನಡ ಸಂಘಟನೆಯಲ್ಲಿ ತೊಡಗಿದರೆ ಅದು ಕರ್ನಾಟಕದ ಶ್ರೀಮಂತಿಕೆ. ಪ್ರತಿಯೊಬ್ಬ ಕನ್ನಡಿಗ ಕನ್ನಡದಲ್ಲಿಯೇ ಸಹಿ ಮಾಡುವ ಅನನ್ಯತೆಯನ್ನು ಮೆರೆದರೆ ಅದು ಕನ್ನಡಾಭಿಮಾನ. ನಿಮ್ಮ ಸಹಿ ನಿಮ್ಮನ್ನಷ್ಟೇ ಅಲ್ಲಾ, ನಿಮ್ಮ ಭಾಷಾಭಿಮಾನವನ್ನೂ ಪ್ರತಿನಿಧಿಸುತ್ತದೆ ಎಂಬುದನ್ನು ಎಲ್ಲಾ ಕನ್ನಡಿಗರು ಮರೆಯಬಾರದು.

ಪರಾಮರ್ಶನ ಗ್ರಂಥಗಳು :

1. ಶಂಗಂ ತಮಿಳಿಗಂ ಮತ್ತು ಕನ್ನಡ ನಾಡು–ನುಡಿ, ಷ.ಶೆಟ್ಟರ್, ಅಭಿನವ ಪ್ರಕಾಶನ, ಬೆಂಗಳೂರು, 2010
2. ಸಮಗ್ರ ಗದ್ಯ ಸಂಪುಟ 1, 2, 3, ಜಿ.ಎಸ್. ಶಿವರುದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
3. ಆಧುನಿಕ ಕನ್ನಡ ಸಾಹಿತ್ಯ ನಾಡು ನುಡಿ ಚಿಂತನೆಗಳು, ಸಂ.ಮುನಿಯಪ್ಪ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿ.ವಿ., ಬೆಂಗಳೂರು, 2014
4. ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು, ಸಂ.ಟಿ.ಪಿ.ಅಶೋಕ, ಅಕ್ಷರ ಪ್ರಕಾಶನ, ಹೆಗ್ಗೋಡು, 2005
5. ಸಂಸ್ಕೃತಿ ಕಥನ, ಸಂ.ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006
6. ಕನ್ನಡ ಸಂಸ್ಕೃತಿ, ದೇಜಗೌ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2012

ಲೇಖಕರು : ಡಾ. ಆನಂದ ಎಸ್.ಎನ್.
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕಡೂರು – 577548
ಚಿಕ್ಕಮಗಳೂರು ಜಿಲ್ಲೆ.
anandajjampura@gmail.com

***

ನಾಡಗೀತೆಯೊಳಗಿನ ಪ್ರಕೃತಿ– ವರ್ತಮಾನದ ತಲ್ಲಣಗಳು

ಪ್ರಸ್ತಾವನೆ:

ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಕರ್ನಾಟಕದ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ'ಯು ಕೇವಲ ಭೌಗೋಳಿಕ ಅಥವಾ ಐತಿಹಾಸಿಕ ವರ್ಣನೆಯಲ್ಲ; ಅದು ಕನ್ನಡ ನಾಡಿನ ಆದರ್ಶಗಳು ಮತ್ತು ಮಹೋನ್ನತ ಮೌಲ್ಯಗಳ ದಿವ್ಯ ಕಲ್ಪನೆಯಾಗಿದೆ. ಈ ಗೀತೆಯು ಕರ್ನಾಟಕವನ್ನು ಸಮೃದ್ಧವಾದ ನದಿಗಳು ಮತ್ತು ವನಗಳಿರುವ ಪ್ರಕೃತಿಯ ತವರು ಎಂದೂ, ಜೊತೆಗೆ ಶ್ರೇಷ್ಠ ದಾರ್ಶನಿಕರು, ಕವಿಗಳು ಹಾಗೂ ಸರ್ವ ಜನಾಂಗದ ಶಾಂತಿಯ ತೋಟ ಎಂದೂ ಕೊಂಡಾಡುತ್ತದೆ. ಆದರೆ, ಈ ಆದರ್ಶಭರಿತ ಸಾಲುಗಳನ್ನು ವರ್ತಮಾನದ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನೋಡಿದಾಗ, ಆಳವಾದ ತಲ್ಲಣಗಳು ಎದುರಾಗುತ್ತವೆ. ಪ್ರಸ್ತುತ ಲೇಖನವು, ನಾಡಗೀತೆಯಲ್ಲಿ ವರ್ಣಿತವಾದ ಭವ್ಯ ಪ್ರಕೃತಿ ಸಂಪತ್ತು ಮತ್ತು ಆಶಯಪೂರ್ಣ ಸಾಮಾಜಿಕ ಸಮನ್ವಯದ ಕಲ್ಪನೆಗಳು ಇಂದಿನ ವಾಸ್ತವದಲ್ಲಿ ಎದುರಿಸುತ್ತಿರುವ ಮಾಲಿನ್ಯ, ಕೋಮು ವಿಭಜನೆ ಮತ್ತು ನೈತಿಕ ಕುಸಿತದಂತಹ ಸವಾಲುಗಳನ್ನು ಗಂಭೀರವಾಗಿ ವಿಶ್ಲೇಷಿಸಿ, ಕುವೆಂಪು ಅವರ ಕನಸನ್ನು ಉಳಿಸಿಕೊಳ್ಳುವ ತುರ್ತು ಅಗತ್ಯದ ಕುರಿತು ಬೆಳಕು ಚೆಲ್ಲುತ್ತದೆ. ರಾಷ್ಟ್ರಕವಿ ಕುವೆಂಪು ಅವರು ಈ ಗೀತೆಯನ್ನು ಪದ್ಯವನ್ನಾಗಿ 1924ರಲ್ಲಿ 'ಕಿಶೋರಚಂದ್ರವಾಣಿ' ಎಂಬ ಕಾವ್ಯನಾಮದಡಿ ಬರೆದರು. 2004ರಲ್ಲಿ ಕುವೆಂಪು

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಜನ್ಮ ಶತಮಾನೋತ್ಸವದ ಸಮಯದಲ್ಲಿ ಕರ್ನಾಟಕ ಸರ್ಕಾರ ಈ ಗೀತೆಯನ್ನು ಅಧಿಕೃತ ನಾಡಗೀತೆಯನ್ನಾಗಿ ಮಾಡಲು ನಿರ್ಧರಿಸಿತು. ರಾಷ್ಟ್ರಕವಿ ಕುವೆಂಪು ರಚಿಸಿದ 'ಜಯ ಭಾರತ ಜನನಿಯ ತನುಜಾತೆ' ಕವನವು ಅವರ ಕೈಯಲ್ಲೇ ಮುಂದೆ ಸಣ್ಣಪುಟ್ಟ ಮಾರ್ಪಾಡುಗಳನ್ನು ಪಡೆಯಿತು. 2004ರ ಜನವರಿ 6 ರಂದು ರಾಜ್ಯ ಸರ್ಕಾರ ಅದನ್ನು 'ನಾಡಗೀತೆ'ಯಾಗಿ ಗೌರವಿಸಿ ಅದಕ್ಕೊಂದು ವಿಶೇಷ ಸ್ಥಾನ ನೀಡಿತು. 1930ರಲ್ಲಿ ಪ್ರಕಟವಾದ ಕುವೆಂಪು ಅವರ 'ಕೊಳಲು' ಕವನ ಸಂಕಲನದಲ್ಲಿ ನಾಡಗೀತೆ ರಚನೆಯ ದಿನಾಂಕವನ್ನು 7.12.1928 ಎಂದು ಸೂಚಿಸಲಾಗಿದೆ. ಆದರೆ, ಆ ಕವಿತೆಯ ಆಶಯ 1924ರ ಸಮಯದ್ದು ಎಂಬುದು ಕುವೆಂಪು ಅವರ ಆತ್ಮಕಥೆಯಿಂದ ಸ್ಪಷ್ಟವಾಗುತ್ತದೆ. ಕೊಳಲು ಸಂಗ್ರಹದಲ್ಲಿ ಕವಿತೆಯ ಶೀರ್ಷಿಕೆ 'ಜಯ ಹೇ ಕರ್ಣಾಟಕ ಮಾತೆ!' ಎಂದಿದ್ದು, ಅದರಲ್ಲೆಲ್ಲೂ ಅದನ್ನು ನಾಡಗೀತೆ ಎಂದಾಗಲಿ, ರಾಷ್ಟ್ರಗೀತೆ ಎಂದಾಗಲಿ ಉಲ್ಲೇಖಿಸಿಲ್ಲ. ಆದರೆ, ತಮ್ಮ ಆತ್ಮಕಥೆ 'ನೆನಪಿನ ದೋಣಿಯಲ್ಲಿ' 1924 25ರ ಹಸ್ತಪ್ರತಿಯಿಂದ ಉಲ್ಲೇಖಿಸಿರುವ 'ಕರ್ಣಾಟ ರಾಷ್ಟ್ರಗೀತೆ' ಎಂಬ ಶೀರ್ಷಿಕೆಯ ಕವನಕ್ಕೆ ಕೊಟ್ಟಿರುವ ವಿವರಣೆಯಲ್ಲಿ "ಇದೊಂದು ಸ್ವಾರಸ್ಯದ ವಿಷಯ. 1924–25ರಲ್ಲಿ ನನ್ನದೊಂದು ಹಸ್ತಪ್ರತಿಯಲ್ಲಿ 'ಕರ್ಣಾಟಕ ರಾಷ್ಟ್ರಗೀತೆ' ಎಂಬ ಕವನವಿದೆ. ಅದು ನನ್ನ 'ಜಯ ಹೇ ಕರ್ಣಾಟಕ ಮಾತೆ' ಎಂಬ ನಾಡಗೀತೆಯ ಪ್ರಪಿತಾಮಹನೊ ಪ್ರಪ್ರಪಿತಾಮಹನೊ ಆಗಿರಬೇಕು. ಠಾಕೂರರ 'ಜನಗಣಮನ' ದಂತೆ ನಮ್ಮ ಕನ್ನಡ ನಾಡಿಗೂ ಒಂದು ರಾಷ್ಟ್ರಗೀತೆಯನ್ನು ನೀಡುವ ಪ್ರಯತ್ನದ ಭ್ರೂಣಸ್ಥಿತಿಯಂತಿದೆ ಅದು. ಅದರ ರಚನೆಯ ರೂಪಾಂಶ ನಾನು ಬೆಳೆದಂತೆಲ್ಲ ಬದಲಾವಣೆ ಹೊಂದುತ್ತಾ (ಭಾವ ಮತ್ತು ಭಾಷೆ ಎರಡರಲ್ಲಿಯೂ) ಕಡೆಗೆ 'ಕೊಳಲು' ಕವನ ಸಂಗ್ರಹ ಅಚ್ಚಾದಾಗ ಒಂದು ಸ್ಥಿಮಿತಕ್ಕೆ ನಿಂತಿತು. ಮತ್ತೇ 1970–71ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅದನ್ನು ನಾಡಗೀತೆಯನ್ನಾಗಿ ಅಧಿಕೃತವಾಗಿ ಸ್ವೀರಿಸಿದಾಗ ಮೂರು ನಿಮಿಷಗಳಲ್ಲಿ ಅದನ್ನು ಹಾಡಿ ಮುಗಿಸುವಂತೆ ಸಂಗ್ರಹಿಸಿಕೊಳ್ಳಲಾಯಿತು. 47 ವರ್ಷಗಳ ಅನಂತರ 1927ನೆಯ ಜುಲೈ ತಿಂಗಳಲ್ಲಿ ಇಂದು (ನಾನೀಗ ಇದನ್ನು ಬರೆಯುತ್ತಿರುವುದು 27–7–1927) ನಾಡಿಗೆ 'ಕರ್ಣಾಟಕ' ಎಂಬ ಹೆಸರಿಡುವ ನಿರ್ಣಯವನ್ನು ವಿಧಾನಸಭೆ ಅಂಗೀಕರಿಸಿದೆ.

ಬಹುಶಃ ಪರಿಷತ್ತು ಅಂಗೀಕರಿಸಿರುವ ನಾಡಗೀತೆಯನ್ನು ಸರಕಾರವೂ ಒಪ್ಪುತ್ತದೆಂದು ಹಾರೈಸುತ್ತೇನೆ"[1] ಎಂದು ಉಲ್ಲೇಖಿಸಿದ್ದಾರೆ. ಹಾಗೆಯೇ ಈ 'ಕರ್ಣಾಟ ರಾಷ್ಟ್ರಗೀತೆ'ಯನ್ನು ರಚಿಸಿದಾಗ ಕವಿಯ ವಯಸ್ಸು ಕೇವಲ 20 ವರ್ಷಗಳು. ಕವಿತೆಯ ಮೊದಲ ಶೀರ್ಷಿಕೆ 'ಕರ್ಣಾಟ ರಾಷ್ಟ್ರಗೀತೆ' ಎಂದಿದೆ. ಇಲ್ಲಿ ಒಂದು ವಿಷೇಶತೆಯನ್ನು ಗಮನಿಸಬಹುದಾಗಿದೆ, 1925ರ ಸುಮಾರಿಗೆ, ಭಾರತ ಒಂದು ಗಣರಾಜ್ಯ ವಾಗುತ್ತದೆ, ಭಾಷಾವಾರು ಪ್ರಾಂತ್ಯಗಳ ರಚನೆಯಾಗುತ್ತದೆ, ಕನ್ನಡ ನಾಡು ಏಕೀಕರಣ ಆಗಿ ಅದಕ್ಕೆ 'ಕರ್ನಾಟಕ' ಎಂಬ ಹೆಸರು ಬರುತ್ತದೆ ಎನ್ನುವ ಯಾವ ಕಲ್ಪನೆಗಳೂ ಇರಲಿಲ್ಲ. ಆದರೂ ಕರ್ನಾಟಕವನ್ನು ಒಂದು ರಾಷ್ಟ್ರವನ್ನಾಗಿ ಕಲ್ಪಿಸಿ, ಅದಕ್ಕೊಂದು ರಾಷ್ಟ್ರಗೀತೆಯನ್ನು ರಚಿಸಿರುವುದು ಗಮನಾರ್ಹ. ಹಾಗೆಯೇ 'ಕರ್ಣಾಟ ರಾಷ್ಟ್ರಗೀತೆ' ಎಂಬ ಶೀರ್ಷಿಕೆ ಅದಕ್ಕಿದ್ದರೂ, ಅದರ ಐದೂ ಭಾಗಗಳಲ್ಲಿ 'ಭಾರತ ಜನನಿಯ ತನುಜಾತೆ' ಎಂಬ ಸಾಲುಗಳಿವೆ. ಕನ್ನಡ ನಾಡನ್ನು ಭಾರತದ ಅವಿಭಾಜ್ಯ ಅಂಗ ಎಂಬುದನ್ನು ಒಪ್ಪಿಕೊಂಡು, ಭಾರತ ಮಾತೆಯ ಮಗಳು ಎಂದು ಕನ್ನಡ ನಾಡನ್ನು ಸ್ತುತಿಸಿರುವುದು ಮತ್ತು ಅದೇ ಆಶಯುವನ್ನು ಕವಿತೆಯು ಅಂತಿಮ ಅವತರಣಿಕೆಯುಲ್ಲಿ ಉಳಿಸಿಕೊಂಡಿರುವುದು ಗಮನಾರ್ಹವಾಗಿದೆ. ಬಹುಶಃ 'ಕರ್ಣಾಟ ರಾಷ್ಟ್ರಗೀತೆ' ಎಂಬ ಶೀರ್ಷಿಕೆಯಲ್ಲಿನ ರಾಷ್ಟ್ರ ಎಂಬ ಪದವು ದೇಶದ ಬದಲು ನಾಡನ್ನೇ ಸೂಚಿಸುತ್ತಿರಬಹುದು. ಮೊದಲಿನ ಕವಿತೆಯಲ್ಲಿನ ಹಲವಾರು ಸಾಲುಗಳು ಅಂತಿಮ ರೂಪದಲ್ಲಿಯೂ ಉಳಿದುಕೊಂಡಿರುವುದನ್ನು ಗಮನಿಸಿದರೆ, ಕವಿಯ ಆಶಯ ಬದಲಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮುಖ್ಯವಾಗಿ 'ಭಾರತ ಜನನಿಯ ತನುಜಾತೆ', 'ಜಯ ಹೇ ಕರ್ಣಾಟಕ ಮಾತೆ!', 'ಜನನಿಯ ಜೋಗುಳ', 'ಕಪಿಲ ಪತಂಜಲ ಗೌತಮ(ಜಿನ)ನುತ', 'ಶಂಕರ ರಾಮಾನುಜ', 'ಕೃಷ್ಣ ಶರಾವತಿ (ವರ) ತುಂಗಾ', 'ಸರ್ವ ಜನಾಂಗದ ಶಾಂತಿ(ನಿಕೇತನ)ಯ ತೋಟ', 'ಗಾಯಕ ವೈಣಿಕ' ಎಂಬಂತಹ ಪದಪುಂಜಗಳನ್ನು ಗಮನಿಸಬಹುದು. ಆದ್ದರಿಂದ, ರಚನೆಯ ರೂಪಾಂಶ, ಭಾವ, ಭಾಷೆ ಬದಲಾಗಿದ್ದರೂ ಮೂಲ ಆಶಯ ಮಾತ್ರ ಮೂಲದ್ದೇ ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ, ಮೂಲದ 'ಪಚ್ಚೆಯ ನವ

ಕಂಠೀಮಾಲೆ'ಯಂತಹ ಉಕ್ತಿಗೆ ಬದಲಾಗಿ 'ಹಸುರಿನ ಗಿರಿಗಳ ಸಾಲೆ ನಿನ್ನಯ ಕೊರಳಿನ ಮಾಲೆ' ಎಂಬಂತಹ ಸಾಲುಗಳು ಬಂದಿರುವುದು ಅವರ 'ಭಾವ' ಬೆಳವಣಿಗೆಯ ಸಂಕೇತವಾಗಿದೆ.

'ಭಾರತ ಜನನಿಯ ತನುಜಾತೆ' ಮತ್ತು 'ಸರ್ವ ಜನಾಂಗದ ಶಾಂತಿಯ ತೋಟ' ಈ ನಾಡಗೀತೆಯ ಮೂಲ ಆಶಯಗಳೆಂಬುದು ಸ್ಪಷ್ಟ. ವಿಶಾಲ ಜಗತ್ತಿಗೆ ಹೋಲಿಸಿದರೆ ಕರ್ನಾಟಕದ ವಿಸ್ತೀರ್ಣ ತುಂಬಾ ಚಿಕ್ಕದು. ಆದರೆ, ಕನ್ನಡಿಗರ ಕರ್ನಾಟಕ, ಅದನ್ನೊಳಗೊಂಡ ಭಾರತ, ಜಗತ್ತು ಮತ್ತು ಎಲ್ಲರೂ ನನ್ನಂತೆಯೇ ಎಂದು ಭಾವಿಸುವ, ತನ್ಮೂಲಕ ಇಡೀ ಜಗತ್ತನ್ನು ಶಾಂತಿಯ ತೋಟವಾಗಿರಲೆಂದು ಆಶಿಸುವ ಕವಿಯ ಉದಾತ್ತ ಭಾವವನ್ನು ಇಲ್ಲಿ ಕಾಣಬಹುದು. "ನಾಡಗೀತೆಯು ಸರಳ, ಆದರೆ ಅರ್ಥಪೂರ್ಣ. ಭಾರತದ ಸಂಪತ್ತನ್ನು ಬಹು ಸೂಕ್ಷ್ಮವಾಗಿ ಹಿಡಿದಿಟ್ಟಿದೆ. ಅದರ ನಿಜವಾದ ಅರ್ಥವನ್ನು ಗ್ರಹಿಸಿದರೆ ಕರ್ನಾಟಕದ ಮೇಲ್ಮೈ ಪ್ರಕೃತಿ ಸಂಪತ್ತು, ಖನಿಜ ಸಂಪತ್ತು, ಸಾಂಸ್ಕೃತಿಕ ಸಂಪತ್ತುಗಳ ಸಮಗ್ರ ಅನಿಭವವಾಗುತ್ತದೆ. "ಜನಗಣಮನ", "ವಂದೇ ಮಾತರಂ" ರಾಷ್ಟ್ರಗೀತೆಗಳು ನಮ್ಮಲ್ಲಿನ ರಾಷ್ಟ್ರಪ್ರೇಮವನ್ನು ಎಚ್ಚರಿಸಿ ನಮ್ಮಲ್ಲಿ ಸ್ಫೂರ್ತಿಯನ್ನು ತುಂಬಿದರೆ, 'ಜಯ ಹೇ ಕರ್ನಾಟಕ ಮಾತೆ' ನಾಡಗೀತೆಯು ನಮ್ಮಲ್ಲಿ ರಾಷ್ಟ್ರಪ್ರೇಮ–ನಾಡ ಪ್ರೇಮ ಮತ್ತು ಅಭಿಮಾನವನ್ನು ಉದ್ದೀಪನಗೊಳಿಸುತ್ತದೆ"[2] ಎಂದು ಡಾ.ಎಂ. ಚಿದಾನಂದಮೂರ್ತಿ ಅವರು ಅಭಿಪ್ರಾಯಿಸಿದ್ದಾರೆ.

ಕುವೆಂಪು ಅವರು ತಮ್ಮ ಗೀತೆಯಲ್ಲಿ ಕನ್ನಡ ನಾಡನ್ನು ಹಲವು ವಿಶೇಷಣಗಳಿಂದ ಕರೆದಿದ್ದಾರೆ. ಈ ನಾಡು ತುಂಗಭದ್ರಾ, ಕಾವೇರಿ, ಕೃಷ್ಣಾ, ಶರಾವತಿಯಂತಹ ಜೀವ ನದಿಗಳ ತವರು, ಅಂದದ ಗಾನದ ಮೂಲಕ ಹರಿಯುವ ನದಿಗಳಿಂದ ಕೂಡಿದೆ. ಸುಂದರ ನದಿ ವನಗಳ ನಾಡೇ ಎಂದು ನಾಡನ್ನು ಬಣ್ಣಿಸಿರುವುದು, ಅರಣ್ಯ ಸಂಪತ್ತಿನ ಮಹತ್ವವನ್ನು ಸಾರುತ್ತದೆ ಮತ್ತು ಕಾಡಿನ ಸೌಂದರ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ನಡುವಿನ ಅವಿನಾಭಾವ ಸಂಬಂಧವನ್ನು ಸೂಚಿಸುತ್ತವೆ. ನಾಡಗೀತೆಯು ಕರ್ನಾಟಕದ ಭೂಪ್ರದೇಶ, ಜಲ ಸಂಪತ್ತು ಮತ್ತು ಹಸಿರನ್ನು ವಿಶಿಷ್ಟತೆಯಿಂದ ಕೊಂಡಾಡುತ್ತದೆ. ಆದರೆ

ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ'ಯನ್ನು ಕುವೆಂಪು ಅವರು ರಚಿಸಿದ ಕಾಲವು ಪರಿಸರ ಸಮಸ್ಯೆಗಳು ಇಂದಿನಷ್ಟು ತೀವ್ರವಾಗಿರದ ಕಾಲವಾಗಿತ್ತು. ಈ ಹಿನ್ನೆಲೆಯಲ್ಲಿ, ಗೀತೆಯಲ್ಲಿನ ಪ್ರಕೃತಿಯ ವರ್ಣನೆಯು ಕೇವಲ ಅಂದದ ವರ್ಣನೆಯಾಗದೆ, ಅದು ಸಮೃದ್ಧಿಯ ಸಂಕೇತ ಮತ್ತು ಉತ್ತಮ ಜೀವನದ ಆಧಾರವಾಗಿ ಗೋಚರಿಸುತ್ತದೆ. ಇಂದಿನ ಜಾಗತಿಕ ಮತ್ತು ಸ್ಥಳೀಯ ಪರಿಸರ ಬಿಕ್ಕಟ್ಟುಗಳ ದೃಷ್ಟಿಕೋನದಿಂದ ಗೀತೆಯ ಸಾಲುಗಳನ್ನು ಮರು–ಪರಿಶೀಲಿಸೋಣ. ನಾಡಗೀತೆಯಲ್ಲಿ ವರ್ಣಿತವಾದ ಪ್ರಕೃತಿಯ ಸೊಬಗು ಮತ್ತು ಇಂದಿನ ವಾಸ್ತವ ಪರಿಸ್ಥಿತಿ ಪರಸ್ಪರ ವಿರುದ್ಧವಾಗಿವೆ ಎಂಬುದು ದೊಡ್ಡ ದುರಂತವಾಗಿದೆ. ಗೀತೆಯಲ್ಲಿ ಕೊಂಡಾಡಿದ ನದಿಗಳು ಇಂದು ಕಲುಷಿತವಾಗಿವೆ. ಆಧುನೀಕರಣ ಪರಿಣಾಮವಾಗಿ ಅಭಿವೃದ್ಧಿಯ ನೆಪದಲ್ಲಿ ಕೈಗಾರಿಕೆಗಳ ತ್ಯಾಜ್ಯ, ಒಳಚರಂಡಿ ನೀರು ಸೇರಿ ನದಿಗಳು ಮಲಿನಗೊಂಡಿವೆ. ಹವಾಮಾನ ಬದಲಾವಣೆ ಮತ್ತು ಅತಿಯಾದ ಬಳಕೆಯಿಂದಾಗಿ ಹಲವು ನದಿಗಳು ಬೇಸಿಗೆಯಲ್ಲಿ ಬತ್ತಿ ಹೋಗುವ ಸ್ಥಿತಿ ತಲುಪಿವೆ. ನಾಡಿಗೆ ಜೀವ ನೀಡುವ ಜಲಧಾರೆಗಳೇ ಅಪಾಯದಲ್ಲಿರುವುದು ಗೀತೆಯ ಆಶಯಕ್ಕೆ ದೊಡ್ಡ ಪೆಟ್ಟು.

ಹಸುರಿನ ಗಿರಿಗಳ ಸಾಲೇ ಎಂದು ಕುವೆಂಪು ಹೇಳಿದ ನಾಡಿನಲ್ಲಿ, ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ನಾಶ ವಿಪರೀತವಾಗಿದೆ. ಗಣಿಗಾರಿಕೆ, ಬೃಹತ್ ಯೋಜನೆಗಳು ಮತ್ತು ಅಕ್ರಮ ಮರ ಕಡಿತದಿಂದಾಗಿ ಜೀವ ವೈವಿಧ್ಯ ನೆಲೆಗಳಾದ ಕಾಡುಗಳು ಕರಗಿ ಹೋಗುತ್ತಿವೆ. ಇದು ಹವಾಮಾನ ಬದಲಾವಣೆ, ಮಳೆ ಕೊರತೆ ಮತ್ತು ಬರಗಾಲಕ್ಕೆ ನೇರ ಕಾರಣವಾಗುತ್ತಿದೆ. ನದಿ–ವನಗಳು ಬಡವಾದಂತೆ, ಅವುಗಳನ್ನೇ ಅವಲಂಬಿಸಿರುವ ಪ್ರಾಣಿ–ಪಕ್ಷಿ ಸಂಕುಲಗಳು ಮತ್ತು ಅಪರೂಪದ ಸಸ್ಯಗಳು ವಿನಾಶದ ಅಂಚಿಗೆ ತಲುಪುತ್ತಿವೆ. ಈ ನೈಸರ್ಗಿಕ ಸಮತೋಲನ ಕದಡುತ್ತಿರುವುದು ಭವಿಷ್ಯದ ಬದುಕಿನ ಬಗ್ಗೆ ತೀವ್ರ ಆತಂಕ ಮೂಡಿಸಿದೆ. ಕಾಡುಗಳು ಕೇವಲ ಮರಗಳ ಸಂಗ್ರಹವಲ್ಲ, ಅವು ಸಂಸ್ಕೃತಿ ಮತ್ತು ಕಾವ್ಯದ ಮೂಲ. ವನ ದೇವತೆಯ ಮಡಿಲು ಎಂದರೆ ಪ್ರಕೃತಿಯನ್ನು ಪೂಜ್ಯ ಭಾವದಿಂದ ನೋಡುವ ಭಾರತೀಯ ಸಂಸ್ಕೃತಿಯ ಪ್ರತಿಬಿಂಬ. ಕರ್ನಾಟಕವು ಪಶ್ಚಿಮ

ಘಟ್ಟದಂತಹ ವಿಶ್ವಪರಂಪರೆಯ ತಾಣದ ಒಂದು ಪ್ರಮುಖ ಭಾಗವಾಗಿದೆ. ಆದರೆ, ಮೂಲಸೌಕರ್ಯ ಯೋಜನೆಗಳು, ಅಕ್ರಮ ಕಲ್ಲುಗಣಿಗಾರಿಕೆ ಮತ್ತು ಕೈಗಾರಿಕೆಗಳ ವಿಸ್ತರಣೆಗಾಗಿ ಈ ಸೂಕ್ಷ್ಮ ಪರಿಸರ ನಾಶವಾಗುತ್ತಿದೆ. ಕಾಡುಗಳು ನಾಶವಾದಂತೆ ವನ್ಯಜೀವಿಗಳು ಆಹಾರ ಮತ್ತು ಆಶ್ರಯಕ್ಕಾಗಿ ನಾಡಿಗೆ ಪ್ರವೇಶಿಸುತ್ತಿವೆ. ಇದರಿಂದ ಮಾನವ–ಪ್ರಾಣಿಗಳ ನಡುವಿನ ಸಂಘರ್ಷ ಹೆಚ್ಚಾಗಿ, ಎರಡೂ ಕಡೆ ಜೀವ ಹಾನಿ ಸಂಭವಿಸುತ್ತಿದೆ.

ನಾಡಗೀತೆಯು ಕರ್ನಾಟಕದ ಜೀವನಾಡಿಗಳಾದ ಪ್ರಮುಖ ನದಿಗಳನ್ನು ಹೆಸರಿಸುತ್ತದೆ. ಈ ನದಿಗಳು ನಾಡಿನ ಕೃಷಿ, ಸಂಸ್ಕೃತಿ ಮತ್ತು ಇತಿಹಾಸಕ್ಕೆ ಆಧಾರವಾಗಿವೆ. ಈ ನದಿಗಳು ನಿರಂತರವಾಗಿ ಹರಿಯುವ, ಶುದ್ಧವಾದ ಮತ್ತು ಸಮೃದ್ಧಿಯ ಸಂಕೇತಗಳಾಗಿವೆ. ಅವು ನಾಡಿಗೆ ಜಲದಾನ ಮಾಡಿ, ಫಲವತ್ತಾದ ನೆಲವನ್ನು ಸೃಷ್ಟಿಸಿವೆ. ಹಾಗೂ ಈ ನದಿಗಳು ನಾಡಿಗೆ ಜಲದಾನ ಮಾಡುವ ಮೂಲಕ ಸಂಪದ್ಭರಿತ ಕೃಷಿ ಮತ್ತು ವಿದ್ಯುತ್ ಉತ್ಪಾದನೆಗೆ ಆಧಾರವಾಗಿವೆ. ಗೀತೆಯಲ್ಲಿ ಒಗ್ಗೂಡಿಸಿ ಕೊಂಡಾಡಿದ ಈ ನದಿಗಳು ಇಂದು ಜಲ ವಿವಾದಗಳ ಕೇಂದ್ರಬಿಂದುವಾಗಿವೆ, ಇದು ಸಹೋದರ ರಾಜ್ಯಗಳ ನಡುವೆ ಸಾಮರಸ್ಯಕ್ಕೆ ಧಕ್ಕೆಯನ್ನುಂಟು ಮಾಡುತ್ತಿದೆ. ಹವಾಮಾನ ಬದಲಾವಣೆಯಿಂದಾಗಿ ಒಂದೆಡೆ ಅತಿಯಾದ ಮಳೆಯಿಂದ ವಿನಾಶಕಾರಿ ಪ್ರವಾಹಗಳು ಸಂಭವಿಸುತ್ತಿದ್ದರೆ, ಮತ್ತೊಂದೆಡೆ ಅತಿಯಾದ ಬರದ ಪರಿಸ್ಥಿತಿ ತಲೆದೋರುತ್ತಿದೆ. ನದಿ ಪಾತ್ರಗಳ ಅತಿಕ್ರಮಣ ಮತ್ತು ನೈಸರ್ಗಿಕ ಜಲಮೂಲಗಳ ನಾಶವು ಈ ವೈಪರೀತ್ಯಗಳನ್ನು ಹೆಚ್ಚಿಸಿದೆ. ಕುವೆಂಪು ಅವರು ನಾಡಗೀತೆಯಲ್ಲಿ ಬಣ್ಣಿಸಿದ ಸೌಂದರ್ಯವು ಕೇವಲ ನೈಸರ್ಗಿಕ ಸಂಪತ್ತಿನ ಬಗ್ಗೆ ಮಾತ್ರವಲ್ಲ, ಅದು ಪ್ರಕೃತಿ ಮತ್ತು ಮಾನವನ ನಡುವಿನ ಒಂದು ಸಮತೋಲಿತ ಸಂಬಂಧವನ್ನು ಪ್ರತಿಪಾದಿಸುತ್ತದೆ. ಈ ಸಮತೋಲನವನ್ನು ಉಳಿಸಿಕೊಳ್ಳುವುದೇ ಇಂದಿನ ಬಹುದೊಡ್ಡ ತಲ್ಲಣವಾಗಿದೆ. ನಾಡಗೀತೆಯಲ್ಲಿ ಕುವೆಂಪು ಅವರು ಕರ್ನಾಟಕವನ್ನು ಬಸವೇಶ್ವರ, ಮಧ್ವಾಚಾರ್ಯ, ರಾಮಾನುಜಾ ಚಾರ್ಯರಂತಹ ದಾರ್ಶನಿಕರು ಹಾಗೂ ರನ್ನ, ಪಂಪ, ಕುಮಾರವ್ಯಾಸರಂತಹ ಶ್ರೇಷ್ಠ ಕವಿಗಳ ನಾಡು ಎಂದು ಕೊಂಡಾಡಿದ್ದಾರೆ. ಈ

ಸಾಲುಗಳ ಆಶಯಗಳನ್ನು ಇಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ತಲ್ಲಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ನಾಡಗೀತೆಯ ಈ ಭಾಗವು ಕರ್ನಾಟಕವನ್ನು ಅಧ್ಯಾತ್ಮಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಸಮನ್ವಯದ ನೆಲೆಯಾಗಿ ಚಿತ್ರಿಸುತ್ತದೆ. ಈ ಶ್ರೇಷ್ಠ ಪರಂಪರೆಗಳ ಕುರಿತ ಗೀತೆಯ ಆಶಯ ಮತ್ತು ಇಂದಿನ ವಾಸ್ತವ ಪರಿಸ್ಥಿತಿಗಳ ನಡುವಿನ ವ್ಯತ್ಯಾಸಗಳು ಮುಖ್ಯವಾದ ತಲ್ಲಣಗಳನ್ನು ಸೃಷ್ಟಿಸಿವೆ. ನಾಡಗೀತೆಯಲ್ಲಿ ಬಸವೇಶ್ವರ, ಮಧ್ವಾಚಾರ್ಯ, ರಾಮಾನುಜಾಚಾರ್ಯ ಮತ್ತು ನಾನಕ, ರಾಮಾನಂದ, ಕಬೀರರಂತಹ ಮಹಾನ್ ಸಂತರನ್ನು ಒಟ್ಟಿಗೆ ಸ್ಮರಿಸಲಾಗಿದೆ. ಕರ್ನಾಟಕವು ವಿವಿಧ ಧಾರ್ಮಿಕ ಮತ್ತು ದಾರ್ಶನಿಕ ಪರಂಪರೆಗಳಿಗೆ ಆಶ್ರಯ ನೀಡಿದ, ಅವುಗಳನ್ನು ಗೌರವಿಸಿದ ಸಾಮರಸ್ಯದ ನೆಲೆವೀಡು. ಇದು ವೈಚಾರಿಕ ಭಿನ್ನತೆಗಳನ್ನು ಮೀರಿ ಮಾನವೀಯತೆಯನ್ನು ಪ್ರತಿಪಾದಿಸುವ ತತ್ವಗಳ ತವರೂರು ಎಂಬುದು ಈ ಗೀತೆಯ ಆಶಯವಾಗಿದೆ. ಆದರೆ ಪ್ರಸ್ತುತ ಸಮಾಜದಲ್ಲಿ ಧರ್ಮದ ಆಧಾರದ ಮೇಲೆ ತೀವ್ರ ಧ್ರುವೀಕರಣ ಹೆಚ್ಚುತ್ತಿದೆ. ದಾರ್ಶನಿಕರು ಸಾರಿದ ಸಮಾನತೆ ಮತ್ತು ಸಹಿಷ್ಣುತೆಯ ಸಂದೇಶಗಳನ್ನು ನಿರ್ಲಕ್ಷಿಸಿ, ಸಾಮಾಜಿಕ ಸಾಮರಸ್ಯಕ್ಕೆ ಭಂಗ ತರುವ ಘಟನೆಗಳು ನಡೆಯುತ್ತಿವೆ. ನಾನಕ ಮತ್ತು ಕಬೀರರಂತಹ ಸಂತರು ಪ್ರತಿಪಾದಿಸಿದ ಸರ್ವಧರ್ಮ ಸಮನ್ವಯದ ತತ್ವಗಳು ದುರ್ಬಲಗೊಳ್ಳುತ್ತಿದ್ದು, ರಾಜಕೀಯ ಮತ್ತು ಸಾಮಾಜಿಕ ಹಿತಾಸಕ್ತಿಗಳಿಗಾಗಿ ಮೂಲಭೂತವಾದದ ಪ್ರಭಾವ ಹೆಚ್ಚುತ್ತಿದೆ.

ಕುವೆಂಪು ಅವರು ಕರ್ನಾಟಕವನ್ನು ರನ್ನ, ಷಡಕ್ಷರಿ, ಪೊನ್ನ, ಪಂಪ, ಜನ್ನ, ಕುಮಾರವ್ಯಾಸರಂತಹ ಶ್ರೇಷ್ಠ ಕವಿಗಳ ಮತ್ತು 'ಕವಿ ಕೋಗಿಲೆಗಳ' ಪುಣ್ಯಾರಾಮ ಎಂದು ಕರೆದಿದ್ದಾರೆ. ಕನ್ನಡ ಸಾಹಿತ್ಯವು ಅನಾದಿ ಕಾಲದಿಂದಲೂ ಸಮೃದ್ಧವಾಗಿದೆ ಮತ್ತು ಸೃಜನಶೀಲತೆಗೆ ಪುಷ್ಟಿ ನೀಡಿದೆ. ಈ ನಾಡು ಕಲೆ ಮತ್ತು ಸಾಹಿತ್ಯಕ್ಕೆ ಗೌರವ ನೀಡುವ ನೆಲೆಯಾಗಿದೆ ಎಂಬುವುದು ಗೀತೆಯ ಆಶಯ. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಶಿಕ್ಷಣ ಮತ್ತು ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿದೆ. ಶ್ರೇಷ್ಠ ಕವಿಗಳ ಕೃತಿಗಳನ್ನು ಓದುವ ಮತ್ತು ಅವುಗಳ ಮೌಲ್ಯಗಳನ್ನು ಅರಿಯುವ ಆಸಕ್ತಿ ಯುವ ಪೀಳಿಗೆಯಲ್ಲಿ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಕುಸಿಯುತ್ತಿದ್ದು ಕನ್ನಡ ಭಾಷೆಯ ನಿರ್ಲಕ್ಷ್ಯವಾಗುತ್ತಿದೆ. ಹಿಂದೆ ಕವಿಗಳ ಕೇಂದ್ರವಾಗಿದ್ದ ಸಾಹಿತ್ಯ ವೇದಿಕೆಗಳು ಇಂದು ಸೃಜನಾತ್ಮಕ ಚರ್ಚೆಗಳಿಗಿಂತ ಹೆಚ್ಚಾಗಿ ವಿವಾದಗಳು ಮತ್ತು ರಾಜಕೀಯ ಹಸ್ತಕ್ಷೇಪದ ಕೇಂದ್ರಗಳಾಗಿ ಪರಿವರ್ತನೆಯಾಗುತ್ತಿವೆ. ಸಾಹಿತ್ಯ ಸಮ್ಮೇಳನಗಳ ವಿವಾದಗಳು ಕವಿ ಕೋಗಿಲೆಗಳ 'ಜಯ ಹೇ ಕರ್ನಾಟಕ ಮಾತೆ'ಯಲ್ಲಿನ ಆಡಳಿತಾತ್ಮಕ ತಲ್ಲಣವಾಗಿದೆ. ಈ ಸಾಲುಗಳೊಂದಿಗೆ ನಾಡಗೀತೆಯು ತನ್ನ ಜಯಘೋಷವನ್ನು ಮಾಡುತ್ತದೆ. ಆದರೆ, ಈ 'ಜಯ'ಕ್ಕೆ ಅಡ್ಡಿಪಡಿಸುವ ಆಡಳಿತಾತ್ಮಕ ಸವಾಲುಗಳಿವೆ. ಭ್ರಷ್ಟಾಚಾರದ ಕರಿನೆರಳಿನಿಂದಾಗಿ ದಾರ್ಶನಿಕರು ಸಾರಿದ ಪಾರದರ್ಶಕತೆ ಮತ್ತು ನೀತಿನಿಯಮಗಳ ಆಡಳಿತಕ್ಕೆ ವಿರುದ್ಧವಾಗಿ, ಆಡಳಿತದ ವಿವಿಧ ಹಂತಗಳಲ್ಲಿ ಭ್ರಷ್ಟಾಚಾರದ ಪ್ರಮಾಣ ಹೆಚ್ಚಾಗಿದ್ದು, ಇದು ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಹಾದಿಗೆ ಅಡ್ಡಿಯಾಗಿದೆ. ಕವಿಗಳ ಮಂಗಳಧಾಮದ ಸೌಂದರ್ಯಕ್ಕೆ ಕುಂದು ತರುತ್ತಿದೆ. ಉತ್ತರ ಕರ್ನಾಟಕ, ಮಲೆನಾಡು, ಕರಾವಳಿ ಮತ್ತು ಹಳೆ ಮೈಸೂರು ಭಾಗಗಳ ನಡುವೆ ಅಭಿವೃದ್ಧಿ, ಉದ್ಯೋಗ ಮತ್ತು ಸಂಪನ್ಮೂಲ ಹಂಚಿಕೆಯಲ್ಲಿ ಅಸಮಾನತೆಗಳು ಮುಂದುವರಿದಿವೆ. ಪ್ರಾದೇಶಿಕ ಅಸಮಾನತೆಯು 'ಒಂದು ಕರ್ನಾಟಕ'ದ ಪರಿಕಲ್ಪನೆಗೆ ಧಕ್ಕೆಯನ್ನುಂಟು ಮಾಡುತ್ತಿದೆ. ಒಟ್ಟಾರೆಯಾಗಿ, ನಾಡಗೀತೆ ಹೇಳುವ ಸಾಮಾಜಿಕ ಸಮನ್ವಯ ಮತ್ತು ಸಾಹಿತ್ಯಿಕ ಶ್ರೀಮಂತಿಕೆಯನ್ನು ಉಳಿಸಿಕೊಳ್ಳುವುದು ಇಂದಿನ ದೊಡ್ಡ ಸವಾಲಾಗಿದೆ. ಈ ಪರಂಪರೆಗಳ ಕುರಿತು ಕೇವಲ ಹೆಮ್ಮೆ ಪಡುವುದರ ಬದಲು, ಅವುಗಳ ತತ್ವಗಳನ್ನು ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರವಾಗಿ ಬಳಸಿಕೊಳ್ಳುವ ಅಗತ್ಯವಿದೆ.

ನಾಡಗೀತೆಯ ಈ ಸಾಲುಗಳು ಕನ್ನಡ ನಾಡಿನ ಬಹುತ್ವ ಮತ್ತು ಸಹಬಾಳ್ವೆಯ ತತ್ವಗಳನ್ನು ಅನಾವರಣಗೊಳಿಸುತ್ತವೆ. 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಕುವೆಂಪು ಅವರ ಕಲ್ಪನೆಯು ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಕಲಾತ್ಮಕ ಶ್ರೀಮಂತಿಕೆಯನ್ನು ಬಿಂಬಿಸುತ್ತದೆ. ಆದರೆ, ಈ ಆಶಯಗಳು ಇಂದಿನ ವಾಸ್ತವದಲ್ಲಿ ಎದುರಿಸುತ್ತಿರುವ ತೀವ್ರ ತಲ್ಲಣಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. 'ಸರ್ವ ಜನಾಂಗದ ಶಾಂತಿಯ ತೋಟ' ಮತ್ತು

'ಹಿಂದೂ ಕ್ರೈಸ್ತ ಮುಸಲ್ಮಾನ, ಪಾರಸಿಕ ಜೈನರುದ್ಯಾನ' ಎಂಬ ಸಾಲುಗಳು ಕುವೆಂಪು ಕಂಡ ಸೋದರತೆಯ ಕನಸು. ಗೀತೆಯ ಆಶಯ: ಕರ್ನಾಟಕವು ವಿವಿಧ ಧರ್ಮಗಳು ಮತ್ತು ಸಮುದಾಯಗಳು ಸಾಮರಸ್ಯದಿಂದ ಸಹಬಾಳ್ವೆ ನಡೆಸುವ ಒಂದು ಸುಂದರ ತೋಟ. ಇಲ್ಲಿ ಪ್ರತಿಯೊಬ್ಬರಿಗೂ ಸಮಾನ ಸ್ಥಾನಮಾನ ಮತ್ತು ಗೌರವ ಇದೆ. ಇತ್ತೀಚಿನ ವರ್ಷಗಳಲ್ಲಿ, ಸಾಮಾಜಿಕ ಬಿರುಕು ಉಂಟಾಗುತ್ತಿದ್ದು ರಾಜಕೀಯ ಮತ್ತು ಸಾಮಾಜಿಕ ಹಿತಾಸಕ್ತಿಗಳಿಂದಾಗಿ ಸಮುದಾಯಗಳ ನಡುವೆ ಅನುಮಾನ ಮತ್ತು ಅಪನಂಬಿಕೆಯ ಗೋಡೆಗಳು ಏಳುತ್ತಿವೆ. ಧಾರ್ಮಿಕ ಅಲ್ಪಸಂಖ್ಯಾತರ ಸುರಕ್ಷತೆ ಮತ್ತು ಹಕ್ಕುಗಳ ಕುರಿತು ಗಂಭೀರ ಚರ್ಚೆಗಳು ಎದುರಾಗಿವೆ. ಹಿಂದೆ 'ಶಾಂತಿಯ ತೋಟ'ವೆಂದು ಗುರುತಿಸಲಾಗಿದ್ದ ಪ್ರದೇಶಗಳಲ್ಲಿ ಸಣ್ಣಪುಟ್ಟ ಕಾರಣಗಳಿಗೂ ಕೋಮುವಾದಿ ಘರ್ಷಣೆಗಳು ಸಂಭವಿಸುತ್ತಿವೆ. ಇದು ಗೀತೆಯ ಮೂಲ ಆಶಯವಾದ 'ಸಹಬಾಳ್ವೆ'ಗೆ ದೊಡ್ಡ ಧಕ್ಕೆ ತರುತ್ತಿದೆ. ಸಾರ್ವಜನಿಕ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷ ಭಾಷಣ (Hate Speech) ಹೆಚ್ಚಾಗುತ್ತಿದ್ದು, ಇದು ಬಹುತ್ವ ಮತ್ತು ಶಾಂತಿಯ ವಾತಾವರಣವನ್ನು ವಿಷಮಯಗೊಳಿಸುತ್ತಿದೆ.

'ಗಾಯಕ ವೈಣಿಕರಾರಾಮ' ಎಂಬುದು ಕಲೆ ಮತ್ತು ಕಲಾವಿದರಿಗೆ ಕರ್ನಾಟಕ ನೀಡಿದ ಆಶ್ರಯದ ಸಂಕೇತ. ಇದರ ಜೊತೆಗೆ, 'ರಸಿಕರ ಕಂಗಳ ಸೆಳೆಯುವ ನೋಟ' ಎಂಬುದು ನಾಡಿನ ಸೌಂದರ್ಯ ಮತ್ತು ಕಲಾತ್ಮಕತೆಯನ್ನು ಸೂಚಿಸುತ್ತದೆ. ಗೀತೆಯ ಆಶಯವೆಂದರೆ ಕನ್ನಡ ನಾಡು ಸಂಗೀತ, ನೃತ್ಯ, ಸಾಹಿತ್ಯ ಮತ್ತು ಇತರ ಕಲೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವ ಮತ್ತು ಕಲಾವಿದರನ್ನು ಗೌರವಿಸುವ ತಾಣ. ಇಲ್ಲಿನ ಸಂಸ್ಕೃತಿ ರಸಿಕರನ್ನು ಆಕರ್ಷಿಸುವಷ್ಟು ಸುಂದರವಾಗಿದೆ. ಆದರೆ ಜಾಗತೀಕರಣ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ, ಶ್ರೇಷ್ಠ ಸಾಂಪ್ರದಾಯಿಕ ಕಲೆಗಳು ಮತ್ತು ಕಲಾವಿದರಿಗೆ ಸೂಕ್ತ ಪ್ರೋತ್ಸಾಹ ಮತ್ತು ಆರ್ಥಿಕ ಭದ್ರತೆ ಸಿಗುತ್ತಿಲ್ಲ. ಕಲೆಗಳು ಮನರಂಜನೆಯ ಸರಕಾಗಿ ಪರಿವರ್ತನೆಯಾಗಿ, ಅವುಗಳ ಮೂಲ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯ ಕುಸಿಯುತ್ತಿದೆ. 'ರಸಿಕರ ಕಂಗಳ ಸೆಳೆಯುವ ನೋಟ'ವನ್ನು ನೀಡುತ್ತಿದ್ದ ಪ್ರಕೃತಿಯ ಸೌಂದರ್ಯ ಇಂದು ಮಾಲಿನ್ಯ, ಅನೈರ್ಮಲ್ಯ ಮತ್ತು ಕಾಂಕ್ರೀಟ್

ಕಾಡುಗಳ ಬೆಳವಣಿಗೆಯಿಂದ ಮಸುಕಾಗಿದೆ. 'ಜನಕನ ಹೋಲುವ ದೊರೆಗಳ ಧಾಮ' ಎಂಬುದು ರಾಜಕೀಯ ನಾಯಕತ್ವ ಮತ್ತು ಆಡಳಿತದ ಸೌಹಾರ್ದತೆಯ ಕುರಿತಾದ ಕುವೆಂಪು ಅವರ ಆಶಯ. ಜನಕ ಮಹಾರಾಜನಂತೆ ಪ್ರಜೆಗಳ ಹಿತವನ್ನು ತಮ್ಮ ಹಿತವೆಂದು ಭಾವಿಸುವ ದೊರೆಗಳು (ಆಡಳಿತಗಾರರು) ಆಳುವ ನಾಡು ಇದು, ಇಲ್ಲಿ ಉತ್ತಮ ಆಡಳಿತಕ್ಕೆ ಪ್ರಾಮುಖ್ಯತೆ ಇದೆ ಎಂಬುದು ಗೀತೆಯ ಆಶಯ. ಇಂದು ಆಡಳಿತ ಮತ್ತು ರಾಜಕೀಯದಲ್ಲಿ ನೈತಿಕತೆ ಮತ್ತು ಪಾರದರ್ಶಕತೆ ಕುಗ್ಗಿದೆ. ರಾಜಕೀಯ ನಾಯಕತ್ವದಲ್ಲಿ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಆರೋಪಗಳು ಸಾಮಾನ್ಯವಾಗಿದೆ, ಇದು 'ಜನಕ'ನಂತಹ ನಾಯಕತ್ವದ ಕಲ್ಪನೆಗೆ ವಿರುದ್ಧವಾಗಿದೆ. ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳಾದ ವಿಮರ್ಶೆ, ಚರ್ಚೆ ಮತ್ತು ಅಭಿಪ್ರಾಯ ಸ್ವಾತಂತ್ರ್ಯಗಳು ಕೆಲವು ಸಂದರ್ಭಗಳಲ್ಲಿ ಸವಾಲುಗಳನ್ನು ಎದುರಿಸುತ್ತಿವೆ.

'ತೈಲಪ ಹೊಯ್ಸಳರಾಳಿದ ನಾಡೇ, ಡಂಕಣ ಜಕಣರ ನೆಚ್ಚಿನ ಬೀಡೆ' ಈ ಸಾಲುಗಳು ಕರ್ನಾಟಕದ ಶ್ರೇಷ್ಠ ರಾಜಮನೆತನಗಳ ಆಳ್ವಿಕೆ ಮತ್ತು ಶಿಲ್ಪಕಲೆಯ ಪರಂಪರೆಯನ್ನು ಸ್ಮರಿಸುತ್ತವೆ. ನಮ್ಮ ನಾಡು ತೈಲಪ (ಪಶ್ಚಿಮ ಚಾಲುಕ್ಯ) ಮತ್ತು ಹೊಯ್ಸಳರಂತಹ ಪ್ರಬಲ ಸಾಮ್ರಾಜ್ಯಗಳ ಆಳ್ವಿಕೆಯಿಂದ ಶಕ್ತಿ ಮತ್ತು ಸ್ಥಿರತೆಯನ್ನು ಕಂಡಿದೆ. ಡಂಕಣಾಚಾರಿ ಮತ್ತು ಜಕಣಾಚಾರಿಗಳಂತಹ ಶ್ರೇಷ್ಠ ಶಿಲ್ಪಿಗಳು ಈ ನಾಡಿಗೆ ವಿಶ್ವಪ್ರಸಿದ್ಧ ಕಲಾತ್ಮಕ ಕೊಡುಗೆ ನೀಡಿದ್ದಾರೆ. ನಾಡಗೀತೆಯ ಈ ಭಾಗವು ಹೊಯ್ಸಳರ ರಾಜಕೀಯ ವೈಭವ, ಶಿಲ್ಪಕಲೆ, ಜಲಸಂಪತ್ತು, ಮತ್ತು ಆಧ್ಯಾತ್ಮಿಕ ನಾಯಕತ್ವದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಆದರೆ ಕುವೆಂಪು ಅವರು ಕಂಡ ಆದರ್ಶ ಮತ್ತು ಇಂದಿನ ವಾಸ್ತವದ ನಡುವಿನ ವ್ಯತ್ಯಾಸಗಳು ಇಂದಿನ ತಲ್ಲಣಗಳಾಗಿವೆ. ಹೊಯ್ಸಳರಂತಹ ಶ್ರೇಷ್ಠ ಶಿಲ್ಪಕಲಾಕೃತಿಗಳು, ದೇವಾಲಯಗಳು ಮತ್ತು ಕೋಟೆಗಳು ಇಂದಿಗೂ ಅಸಮರ್ಪಕ ನಿರ್ವಹಣೆ ಮತ್ತು ಕಳ್ಳತನದ ಅಪಾಯ ಎದುರಿಸುತ್ತಿವೆ. ಈ ಐತಿಹಾಸಿಕ ಸಂಪತ್ತನ್ನು ಪ್ರವಾಸಿ ತಾಣಗಳಾಗಿ ಪರಿಗಣಿಸುತ್ತಿದ್ದರೂ, ಅವುಗಳ ಮೂಲ ಸಂರಕ್ಷಣೆಯ ಕಡೆಗೆ ಸರ್ಕಾರ ಹಾಗೂ ನಾಗರಿಕರು ಗಮನ ಹರಿಸುತ್ತಿಲ್ಲ. ಡಂಕಣ–ಜಕಣರಂತಹ ಕಲಾ ನೈಪುಣ್ಯತೆ ಮತ್ತು ಕಲಾಪೋಷಣೆ ಇಂದಿನ ಸಮಾಜದಲ್ಲಿ ಕಡಿಮೆಯಾಗುತ್ತಿದೆ.

ಮೂಲಭೂತ ಸೌಕರ್ಯ ಯೋಜನೆಗಳಲ್ಲಿ ಮತ್ತು ಆಧುನಿಕ ನಿರ್ಮಾಣಗಳಲ್ಲಿ ಕಲಾತ್ಮಕತೆಗಿಂತ ಗುಣಮಟ್ಟ ಮತ್ತು ಭ್ರಷ್ಟಾಚಾರದ ಕುರಿತು ಚರ್ಚೆಗಳು ನಡೆಯುತ್ತಿವೆ.

'ಚೈತನ್ಯ ಪರಮಹಂಸ ವಿವೇಕರ, ಭಾರತ ಜನನಿಯ ತನುಜಾತೆ' ಈ ಸಾಲುಗಳು ಜಾಗತಿಕವಾಗಿ ಪ್ರಭಾವ ಬೀರಿದ ಆಧ್ಯಾತ್ಮಿಕ ಗುರುಗಳಾದ ಚೈತನ್ಯ, ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಪ್ರಭಾವವು ಕರ್ನಾಟಕದ ಮೇಲೆ ಆದ ಪರಿಣಾಮವನ್ನು ತೋರಿಸುತ್ತವೆ. ಕರ್ನಾಟಕವು ಈ ಮಹಾನ್ ನಾಯಕರು ಸಾರಿದ ಮಾನವೀಯತೆ, ಆಧ್ಯಾತ್ಮಿಕತೆ ಮತ್ತು ಸಮಾಜ ಸುಧಾರಣೆಯ ತತ್ವಗಳನ್ನು ಮೈಗೂಡಿಸಿಕೊಂಡಿದೆ. ವಿವೇಕಾನಂದರಂತಹವರು ನೀಡಿದ ಯುವ ಶಕ್ತಿಯ ಮತ್ತು ಜಾಗೃತ ಭಾರತದ ಕಲ್ಪನೆಯನ್ನು ಇದು ಪ್ರತಿಬಿಂಬಿಸುತ್ತದೆ. ವಿವೇಕಾನಂದರು ಪ್ರತಿಪಾದಿಸಿದ ವೈಚಾರಿಕತೆ, ಸಹೋದರತ್ವ ಮತ್ತು ವೈಜ್ಞಾನಿಕ ಮನೋಭಾವದ ಬದಲು, ಇಂದು ಸಮಾಜದಲ್ಲಿ ಅಂಧಶ್ರದ್ಧೆ, ಧಾರ್ಮಿಕ ಅಸಹಿಷ್ಣುತೆ ಮತ್ತು ಮೂಢನಂಬಿಕೆಗಳು ಹೆಚ್ಚಾಗುತ್ತಿವೆ. ರಾಮಕೃಷ್ಣ ಪರಮಹಂಸರು ಪ್ರತಿಪಾದಿಸಿದ ನಿಸ್ವಾರ್ಥ ಸೇವೆ ಮತ್ತು ಮೌಲ್ಯ ಆಧಾರಿತ ಬದುಕಿನ ಮಾದರಿಗಳು ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಕುಸಿಯುತ್ತಿದ್ದು, ವೈಯಕ್ತಿಕ ಲಾಭ ಮತ್ತು ಸ್ವಾರ್ಥದ ರಾಜಕಾರಣ ಹೆಚ್ಚುತ್ತಿದೆ.

ಒಟ್ಟಾರೆಯಾಗಿ, ಈ ಸಾಲುಗಳು ನಮಗೆ ಆಳವಾದ ಇತಿಹಾಸ, ಸಮೃದ್ಧ ಸಂಪತ್ತು ಮತ್ತು ಶ್ರೇಷ್ಠ ಮೌಲ್ಯಗಳನ್ನು ನೆನಪಿಸುತ್ತವಾದರೂ, ಅವುಗಳ ಸಂರಕ್ಷಣೆ ಮತ್ತು ಅನುಷ್ಠಾನದಲ್ಲಿ ನಾವು ವಿಫಲರಾಗುತ್ತಿದ್ದೇವೆ ಎಂಬುದು ವರ್ತಮಾನದ ಅತ್ಯಂತ ದೊಡ್ಡ ತಲ್ಲಣವಾಗಿದೆ.

ನಾಡಗೀತೆಯ ಅಂತಿಮ ಭಾಗವು ಕರ್ನಾಟಕಕ್ಕೆ 'ಭೂದೇವಿಯ ಮಕುಟದ ನವಮಣಿ' ಎಂಬ ಸರ್ವೋಚ್ಚ ಸ್ಥಾನವನ್ನು ನೀಡುತ್ತದೆ. ಇದು ನಾಡಿನ ಸೌಂದರ್ಯ, ಸಂಪತ್ತು ಮತ್ತು ಅಧ್ಯಾತ್ಮಿಕ ಮಹತ್ವವನ್ನು ಪುನರುಚ್ಚರಿಸುತ್ತದೆ. 'ಭೂದೇವಿಯ ಮಕುಟದ ನವಮಣಿಯೆ, ಗಂಧದ ಚಂದದ ಹೊನ್ನಿನ ಗಣಿಯೆ' ಮತ್ತು 'ಹಸುರಿನ ಗಿರಿಗಳ ಸಾಲೇ, ನಿನ್ನಯ ಕೊರಳಿನ ಮಾಲೆ' ಎಂಬ ಸಾಲುಗಳು ನಾಡಿನ ಅಪ್ರತಿಮ ಭೌಗೋಳಿಕ ವೈಶಿಷ್ಟ್ಯವನ್ನು ಹೇಳುತ್ತವೆ. ಕರ್ನಾಟಕವು

ಕೇವಲ ಒಂದು ಪ್ರದೇಶವಲ್ಲ, ಅದು ಇಡೀ ಭಾರತ ದೇಶಕ್ಕೆ ಕಿರೀಟದಂತಿದೆ. ಈ ನಾಡು ಗಂಧದ ಮರಗಳು, ಚಿನ್ನ (ಹೊನ್ನು–ಕೋಲಾರ) ಮತ್ತು ಖನಿಜ ಸಂಪತ್ತುಗಳ ಗಣಿ. ಪಶ್ಚಿಮ ಘಟ್ಟದಂತಹ ಹಸುರಿನ ಗಿರಿ ಶ್ರೇಣಿಗಳು ನಾಡಿಗೆ ಅಲಂಕಾರವಾಗಿವೆ. ಹಿಂದೆ ಗಂಧದ ಚಂದಕ್ಕೆ ಹೆಸರುವಾಸಿಯಾಗಿದ್ದ ಕರ್ನಾಟಕದಲ್ಲಿ ಇಂದು ಸಕ್ರಮ ಗಂಧದ ಮರಗಳು ಅಳಿವಿನಂಚಿನಲ್ಲಿವೆ. ಅರಣ್ಯಗಳ ಕಳ್ಳಸಾಗಣೆ ಮತ್ತು ಕಳ್ಳತನದಿಂದಾಗಿ 'ಗಂಧದ ಗಣಿ' ಎಂಬ ಹೆಸರು ಕಣ್ಮರೆಯಾಗುತ್ತಿದೆ. 'ಹಸುರಿನ ಗಿರಿಗಳ ಸಾಲು' ಇಂದು ಗಣಿಗಾರಿಕೆ ಮತ್ತು ಮೂಲಸೌಕರ್ಯ ಯೋಜನೆಗಳಿಂದ ನಾಶವಾಗುತ್ತಿವೆ. ಚಿನ್ನದ ಗಣಿಯ ಪ್ರದೇಶಗಳು ಈಗಲೂ ಪರಿಸರ ಮತ್ತು ಭೂ ಮಾಲಿನ್ಯದ ಸಮಸ್ಯೆಯಿಂದ ಬಳಲುತ್ತಿವೆ. 'ಕೊರಳಿನ ಮಾಲೆ'ಯಂತಿರುವ ಸುಂದರ ಪರ್ವತ ಶ್ರೇಣಿಗಳು ಮತ್ತು ಪ್ರವಾಸಿ ತಾಣಗಳು ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಅನೈರ್ಮಲ್ಯದಿಂದ ಕಲುಷಿತಗೊಳ್ಳುತ್ತಿವೆ.

'ಕಪಿಲ ಪತಂಜಲ ಗೌತಮ ಜಿನನುತ' ಎಂಬುದು ಭಾರತೀಯ ಜ್ಞಾನ ಮತ್ತು ಧಾರ್ಮಿಕ ಪರಂಪರೆಗೆ ಕರ್ನಾಟಕದ ಕೊಡುಗೆಯನ್ನು ತೋರಿಸುತ್ತದೆ. ಗೀತೆಯ ಆಶಯ: ಈ ನಾಡು ಕಪಿಲ (ಸಾಂಖ್ಯ ದರ್ಶನ), ಪತಂಜಲಿ (ಯೋಗ ದರ್ಶನ), ಗೌತಮ (ಅಹಿಂಸೆ ದರ್ಶನ) ಮತ್ತು ಜೈನ (ಜಿನನುತ–ಶ್ರವಣಬೆಳಗೊಳ) ದಂತಹ ಶ್ರೇಷ್ಠ ಜ್ಞಾನಪರಂಪರೆಗಳಿಗೆ ಗೌರವ ನೀಡುವ ನೆಲೆಯಾಗಿದೆ. ಪತಂಜಲಿಯ ಯೋಗದಂತಹ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ತತ್ವಗಳು ಜಾಗತಿಕವಾಗಿ ಮನ್ನಣೆ ಪಡೆದಿದ್ದರೂ, ಇಂದಿನ ಸಮಾಜದಲ್ಲಿ ವೈಚಾರಿಕತೆ ಮತ್ತು ಜ್ಞಾನದ ಅನ್ವೇಷಣೆಯ ಬದಲು ಕಂದಾಚಾರಗಳು, ಅಂಧಶ್ರದ್ಧೆ ಮತ್ತು ವಾಣಿಜ್ಯೀಕರಣದ ಧರ್ಮವು ಹೆಚ್ಚುತ್ತಿದೆ. ಜೈನ ಧರ್ಮ ಮತ್ತು ಗೌತಮ ಬುದ್ಧರ ಅಹಿಂಸೆ ಮತ್ತು ಶಾಂತಿಯ ತತ್ವಗಳನ್ನು ಒಪ್ಪಿದ ನಾಡಿನಲ್ಲಿ, ಸಣ್ಣಪುಟ್ಟ ಕಾರಣಗಳಿಗೂ ಸಾಮಾಜಿಕ ಅಶಾಂತಿ ಮತ್ತು ಹಿಂಸಾಚಾರ ಹೆಚ್ಚುತ್ತಿರುವುದು ಗೀತೆಯ ಆಶಯಕ್ಕೆ ವಿರುದ್ಧವಾಗಿದೆ.

'ರಾಘವ ಮಧುಸೂದನರವತರಿಸಿದ ಭಾರತ ಜನನಿಯ ತನುಜಾತೆ' ಮತ್ತು 'ಜನನಿಯ ಜೋಗುಳ ವೇದದ ಘೋಷ' ಎಂಬುದು ಕರ್ನಾಟಕದ ರಾಷ್ಟ್ರೀಯ ಮತ್ತು ವೈಚಾರಿಕ ಸ್ಥಾನವನ್ನು ದೃಢೀಕರಿಸುತ್ತದೆ. ಕರ್ನಾಟಕವು

ರಾಮ ಮತ್ತು ಕೃಷ್ಣನಂತಹ (ರಾಘವ, ಮಧುಸೂದನ) ದೈವೀ ಸ್ವರೂಪಗಳನ್ನು ಹೊಂದಿದ ಭಾರತ ಮಾತೆಯ ಪ್ರೀತಿಯ ಮಗು. ಇಲ್ಲಿನ ಸಂಸ್ಕೃತಿ ವೇದಗಳಂತಹ ಸನಾತನ ಜ್ಞಾನದಿಂದ ಪ್ರೇರಿತವಾಗಿದೆ. ಒಂದು ಕಡೆ 'ಭಾರತ ಜನನಿಯ ತನುಜಾತೆ' ಎಂದು ಹೇಳಿದರೂ, ಮತ್ತೊಂದೆಡೆ ಕನ್ನಡ ಭಾಷೆ, ಗಡಿ ವಿವಾದಗಳು ಮತ್ತು ಪ್ರಾದೇಶಿಕ ಅಸ್ಮಿತೆಯ ಪ್ರಶ್ನೆಗಳು ರಾಷ್ಟ್ರೀಯತೆಯೊಂದಿಗೆ ಸಂಘರ್ಷಕ್ಕೆ ಕಾರಣವಾಗುತ್ತಿವೆ. ವೇದಗಳಂತಹ ಜ್ಞಾನ ಮೂಲಗಳ ಜೊತೆಗೆ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳು ಮತ್ತು ಆಶಯಗಳ ರಕ್ಷಣೆ ಇಂದು ಸವಾಲಿಗೆ ಒಳಪಟ್ಟಿದೆ.

ಸಮಾರೋಪ

ರಾಷ್ಟ್ರಕವಿ ಕುವೆಂಪು ಅವರ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ'ಯು ಕನ್ನಡ ನಾಡಿನ ಐತಿಹಾಸಿಕ, ಪ್ರಾಕೃತಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಗರಿಮೆಯನ್ನು ಸಾರುವ ಒಂದು ಆದರ್ಶ ಕನ್ನಡಿಯಾಗಿದೆ. ಈ ಗೀತೆಯ ಪ್ರತಿಯೊಂದು ಸಾಲು ಕರ್ನಾಟಕವನ್ನು ಭೂದೇವಿಯ ಮಕುಟದ ನವಮಣಿಯೆಂದು, ಜ್ಞಾನ, ಕಲೆ, ಮತ್ತು ಸರ್ವ ಜನಾಂಗದ ಶಾಂತಿಯ ತೋಟ'ವೆಂದು ಕೊಂಡಾಡುತ್ತದೆ. ಆದರೆ, ಈ ಲೇಖನದಲ್ಲಿ ವಿಶ್ಲೇಷಿಸಿದಂತೆ, ನಾಡಗೀತೆಯಲ್ಲಿನ ಆದರ್ಶಕ್ಕೂ ಇಂದಿನ ವಾಸ್ತವಕ್ಕೂ ನಡುವೆ ಒಂದು ದೊಡ್ಡ ಕಂದಕ ಸೃಷ್ಟಿಯಾಗಿದೆ. ನಾಡಗೀತೆಯು ಸೌಹಾರ್ದತೆ, ಸಮಾನತೆ ಮತ್ತು ಕಲಾಪೋಷಣೆಯ ಒಂದು ಆದರ್ಶ ಸಮಾಜದ ಚಿತ್ರಣ ನೀಡುತ್ತದೆ. ಆದರೆ, ಇಂದಿನ ವಾಸ್ತವದಲ್ಲಿ ಎದುರಾಗಿರುವ ಕೋಮು ಸಂಘರ್ಷಗಳು, ಕಲಾ ನಿರ್ಲಕ್ಷ್ಯ ಮತ್ತು ನೈತಿಕತೆಯ ಕುಸಿತವು, ಈ ಗೀತೆಯನ್ನು ಕೇವಲ ಹಾಡಾಗಿ ಉಳಿಸದೆ, ಸಮಾಜದ ಆತ್ಮಾವಲೋಕನಕ್ಕಾಗಿರುವ ದೀವಿಗೆಯನ್ನಾಗಿ ಸ್ವೀಕರಿಸಬೇಕಾದ ತುರ್ತು ಅಗತ್ಯವನ್ನು ಸಾರುತ್ತವೆ.

ಇಂದು ನಾಡಗೀತೆಯನ್ನು ಹಾಡುವಾಗ, ಅದರ ಪ್ರತಿಯೊಂದು ಸಾಲನ್ನೂ ನಾವು ನಮ್ಮ ಪರಿಸರದ ವಾಸ್ತವದೊಂದಿಗೆ ತುಲನೆ ಮಾಡಬೇಕಿದೆ. ಪ್ರಕೃತಿಯ ವರ್ಣನೆಯು ಕೇವಲ ಕಾವ್ಯವಾಗಿ ಉಳಿಯದೆ, ಪರಿಸರ ಸಂರಕ್ಷಣೆಯ

ಕರೆಯಾಗಬೇಕು. ನಾಡಗೀತೆ ಕೊಂಡಾಡಿದ ಪ್ರಕೃತಿ ಸಂಪತ್ತನ್ನು ಉಳಿಸಿಕೊಳ್ಳುವ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾಡಗೀತೆ ಕೇವಲ ನಮ್ಮ ಹೆಮ್ಮೆಯನ್ನು ಹೆಚ್ಚಿಸುವುದಲ್ಲ, ಅದು ನಮ್ಮ ಪರಿಸರಕ್ಕೆ ಎದುರಾಗಿರುವ ಸವಾಲುಗಳನ್ನು ಅರಿತು, ಅದನ್ನು ಸುಧಾರಿಸಲು ಪ್ರತಿಯೊಬ್ಬ ಕನ್ನಡಿಗನನ್ನೂ ಪ್ರೇರೇಪಿಸುವ ಶಕ್ತಿಯಾಗಬೇಕು. ಆಗ ಮಾತ್ರ ನಾಡಿನ ವೈಭವದ ಕಲ್ಪನೆಯು ಶಾಶ್ವತವಾಗಿ ಉಳಿಯಲು ಸಾಧ್ಯ.

ನಾಡಗೀತೆಯು ಕರ್ನಾಟಕದ ಐತಿಹಾಸಿಕ ಮತ್ತು ನೈಸರ್ಗಿಕ ವೈಭವದ ಕೊನೆಯ ಘೋಷಣೆಯಾಗಿದೆ. 'ಜಯ ಹೇ ಕರ್ನಾಟಕ ಮಾತೆ' ಎಂಬ ಘೋಷಣೆಯು ಕೇವಲ ಹೆಮ್ಮೆಯ ಮಾತಾಗಿ ಉಳಿಯದೆ, ಗೀತೆಯಲ್ಲಿ ವರ್ಣಿಸಿದಂತೆ ಪ್ರಕೃತಿ, ಸಂಪತ್ತು ಮತ್ತು ಸಮನ್ವಯದ ಆದರ್ಶಗಳನ್ನು ಇಂದಿನ ತಲ್ಲಣಗಳ ನಡುವೆಯೂ ಉಳಿಸಿಕೊಳ್ಳಲು ನಮ್ಮೆಲ್ಲರಿಗೂ ಕಾರ್ಯ ಪ್ರವೃತ್ತರಾಗುವ ಕರೆಯಾಗಿದೆ. ಈ ಗೀತೆಯು ಇಂದಿನ ತಲ್ಲಣಗಳಿಗೆ ಉತ್ತರವಾಗಿ, ನಾಡನ್ನು ಮತ್ತು ಅದರ ಪ್ರಕೃತಿಯನ್ನು 'ಸರ್ವ ಜನಾಂಗದ ಶಾಂತಿಯ ತೋಟ'ವನ್ನಾಗಿ ಉಳಿಸಿಕೊಳ್ಳಲು ನಮ್ಮನ್ನು ಪ್ರೇರೇಪಿಸುತ್ತದೆ. ಪರಿಸರದ ಸಂರಕ್ಷಣೆಯು ಕೇವಲ ಸರ್ಕಾರದ ಕೆಲಸವಲ್ಲ, ಅದು ಪ್ರತಿ ಕನ್ನಡಿಗನ ನಾಡಧರ್ಮ ಎಂಬ ಸಂದೇಶವನ್ನು ಈ ಗೀತೆ ಸದಾ ಸಾರುತ್ತದೆ.

ಹಾಗೆಯೇ ನಾಡಗೀತೆ ಕೇವಲ ಹಾಡಾಗಿ ಉಳಿಯಬಾರದು. ಅದು ನಮ್ಮ ಆತ್ಮಾವಲೋಕನದ ಪ್ರಣಾಳಿಕೆಯಾಗಬೇಕು. ಈ ಗೀತೆಯು ನಮಗೆ ನಮ್ಮ ಮೂಲ ಮೌಲ್ಯಗಳನ್ನು, ಪ್ರಕೃತಿಯ ಮೇಲಿನ ನಮ್ಮ ಜವಾಬ್ದಾರಿಯನ್ನು ಮತ್ತು ಪರಸ್ಪರ ಸಹಬಾಳ್ವೆಯ ಅಗತ್ಯವನ್ನು ನೆನಪಿಸುತ್ತದೆ. 'ಜಯ ಹೇ ಕರ್ನಾಟಕ ಮಾತೆ!' ಎಂಬ ಘೋಷಣೆಯು ಯಶಸ್ಸಿನ ಘೋಷಣೆಯಾಗಬೇಕಾದರೆ, ಕುವೆಂಪು ಅವರು ಕಂಡ ಆದರ್ಶಗಳನ್ನು ಇಂದಿನ ಬಿಕ್ಕಟ್ಟುಗಳ ನಡುವೆಯೂ ಪ್ರತಿಷ್ಠಾಪಿಸುವ ತುರ್ತು ಕರ್ತವ್ಯ ನಮ್ಮೆಲ್ಲರ ಮೇಲಿದೆ.

ಕೊನೆ ಟಿಪ್ಪಣಿ:

1. ನೆನಪಿನ ದೋಣಿಯಲ್ಲಿ (ಆತ್ಮಕಥೆ), 2017, ಕುವೆಂಪು ಸಮಗ್ರ ಗದ್ಯ ಸಂಪುಟ–5, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ), ಕುಪ್ಪಳ್ಳಿ, ದೇವಂಗಿ ಅಂಚೆ, ತೀರ್ಥಹಳ್ಳಿ ತಾ, ಶಿವಮೊಗ್ಗ ಜಿಲ್ಲೆ, ಪು.ಸಂ.545.
2. ಕರ್ನಾಟಕ 'ನಾಡಗೀತೆ' : ಒಂದು ವಿಶ್ಲೇಷಣೆ, 2010, ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು–560007, ಪು.ಸಂ.7.

ಲೇಖಕರು : ಡಾ. ಸಂಧ್ಯಾ ಹೆಚ್.ಎಸ್
ನಂ.655, ಸರ್ಕಾರಿ ಆಸ್ಪತ್ರೆ ಹಿಂಭಾಗ
ವಾರ್ಡ್ ನಂ.17, ಹಳ್ಳಿಕೆರೆ, ಕಮಲಾಪುರ,
ಹೊಸಪೇಟೆ, ವಿಜಯನಗರ ಜಿಲ್ಲೆ–583276
sandyhs31@gmail.com

***

ನಾಡಗೀತೆಯೊಡಗೂಡಿದ ಶ್ರೀಸಾಮಾನ್ಯರ ಬದುಕು ಮತ್ತು ಮೆಲುಕು

ನಾಡಗೀತೆ ಎಂದರೆ ಕೇವಲ ಅದೊಂದು ಗೀತೆಯಲ್ಲ ನಮ್ಮ ಇಡೀ ನಾಡಿನ ಜನರ ಬದುಕಿನ ಸಾರವೆತ್ತ ಘನಗಾನವೇ ನಾಡಗೀತೆ. ಕನ್ನಡ ನಾಡು ನುಡಿ ಸಾವಿರಾರು ವರ್ಷದ ಇತಿಹಾಸವನ್ನು ಹೊಂದಿದೆ. ಅದರ ಆಳ ಮತ್ತು ಅಗಲವನ್ನು ಎಂದಿಗೂ ಅಳೆಯಲು ತೂಗಲು ಸಾಧ್ಯವೇ ಇಲ್ಲ. ಆದರೆ ನಾಡಗೀತೆಯೊಂದಿಗೆ ನಮ್ಮ ನಾಡಿನ ಜನತೆ ಅದರಲ್ಲೂ ಸಾಮಾನ್ಯರು ನಾಡ ಪ್ರೇಮವನ್ನು ಹೊಂದಿರುವುದಿರುವುದನ್ನು ಕಾಣಬಹುದು. ಕನ್ನಡ ನಾಡಿನ ಕನ್ನಡಿಗರ ಹೃದಯ ಭಾಗದಲ್ಲಿ ಘನವೆತ್ತ ನಾಡಿನ ಚರಿತ್ರೆಯನ್ನು ಜನಜೀವನ ಇತಿಹಾಸವನ್ನು ಕಟ್ಟಿದ ಮತ್ತು ಬಿತ್ತಿದ ಹಾಗೂ ಕನ್ನಡಿಗರಲ್ಲಿ ನಾಡು ನುಡಿಯ ಬಗೆಗಿನ ಪ್ರೇಮವನ್ನು ಬೆಳೆಸುವಲ್ಲಿ ನಾಡಗೀತೆ ಅಜರಾಮರ. ಕನ್ನಡ ಸಾಹಿತ್ಯ ಎಂದು ಬಂದಾಗ ಅದು ತುಂಬಿದ ಕೊಡ ಎಂದಿಗೂ ತುಳುಕುವುದಿಲ್ಲ. ಕನ್ನಡ ಸಾಹಿತ್ಯ ಸಂಸ್ಕೃತಿಗಳು ನಾಡಿನ ನಮ್ಮವರೆಂಬ ಭಾವನೆ ಜನರ ಬದುಕು ಮತ್ತು ಮಾನವೀಯ ಮೌಲ್ಯಗಳನ್ನು ಸಾರ್ಥಕವಾಗಿ ಪ್ರತಿಬಿಂಬಿಸುವ ಕೈಗನ್ನಡಿಯಾಗಿದೆ. ನಾಡಗೀತೆ ಕೇವಲ ಗೀತೆಯಾಗಿ ನಮ್ಮೊಳಗೊಕ್ಕಿರುವುದಲ್ಲ, ನಾಡಿನ ನೆಲ, ಜಲ, ಕವಿಗಳು, ಜನಾಂಗ, ದಾಸ ಪರಂಪರೆ ನಾಡಿನ ಸಂಸ್ಕೃತಿ ಹೀಗೆ ಅನೇಕ ವಿಷಯಗಳನ್ನೊಳಗೊಂಡ ಮೌಲ್ಯಗಳನ್ನು ಹೊರಹೊಮ್ಮಿಸುವ ಸಂಕೇತವಾಗಿಯೂ

ನಾಡಗೀತೆಯನ್ನು ಗೌರವಿಸುವ ಮತ್ತು ಪೂಜಿಸುವ ಸಾಮಾನ್ಯರ ಹೃದಯದಲ್ಲೂ ಬೇರೂರಿರುವ ಸಂಗತಿಗಳನ್ನು ಹೆಕ್ಕಿ ತೆಗೆಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ನಾಡಗೀತೆಗೆ ವಿಶಿಷ್ಟವಾದ ಸ್ಥಾನವಿದೆ. ರಾಷ್ಟ್ರದ ಆತ್ಮಸ್ಫೂರ್ತಿ, ಏಕತೆ ಮತ್ತು ಪ್ರೇಮವನ್ನು ಪ್ರತಿಬಿಂಬಿಸುವ ನಾಡಗೀತೆ, ಕೋಟ್ಯಾಂತರ ಜನರ ಹೃದಯದಲ್ಲಿ ರಾಷ್ಟ್ರಭಾವನೆಯನ್ನು ಬಿತ್ತಿ ಬೆಳೆಸುವಲ್ಲಿ ಮಹಾ ಶಕ್ತಿಯನ್ನು ಹೊಂದಿದೆ. ಈ ಗೀತೆ ಕೇವಲ ಶಬ್ದಗಳ ಸಂಕಲನದಲ್ಲಿರದೆ, ದೇಶದ ಸಂಸ್ಕೃತಿಗಳು, ಭಾಷೆಗಳು ಮತ್ತು ಪರಂಪರೆಗಳನ್ನೆಲ್ಲ ಒಗ್ಗೂಡಿಸುವ ಅಪರೂಪದ ಬಾಂಧವ್ಯವಾಗಿದೆ. ಕರ್ನಾಟಕದ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಮತ್ತು ಭಾಷಾ ಗೌರವವನ್ನು ಒಂದೇ ಧ್ವನಿಯಲ್ಲಿ ಒಗ್ಗೂಡಿಸುವ ಅಮೂಲ್ಯ ರತ್ನವೇ ನಾಡಗೀತೆ. ಇನ್ನೊಂದೆಡೆ 'ಶ್ರೀ ಸಾಮಾನ್ಯರು' ಎಂಬ ವಿಷಯವು ಸಮಾಜದ ಮೂಲ ಶಕ್ತಿಯಾದ ಸಾಮಾನ್ಯ ಜನರ ಪರಿಶ್ರಮ, ಮೌಲ್ಯಗಳು, ನೀತಿ, ಜೀವನಸತ್ಯ ಮತ್ತು ನಿಸ್ವಾರ್ಥ ಧೋರಣೆಯನ್ನು ಕೊಂಡಾಡುತ್ತದೆ. ನಾಡಿನ ನಿರ್ಮಾಣದಲ್ಲಿಯೂ ಸಂಸ್ಕೃತಿ ಉಳಿವಲ್ಲಿಯೂ ಸಾಮಾನ್ಯರ ಬದುಕಿನೊಂದಿಗೆ ಸಮ್ಮಿಳಿತಗೊಂಡ ನಾಡಗಿತೆಯೊಂದಿಗಿನ ಸಾಮಾನ್ಯರ ಬದುಕು ಅಕ್ಷರಶಃ ಅವರ ನಿತ್ಯ ಬದುಕಿನೊಂದಿಗೆ ಜೀವಿಸುತ್ತದೆ. ನಾಡಗೀತೆ ನಾಡಿನ ಆಸ್ತಿಯು ಹೌದು ಅಸ್ತಿತ್ವದ ಧ್ವನಿಯು ಹೌದು. ನಾಡಿನ ಗೌರವಪೂರ್ವಕ ಸಂಕೇತವಾಗಿ ಪೀಳಿಗೆಯಿಂದ ಪೀಳಿಗೆಗೆ ಅಚ್ಚಳಿಯದೆ ಉಳಿದು ಮುಂದೆ ಸಾಗುತ್ತಲೇ ಇದೆ ಇರುತ್ತದೆ ಕೂಡ. ಇಂತಹ ಮಹತ್ವದ ನಾಡಗೀತೆ ಜನಸಾಮಾನ್ಯರ ಮನಮುಟ್ಟುವಲ್ಲಿ ಸಾರ್ಥಕತೆ ಹೊಂದಿದೆ. ಜನರ ದೈನಂದಿನ ಬದುಕಿನ ಜೊತೆಗೂಡಿ ನೋಡುವಾಗ ಶ್ರೀಸಾಮಾನ್ಯರು ಎಂಬ ಪದದ ನಿಜವಾದ ಅರ್ಥವು ಸ್ಪಷ್ಟವಾಗುತ್ತದೆ. ಏಕೆಂದರೆ ಅಕ್ಷರಾರರ್ಹರಿಂದ ಹಿಡಿದು ಅಕ್ಷರಾರ್ಹರಲ್ಲದವರು, ಮಕ್ಕಳು, ಮುಗ್ದ ಜನರು, ಎದ್ದು ಗೌರವಿಸುವಂತಹ ಪರಿಭಾವವು ಅವರೊಳಗೆ ಇಂತಹ ದೇಶಭಕ್ತಿ ಇದೆ ಎಂಬ ಮಹತ್ವವನ್ನು ಸಾರುತ್ತದೆ.

"ರಾಷ್ಟ್ರಕವಿ ಕುವೆಂಪು ಅವರು(ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ) ಹಿಂದೆಯೇ ಬರೆದ ಜೈ ಕರ್ನಾಟಕ ಮಾತೆ ಕವನವು ಪ್ರಕಟವಾದ ಆರಂಭದಿಂದ 1930 ಮುಂದೆ ಅವರ ಕೈಯಲ್ಲಿ ಹಲವು ಸಣ್ಣಪುಟ್ಟ ಮಾರ್ಪಾಡುಗಳನ್ನು ಪಡೆಯಿತು ಅಂತಿಮವಾಗಿ ಪರಿಷ್ಕೃತಗೊಂಡ ಕವನವನ್ನು ಕರ್ನಾಟಕ ಸರ್ಕಾರವು 23.12.2004 ರಂದು ನಾಡಗೀತೆಯಾಗಿ ಗುರುತಿಸಿ ಘೋಷಿಸಲಾಯಿತು ಆ ನಾಡಗೀತೆಯು ಸರಳ ಆದರೆ ಅರ್ಥಪೂರ್ಣ ಭಾರತದ ಪರಂಪರೆಯ ಹಿನ್ನೆಲೆಯಲ್ಲಿ ಕರ್ನಾಟಕ ಸಾಹಿತ್ಯ ಐತಿಹಾಸಿಕ ಸಾಂಸ್ಕೃತಿಕ ಸಂಪತ್ತನ್ನು ಬಹು ಸೂಕ್ಷ್ಮವಾಗಿ ಹಿಡಿದಿಟ್ಟಿದೆ." (ಚಿದಾನಂದ ಮೂರ್ತಿ ಎಂ, 2010, ಕರ್ನಾಟಕ ನಾಡಗೀತೆ ಒಂದು ವಿಶ್ಲೇಷಣೆ ಕನ್ನಡ ಪುಸ್ತಕ ಪ್ರಾಧಿಕಾರ) ನಾಡ ಸೊಗಸು, ಮಣ್ಣಿನ ಸೊಗಡು, ಸಂಸ್ಕೃತಿ ಮತ್ತು ಬದುಕಿನ ಹಲವು ಮಜಲುಗಳನ್ನು ಒಂದು ಗೀತೆಯಲ್ಲಿ ತಂದ ಸುದೈವ ನಮ್ಮ ಪಾಲಿಗೆ ಇದೆ. ಜನರಿಗೆ ನಾಡಿನ ವೈಭವವನ್ನು ಗೀತೆಯ ಮೂಲಕ ಉಣ ಬಡಿಸಿದಂತಹ ರಸಕಾವ್ಯ ಮತ್ತು ಅದರ ಚಿತ್ರಣವನ್ನು ನಮ್ಮ ಕಣ್ಮುಂದೆ ಮುಂದಿನ ಮೂರು ತಲೆಮಾರು ಮತ್ತು ಅವರ ಮುಂದಿನ ತಲೆಮಾರಿಗೂ ಇದು ಚಿರಕಾಲ ಉಳಿಯುವ ಶ್ರೇಷ್ಠತೆಯನ್ನು ಹೊಂದಿದೆ. ನಾಡಗೀತೆ ಕೇವಲ ಸಾಹಿತ್ಯದ ಸಂಪತ್ತಾಗಿರದೇ, ನಾಡು-ನುಡು, ನಡತೆಯ ಆತ್ಮವನ್ನೇ ಪ್ರತಿಬಿಂಬಿಸುವ ದಾರಿದೀಪವೆಂದರೆ ತಪ್ಪಾಗಲಾರದು. ನಾಡಿನ ಮೇಲಿನ ಪ್ರೀತಿ, ಮಾನವೀಯತೆ, ಹೊಣೆಗಾರಿಕೆ ಮತ್ತು ಮೌಲ್ಯಾಧಾರಿತ ಬದುಕಿನ ಮಹತ್ವವನ್ನು ತಿಳಿಸುವ ಈ ಗೀತೆ ಯಾವುದೋ ವರ್ಗಕ್ಕೋ, ಜಾತಿಗೋ ಸಂಬಂಧಿಸಿದುದಲ್ಲ, ಬದಲಾಗಿ ನಾಡಿನ ಇಡೀ ಜನತೆಯನ್ನು ಜನ ಜೀವನದ ಮೌಲ್ಯಗಳನ್ನು ಗೀತೆಯ ಮೂಲಕ ಎರಕ ಹೊಯ್ಯುವ ಕಾಯಕ ಸಾಹಿತ್ಯಿಕವಾಗಿ ಒಡಮೂಡಿದೆ ಎಂದರೆ ತಪ್ಪಾಗಲಾರದು. ಶ್ರೀ ಸಾಮಾನ್ಯರು ಎಂಬ ವಿಷಯವು ಸಮಾಜದ ನಿಜವಾದ ಶಕ್ತಿ ಸಾಮಾನ್ಯ ಜನರೇ ಎಂಬ ತತ್ವವನ್ನು ಹತ್ತಿರದಿಂದ ಎತ್ತರಿಸಿ ಉತ್ತರಿಸುತ್ತದೆ. ಅವರ ಪರಿಶ್ರಮ, ನೈತಿಕತೆ ಮತ್ತು ಸರಳತೆಯೇ ಸಮಾಜದ ಪ್ರಗತಿಯ ಮೂಲವೆಂಬ ಸಂದೇಶವನ್ನು ರವಾನಿಸುತ್ತದೆ.

ಕವಿ ಕುವೆಂಪು ರಚನೆಯ ನಾಡಗೀತೆ ಈ ಕೆಳಗಿನಂತಿದೆ.

"ಜಯ ಹೇ ಕರ್ನಾಟಕ ಮಾತೆ
ಜೈ! ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!
ಜೈ! ಸುಂದರ ನದಿವನಗಳ ನಾಡೆ
ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ
ಗಂಧದ ಚಂದದ ಹೊನ್ನಿನ ಗಣಿಯೆ:
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ,
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ

ಕವಿಕೋಗಿಲೆಗಳ ಪುಣ್ಯಾರಾಮ
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ:
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರರಂಗ!
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!

ಜೈ! ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜೈ ಸುಂದರ ನದಿವನಗಳ ನಾಡೆ
ಜಯಹೇ ರಸ ಋಷಿಗಳ ಬೀಡೆ"

ಈ ಗೀತೆಯು ಜನಸಾಮಾನ್ಯರ ಬದುಕನ್ನು ಹೇಗೆ ತನ್ನೊಡಲಲ್ಲಡಗಿಸಿಕೊಂಡಿದೆ, ಜನರು ನಾಡಗೀತೆಯನ್ನು ಹೇಗೆ ಕಾಣುತ್ತಾರೆ ಎಂಬುದನ್ನು ಅರಿಯಲು ಕೇವಲ ನಾಡಗೀತೆ ಹೇಳುವುದರ ಮೂಲಕ, ಕೇಳುವುದರ ಮೂಲಕ ಅದರ ಶಕ್ತಿಯನ್ನು ಹೇಳಲಾಗದು. ಅದು ಎಲ್ಲ ಶಕ್ತಿಯನ್ನೂ ಮೀರಿದುದು ಆದರೆ ಶ್ರೀಸಾಮಾನ್ಯರ ಪರಿದೃಷ್ಟಿಯಲ್ಲಿ ನಾಡಗೀತೆ ಹೇಗೆ ಕಾಣಲಾಗುತ್ತದೆಂಬುದನ್ನು ಅರಿಯಲು ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿದಾರರನ್ನು ಸಂದರ್ಶಿಸಿ ಮಾಹಿತಿ ಕಲೆಹಾಕಲಾಗಿದ್ದು ಈ ಕೆಳಗಿನಂತೆ ಅದನ್ನು ಕಾಣಬಹುದು.

ಶ್ರೀ ಸಾಮಾನ್ಯರ ದೃಷ್ಟಿಕೋನದಲ್ಲಿ ನಾಡಗೀತೆ

ಕ್ರ ಸಂ	ನಾಡಗೀತೆ ಶ್ರೀ ಸಾಮಾನ್ಯರ ದೃಷ್ಟಿಕೋನದಲ್ಲಿ ಹೇಗಿದೆ.	ಕುಟುಂಬಗಳು	ಗಂಡು	ಹೆಣ್ಣು	ಏನೂ ಗೊತ್ತಿಲ್ಲ ಆದರೆ ಗೌರವ ಕೊಡಬೇಕೆನಿಸುತ್ತದೆ	ಪ್ರತಿಶತ
1.	ನಾಡಗೀತೆಗೆ ಮೊದಲಿನಿಂದಲೂ ಎಲ್ಲರೂ ಗೌರವಿಸುತ್ತಾರೆ ನಾವೂ ಗೌರವಿಸುತ್ತೇವೆ	30	20	05	05	63.83
2.	ಮಕ್ಕಳು ಶಾಲೆಗೆ ಹೋಗ್ತಾರೆ ಹಾಗಾಗಿ ಅವರು ನಾಡಗೀತೆಗೆ ಗೌರವಿಸಬೇಕೆಂದು ಹೇಳುತ್ತಾರೆ	11	08	02	01	23.41
3.	ನಾಡಗೀತೆ ಇಡೀ ನಮ್ಮ ನಾಡಿನ ಸೊಗಡನ್ನು ಹೊಂದಿದೆ.	04	03	–	–	8.51
4.	ನಾಡಿನ ಬಗ್ಗೆ ಗೌರವ ಇರುವ ಕಾರಣ ಗೌರವಿಸುತ್ತೇವೆ.	02	02	–	01	4.25
	ಒಟ್ಟು	47	33	07	06	100
	ಒಟ್ಟು ಶೇಕಡ	–	**70.22**	**14.89**	**14.89**	**100%**



ನಾಡಗೀತೆಯು ಜನಸಾಮಾನ್ಯರ ದೃಷ್ಟಿಕೋನದಲ್ಲಿ ಹೇಗಿದೆ ಎಂಬುದನ್ನು ಅರಿಯಲು ಕ್ಷೇತ್ರಕಾರ್ಯಕೈಗೊಳಪಡಿಸಿ ಒಟ್ಟು 30 ಕುಟುಂಬಗಳನ್ನು ಸಂದರ್ಶಿಸಿದಾಗ ನಾಡಗೀತೆಗೆ ಮೊದಲಿನಿಂದಲೂ ಎಲ್ಲರೂ ಗೌರವಿಸುತ್ತಾರೆ ನಾವೂ ಗೌರವಿಸುತ್ತೇವೆ ಎಂಬುದಾಗಿ 30 ಕುಟುಂಬಗಳ ಪೈಕಿ ಗಂಡು 20 ಹಾಗೂ ಹೆಣ್ಣು 05 ಮತ್ತು ಏನೂ ಗೊತ್ತಿಲ್ಲ ಆದರೆ ನಮಗೆ ಗೌರವಿಸಬೇಕೆಂಬುದಾಗಿ ಅನಿಸುತ್ತದೆ ಎಂದು ವೃದ್ಧರು ತಿಳಿಸಿದರು. ಒಟ್ಟು 63.83 ಪ್ರತಿಶತ ನಾಡಗೀತೆಗೆ ಎಲ್ಲರೂ ಗೌರವಿಸುತ್ತಾರೆ ಮತ್ತು ನಾವೂ ಗೌರವಿಸುತ್ತೇವೆಂದು ಉತ್ತರಿಸಿದರು. ಇನ್ನು ಮಕ್ಕಳು ಶಾಲೆಗೆ ಹೋಗ್ತಾರೆ ಹಾಗಾಗಿ ಅವರು ನಾಡಗೀತೆಗೆ ಗೌರವಿಸಬೇಕೆಂದು ಹೇಳುತ್ತಾರೆ ಎಂಬುದಾಗಿ ಒಟ್ಟು 30 ಕುಟುಂಬಗಳ ಪೈಕಿ 11 ಕುಟುಂಬಗಳಲ್ಲಿ ಗಂಡು 08 ಹಾಗೂ ಹೆಣ್ಣು 02 ಮತ್ತು ವೃದ್ದರಲ್ಲಿ 1 ಮಕ್ಕಳು ಮನೆಗೆ ಶಾಲೆಯಿಂದ ಬಂದಾಗ ನಾಡಗೀತೆ ಹಾಡುವಾಗ ನಿಂತು ಗೌರವಿಸಬೇಕೆಂದು ಹೇಳ್ತಾರೆ ಅದಕ್ಕಾಗಿ ಎಂದು23.41 ಪ್ರತಿಶತದಷ್ಟು ಉತ್ತರಿಸಿದರು. ನಾಡಗೀತೆ ಇಡೀ ನಮ್ಮ ನಾಡಿನ ಸೊಗಡನ್ನು ಹೊಂದಿದೆ ಎಂಬುದಾಗಿ

ಗೌರವಿಸಬೇಕೆಂದು ಇಡೀ ನಾಡಿಗೆ ನಾಡೇ ಎದ್ದು ನಿಂತು ಗೌರವಿಸುತ್ತದೆ ಎಂದು ಸಂದರ್ಶಿಸಿದ 30 ಕುಟುಂಬಗಳ ಪೈಕಿ 04 ಕುಟುಂಬಗಳಲ್ಲಿ ಗಂಡು 03 ಒಟ್ಟು 08.51 ಪ್ರತಿಶತದಷ್ಟು ಜನರು ಉತ್ತರಿಸಿದರು. ಇನ್ನು ನಾಡಿನ ಬಗ್ಗೆ ಇರುವ ಕಾರಣ ಗೌರವಿಸುತ್ತೇವೆ ಎಂಬುದಾಗಿ ಸಂದರ್ಶಿಸಿದ 30 ಕುಟುಂಬಗಳಲ್ಲಿ 0 ಕುಟುಂಗಳಲ್ಲಿನ ಗಂಡು 02 ಹಾಗೂ ವೃದ್ಧ ಜೀವಗಳಲ್ಲಿ 1 ವ್ಯಕ್ತಿ ಉತ್ತರಿಸಿದ್ದು 0.25 ಪ್ರತಿಶತದಷ್ಟು ಜನರು ನಾಡಿನ ಬಗ್ಗೆ ಇರುವ ಕಾರಣ ಗೌರವಿಸುತ್ತೇವೆ ಎಂಬುದಾಗಿ ಉತ್ತರಿಸಿದರು. ಒಟ್ಟು 30 ಕುಟುಂಬಗಳ ಪೈಕಿ 47 ಜನರನ್ನು ಸಂದರ್ಶಿಸಿದಾಗ 3 ಗಂಡು 07 ಹೆಣ್ಣು 06 ಜನ ವೃದ್ದರು ಉತ್ತರಿಸಿದ್ದು 70.2 ರಷ್ಟು ಗಂಡು 14.89 ರಷ್ಟು ಹೆಣ್ಣು 14. 89 ರಷ್ಟು ವೃದ್ದರು ನಾಡಗೀತೆ ತಮ್ಮ ದೃಷ್ಟಿಕೋನದಲ್ಲಿ ಗೌರವಿಸಲು ಕಾರಣವೇನೆಂಬುದನ್ನು ಅರಿಯಲು ಸಾಧ್ಯವಾಯಿತು ಒಟ್ಟಿನಲ್ಲಿ 100 ಪ್ರತಿಶತದಷ್ಟು ನರು ನಾಡಗೀತೆಗೆ ಗೌರವಿಸುತ್ತಾರೆ.

ಈ ಮೇಲಿನ ಕೋಷ್ಟಕ ಮತ್ತು ಮಾಹಿತಿಯನ್ನು ಅರಿತಾಗ ಶ್ರೀ ಸಾಮಾನ್ಯರಲ್ಲಿ ಕೆಲವರು ಉನ್ನತ ಶಿಕ್ಷಣ ಪಡೆದುಕೊಂಡಿದ್ದು ಅವರು ನಮ್ಮ ನಾಡು ನುಡಿ ಪರಂಪರೆ, ಸಂಸ್ಕೃತಿ, ನೆಲ, ಜಲ, ಕವಿಕಾವ್ಯ, ನಾಡಿನ ಸಂಪತ್ತು ಹೀಗೆ ಹತ್ತು ಹಲವು ರೀತಿಯಲ್ಲಿ ನಮ್ಮ ನಾಡಿನ ವೈಭವೋಪೇತವನ್ನು ಹೊಂದಿರುವ ಕಾರಣ ನಾವು ಮನಸ್ಪೂರ್ವಕವಾಗಿ ಗೌರವಿಸುತ್ತೇವೆ ಎಂದು ಉತ್ತರಿಸಿದರೆ ಇನ್ನೂ ಶಿಕ್ಷಣಾರ್ಹ(ಅನಕ್ಷರಸ್ಥರು)ರಲ್ಲದವರು ಸಹ ನಮ್ಮ ನಾಡಿನ ಬಗ್ಗೆ ಗೌರವ ಇರುವುದಾಗಿ ಮತ್ತು ತಮ್ಮ ಮನೆಯ ಮಕ್ಕಳು ಶಾಲೆಗೆ ಹೋದಾಗ ಸಮಯಕ್ಕೆ ಸರಿಯಾಗಿ ನಾಡಗೀತೆಗೆ ಗೌರವ ಸಲ್ಲಿಸಿ ಶಿಸ್ತುಬದ್ಧವಾಗಿ ಶಾಲಾ ಕೊಠಡಿಗೆ ತೆರಳುತ್ತಾರೆ ನಾವು ಶಾಲೆಗೆ ಮಕ್ಕಳನ್ನು ಬಿಡಲು ತೆರಳಿದಾಗ ಸ್ವಲ್ಪ ತಡವಾಗಿದ್ದರೂ ಸಹ ಮಕ್ಕಳು ನಾಡಗೀತೆ ಶುರುವಾಗಿದೆ ಈವಾಗ ಹೋಗಬಾರದೆಂದು ಹೇಳಿ ನಾವು ಹೋದ ಜಾಗದಲ್ಲೇ ನಿಂತು ಗೌರವ ಸೂಚಿಸಲು ಹೇಳುವುದರ ಜೊತೆಗೆ ನಮ್ಮ ನಾಡಿನ ವೈಭವವನ್ನೊಳಗೊಂಡ ಗೀತೆ ಎಂಬುದಾಗಿ ಹೇಳುವ ಕಾರಣ ನಮಗೇ ಗೊತ್ತಿಲ್ಲದಂತೆ ನಮ್ಮೊಳಗೆ ದೇಶಪ್ರೇಮ ಮೊಳಗುವುದು ಎಂಬುದಾಗಿ ಉತ್ತರಿಸಿದರು. ಇನ್ನು ವೃದ್ಧರು ಸಹ ನಾಡಗೀತೆ ಎಲ್ಲಿಯಾದರೂ

ಕೇಳಿ ಬಂತೆಂದರೆ ನಮ್ಮೊಳಗಿಂದಲೇ ನಿಂತು ಗೌರವಿಸಬೇಕೆನಿಸುತ್ತದೆ ಎಂದರು. ಜೊತೆಗೆ ಶಾಲೆಗಳಲ್ಲಿ ಯಾವುದಾದರೂ ಕಾರ್ಯಕ್ರಮಗಳಿದ್ದರೆ ನೋಡಲು ನಾವು ಹೋದಾಗ ನಾಡಗೀತೆಗೆ ಗೌರವಿಸುವುದನ್ನು ನಾವು ನೋಡಿದಾಗ ಅದಕ್ಕಿರುವ ಶಕ್ತಿ ಎಂತಹದೆಂಬುದನ್ನು ನಾವು ಅರಿತುಕೊಂಡಿದ್ದೇವೆ ನಾವು ಅಕ್ಷರ ಕಲಿಯದಿದ್ದರೂ ಸಂಸ್ಕೃತಿ, ನಡೆ–ನುಡಿ ಆಚಾರಗಳನ್ನು ಮರೆಯುವುದಿಲ್ಲ, ಅದಕ್ಕೆ ವಿರುದ್ಧವಾಗಿ ನಾವು ನಡೆದುಕೊಳ್ಳುವುದಿಲ್ಲ ಎಂಬುದಾಗಿ ಉತ್ತರಿಸಿದರು. ಒಬ್ಬ ಹಿರಿಯ ಜೀವಿಯಂತೂ ನನ್ನ ಮೊಮ್ಮಗು ಮೊಬೈಲ್ ನೋಡುವಾಗ ಒಂದು ವೀಡಿಯೋ ತೋರಿಸಿತು. ಅದರಲ್ಲಿ ನಾಡಗೀತೆಯನ್ನು ಯಾವುದೋ ಊರಲ್ಲಿ ಶಾಲೆಯಲ್ಲಿ ಮಕ್ಕಳು ಹಾಡುವಾಗ ಅಲ್ಲಿಗೆ ಹೋದಂತಹ ಹಸು ನಾಡಗೀತೆ ಮುಗಿಯುವ ತನಕ ಅಲ್ಲಿಯೇ ಅತ್ತಿತ್ತ ಸರಿಯದೆ ನಿಂತುಕೊಂಡಿತ್ತು ಅದನ್ನು ನೋಡಿ ಮೂಕ ಪ್ರಾಣಿಗೆ ಇಷ್ಟೊಂದು ದೇಶಪ್ರೇಮವಿರುವಾಗ ನಾವಿನ್ನು ಮನುಷ್ಯರು ನಮ್ಮೊಳಗೆ ಅದು ರಕ್ತಗತವಾಗಿಯೇ ಬಂದಿರುತ್ತದೆಂದು ಅವರು ಉತ್ತರಿಸಿದರು.

ಒಟ್ಟಾರೆಯಾಗಿ ನಾಡಗೀತೆ ಎಂಬುದು ಕೇವಲ ಗೀತೆಯಲ್ಲ ಅದು ಒಬ್ಬ ಕವಿಯೊಳಗೆ ಜನನಿತವಾದ ನಾಡಿನ ಶ್ರೇಷ್ಠ ಭಾವನೆ. ನಾಡು, ನುಡಿ, ಪರಂಪರೆ, ಸಂಸ್ಕೃತಿ, ನೆಲ, ಜಲ, ಕವಿಕಾವ್ಯ ಪರಂಪರೆ, ರಸಋಷಿಗಳ, ಮಹಾನ್ ಚೇತನರ ಅನನ್ಯತೆಯ ಅಸ್ಮಿತೆಯನ್ನು ಇಡೀ ಕನ್ನಡ ನಾಡು ಕರ್ನಾಟಕಕ್ಕೆ ನಾಡಗೀತೆಯ ಮುಖೇನ ಅದರ ಶಕ್ತಿಯನ್ನು ತೋರುತ್ತದೆ. ನಾಡಗೀತೆಯ ಸಾಲುಗಳನ್ನು ವಿವರಿಸಿ ಹೇಳಬೇಕಿಲ್ಲ, ಅದು ಕನ್ನಡಿಗರಿಗೆ ಹುಟ್ಟುತ್ತಲೇ ಕನ್ನಡದ ಕಂಪು ಬೀರಿರುತ್ತದೆ. ಪ್ರತಿ ಮನೆಯಲ್ಲಿ ಜನಿಸುವ ಮಕ್ಕಳು ಬಾಲ್ಯದಲ್ಲಿಯೇ ಅದರ ಒಟ್ಟು ಸಾರವನ್ನು ತಿಳಿಯುವಂತೆ ತಮಗೇ ಗೊತ್ತಿಲ್ಲದಂತೆ ಕುಟುಂಬವು ಅವರೊಳಗೆ ಆ ಪ್ರೇಮವನ್ನು ಬಿತ್ತುತ್ತದೆ. ನಾಡಗೀತೆಯ ಸಂಪೂರ್ಣ ಸಾರವನ್ನು ಚಿದಾನಂದ ಮೂರ್ತಿ ಎಂ, 2010, ಕರ್ನಾಟಕ ನಾಡಗೀತೆ ಒಂದು ವಿಶ್ಲೇಷಣೆ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಹೊತ್ತಿಗೆಯ ವಿಶ್ಲೇಷಣೆಯನ್ನು ಓದಿದಾಗ ನಮಗೆ ಅರ್ಥವಾಗುತ್ತದೆ. ನನ್ನ ಪ್ರಕಾರ ನಾಡಗೀತೆ ಇಡೀ ನಾಡಿನ ಶ್ರೇಷ್ಟತೆಯನ್ನು ಹೊಂದಿದ್ದು ಭಗವದ್ಗೀತೆ, ಮಹಾಭಾರತದಂತಹ ನಾಡಿನ ಶ್ರೇಷ್ಠ ಮಹಾಕಾವ್ಯಗಳು

ಹೇಗೆ ನಮ್ಮೊಳಗೊಕ್ಕು ಜ್ಞಾನಸಾರವನ್ನು ಉಣಬಡಿಸುತ್ತವೋ ಹಾಗೆಯೇ ನಾಡಗೀತೆಯೂ ನಮ್ಮೊಳಗೊಕ್ಕು ನಮ್ಮ ನಾಡಿನ ಐತಿಹಾಸಿಕತೆಯನ್ನು ಮೆರೆಸುತ್ತದೆ. ಇಂತಹ ನಾಡಗೀತೆಯು ಶ್ರೀ ಸಾಮಾನ್ಯರನ್ನು ಗೀತೆಯ ಸಾರದಲ್ಲೇ ಹಿಡಿದಿಟ್ಟುಕೊಂಡಿದ್ದು ನಮ್ಮೊಳಗೆ ಮತ್ತಷ್ಟು ದೇಶಪ್ರೇಮವನ್ನು ಮೊಳಗಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ನಾವು ನಾಡಗೀತೆ ಹೊಂದಿರುವ ಅರ್ಥವನ್ನು ಶಾಲಾ ಕಾರ್ಯಕ್ರಮಗಳಲ್ಲಿ ಗ್ರಾಮಸ್ಥರೂ ಸೇರಿದಾಗ ಮತ್ತಷ್ಟು ಅರ್ಥೈಸುವ ಮೂಲಕ ನಮ್ಮ ನಾಡಿನ ಶ್ರೇಷ್ಟತೆಯನ್ನು ಎತ್ತರಕ್ಕೆ ಕೊಂಡೊಯ್ಯಬೇಕಾಗಿದೆ. ಜೊತೆಗೆ ಕನ್ನಡ ಮಾತ್ರವಲ್ಲ ಬೇರೆ ಶಿಸ್ತಿನಲ್ಲಿ ಅಧ್ಯಯನಿಸುವ ಮಕ್ಕಳಿಗೂ ನಾಡಗೀತೆ ಒಳಾರ್ಥವನ್ನು ಅರ್ಥೈಸುವ ಕಾಯಕವಾದಾಗ ಮಾತ್ರ ಕನ್ನಡ ನಾಡು, ನುಡಿಯ ಪರಂಪರೆಯನ್ನು ಕನ್ನಡಿಗರು ಸೇರಿ ಉಳಿಸಿದಂತಾಗುತ್ತದೆ.

ಅಧ್ಯಯನಕ್ಕೊಳಪಡಿಸಿದ ಆಯ್ದ ಮಾಹಿತಿದಾರರ ವಿವರ

ಕ್ರ ಸಂ	ಹೆಸರು	ಊರು	ವಿದ್ಯಾಭ್ಯಾಸ	ವಯಸ್ಸು	ವೃತ್ತಿ
1.	ಸುಹಾಸಿನಿ	ಕಾಟ್ರಹಳ್ಳಿ	ಪಿ ಯು ಸಿ	30	ಟೈಲರಿಂಗ್
2.	ಜಯಲಲಿತಾ ಜಿ	ದಾವಣಗರೆ	5ನೇ ತರಗತಿ	53	ಬಟ್ಟೆ ವ್ಯಾಪಾರ
3.	ಶಿವಮ್ಮ	ಜ್ಯೋತಿಪುರ	ಗೃಹಿಣಿ	66	ಗೃಹಿಣಿ
4.	ಯಶವಂತ	ಚಿನ್ನಮ್ಮನಹಳ್ಳಿ, ಚಿತ್ರದುರ್ಗ ಜಿಲ್ಲೆ	ಓದಿಲ್ಲ	34	ವ್ಯವಸಾಯ
5.	ಶೇಖರಪ್ಪ	ಎಂ ಬಿ ಐಯ್ಯನಹಳ್ಳಿ	7ನೇ ತರಗತಿ	56	ವ್ಯವಸಾಯ
6.	ಮಲ್ಲಿಕಾರ್ಜುನಸ್ವಾಮಿ	ಕಲೆವದಾಪುರ	ಎಲ್ಎಲ್ಬಿ	57	ವಕೀಲರು
7.	ಸಂತೋಷ್ ಎನ್ ಟಿ	ಹುಡೇಂ	ಪಿಯುಸಿ	34	ಕಿರಾಣಿ ವ್ಯಾಪಾರ
8.	ರಾಜಮ್ಮ	ಹಿರೇಹಳ್ಳಿ, ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು	ಓದಿಲ್ಲ	54	ಶಾಲಾ ಅಡುಗೆ ಸಹಾಯಕರು

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಛಾಯಾಚಿತ್ರಗಳು

ನಾಡಗೀತೆ ಕುರಿತು ಅನಿಸಿಕೆ ತಿಳಿಸುತ್ತಿರುವ ಮಾಹಿತಿದಾರರು	ನಾಡಗೀತೆ ಕುರಿತು ಹಿರಿಯ ಜೀವ ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಿರುವ ಛಾಯಾಚಿತ್ರ
ನಾಡಗೀತೆಗೆ ಗೌರವ ಸೂಚಿಸುವ ಕುರಿತ ಮಾಹಿತಿಯನ್ನು ವಿವರಿಸುತ್ತಿರುವ ಹಿರಿಯ ವ್ಯಕ್ತಿಯೊಂದಿಗಿನ ಛಾಯಾಚಿತ್ರ	ಸಾಮಾನ್ಯರ ದೃಷ್ಟಿಕೋನದಲ್ಲಿ ನಾಡಗೀತೆ ಬಗೆಗಿನ ಅನಿಸಿಕೆ ಕಲೆಹಾಕುತ್ತಿರುವ ಛಾಯಾಚಿತ್ರ
ಸಾಮಾನ್ಯರ ಬದುಕಿನೊಂದಿಗೆ ನಾಡಗೀತೆ ಬೆಸೆದ ಬಂಧ ಕುರಿತಾದ ಮಾಹಿತಿ ಸಂಗ್ರಹಿಸುತ್ತಿರುವ ಛಾಯಾಚಿತ್ರ	ಇಂದಿನ ಯುವ ಜನತೆ ಮತ್ತು ಸಾಮಾನ್ಯರ ದೃಷ್ಟಿಕೋನದಲ್ಲಿ ನಾಡಗೀತೆ ಹೇಗಿದೆ ಎಂಬ ಮಾಹಿತಿ ಸಂಗ್ರಹಿಸುತ್ತಿರುವ ಛಾಯಾಚಿತ್ರ.

ಪರಾಮರ್ಶನ ಗ್ರಂಥಗಳು

n ಚಿದಾನಂದ ಮೂರ್ತಿ ಎಂ, 2010, ಕರ್ನಾಟಕ ನಾಡಗೀತೆ ಒಂದು ವಿಶ್ಲೇಷಣೆ ಕನ್ನಡ ಪುಸ್ತಕ ಪ್ರಾಧಿಕಾರ

ಲೇಖಕರು : ಡಾ. ಮೇಘನ ಜಿ.

ಅಧ್ಯಾಪಕರು ಮತ್ತು ಸಂಯೋಜಕರು

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

meghasreeg034@gmail.com

***

ಕವಿಗಳ ಕಣ್ಮನದಲ್ಲಿ ಕನ್ನಡ ನಾಡು – ನುಡಿ

ಲೇಖನದ ಉದ್ದೇಶಗಳು:

- ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಇವುಗಳ ಮಹತ್ವವನ್ನು ಜನರಿಗೆ ನೆನಪಿಸಿ ಆತ್ಮ ಗೌರವ ಬೆಳೆಸುವುದು.
- ನಾಡು–ನುಡಿ–ನಡೆಯ ರಕ್ಷಣೆಯ ಸಂದೇಶ ಸಾರುವುದು.
- ಎಲ್ಲಾ ಕನ್ನಡಿಗರು ಒಂದಾಗಿ ನಡೆಯುವುದರೊಂದಿಗೆ ಕನ್ನಡಿಗರಲ್ಲಿ ಒಗ್ಗಟ್ಟು ಮತ್ತು ಸಹಕಾರ ಬೆಳಸುವುದು.
- ಭೂ ಭಾಗ, ಐತಿಹಾಸಿಕ ಪರಂಪರೆ, ಧೈರ್ಯ, ಕಲೆ ಸಾಹಿತ್ಯದಂತೆ ಕನ್ನಡ ನಾಡಿನ ವೈಭವದ ಗೌರವ ಪೂರ್ವಕ ಕೊಂಡಾಡಿಕೆ.
- ಯುವಕರಿಗೆ ಕನ್ನಡದ ಮೌಲ್ಯ, ತಾಯಿ–ನುಡಿಯ ಮಮತೆ ತಿಳಿಸಿಕೊಡುವುದು ಮತ್ತು ಅವರು ಕನ್ನಡಕ್ಕಾಗಿ ಕೆಲಸ ಮಾಡುವಂತೆ ಯುವ ಪೀಳಿಗೆಗೆ ಪ್ರೇರಣೆ ನೀಡುವುದು.
- ನಾಡಿನ ವಿವಿಧ ಭಾಗಗಳಲ್ಲಿ ವಿವಿಧ ಹಿನ್ನೆಲೆಗಳ ಕನ್ನಡಿಗರ ಐಕ್ಯತೆಯನ್ನು ಬಲಪಡಿಸುವುದು.
- ಹೊಸ ಕವಿಗಳು ಯುವ ಕವಿಗಳು ಹಾಗೂ ಸಾಹಿತ್ಯಾಸಕ್ತರಿಗೆ ವೇದಿಕೆ ಒದಗಿಸಿ ಕನ್ನಡ ಸಾಹಿತ್ಯದ ಪ್ರಚಾರ.
- ಭಾಷಾ ಪ್ರೇಮದ ಅರಿವು ಮೂಡಿಸುವುದು.

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಬಾರಿಸು ಕನ್ನಡ ಡಿಂಡಿಮವ – ಕುವೆಂಪು

ಕನ್ನಡ ನಾಡು ನುಡಿಯ ಅಸ್ಮಿತೆಯನ್ನು ಗಟ್ಟಿಗೊಳಿಸುವಲ್ಲಿ ಕನ್ನಡ ನಾಡಿನ ಕವಿಗಳು ದೊಡ್ಡ ಸಡಗರದಲ್ಲಿ ಕನ್ನಡ ನಾಡಿನ ಹೆಮ್ಮೆಯನ್ನು ಹಾಡಿ ಹೊಗಳಿದ್ದಾರೆ. ಕನ್ನಡ ತಾಯಿಯ ಪಾದಗಳಿಗೆ ಹಿಂದಿನ ಹಿರಿಯ ಕವಿಗಳು, ಈಗಿನ ಕವಿಗಳು ತಮ್ಮ ಭಾವನೆಯ ಬಣ್ಣದ ಹಾಡುಗಳನ್ನು ಅರ್ಪಿಸಿದ್ದಾರೆ. 12ನೇ ಶತಮಾನದಿಂದ 20ನೆಯ ಶತಮಾನದವರೆಗಿನ ಕನ್ನಡ ಬೆಳೆಯನ್ನು ಕವಿತೆಗಳ ಮೂಲಕ ರಾಶಿ ಮಾಡಿ ತೋರಿಸಿದ್ದಾರೆ. ಕಾಲ ಕಾಲದ ಭಾಷೆಯ ಮಾರ್ಪಾಡುಗಳನ್ನು ಛಂದಸ್ಸಿನ ಬಗೆಬಗೆಯ ಕುಣಿತ, ಕನ್ನಡದ ನಾಡಿನ ಸೊಬಗು, ಹೃದಯ ಧರ್ಮಗಳು, ಮಹಾವ್ಯಕ್ತಿಗಳು, ಜೀವಗುರಿಗಳು, ಬೇರೆ ಬೇರೆ ಪ್ರಾಂತ್ಯ ಪ್ರೇಮಗಳು, ಒಂದು ಮಾತಿನಲ್ಲಿ ಹಿಂದಿನ ಮಹತ್ವದ ಸಂಸ್ಕಾರ ಮತ್ತು ಸಂಸ್ಕೃತಿ, ಇಂದಿನ ಧ್ಯೇಯ ಮತ್ತು ಯೋಜನೆಗಳು, ನಾಡ ನುಡಿಯ ಮಿಡಿತ ಕವಿಗಳಿಗೆ ತಿಳಿದಂತೆ ಹಾಡಿನ ಮೂಲಕ ಚಿತ್ರಿಸಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿಯ ಬಗ್ಗೆ ಮತ್ತು ಅಸ್ಮಿತೆಯ ಬಗ್ಗೆ ಅಭಿಮಾನ ಗೌರವ ಹೋರಾಟದ ಭಾವನೆಗಳನ್ನು ವ್ಯಕ್ತಪಡಿಸುವುದಾಗಿದೆ. ಇದು ಕನ್ನಡಿಗರಲ್ಲಿ ಏಕತೆ ಮೂಡಿಸಿ ಕನ್ನಡ ಚಳುವಳಿಗಳ ಪೂರ್ತಿಯನ್ನು ಜಾಗೃತಿಗೊಳಿಸುವುದಾಗಿದೆ. ಇಲ್ಲಿನ ಹಾಡುಗಳು ಕನ್ನಡಿಗರ ನಾಡು– ನುಡಿಯ ಕಾಪಾಡುವಲ್ಲಿ ಹೋರಾಟ ಮತ್ತು ಪ್ರೀತಿಯ ಪ್ರತೀಕವಾಗಿ, ಕನ್ನಡದ ಏಳಿಗೆಗಾಗಿ ನಾಯಕತ್ವ ನೀಡುವ ಪ್ರೇರಣೆಯಾಗಿದೆ. ಕನ್ನಡ ನಾಡಿನ ಕನ್ನಡಿಗರನ್ನು ಭಾಷೆ, ಸಂಸ್ಕೃತಿ, ಪರಂಪರೆಯ ಆಧಾರದ ಮೇಲೆ ಒಗ್ಗೂಡಿಸಿ ಐಕ್ಯತೆಯನ್ನು ಸಾಧಿಸುವುದು ಈ ಹಾಡುಗಳ ಮುಖ್ಯ ಸಂದೇಶ. ಕನ್ನಡಿಗರಲ್ಲಿ ತಮ್ಮ ಭಾಷೆಯ ಬಗ್ಗೆ ಅಭಿಮಾನ ಮೂಡಿಸಿ ಕನ್ನಡದ ಏಳಿಗೆಗಾಗಿ ಹೋರಾಡುವ ಸ್ಫೂರ್ತಿಯನ್ನು ತುಂಬುವ ಜಾತಿ, ಧರ್ಮ, ಪಕ್ಷಾತೀತವಾದ ಲೇಖನವಾಗಿದೆ.

ಕನ್ನಡ ನಾಡನ್ನು ಕುರಿತಂತೆ ಭಾಷೆಯನ್ನು ಹಾಗೂ ಕನ್ನಡಿಗರ ಗುಣ ಸ್ವಭಾವವನ್ನು ಕುರಿತಂತೆ ಶ್ರೀವಿಜಯನು ಬರೆದಿರುವ ಮಾತುಗಳು ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಕುತೂಹಲಕಾರಿಯಾಗಿವೆ. ಕನ್ನಡ ನಾಡಿನ ವ್ಯಾಪ್ತಿಯನ್ನು ಕುರಿತಂತೆ ನಿರ್ದಿಷ್ಟ ಪ್ರದೇಶಗಳ ನಡುವೆ ಇರುವ ಕನ್ನಡದ ತಿರುಳನ್ನು ಕುರಿತಂತೆ

ಕನ್ನಡಿಗರ ಚತುರತೆಯನ್ನು ಕುರಿತು ಹೇಳಿರುವ ಈ ಕೆಳಗಿನ ಮಾತುಗಳು ಸಾಹಿತ್ಯ ಲೋಕದಲ್ಲೇ ಅಪೂರ್ವವೆನಿಸಿಕೊಂಡಿವೆ.

"ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಷದ ವಿಷಯ ವಿಶೇಷಂ"[1]

ಕಾವೇರಿಯಿಂದ ಆ ಗೋದಾವರಿಯವರೆಗೂ ಇದ್ದ ನಾಡದು. ಆ ಕನ್ನಡ ನಾಡಿನಲ್ಲಿ ಸೇರಿದ ಜನಪದ(ಜನರ ವಾಸಪ್ರದೇಶ) ಭೂಮಂಡಲದಲ್ಲಿರುವ ಸುಂದರವಾದ ಪ್ರದೇಶಗಳಲ್ಲಿ ಒಂದು. ಶ್ರೀವಿಜಯನ ಕಾಲದಲ್ಲಿ ಕನ್ನಡ ನಾಡು ಕಾವೇರಿ ನದಿಯಿಂದ ಗೋದಾವರಿ ನದಿಯ ತನಕ ಹರಡಿತ್ತು. ಇಂದಿನ ವಾಸ್ತವದಲ್ಲಿ ಗೋದಾವರಿ ನದಿ ಹರಿಯುವ ಬಹುತೇಕ ಪ್ರದೇಶಗಳಾದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ, ಮರಾಠಿ ಮತ್ತು ತೆಲುಗು ಭಾಷಾ ಪ್ರದೇಶಗಳಾಗಿವೆ. 9ನೇ ಶತಮಾನದಲ್ಲಿ ಆ ಪ್ರದೇಶಗಳಲ್ಲಿ ಕನ್ನಡದ ಪ್ರಭಾವ ಇದ್ದರೂ ಅದು ಸಂಪೂರ್ಣವಾಗಿ ಕನ್ನಡಿಗರು ವಾಸಿಸುವ ಪ್ರದೇಶವಾಗಿರಲಿಲ್ಲ; ಬದಲಿಗೆ ರಾಜಕೀಯ ಹಿಡಿತದಲ್ಲಿತ್ತು ಅಷ್ಟೇ. ಈ ರೀತಿ ವರ್ಣಿಸಲಾದ ಆ ಶ್ರೇಷ್ಠ ಕನ್ನಡಿದ ಜನರು ವಾಸಿಸುವ ಭೂಮಂಡಲವು ಒಂದು ವಿಶೇಷವಾದ ಸ್ಪಷ್ಟವಾದ ಸಂಗತಿಯಾಗಿದೆ.

"ಅದರೊಳಗಂ ಕಿಸುವೊಳಲಾ
ವಿದಿತ ಮಹಾಕೋಪಣನಗರದಾ ಪುಲಿಗೆರಿಯಾ
ಸದಬಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್"[2]

ಅದರಲ್ಲಿ (ಆ ಕನ್ನಡ ನಾಡಿನಲ್ಲಿ) ಕಿಸುವೊಳಲ, ಪ್ರಸಿದ್ಧ ಮಹಾಕೊಪಣ ನಗರದ, ಪುಲಿಗೆರೆಯ ಸ್ತುತ್ಯವಾದ ಒಂಕುಂದದ ನಡುವೆ ಇರುವ ನಾಡೆ ತಿರುಳುಗನ್ನಡ ನಾಡಾಗಿದೆ. ಕನ್ನಡ ಮಾತಾಡುವ ಪ್ರದೇಶಗಳಲ್ಲಿ ತಿರುಳುಗನ್ನಡ ನಾಡನ್ನು ಗುರುತಿಸುವ ಪ್ರಯತ್ನ ಒಂಬತ್ತನೇ ಶತಮಾನದಲ್ಲೇ ನಡೆದಿರುವುದು

ಒಂದು ವಿಶೇಷವೇ ಸರಿ. ಕಿಸುವೊಳಲ್ ಈಗ ಪಟ್ಟದಕಲ್ಲು, ಕೊಪಣ ಈಗಿನ ಕೊಪ್ಪಳ, ಪುಲಿಗೆರೆ ಈಗಿನ ಲಕ್ಷ್ಮೇಶ್ವರ, ಒಂಕುಂದ ಈಗಿನ ಒಕ್ಕುಂದ ಆಗಿದೆ. ಕವಿರಾಜಮಾರ್ಗಕಾರನು ಕಿಸುವೊಳಲ್, ಕೊಪ್ಪಳ, ಪುಲಿಗೆರೆ ಮತ್ತು ಒಂಕುಂದ ಎಂಬ ಪ್ರಮುಖ ಸ್ಥಳಗಳನ್ನು ಉಲ್ಲೇಖಿಸಿ ಈ ನಾಲ್ಕು ಸ್ಥಳಗಳ ನಡುವಿನ ಭೂಭಾಗದಲ್ಲಿ ಬಳಕೆಯಲ್ಲಿರುವ ಭಾಷೆಯೇ ಅತ್ಯಂತ ಶ್ರೇಷ್ಠ ಮತ್ತು ಶುದ್ಧವಾದ ಕನ್ನಡ ಭಾಷೆಯ ತಿರುಳು ಎಂದು ಬಣ್ಣಿಸಿದ್ದಾನೆ. ಈ ಪದ್ಯವು ಕವಿರಾಜಮಾರ್ಗಕಾರನಿಗೆ ತನ್ನ ನಾಡು–ನುಡಿಯ ಬಗ್ಗೆ ಇದ್ದ ಅಪಾರ ಅಭಿಮಾನ ಮತ್ತು ಹೆಮ್ಮೆಯನ್ನು ಪ್ರತಿಬಿಂಬಿಸುತ್ತದೆ.

ಪಂಪ ಮಹಾಕವಿಯು ತನ್ನ ಕಾವ್ಯಗಳಲ್ಲಿ ಬಳಸಿರುವ ಕನ್ನಡ ನಾಡಿನ ಪ್ರಕೃತಿ ಸೌಂದರ್ಯ ಹಾಗೂ ಈ ಕನ್ನಡ ನಾಡಿನ ಜನರ ಗುಣ ಸ್ವಭಾವವನ್ನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಈ ಕೆಳಗಿನ ಪದ್ಯದಂತೆ ವಿವರಿಸಿದ್ದಾನೆ.

"ಜಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಂಪುಗ
ಳಾಗರವಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೋ ತೀರ್ದಪುದೆ ತೀರದೊಡಂ ಮರಿದುಂ
ಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೋಳ್
ಬನವಾಸಿ ದೇಶದೊಳ್"[3]

ಕನ್ನಡ ನಾಡಿನ ಬನವಾಸಿ ದೇಶದಲ್ಲಿ ತ್ಯಾಗ, ಭೋಗ, ವಿದ್ಯೆ, ಸಂಗೀತಗೋಷ್ಠಿಗಳ ಸಂತೋಷಗಳ ಸೌಖ್ಯಕ್ಕೆ ಅರ್ಹರಾಗಿರುವ ಮನುಷ್ಯರೇ ನಿಜವಾದ ಮನುಷ್ಯರು. ಅಂತಹ ಅದೃಷ್ಟಶಾಲಿಗಳಾದ ಮನುಷ್ಯರಾಗಿ ಹುಟ್ಟಲು ಏನಾದರೂ ತಾನೆ ಸಾಧ್ಯವೇ? ಹಾಗೆನಾದರೂ ಅದು ನನಗೆ ಸಾಧ್ಯವಾಗುವುದಾದರೆ ಆ ಬನವಾಸಿಯ ನಂದನವನಗಳಲ್ಲಿ ಮರಿದುಂಬಿಯಾಗಿ, ಅದು ಸಾಧ್ಯವಾಗದಿದ್ದರೆ ಕೋಗಿಲೆಯಾಗಿ ಹುಟ್ಟು ಬಯಸುವುದು ನನ್ನ ಮನವು, ಆ ಬನವಾಸಿ ದೇಶದಲ್ಲಿ ಎಂದು ಪಂಪ ಮಹಾಕವಿಯು ಕನ್ನಡ ನಾಡಿನ ಪ್ರಕೃತಿ ಜನರ ಗುಣ ಸ್ವಭಾವವನ್ನು ಸೂಕ್ಷ್ಮವಾಗಿ ಗಮನಿಸಿದ್ದಾನೆ.

ಆಂಡಯ್ಯ ಕವಿಯು ಕನ್ನಡಕ್ಕೆ ಕೊಟ್ಟ ಮಹತ್ವದ ಕೊಡುಗೆ ಎಂದರೆ

ಭಕ್ತಿ ನೈತಿಕತೆ ಮತ್ತು ಜನಪರ ಭಾಷೆಯನ್ನು ಒಳಗೊಂಡ ಪ್ರಾಥಮಿಕ ಕನ್ನಡ ಸಾಹಿತ್ಯಕ್ಕೆ ಬುನಾದಿ ಹಾಕಿದ್ದಾನೆ. ತನ್ನ 'ಕಬ್ಬಿಗರ ಕಾವ್ಯ' ಕೃತಿಯು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಕೃತಿಯಾಗಿದೆ ಅಚ್ಚ ಕನ್ನಡದಲ್ಲಿ ಕಾವ್ಯ ಬರೆದಿದ್ದಾನೆ.

"ಪಲವುಂ ನಾಲಿಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರಿನಾ
ನೆಲವಂ ಮುತ್ತಿನ ಮಾನಿಸರ್ ಪೊಗಳಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕಾಲೂರ್ಗಳಿಂ ಕಯ್ಗಳಿಂ"[4]

ಈ ಭೂಮಿಯನ್ನು ಹೊತ್ತುಕೊಂಡಿರುವವನು ಆ ಪುರಾಣದ ಪ್ರಕಾರ ಆದಿಶೇಷನೆಂದು ನಂಬಲಾಗಿದೆ. ಹದಿನಾಲ್ಕು ನಾಲಿಗೆ ಇರುವಂತ ಸ್ವತಃ ಆದಿಶೇಷನಿಗೂ ಕೂಡ ಈ ಕನ್ನಡ ನಾಡಿನ ಸೌಂದರ್ಯವನ್ನು ಹೊಗಳುವುದಕ್ಕೆ ಅಸಾಧ್ಯವಾಗಿರುವಂಥದ್ದು. ಹೀಗೆ ಕನ್ನಡ ನಾಡು ಅಂದಿನ ಕಾಲಕ್ಕೆ ಸುಂದರವಾಗಿತ್ತು. ಇನ್ನು ಈ ಸಾಮಾನ್ಯ ಮನುಷ್ಯರಿಂದ ಈ ನಾಡನ್ನು ಹೊಗಳಲು ಸಾಧ್ಯವೇ? ನಾನು ಕೂಡ ಒಬ್ಬ ಸಾಮಾನ್ಯ ಮನುಷ್ಯ, ನಾನು ಈ ನಾಡಿನ ಚೆಲುವನ್ನು ಹೊಗಳುವುದರಲ್ಲಿ ಸೋತಿದ್ದೇನೆ. ತಿಳಿದ ಮಟ್ಟಿಗೆ ಹೊಗಳಲು ಪ್ರಯತ್ನಪಡುತ್ತಿರುವೆ. ಕನ್ನಡ ನಾಡು ಎಂಬುದು ನಿಸರ್ಗ ಸೌಂದರ್ಯದಿಂದ ಸುಂದರವಾಗಿದೆ, ಚೆಲುವಿನಿಂದ ಕೂಡಿದೆ. ಆವರಿಸಿರುವ ಮಾರುತಗಳಿಂದ, ಹೂವುಗಳಿಂದ, ಕೊಳಗಳಿಂದ, ಸರೋವರಗಳಿಂದ, ಕೆರೆಗಳಿಂದ, ಹಳ್ಳಿಗಳಿಂದ, ಹೊಲ–ಗದ್ದೆಗಳಿಂದ ಈ ಕನ್ನಡ ನಾಡು ಎಂಬುದು ಅತ್ಯಂತ ಚೆಲುವಿನಿಂದ ಕೂಡಿದೆ. ಇಂತಹ ಚೆಲುವಿನಿಂದ ಕೂಡಿದ ಈ ನಾಡನ್ನು ಮನುಷ್ಯರು ಹೊಗಳುವುದಕ್ಕೆ ಅಸಾಧ್ಯ.

ವಿರೂಪಾಕ್ಷ ಕವಿಯು 15ನೇ ಶತಮಾನದಲ್ಲಿಯೇ ತನ್ನ 'ಚನ್ನಬಸವ ಪುರಾಣ'ದಲ್ಲಿ ಕನ್ನಡ ನಾಡಿನ ಭೌಗೋಳಿಕ ಸಿರಿ ಸಂಪತ್ತಿನ ಬಗ್ಗೆ ಕೊಂಡಾಡಿದ್ದಾನೆ. ಕನ್ನಡ ನಾಡಿನಲ್ಲಿರುವ ವನ, ಕೊಳ, ಕೆರೆ, ತೊರೆ, ಧಾನ್ಯಗಳು, ಪ್ರಾಣಿ ಸಂಪತ್ತು, ಜಲಸಂಪತ್ತು, ಪಕ್ಷಿ ಸಮೂಹ ಹೀಗೆ ಹತ್ತು ಹಲವಾರನ್ನು ಗುರುತಿಸಿ ಈ ಕೆಳಗಿನ ಕವಿತೆಯನ್ನು ಕಟ್ಟಿ ಹಾಡಿದ್ದಾನೆ.

"ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ
ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ
ದಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾದೇಶಮೊಪ್ಪಿರ್ದುದು"[5]

ಕವಿಯ ಮಾತಿನ ಧೋರಣೆಯನ್ನು ಗಮನಿಸಿದರೆ ಕನ್ನಡ ನಾಡು ಕಾಲಕಾಲಕ್ಕೆ ಸರಿಯಾಗಿ ಮಳೆ–ಬೆಳೆಯನ್ನು ಪಡೆಯುತ್ತಾ ಸಮೃದ್ಧವಾಗಿತ್ತು ಎಂಬುದನ್ನು ತೋರ್ಪಡಿಸುತ್ತದೆ. ಆ ವರುಣನ ಕೃಪೆಯಿಂದ ಕನ್ನಡ ನಾಡು ಅಚ್ಚ–ಹಸಿರಿನಿಂದ ತನ್ನ ಮೈಸಿರಿಯನ್ನು ಕಂಗೊಳಿಸುವುದರ ಜೊತೆಗೆ ಅಲ್ಲಿಗಲ್ಲಿಗೆ ಕೊಳಗಳು ತುಂಬಿ ಸೂಸುವಂತೆ ಭಾಸವಾಗುತ್ತಿವೆ. ಅನಂತಕಾಲಗಳಿಂದ ನಾಡಿನ ಕೆರೆಕಟ್ಟೆಗಳು ತುಂಬಿಕೊಂಡು ಬಂಗಾರದಂತ ತೆರೆಗಳನ್ನು ನೋಡುಗರ ಕಣ್ಣಿಗೆ ಶೋಭಿಸುತ್ತಿವೆ. ಕನ್ನಡ ನಾಡು ಭೂಲೋಕದ ಸ್ವರ್ಗವೆಂಬಂತೆ ಗುಡ್ಡ ಬೆಟ್ಟಗಳಿಂದ ಆವೃತವಾಗಿದೆ. ಈ ಸೌಂದರ್ಯದ ಪ್ರಕೃತಿ ಮಡಿಲಲ್ಲಿ ವಿವಿಧ ಪ್ರಾಣಿಗಳಲ್ಲಿ ಆನೆಗಳ ಸಂಖ್ಯೆ ಬಹುಪಾಲುಗಳಿಂದ ಕೂಡಿರುವುದರ ಬಗ್ಗೆ ತಿಳಿಯುತ್ತದೆ. ವನಸಿರಿಗೆ ಇನ್ನಷ್ಟು ಮೆರಗು ಬರುವಂತೆ ವಿವಿಧ ಪಕ್ಷಿಗಳ ಚಿಲಿಪಿಲಿ ಕಲರವದ ಜೊತೆಗೆ ಗಿಳಿ, ಕೋಗಿಲೆಗಳು ತಮ್ಮ ಸುಮಧುರ ಕಂಠದೊಂದಿಗೆ ನಾಡಿನ ಚೆಲುವನ್ನು ಇಮ್ಮಡಿಗೊಳಿಸಿದ್ದವು. ನಾಡಿನ ಅಲ್ಲಲ್ಲಿ ಆಶ್ರಯ ತಾಣಗಳಿಂದ ವಿವಿಧ ನದಿಗಳಿಂದ ಕೂಡಿದ ಚೆಲುವು ಕನ್ನಡದಾಗಿದೆ.

ಕನ್ನಡದ ಸುಪ್ರಸಿದ್ಧ ತ್ರಿಪದಿ ಕವಿ ಸರ್ವಜ್ಞನು 16ನೇ ಶತಮಾನದ ಪೂರ್ವಾರ್ಧದಲ್ಲೆ ಕನ್ನಡ ನಾಡಿನ ಕೆಲವು ಪ್ರದೇಶಗಳು ಉಟೋಪಚಾರಗಳಿಗೆ ಹಿತವಾಗಿರುವುದರ ಬಗ್ಗೆ ತನ್ನ ವಚನಗಳಲ್ಲಿ ಹೀಗೆ ಕಟ್ಟಿಕೊಟ್ಟಿದ್ದಾನೆ.

"ಜೋಳದಾ ಬೋನಕ್ಕೆ ಬೇಳೆಯ ತೊಗೆಯಾಗಿ
ಕಾಳೆಮ್ಮೆ ಕರೆದ ಹೈನಾಗಿ – ಬೆಳವಲದ
ಮೇಳ ನೋಡೆಂದ ಸರ್ವಜ್ಞ"

"ಕಿಚ್ಚುಂಟು ಕೆಸರುಂಟು ಬೆಚ್ಚನಾ ಮನೆಯುಂಟು
ಇಚ್ಚೆಗೆ ಬರುವ ಸತಿಯುಂಟು – ಮಲೆನಾಡ
ಮೆಚ್ಚು ನೋಡೆಂದ ಸರ್ವಜ್ಞ"[6]

'ಬೆಳವಲ' ಎಂಬುದು ಒಂದು ಐತಿಹಾಸಿಕ ನಾಡಿನ ಹೆಸರನ್ನು ಸೂಚಿಸುತ್ತದೆ. ಉತ್ತರ ಕರ್ನಾಟಕದ ವಿಶಾಲವಾದ ಪ್ರದೇಶವನ್ನು ಸೂಚಿಸುವ ಹೆಸರು ಇದು. ಇಂದಿನ ಗದಗ ಮತ್ತು ಧಾರವಾಡ ಜಿಲ್ಲೆಗಳ ಸುತ್ತಮುತ್ತಲಿನ ದಖ್ಖನ್ ಪ್ರಸ್ಥಭೂಮಿಯ ಫಲವತ್ತಾದ ಪ್ರದೇಶವಾಗಿದೆ. ಕನ್ನಡದ ಪದ 'ಬೆಳವಲ' ಎಂದರೆ ಸಮೃದ್ಧವಾಗಿ ಬೆಳೆಯುವುದು ಅಥವಾ ಫಲವತ್ತಾದ ಭೂಮಿ ಎಂದರ್ಥ. ಈ ಪ್ರದೇಶವು ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಲುಕ್ಯರಂತಹ ರಾಜವಂಶಗಳ ಕಾಲದಲ್ಲಿ 'ಬೆಳ್ವೊಲ–300' ಎಂದು ಉಲ್ಲೇಖಿಸಲಾಗಿದೆ. ಅಂದರೆ ಇದು 300 ಹಳ್ಳಿಗಳನ್ನು ಒಳಗೊಂಡ ಪ್ರದೇಶವಾಗಿತ್ತು. ಈ ಪ್ರದೇಶದಲ್ಲಿ ಆಹಾರ ಧಾನ್ಯಗಳಾದ ಜೋಳದ ಬೆಳೆಗಳನ್ನು ಹೆಚ್ಚು ಉತ್ಪಾದನೆ ಮಾಡುವ ಪ್ರದೇಶವಾಗಿದೆ. ಈ ಕೃಷಿಯ ಜೊತೆಗೆ ಪಶುಸಂಗೋಪನೆ ಕಸಬು ನಡೆದುಕೊಂಡು ಬಂದಿರುವುದುಂಟು. ಜೋಳದ ರೊಟ್ಟಿ, ಜೋಳದ ನುಚ್ಚು, ಜೋಳದ ಸಂಗಟಿ, ಜೋಳದ ಕಿಚಡಿ, ಜೋಳದ ಮುದ್ದೆ ಇಂತಹ ಜೋಳದ ಆಹಾರದ ಉತ್ಪನ್ನದ ಜೊತೆಗೆ ತೊಗರಿ ಬೇಳೆಯ ಸಾಂಬಾರು, ಎಮ್ಮೆಯ ಹೈನೋತ್ಪನ್ನಗಳಾದ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಬಳಸಿಕೊಂಡು ಆಹಾರವನ್ನು ಸೇವಿಸಿದ ಜನರು ದೃಢಕಾಯ ಚೆಲುವುಳ್ಳವರಾಗಿರುವರು ಎಂದು ವರ್ಣಿಸಿದ್ದಾನೆ.

'ಮಲೆನಾಡು' ಎಂಬುದು ಕರ್ನಾಟಕದ ಒಂದು ವಿಶಿಷ್ಟವಾದ ಭೌಗೋಳಿಕ ಮತ್ತು ಸಾಂಸ್ಕೃತಿಕ ಪ್ರದೇಶ. ಇದು ಬೆಟ್ಟ–ಗುಡ್ಡಗಳಿಂದ ಕೂಡಿದ ಪ್ರದೇಶ ಇಲ್ಲಿ ವಿಪರೀತ ಮಳೆಯಾಗುತ್ತದೆ. ಹವಾಮಾನವು ತಂಪಾದ ತೇವಾಂಶದಿಂದ ಕೂಡಿರುತ್ತದೆ. ಮಳೆಗಾಲದಲ್ಲಿ ಸದಾ ಜಿನುಗುತ್ತಿರುವ ಮಳೆಯಿಂದ ನೆಲವೆಲ್ಲ ಕೆಸರಿನಿಂದ ಆವೃತವಾಗಿರುತ್ತದೆ. ಅಲ್ಲಿಯ ಪರಿಸರಕ್ಕೆ ಹೊಂದುವಂತೆ ವಿಶಾಲವಾದ ಮನೆಗಳನ್ನು ನಿರ್ಮಿಸಿಕೊಂಡಿರುವುದು ತೋರುತ್ತದೆ. ಮನೆಯೊಡೆಯ ಹಾಗೂ ಮಕ್ಕಳು, ಬಂಧು–ಬಳಗದೊಂದಿಗೆ ಅವರೆಲ್ಲರ ಬೇಕು–ಬೇಡಿಕೆಗಳನ್ನು

ಅರಿತುಕೊಳ್ಳುವ ಸತಿ ಇರುವುದರಿಂದ ಮಲೆನಾಡು ನೋಡುವುದಕ್ಕೆ ಮನಕ್ಕೆ ಮೆಚ್ಚುಗೆಯಾಗುವುದಕ್ಕೆ ಅಭ್ಯಂತರವಿಲ್ಲವೆಂಬುದು ಸರ್ವಜ್ಞನ ಮನೋಧೋರಣೆಯಾಗಿದೆ.

12ನೇ ಶತಮಾನದಲ್ಲಿ ಕನ್ನಡದ ಪ್ರಮುಖ ಪ್ರಾಚೀನ ಕವಿಗಳಲ್ಲಿ ಒಬ್ಬರಾದ ನಯಸೇನ. ಆತನು ತನ್ನ 'ಧರ್ಮಾಮೃತ' ಕಾವ್ಯದ ಮೂಲಕ ಪ್ರಸಿದ್ಧನಾಗಿದ್ದಾನೆ. ನಯಸೇನ ಸುಲಭ ಶೈಲಿಯ. ಸರಳ ರಚನೆಯನ್ನು ಒಲಿದವನು. ಸಂಸ್ಕೃತದ ಬಗ್ಗೆ ವಿರೋಧವಿಲ್ಲದಿದ್ದರೂ ಅವನು ಕನ್ನಡದ ಪರ. ನಾಲ್ಕು ಕನ್ನಡ ಪದಗಳ ಜೊತೆಗೆ ಹತ್ತು ಸಂಸ್ಕೃತ ಪದಗಳನ್ನು ಸೇರಿಸಿ ಪಾಂಡಿತ್ಯ ಮೆರೆಯುವ ಕವಿಗಳನ್ನು ಅವನು ಗೇಲಿ ಮಾಡುತ್ತಾನೆ. ಶುದ್ಧವಾಗಿ ಕನ್ನಡವನ್ನೇ ಬಳಸಬೇಕೆಂಬ ಬಗ್ಗೆ ಇವನಿಗಿರುವ ಕಳಕಳಿ ಮೆಚ್ಚುವಂತದ್ದು.

"ಸಕ್ಕದಂ ಪೇಳ್ವೊಡೆ ನೆರೆ ಸಕ್ಕದಯಂ ಪೇಳ್ಗೆ
ಶುದ್ಧ ಕನ್ನಡದೊಳ್ ತಂದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮ ತೈಲಮುಮಂ?"[7]

ಸಂಸ್ಕೃತವನ್ನು ಬಳಸಬೇಕೆಂದರೆ ಅದರಲ್ಲೇ ಬರೆಯಲಿ ಆದರೆ ಶುದ್ಧ ಕನ್ನಡದಲ್ಲಿ ಸಂಸ್ಕೃತವನ್ನು ತಂದು ತುರುಕುವುದು ಯಾಕೆ? ತುಪ್ಪ ಎಣ್ಣೆ ಎರಡನ್ನು ಬೆರೆಸುವುದು ಸರಿಯೇ ಎಂದು ಕವಿ ಕೇಳುತ್ತಾನೆ. ಈ ರೀತಿ ಒಂದು ಭಾಷೆಯಲ್ಲಿ ಇನ್ನಿತರ ಭಾಷೆಗಳ ಪದಗಳನ್ನು ಬಳಸಿಕೊಂಡು ಬರೆದರೆ ಒಂದು ಭಾಷೆ ತನ್ನತನವನ್ನು ಕಳೆದುಕೊಳ್ಳುತ್ತದೆ. ಕನ್ನಡ ಭಾಷೆಯನ್ನು ತುಪ್ಪಕ್ಕೆ ಹೋಲಿಸಿ ಸಂಸ್ಕೃತವನ್ನು ಎಣ್ಣೆಗೆ ಹೋಲಿಸಿ, ಮಿಶ್ರತೆಯನ್ನು ಕಡೆಗಣಿಸಿದ್ದಾನೆ.

ಆಂಡಯ್ಯ ಕವಿಯು ಸಂಸ್ಕೃತ ಪದಗಳ ನೆರವಿಲ್ಲದೆ ಅಚ್ಚ ಕನ್ನಡದಲ್ಲಿಯೇ ಕಾವ್ಯ ರಚಿಸುವ ಮೂಲಕ ಕನ್ನಡ ಭಾಷೆಯ ಅನನ್ಯತೆಯನ್ನು ಎತ್ತಿ ಹಿಡಿದನು. ಆತನಿಗೆ ಕನ್ನಡದ ಮೇಲೆ ಅಪಾರ ಪ್ರೀತಿಯನ್ನು ಬಿಂಬಿಸುವ ಪ್ರಸಿದ್ಧ ಪದ್ಯಗಳು ಮತ್ತು ಸಾಲುಗಳು ಆತನ ಮಹತ್ವದ ಕೃತಿಯಾದ ಕಬ್ಬಿಗರ ಕಾವದಲ್ಲಿದೆ. ಆಂಡಯ್ಯ ಕವಿಯು ತನ್ನ ಕಾವ್ಯದ ಆರಂಭದಲ್ಲಿಯೇ ಸಂಸ್ಕೃತ ಬೆರೆಸದ ಶುದ್ಧ ಕನ್ನಡದಲ್ಲಿ ಕಾವ್ಯ ರಚಿಸುವ ತನ್ನ ಪಣದ ಬಗ್ಗೆ ಹೀಗೆ ಹೇಳಿಕೊಂಡಿದ್ದಾನೆ.

"ಸೊಗಯಿಪ ಸಕ್ಕದಂ ಬೆರೆಸದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಳಲಾರನಿತುಂ ಸಲೆ ಮುನ್ನಿನ ಪೆಂಪನಾಳ್ದಕ
ಬ್ಬಿಗಂದು ಮಾತನಾಡಿದ ಮೊಲಂದವನಾಳ್ದಲೆ ಬಲ್ಪು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾಕೊಳಂ
ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ
ನ್ನೊಂದಚ್ಚ ಕನ್ನಡಂ ಬಿಗಿ
ವೊಂದಿರೆ ಕಬ್ಬಿಗಳ ಕಾವನೊಲವಿಂದೊರೆವೆಂ"[8]

ಸೊಗಸಾದ ಸಂಸ್ಕೃತವನ್ನು ಬೆರಕೆ ಮಾಡದೆಯೇ ಕನ್ನಡದಲ್ಲಿ ಕಾವ್ಯವನ್ನು ಮನೋಹರವಾಗಿ ಹೇಳುವುದಕ್ಕೆ ಹಿಂದಿನ ದೊಡ್ಡ ಕವಿಗಳಿಂದ ಸಾಧ್ಯವಾಗಲಿಲ್ಲ. ಆದರೆ ಜನಸಾಮಾನ್ಯರು ಮಾತನಾಡುವಂತೆಯೇ ಸೊಗಸಾಗಿ, ಪರಿಣಾಮಕಾರಿಯಾಗಿ ಕಾವ್ಯ ಹೇಳುವ ಸಾಮರ್ಥ್ಯ ಸಂಪೂರ್ಣವಾಗಿ ನನ್ನಲ್ಲಿಯೇ ದೊರೆತಿದೆ ಹೊರತು ಬೇರೆ ಯಾರಲ್ಲೂ ಇಲ್ಲ ಎಂದು ಅವರವರಿಗೆ ಇಷ್ಟವಾದ ರೀತಿಯಲ್ಲಿ ಅವರ ಆಸೆಗೆ ಸರಳವಾಗಿ ಅಚ್ಚ ಕನ್ನಡದಿಂದ ಕೂಡಿದ ಈ ಕಬ್ಬಿಗರ ಕಾವ್ಯವನ್ನು ಒಲವಿನಿಂದ ತೋರುವೆ ಎಂದು ಕವಿ ಕನ್ನಡತನವನ್ನು ತನ್ನ ಕೃತಿಯಿಂದ ಮೆರೆದಿದ್ದಾನೆ. ಅಚ್ಚಗನ್ನಡದ ಬೊಮ್ಮನೆಂದೇ ಖ್ಯಾತಿಯಾದ ಆಂಡಯ್ಯನ ಇನ್ನೊಂದು ಪ್ರಸಿದ್ಧ ನುಡಿಯಾದ–

"ಕನ್ನಡದೊಳ್ವಿನ ನುಡಿಯಂ
ಮುನ್ನಿನದರೊಳೆ ನೋಡಿ
ತಿಳಿದುಕೊಳ್ವುದು ಚದುರಂ"9

ಕನ್ನಡ ನಿಜವಾದ ಸೊಗಸು ಮತ್ತು ಅಂದವನ್ನು ತಿಳಿದುಕೊಳ್ಳಬೇಕಾದರೆ ಸಂಸ್ಕೃತದ ನೆರವಿಲ್ಲದೆ ಹಿಂದಿನ ಶುದ್ಧ ಕನ್ನಡದ ನುಡಿಗಟ್ಟುಗಳಲ್ಲಿಯೇ ನೋಡಿ ತಿಳಿದುಕೊಳ್ಳಬೇಕು ಎಂದು ಈ ಪದ್ಯದ ತಾತ್ಪರ್ಯ. ಈ ಪದ್ಯಗಳ ಮೂಲಕ ಆಂಡೈಯನ್ನು ಸಂಸ್ಕೃತದ ಹೇರಿಕೆಯನ್ನು ಪ್ರಶ್ನಿಸಿ, ದೇಸಿ ಪದಗಳು ಮತ್ತು ಅಚ್ಚ ಕನ್ನಡದ ನುಡಿಗಟ್ಟುಗಳ ಶಕ್ತಿಯನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿದನು.

ಆತನ ಕೃತಿಯಾದ 'ಕಬ್ಬಿಗರಕಾವ'(ಕವಿಗಳ ರಕ್ಷಕ) ಎಂಬ ಹೆಸರೇ ಸಂಸ್ಕೃತದ ನೆರವಿಲ್ಲದೆ ಕನ್ನಡ ಕವಿಗಳನ್ನು ತಾನು ಕಾಪಾಡಿದ ಹೆಗ್ಗಳಿಕೆಯನ್ನು ಸಾರುತ್ತದೆ. ಕನ್ನಡಿಗರಿಗೆ 'ಹೊಸಗನ್ನಡದ ಅರುಣೋದಯ ಕವಿ' ಎಂದೇ ಪ್ರಸಿದ್ಧರಾದ ನಂದಳಿಕೆ ಲಕ್ಷ್ಮೀನಾರಾಯಣಯ(ಮುದ್ದಣ) ಇವರು ಹಳಗನ್ನಡ ಮತ್ತು ಹೊಸಗನ್ನಡದ ನಡುವಿನ ಸೇತುವೆಯಂತಿದ್ದವರು. ಸಂಸ್ಕೃತ ಭೂಯಿಷ್ಟವಾದ ಪದ್ಯ ಶೈಲಿಯನ್ನು ಬಿಟ್ಟು ಸರಳವಾದ, ಜನಸಾಮಾನ್ಯರಿಗೆ ಅರ್ಥವಾಗುವಂತೆ ಗದ್ಯಶೈಲಿಗೆ ಆದ್ಯತೆ ನೀಡಿದರು. ಇವರ ಪ್ರಸಿದ್ಧವಾದ ಕೃತಿ 'ರಾಮಾಶ್ವಮೇಧ'ದಲ್ಲಿ ಕನ್ನಡದ ಓದುಗನ ಅಭಿರುಚಿಯನ್ನು ಮತ್ತು ಭಾಷೆಯ ಮಹತ್ವವನ್ನು ಎತ್ತಿ ಹಿಡಿದಿದೆ.

ಮುದ್ದಣ: ಇದು ಸಕ್ಕದೊಂದು ಚೆಲ್ವು.

ಮನೋರಮೆ : ಲೇಸು, ಲೇಸು! ನೀರಳಿಯದ ಗಂಟಲೋಳ್ ಕಡುಬಂ ತುರುಕಿದಂತಾಯ್ತು; ಕನ್ನಡದ ಸೊಗಸನರಿಯಲಾರ್ತೆ ನಿಲ್ಲೆನಗೆ ಸಕ್ಕದದ ಸೊಗಸಂಪೇಳ್ವುದುಗಡ!

ಮುದ್ದಣ: ಅಪ್ಪೋಡಿನ್ನೆಂತೂ ಒರವೆಂ?

ಮನೋರಮೆ : ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರಳೊಂದೆ ಪೇಳ್ವುದು, ಕನ್ನಡಂ ಕತ್ತುರಿಯಲ್ತೆ!

ಮುದ್ದಣಂ : ಅಪ್ಪುದಪ್ಪುದು, ಆದೊಡಂ ಸಕ್ಕದಮೊಂದೆ ರನ್ನವಾಗಿಯಂ ಪೊನ್ನಿಬಿಗಿದಂತೆಸೆಗುಂ; ಅದರಿಂ ಕರ್ಮಣಿ ಸರದೊಳ್ ಚೆಂಬವಳಮಂ, ಎಡೆಯೊಡೆಯೊಳ್ ಸಕ್ಕದದ ನಲ್ನುಡಿ ಮೆರೆಯೇ, ತಿರುಳುಗನ್ನಡದೊಳೆ ಕತೆಯನುಸಿರ್ವೆಂ."[10]

ಮುದ್ದಣನು ರಾಮಾಶ್ವಮೇಧ ಕಥೆಯನ್ನು ಸಂಸ್ಕೃತ ಭಾಷೆಯಲ್ಲಿ ಹೇಳುವುದಕ್ಕೆ ಪ್ರಾರಂಭಿಸಿ ರಾಮಚಂದ್ರನ ಕಥೆಯನ್ನು ಸೊಗಸಾಗಿ ಹೇಳುವುದು ಸಂಸ್ಕೃತ ಎಂದು ಚೆಲುವು ಎಂದು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಮನೋರಮೆ ಇದೊಳ್ಳೆ ಕಥೆ. ನೀರೇ ಇಳಿಯದ ಗಂಟಲೊಳಗೆ ಕಡುಬು ತುರಿಕಿದಂತೆ ಆಯ್ತು. ಕನ್ನಡ ಸೊಗಸನ್ನೆ ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಲಾಗದ ನನಗೆ ಸಂಸ್ಕೃತದ

ಸೊಗಸನ್ನು ಹೇಳುವುದೇ? ಮುದ್ದಣ್ಣ: ಮತ್ತೆ ಹೇಗೆ ಹೇಳಲಿ? ಮನೋರಮೆ: ಕಥೆಯ ತಿರುಳನ್ನು ಕನ್ನಡದ ಸವಿನುಡಿಯಲ್ಲೇ ಹೇಳುವಂತವರಾಗಿ, ಕನ್ನಡವು ಕಸ್ತೂರಿಯಲ್ಲಿವೆ? ಮುದ್ದಣ: ಹೌದು, ಹೌದು. ಆದರೂ ಸಂಸ್ಕೃತವೂ ಇರಲಿ, ಮಣಿರತ್ನವನ್ನು ಚಿನ್ನದ ಸರದಲ್ಲಿ ಬಿಗಿದಂತೆ, ಕರಿಮಣಿ ಸರದಲ್ಲಿ ಕೆಂಪು ಹವಳ ಪೋಣಿಸಿದಂತೆ, ರಸಭರಿತವಾಗಿರಲು, ಲಕ್ಷಣ ಹೆಚ್ಚಿದ್ದರೆ ನಡು–ನೋಡುವೆ ಸಂಸ್ಕೃತದ ನುಡಿಗಳೂ ಮೆರೆಯಲಿ. ಆದರೆ ಕಥೆಯ ತಿರುಳನ್ನು ಕನ್ನಡದಲ್ಲೇ ವಿವರಿಸುವೆನು ಎಂಬಲ್ಲಿಗೆ ಮುದ್ದಣನು ಹೇಳಿದ ಶ್ರೀ ರಾಮೇಶ್ವರದಲ್ಲಿ ಕಥಾಮುಖವೆಂಬ ಕನ್ನಡದ ಸೊಗಸು ತೋರುತ್ತದೆ.

ಕ್ರಿಸ್ತಶಕ 1675ರಲ್ಲಿ ಇದ್ದ ಅಚ್ಚ ಕನ್ನಡದ ಕವಿ. ಕನ್ನಡದ ಕೆಚ್ಚೆದೆಯಿಂದ ಕನ್ನಡ ಭಾಷೆಯ ಅಭಿಮಾನವನ್ನು ಸಾರಿ ಹೇಳಿದ ಕವಿಗಳ ಸಾಲಿನಲ್ಲಿ ಮಹಾಲಿಂಗರಂಗ ಗಣ್ಯವಾದ ಸ್ಥಾನ ಪಡೆದಿದ್ದಾನೆ. ಈತನು ತನ್ನ 'ಅನುಭವಾಮೃತ' ಕೃತಿಯಲ್ಲಿ ಕನ್ನಡದ ಹಿರಿಮೆಯನ್ನು 17ನೇ ಶತಮಾನದಲ್ಲಿ ಸಾರಿದ ಮಹಾನ್ ಕವಿ. ಈ ಕೃತಿಯಲ್ಲಿ ಅವರು ಸಂಸ್ಕೃತ ಭಾಷೆಗಿಂತ ಕನ್ನಡ ಭಾಷೆಯ ಸರಳತೆ ಮತ್ತು ಶ್ರೇಷ್ಠತೆಯನ್ನು ಸಾರುವ ಪದ್ಯಗಳನ್ನು ಬರೆದಿದ್ದಾರೆ. ಕನ್ನಡ ಭಾಷೆಯ ಬಗ್ಗೆ ಅವರ ಪ್ರಸಿದ್ಧವಾದ ಪದ್ಯ.

"ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?"[11]

ಈ ಪದ್ಯದ ಮೂಲಕ ಕವಿ, ಸುಲಿದ ಬಾಳೆಹಣ್ಣು, ಸಿಪ್ಪೆ ತೆಗೆದ ಕಬ್ಬು ಮತ್ತು ಕಾಯಿಸಿ ತಣ್ಣಗಾದ ಹಾಲಿನಂತೆ ಕನ್ನಡ ಭಾಷೆಯು ಅತ್ಯಂತ ಸುಲಭ ಮತ್ತು ಸರಳವಾಗಿದೆ ಎಂದು ಹೇಳಿದ್ದಾರೆ. ಅಂತಹ ಸುಲಭವಾದ ಕನ್ನಡ ನುಡಿಯಲ್ಲಿಯೇ ತಮ್ಮ ಮೋಕ್ಷ ಅಥವಾ ಆಧ್ಯಾತ್ಮಿಕ ಜ್ಞಾನವನ್ನು ಅರಿಯಬಹುದೇ

ಹೊರತು ಕಠಿಣವಾದ ಸಂಸ್ಕೃತ ಭಾಷೆಯ ಅಗತ್ಯವೇನು ಎಂದು ಪ್ರಶ್ನಿಸಿದ್ದಾರೆ. ಅವರು ಅದ್ವೈತ ಸಿದ್ಧಾಂತವನ್ನು ಸಂಸ್ಕೃತದಿಂದ ಕನ್ನಡಕ್ಕೆ ತಂದು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾಗಿ ವಿವರಿಸಿದ್ದಾರೆ. ಅವರ ಪದ್ಯಗಳು ಕನ್ನಡ ಭಾಷಾಭಿಮಾನದ ಪ್ರತೀಕಗಳಾಗಿವೆ.

ಕನ್ನಡ ಸಾಹಿತ್ಯದ ನವೋದಯದ ಹರಿಕಾರರು 'ಕನ್ನಡದ ಕಣ್ವ' ಎಂದು ಪ್ರಸಿದ್ಧರಾಗಿರುವ ಬಿ ಎಂ ಶ್ರೀಕಂಠಯ್ಯನವರು. ಇವರು ಕನ್ನಡಿಗರನ್ನು ಕುರಿತು ತಮ್ಮ ಭಾಷೆಯ ಬಗ್ಗೆ ಕೀಳರಿಮೆ ಬಿಟ್ಟು ಕನ್ನಡ ಭಾಷೆ ಮತ್ತು ಸಾಹಿತ್ಯದ ಹಿರಿಮೆಯನ್ನು ಎತ್ತಿ ಹಿಡಿಯಬೇಕು ಎಂದು ಕರೆ ನೀಡಿದವರಾಗಿದ್ದಾರೆ. ಬಿಎಂಶ್ರೀ ಅವರು ಕೇವಲ ಸಾಹಿತಿಗಾರರಾಗಿರದೆ ಕನ್ನಡ ಭಾಷೆಗೆ ಒಂದು ಹೊಸ ದಿಕ್ಕು ತೋರಿಸಿದ ಮತ್ತು ಕನ್ನಡಿಗರಲ್ಲಿ ಭಾಷಾಭಿಮಾನದ ಕಿಚ್ಚು ಹಚ್ಚಿದ ಮಹಾನ್ ಚೇತನ. ಇಂಥವರು ಕನ್ನಡ ನುಡಿಯ ಕುರಿತು ತಮ್ಮ 'ಕಾಣಿಕೆ' ಕವಿತೆಯಲ್ಲಿ ಭಾವನೆಗಳನ್ನು ಅಭಿವ್ಯಕ್ತ ಪಡಿಸಿದ್ದಾರೆ.

"ಮೊದಲ ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು
ನಲ್ಲೆಯೊಲವ ತೆರೆದು ತಂದ
ಮಾತದಾವುದು"[12]

ವ್ಯವಹಾರಿಕ ದೃಷ್ಟಿಯಿಂದ ಇಂದು ಹಲವಾರು ಭಾಷೆಯನ್ನು ಬಳಸುತ್ತಿದ್ದೇವೆ. ಆದರೆ ನಮ್ಮ ಮಾತೃಭಾಷೆ ಮನೆ ಭಾಷೆ. ನಮ್ಮ ಹಸುಳಾವಸ್ಥೆಯಿಂದ ನಾವು ತೊದಲು ನುಡಿದಿದ್ದು ಕನ್ನಡ ಭಾಷೆ. ತಾಯಿ ತನ್ನ ಮಗುವಿಗೆ ಪ್ರೀತಿಯಿಂದ ಅನುಕರಿಸಿ ಕಲಿಸಿರುವುದು ಕನ್ನಡ ಭಾಷೆ. ಈ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು ಗೆಳೆಯರೊಂದಿಗೆ ಕೊಡುಕೊಳ್ಳುವಿಕೆಯು ಹಂಚಿಕೊಂಡಿರುವುದು ತಾಯಿ ಭಾಷೆ. ಅದೇ ಕನ್ನಡ ಭಾಷೆ. ಪ್ರೀತಿಯ ಒಲವ ತೋರಿದ್ದು ಕನ್ನಡ ಭಾಷೆ. ಕವಿ ಬಿ.ಎಂ.ಶ್ರೀ ಅವರು ಹೇಳುವಂತೆ ತಮ್ಮ ಇಡೀ

ಸರ್ವೋನ್ನತಿಗೆ ಕಾರಣವಾದದ್ದು ಕನ್ನಡ ಭಾಷೆ.

"ಸವಿಯ ಹಾಡ ಕಥೆಯ ಕಟ್ಟಿ
ಕಿವಿಯಲೆರೆದು ಕರುಳು ತಟ್ಟಿ
ನಮ್ಮ ಜನರು ನಮ್ಮ ನಾಡು
ಎನಿಸಿತಾವುದು
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು"[13]

ಕನ್ನಡ ನುಡಿ ನಮ್ಮ ಹೆಣ್ಣು
ನಮ್ಮ ತೋಟದಿನಿಯ ಹಣ್ಣು
ಬಳಿಕ ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು"[14]

ಕವಿಯವರು ಕನ್ನಡ ಭಾಷೆಯೊಂದಿಗೆ ಇಂಗ್ಲೀಷ್ ಭಾಷೆಯನ್ನು ವ್ಯವಹಾರಿಕ ಭಾಷೆಯಾಗಿ ಬಳಸಿಕೊಂಡಿದ್ದಾರೆ. ಅವರ ಮಾತಿಗೆ ಜೀವ ತುಂಬಿದ ಭಾಷೆ ಕನ್ನಡ. ಆದ್ದರಿಂದ ಈ ಕನ್ನಡದ ಭಾಷೆಯ ಅಸ್ಮಿತೆಯನ್ನು ಕಾಪಾಡಲು ಕನ್ನಡ ಭಾಷೆಯ ಋಣದ ಬಗ್ಗೆ ಹಾಡಿನ ರೂಪದಲ್ಲಿ ತಮ್ಮ ಭಾವನೆಗಳನ್ನು ತೋಡಿಕೊಂಡಿದ್ದಾರೆ. ನಮ್ಮ ಪೂರ್ವಜರು ತಮ್ಮ ತಮ್ಮ ಕರುಳ ಬಳ್ಳಿಯನ್ನು ಸಂತೈಸುವಾಗ ತಮ್ಮ ವಿವಿಧ ಭಾವನೆಗಳನ್ನು ಮಾತೃಭಾಷೆಯ ಮೂಲಕ ಸುಂದರ ಹಾಡುಗಳನ್ನು, ಕಥೆಗಳನ್ನು ಕಟ್ಟಿ ಬಾಲ್ಯದಲ್ಲಿಯೇ ಕನ್ನಡತನವನ್ನು ಗಟ್ಟಿಗೊಳಿಸಿದ್ದಾರೆ. ಈ ಕನ್ನಡ ಭಾಷೆಯಿಂದ ನಮ್ಮ ಜನ ನಮ್ಮ ನಾಡು ಎಂಬ ಪರಿಜ್ಞಾನವನ್ನು ಮೂಡಿಸಿದೆ. ಒಬ್ಬ ಸಾಮಾನ್ಯನು ತಾನು ಕವಿ ಎಂದು ಚಹರೆ ನಡೆದುಕೊಳ್ಳುವುದಕ್ಕೆ ಕಾರಣಿಭೂತವಾದದ್ದು ಮೂಲ ಈ ಮಾತೃಭಾಷೆ. ರಾಜ್ಯ, ರಾಷ್ಟ್ರ, ಅಂತರಾಷ್ಟ್ರದ ಪ್ರಶಸ್ತಿ ಹಿರಿಮೆ ಗರಿಮೆಗೆ ಅಡಿಪಾಯವೇ ಈ ಕನ್ನಡ ಭಾಷೆ. ಕನ್ನಡ ಭಾಷೆಯಿಂದ ಪ್ರಸಿದ್ಧತೆ ಪಡೆದುಕೊಂಡ ಶ್ರೀ ಅವರು ಕನ್ನಡ ಭಾಷೆಯನ್ನು ಸ್ತ್ರೀ ಗುಣಕ್ಕೆ ರೂಪಕತೆಯನ್ನು ನೀಡುತ್ತಾರೆ. ಸ್ತ್ರೀಗೆ ಇರುವಂತ ಸಹನಶೀಲತೆ, ಸಮೃದ್ಧತೆ,

ಲಕ್ಷಣ ಕನ್ನಡ ಭಾಷೆಗೆ ಇದೆ. ಯಾರೇ ಪರಭಾಷಿಕರು ಕನ್ನಡವನ್ನು ಕಳೆದುಕೊಳ್ಳುವುದಕ್ಕೆ ಆಕರ್ಷಿತವಾದ ಭಾಷೆಯಾಗಿದೆ. ಕನ್ನಡನಾಡನ್ನು ಒಂದು ತೋಟಕ್ಕೆ ಹೋಲಿಸಿದ್ದಾರೆ. ತೋಟದಲ್ಲಿ ವಿವಿಧ ಜಾತಿಯ ಫಲಪುಷ್ಪದ ಸಸ್ಯಗಳಿರುವವು ಹಾಗೆಯೇ ಇಲ್ಲಿ ಬಹುಜನ, ಬಹುಸಂಸ್ಕೃತಿ ಬಹುಭಾಷಿಕರನ್ನು ಈ ನಾಡು ಒಳಗೊಂಡಿದೆ. ಮೊದಲಿಗೆ ಈ ನಾಡಿನಲ್ಲಿ ವಾಸಿಸುವವರು ಮೊದಲು ಈ ನಾಡಿನ ಭಾಷೆಗೆ ಆದ್ಯತೆ ನಂತರ ಪರಭಾಷೆಗೆ ಗೌರವ ತೋರೋಣವೆಂಬುದನ್ನು ನಮ್ಮ ಭಾಷೆಯನ್ನು ಹೆಣ್ಣಿನ ಸಾಂಕೇತಿಕವಾಗಿ ಬಳಸಿದ್ದಾರೆ.

ತೀ.ನಂ. ಶ್ರೀಕಂಠಯ್ಯನವರು ಕನ್ನಡ ಭಾಷೆಗೆ ನೀಡಿದ ಕೊಡುಗೆ ಕೇವಲ ಸಾಹಿತ್ಯ ರಚನೆಗೆ ಸೀಮಿತವಾಗಿರದೆ ವಿಮರ್ಶೆ ಸಂಶೋಧನೆ ಮತ್ತು ಶಿಕ್ಷಣದ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಒಂದು ಗಟ್ಟಿಯಾದ ಬೌದ್ಧಿಕ ಅಡಿಪಾಯವನ್ನು ಒದಗಿಸಿದವರು. ಇದಿಷ್ಟೇ ಅಲ್ಲದೆ ಕನ್ನಡ ನಾಡು ನುಡಿಯನ್ನು ಕುರಿತು ತಮ್ಮ ಕವಿತೆಗಳ ಮೂಲಕ ಕನ್ನಡದ ಅಸ್ಮಿತೆಯ ಕಾಪಾಡಿದ್ದಾರೆ.

"ಗೆಳೆಯ ಕನ್ನಡಿಗರೇ, ಸ್ವಾಗತವು ನಿಮಗೆ!
ಬೆಳೆವ ಸಿರಿಗನ್ನಡದ ಬಳ್ಳಿ ಪಡೆದರಳುಗಳೆ
ಸ್ವಾಗತವು ನಿಮಗೆ!
ಒಬ್ಬ ಕನ್ನಡ ದೇವಿಯುದರದಿಂದೊಗೆದು,
ಒಬ್ಬ ಕನ್ನಡ ಜನನಿಯದೆ ಹಾಲ ಮೊಗೆದು
ಒಬ್ಬ ಮಾತೆಯ ಮಡಿಲು ತೊಡೆಗಳಲಿ ಕುಣಿದು
ಒಬ್ಬ ತಾಯುಲಿಗಳನೆ ತೊದಲಿ ನುಡಿದು
ಬೆಳೆದ ಕನ್ನಡಿಗರೇ, ಬಂಧು ಕನ್ನಡಿಗರೇ,
ಇನಿಯ ಕನ್ನಡಿಗರೇ ಸ್ವಾಗತವು ನಿಮಗೆ!"[15]

ಕನ್ನಡ ನಾಡಿನ ಸಾಂಸ್ಕೃತಿಕ ನಗರಿ ಮೈಸೂರಿಗೆ ನಾಡಿನದ್ಯಂತ ಹೋಗುವ ಕನ್ನಡಿಗರಿಗೆ ಸ್ವಾಗತಿಸುವ ಪರಿಯಾಗಿದೆ. ಕವಿಯು ಕನ್ನಡ ನಾಡ ನುಡಿಯನ್ನು ಹಬ್ಬುವ ಬಳ್ಳಿಗೆ ಹೋಲಿಸಿದ್ದಾರೆ. ಆ ಬಳ್ಳಿ ಹರಡು ಕುಡಿಯೊಡೆದು ಇನ್ನೆಲ್ಲಾ ಕಡೆಗೆ ಹರಡುವಂತೆ ಕನ್ನಡಿಗರು ತಮ್ಮ ತಮ್ಮ ವಂಶದ ಕುಡಿಗಳಿಗೆ ನಾಡು

ತೋರಿಸಲು ಹೊರಡುವ ಈ ಜನರ ಮನಸ್ಸನ್ನು ಹರಡುವ ಬಳ್ಳಿಯ ಕುಡಿಗಳಿಗೆ ಹೋಲಿಸುತ್ತಾ ಶ್ರೀಯವರು ಸ್ವಾಗತಿಸುತ್ತಾರೆ. ವಾಸ್ತವಿಕವಾಗಿ ಕನ್ನಡಿಗರು ಒಬ್ಬೊಬ್ಬ ತಾಯಂದಿರ ಉದರದಿಂದ ಜನಿಸಿದರೂ ಇಲ್ಲಿ ಇಡೀ ನಾಡನ್ನು ಒಬ್ಬ ತಾಯಿ ಎಂದು ರೂಪಕರಿಸಿದ್ದಾರೆ. ಒಬ್ಬ ತಾಯಿಯ ಮಡಿಲಲ್ಲಿ ತನ್ನ ಬಾಲ್ಯದ ಕ್ಷಣಗಳನ್ನು ಕಳೆಯುವುದು, ಆ ತಾಯಿ ತನ್ನ ಮಗುವಿನ ಲಾಲನೆ ಪಾಲನೆ ಮಾಡುವಂತೆ ಕನ್ನಡ ತಾಯಿಯಿಂದ ನಾವು ಪಡೆದವರಾಗಿದ್ದೇವೆ ಎಂಬುದನ್ನು ಹೇಳಿದ್ದಾರೆ. ವಾಸ್ತವಿಕ ಜೀವನದಲ್ಲಿ ತಾಯಿ ತನ್ನ ಮಗುವಿಗೆ ತನ್ನ ಅನುಕರಣೆಯಿಂದ ನುಡಿಗಲಿಸುವಂತೆ ಅದಕ್ಕೆ ಪ್ರತಿಯಾಗಿ ಮಗು ತೊದಲ ನುಡಿದ ಮಾತುಗಳು ಕನ್ನಡ ಭಾಷೆಯದು. ಈ ನಾಡಿನಲ್ಲಿ ಬೆಳೆದವರೆಲ್ಲ ಕನ್ನಡಿಗರೇ, ಕನ್ನಡಿಗರ ಬಾಂಧವ್ಯವೆಂಬುದು ಬಂಧುಗಳ ರೀತಿಯಂತಿರುವುದೆಂದು ಕವಿ ಅರ್ಥೈಸಿದ್ದಾರೆ.

"ಪಡುಗಡಲ ತೆರೆ ಮೊಳಗಿ, ಹಲವು ಹೊಳೆಗಳು ಮಿನುಗಿ
ಸೊಬಗು ಸುಳಿಯುವ ಸುಖದ ಬೀಡಿನಿಂದ
ತುಳುನೆರೆಯ ನಾಡಿನಿಂದ
ಕನ್ನಡದ ಕಲಿಗಳನು ಕನ್ನಡದ ಕವಿಗಳನು
ತನ್ನ ಬಸಿರಲಿ ಮುನ್ನ ಹೊರೆದು ಜಗದಲಿ ಮೆರೆದು
ಮತ್ತೆ ಮಿಗುತ್ಸಹದ ಕೊಯಲಿನಿಂದ ಬೆಳವಲದ ಬಯಲಿನಿಂದ
ವನದೇವಿ ಜಲದೇವಿಯರಿಗೆ ತೌರೂರೆನಿಸಿ
ಜನದ ಕಣ್ ಮನಗಳನ್ನು ಸೆಳೆದು ಸೆರೆಸಿಕ್ಕಿಸುವ
ಪ್ರಕೃತಿ ರಚನೆಯ ಬೆಡಗು ಬೆಡಗಿಂದ ಮಲೆನಾಡು ಕೊಡಗಿನಿಂದ
ಹೆರರು ಕೊಡುವಟ್ಟುಗಳಿಗೆ ಹಿಮ್ಮೆಟ್ಟದೆಯೇ ನಿಂತು
ಸಿರಿಗನ್ನಡ ಧ್ವಜವನೆತ್ತಿ ಮೆರೆಯಿಸುತ್ತಿರುವ
ಗಂಡು ಮೆಟ್ಟಿನ ನೆಲದ ತಡಿಗಳಿಂದ ಕನ್ನಡದ ಗಡಿಗಳಿಂದ
ಬಂದಿಹಿರಿ, ಬಂದಿಹಿರಿ ಕನ್ನಡದ ಮಣಿಗಳಿರ
ಬಂದಿಹಿರಿ, ಕನ್ನಡದ ದೇವಿಯರಾಧನೆಗೆ ಇಂದು ಸ್ವಾಗತವು ನಿಮಗೆ!"[16]

ಸಾಂಸ್ಕೃತಿಕ ನಗರಿ ಮೈಸೂರಿಗೆ ಜನರು ಯಾವ ಯಾವ ಸ್ಥಳಗಳಿಂದ

ಆಗಮಿಸಿದ್ದಾರೆ ಎಂಬುದನ್ನು ಆ ಸ್ಥಳದ ಐಸಿರಿಯನ್ನು ಬಣ್ಣಿಸಲು ಮುಂದಾಗಿದ್ದಾರೆ. ಅಂದರೆ ಕನ್ನಡ ನಾಡು ಎಂಬುದು ಪ್ರಾಕೃತಿಕ ಸಂಪತ್ತಿನಿಂದ ಕೂಡಿದ ಸುಂದರ ಪ್ರದೇಶವಾಗಿರುವುದನ್ನು ಉಲ್ಲೇಖಿಸುತ್ತಾರೆ. ಅದು ವಿಶೇಷವಾಗಿ ಕರಾವಳಿಯ ಪ್ರದೇಶವನ್ನು ವರ್ಣಿಸಿದ್ದಾನೆ. ಇದರ ಜೊತೆಗೆ ಭಾಷಿಕವಾಗಿ ಪ್ರದೇಶವನ್ನು ಹೆಸರಿಸಲು ಮುಂದಾಗಿದ್ದಾರೆ. ಕನ್ನಡಮಾತೆ ತನ್ನ ಒಡಲಿನಲ್ಲಿ ಕಲಿಗಳನ್ನು, ಕವಿಗಳನ್ನು ಇಟ್ಟುಕೊಂಡು ಜಗತ್ಪ್ರಸಿದ್ಧಿಯಾಗಿ ಮೆರೆಸಿರುವುದನ್ನು ನೆನೆಯುತ್ತಾರೆ. ಇಡೀ ಕನ್ನಡನಾಡನ್ನು ವಿಶೇಷವಾದ ಐತಿಹಾಸಿಕ ಹೆಸರುಗಳಿಂದ ಗುರುತಿಸಲು ಪ್ರಯತ್ನ ಮಾಡಿದ್ದಾರೆ. ಈ ಕನ್ನಡ ನಾಡಿನ ಸಸ್ಯ ಸಂಪತ್ತನ್ನು, ಜಲ ಸಂಪತ್ತನ್ನು ದೇವತೆಗೆ ಹೋಲಿಸಿ ಆ ದೈವಿ ಸ್ವರೂಪದ ಸಂಪತ್ತನ್ನು ಹೊಂದಿದ ಈ ಕನ್ನಡ ನಾಡು ಪುಣ್ಯಭೂಮಿಯಾಗಿದೆ. ಈ ನಾಡು ಜನರ ಕಣ್ಣುಗಳ ಸೆಳೆದು ಸೆರೆ ಸಿಕ್ಕಿದೆ. ಕನ್ನಡದ ನಾಡು ನುಡಿ ಅಂತ ಬಂದಾಗ ಸಿರಿಗನ್ನಡ ಧ್ವಜವನ್ನೆತ್ತಿ ಮೆರೆಸುತ್ತಿರುವ ಗಂಡೆದೆ ಕನ್ನಡಿಗರಿಗೆ ಇದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

"ನಾವೆಲ್ಲರೊಡಗೂಡಿ, ಒಡನಾಡಿ ಕಲೆತು
ಕನ್ನಡ ಸೇವೆಯಲ್ಲಿ ನಮ್ಮ ಮೈಮರೆತು
ಕುಂದುಕೊರತೆಗಳೊಂದಕಿಂಬಿಲ್ಲದಂತೆ
ನಮ್ಮ ಸೌಖ್ಯದ ಮೊಗ್ಗು ಬಿರಿದರುಳುವಂತೆ,
ದೇವಿ ಕರುಣಿಸಲಿ ವರವ! ಕನ್ನಡದ ದೇವಿ ಕೈಕೊಳಲ್ಲಿ ಫಲವ!"[17]

ಕನ್ನಡ ನಾಡಿನಲ್ಲಿರುವವರೆಲ್ಲ ಅನನ್ಯತೆಯಿಂದ ಕೂಡಿ ಕನ್ನಡ ನಾಡು, ನುಡಿಯ ಕೈಂಕರ್ಯವನ್ನು ಮೀನಮೇಷವನ್ನು ಎಣಿಸಬಾರದೆಂದು ಅವರನ್ನು ಗಟ್ಟಿಗೊಳಿಸುವ ಪ್ರಕ್ರಿಯೆ ನಡೆದಿದೆ. ನಾಡಿನಲ್ಲಿ ಬಾಳುವವರಿಗೆ ಏನೂ ಕುಂದು ಕೊರತೆ ಇಲ್ಲದಂತೆ ನೋಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಬೆಟಗೇರಿ ಕೃಷ್ಣಶರ್ಮ ಕನ್ನಡ ಸಾಹಿತ್ಯ ಲೋಕದಲ್ಲಿ 'ಆನಂದ ಕಂದ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕವಿ, ಕಥೆಗಾರ, ಕಾದಂಬರಿಕಾರ, ಪತ್ರಿಕೋದ್ಯಮಿ ಮತ್ತು ವಿಮರ್ಶಕ. ಉತ್ತರ ಕರ್ನಾಟಕದಲ್ಲಿ ಕನ್ನಡತನದ ಜಾಗೃತಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಪ್ರಮುಖರಲ್ಲಿ

ಇವರು ಒಬ್ಬರು. ಕನ್ನಡ ನುಡಿಯ ಮಹತ್ವದ ಕುರಿತು 'ಎನಿತು ಇನಿದು ಈ ಕನ್ನಡ ನುಡಿಯು' ಎಂಬ ಕವಿತೆಯನ್ನು ರಚಿಸಿದ್ದಾರೆ.

"ಎನಿತು ಇನಿದು ಈ ಕನ್ನಡ ನುಡಿಯು
ಮನವನ್ನು ತಣಿಸುವ ಮೋಹನ ಸುಧೆಯು!
ಗಾನವ ಬೆರೆಯಿಸಿ
ವೀಣೆಯ ದನಿಯೊಳು
ವಾಣಿಯ ನೇವುರ
ನುಡಿಸುತೆ ಕುಣಿಯಲು
ಮಾಣದೆ ಮೆರೆಯುವ ಮಂಜಲ ರವವೋ?
ಏನಿತು ಇನಿದು ಈ ಕನ್ನಡ ನುಡಿಯು"[18]

ಕನ್ನಡ ಭಾಷೆಯು ಎಷ್ಟು ನಯವಾಗಿರುವುದು ಈ ಕನ್ನಡದ ಮಾತುಗಳನ್ನು ಕೇಳಿದರೆ ಮನಸ್ಸು ತಂಪಾದಂತೆ ಭಾಸವಾಗುತ್ತದೆ. ಕವಿಗಳು ಈ ಕನ್ನಡದ ಚೆಲುವನ್ನು ಮೋಹನ ಸುಧೆಗೆ ಹೋಲಿಸುತ್ತಾರೆ. ಅಂದರೆ ಕನ್ನಡ ಭಾಷೆ ಆಕರ್ಷಕವಾದ, ಸುಂದರವಾದ, ಅಮೃತದಷ್ಟು ಸಿಹಿಯಾದದ್ದು ಹಾಗೂ ಮಧುರವಾದ ಭಾಷೆಯಾಗಿದೆ. ವೀಣೆಯ ಧ್ವನಿಯೊಂದಿಗೆ ಹಾಡನ್ನು ಬೆರೆಸಿ ಅದನ್ನು ಅಸ್ವಾದಿಸಿದಾಗ ಎಷ್ಟು ಸಂತೋಷಕರವಾಗುತ್ತದೆಯೋ ಅಷ್ಟೇ ಸಂತೋಷದಾಯಕವಾದದ್ದು ಈ ಕನ್ನಡ ಭಾಷೆ ಮಾತನಾಡುವುದಕ್ಕೆ. ಕನ್ನಡದ ಧ್ವನಿ ಕೇಳಿದರೆ ಮಂಗಳಕರವಾದ ಧ್ವನಿಯನ್ನು ಕೇಳಿದಂತಾಗುತ್ತದೆ.

"ಗಿಳಿಗಳು ಉಲಿಯುವ
ಮೆಲು ಮಾತುಗಳೋ?
ಕಳಕಂಠಗಳಾ
ಚೆಲುವಿನ ಕುಕಿತೋ?
ಅಳಿಗಳ ಬಳಗದ ಬೆಳಗಿನ ಉಲಿಯೋ?
ಏನಿತು ಇನಿತು ಈ ಕನ್ನಡ ನುಡಿಯು"[19]

ಕನ್ನಡದ ನುಡಿಯು ಕೇಳುವುದಕ್ಕೆ ಗಿಳಿಗಳ ಸಮೂಹವು ಹೊರಡಿಸುವ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಸ್ವರದಂತೆ ಕೇಳಲು ಮನಸ್ಸಿಗೆ ಅಷ್ಟು ಮುದ ನೀಡುವಂಥದ್ದು. ಮಧುರವಾದ ಕಂಠದಿಂದ ಕೂಗುವ ಕೋಗಿಲೆಯ ಸ್ವರದ ಚೆಲುವಿನಂತೆ ಕನ್ನಡ ಭಾಷಾ ಸೌಂದರ್ಯದ ಸೊಬಗಿನಿಂದ ಸಮ್ಮಿಲನವಾದದ್ದು ನಮ್ಮ ಕನ್ನಡ ಭಾಷೆ. ಕನ್ನಡ ಭಾಷೆ ಪ್ರಾದೇಶಿಕವಾಗಿ ತನ್ನ ಭಾಷಾ ವೈಶಿಷ್ಟ್ಯತೆಯಿಂದ ಪಾರಿಭಾಷಿಕವಾಗಿ ಮಾತನಾಡುವ ಕೌಶಲತೆಯನ್ನು ನಮ್ಮ ಕನ್ನಡ ನುಡಿಯು ಹೊಂದಿಕೊಂಡಿದೆ. ಕನ್ನಡ ನಾಡಿನ ಅಭಿಮಾನದ ಕವಿಯಾದ ಹನುಮಂತ ಗೋವಿಂದ ಕಟ್ಟಿಯವರು ಕನ್ನಡ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿದ್ದವರಾಗಿದ್ದಾರೆ. ಇವರು ಭಕ್ತಿಗೀತೆ ಹಾಗೂ ದೇವರ ಕುರಿತು ಹಾಡುಗಳಿಗೆ ಸಾಹಿತ್ಯವನ್ನು ರಚಿಸಿದ್ದಾರೆ. ಕನ್ನಡದ ಭಕ್ತಿ ಸಂಗೀತ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

"ತನ್ನದು ಎಂಬುದು ಏನಿಲ್ಲೆ
ಕನ್ನಡ ನುಡಿಯಲಿ ಹುರುಳಿಲ್ಲೆ?
ಮಾನವ ಜಾತಿಯ ಜೀವಾಳ। ಭಾಷಾದೇವಿಯೊಳಿಲ್ಲೇನು?
ಏನಿದು? ಐಕ್ಯದ ನಿಜಬೀಜ। ತಾಯ್ನುಡಿಯೊಲವಿನೊಳಿಲ್ಲೇನು?
ಉನ್ನತ ಸಂಸ್ಕೃತಿಯೊಳಬೆಳಸು। ಕನ್ನಡ ತಾಯಿಗೆ ಇಲ್ಲೇನು?"[20]

ಕನ್ನಡ ನಾಡಿನಲ್ಲಿ ವಾಸಿಸುವವರು ತನ್ನದು ಎಂಬುವುದು ಏನಾದರೂ ಇದ್ದರೆ ಅದು ಇಲ್ಲಿಂದಲೇ ಸಂಪಾದಿಸಿರುವುದು, ನೆಲೆಸಿರುವವರು ಅಭಿವೃದ್ಧಿಯಾಗಿದ್ದಾರೆ. ಅದು ಕನ್ನಡ ನಾಡು–ನುಡಿಯಿಂದ ಎಂಬುದು ಅವಗಣನೆಗೆ ಇರುವುದು ಸೂಕ್ತ. ಕನ್ನಡ ನುಡಿ ಎಂಬುದು ಸತ್ವಭರಿತವಾದದ್ದು ಅದರಲ್ಲಿ ಹುರುಳಿಲ್ಲ ಎಂದು ಭಾವಿಸಿದರೆ ನಾಡನುಡಿಗೆ ದ್ರೋಹ ಬಗೆದಂತೆ. ಕನ್ನಡ ನಾಡಿನಲ್ಲಿರುವ ಮಾನವ ಜಾತಿಯ ಜೀವಾಳವೆಂದರೆ ಕನ್ನಡ ಭಾಷೆ. ಆ ಭಾಷೆಯನ್ನು ದೈವದ ರೂಪದಲ್ಲಿ ಗೌರವಿಸುವುದು ನಮ್ಮ ಸಂಸ್ಕೃತಿ. ಈ ನಾಡಿನಲ್ಲಿ ಹುಟ್ಟಿ ಬೆಳೆದ ಪ್ರತಿಯೊಬ್ಬರೂ ಜೀವನದಲ್ಲಿ ಮುಕ್ತಿಯನ್ನು ಪಡೆಯಬೇಕಾದರೆ ಕನ್ನಡ ತಾಯಿಯ ಒಲುಮೆಯಿಂದ, ನಾಡಿನ ಉನ್ನತ ಸಂಸ್ಕೃತಿಯ ಬೆಳೆಸುವ ಕನ್ನಡದ ಭುವನೇಶ್ವರಿಯಿಂದ ಸಾಧ್ಯ. ಕನ್ನಡ ಭಾಷೆಯು ಜನರ ಭಾವ ಬಂಧವನ್ನು ಗಟ್ಟಿಗೊಳಿಸುವಲ್ಲಿ ಇನ್ನೊಬ್ಬರ ಮನಸ್ಸಿನ ದುಃಖ

ದುಮ್ಮಾನಗಳನ್ನು ತಿಳಿಸಿಕೊಳ್ಳಲು ನಮ್ಮ ಭಾಷೆಯ ಕೊಡುಗೆ ಮುಖ್ಯವಾಗಿದೆ. ಕನ್ನಡದ ಭಾಷೆಯಿಂದ ಮನುಷ್ಯನಲ್ಲಿ ಒಳ್ಳೆಯ ಭಾವನೆಗಳನ್ನು ಬೀರುವುದಕ್ಕೆ ಸಾಧ್ಯವಾಗಿದೆ. ಪ್ರೀತಿ ಮಮತೆಯ ಒಲವನ್ನು ತೋರುವುದಕ್ಕೆ ಅಂತ್ಯವಿಲ್ಲದ ಭಾಷೆಯಾಗಿದೆ. ಕನ್ನಡಿಗನಿಗೆ ಕನ್ನಡ ಭಾಷೆ ತನ್ನತನದ ಅರಿವನ್ನು ಮೂಡಿಸುವಂಥಾಗಿದೆ. ಕನ್ನಡವು ಸದಾ ನಂದದ ನದಿಯಂತೆ ಚಲನಶೀಲವಾದ ಭಾಷೆ. ಅಂತಹ ಭಾಷೆಯನ್ನು ಹೊಂದಿರುವ ಈ ನಾಡಿನಲ್ಲಿ ಸೌಂದರ್ಯ, ಸೊಗಸಿನ ಝುರಿಗಳು ಹರಿದಿರುವ ನಾಡಾಗಿದೆ. ಈ ಕನ್ನಡ ಭಾಷೆಯನ್ನು ಬೆಳೆಸಲು ದನಿಗಡಲಂತೆ ವಿವಿಧ ವಿದ್ಯಾಪುರುಷರು, ಪಂಡಿತರು ನದಿಯಂತೆ ಕೂಡಿ ಸಮುದ್ರದ ರೂಪದಲ್ಲಿ ಭಾಷೆಯನ್ನು ವಿಕಾಸಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇಂತಹ ಸನ್ನತ ನಾಡಿನ ಗೂಡಿನಲ್ಲಿ ಅಸಂಖ್ಯಾ ಧಾರ್ಮಿಕ ಪುರುಷರು ಜನಿಸಿರುವಂಥದ್ದಾಗಿದೆ.

"ಕವಿ ಕೋಕಿಲಗಳು ಉಲಿದಿಲ್ಲೆ?
ಸವಿಯರಸಂಜೆಯು ಚರಿಸಿಲ್ಲೆ?
ನವಸಾಧು ವೃಕ್ಷ ಮೊಳೆತಿಲ್ಲೆ?"[21]

ಪ್ರಾಚೀನ ಕಾಲಘಟ್ಟದಿಂದ ಆಧುನಿಕ ಕಾಲದವರೆಗೆ ಅಸಂಖ್ಯಾತ ಕವಿಗಳನ್ನು ಕೊಡುಗೆ ನೀಡಿದ ನಾಡು ನಮ್ಮದು. ಅಂತಹ ಅಗಣಿತ ಕವಿಗಳು ತಮ್ಮ ಸುಮಧುರ ಕಂಠದಿಂದ ನಾಡಿನ ಐಸಿರಿಯನ್ನು ವಿಸ್ತರಿಸಿದ್ದು ಇಲ್ಲಿಂದಲೇ. ಸಾಧು–ಸಂತರು ಜನಿಸಿದ ನಾಡು ನಮ್ಮದು. ಇದಿಷ್ಟೇ ಅಲ್ಲದೆ ಗರ್ವದಿಂದ ಮೆರೆದ ರಾವಣನನ್ನು ಅಳಿಸಿದ ಹನುಮಂತನು ಉದಯಿಸಿದ ನಾಡು, ಪೂರ್ವದ ಹರ್ಷವರ್ಧನ ಸೋಲಿಸಿದ ವೀರಪುಲಕೇಶಿ ಜನ್ಮಿಸಿದ ನಾಡು ನಮ್ಮದು.

"ಕನ್ನಡಿಗರ ಕರವೀರರವು
ಕನ್ನಡಿಗರ ಶಿರಚದುರರವು
ಕನ್ನಡಿಗರ ಉರಭಕ್ತರವು
ಕನ್ನಡ ಕಸ್ತೂರಿ ಕಂಪಲ್ಲೆ? ಕನ್ನಡಿಗರ ಸಿರಿ ಮೆರೆದಿಲ್ಲೆ?"[22]

ಕನ್ನಡಿಗರು ವೀರತ್ವ ಶೌರ್ಯದಿಂದ ಮೆರೆದಿರುವ ನಾಡಿದು. ನಾಡು

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ನುಡಿ ಎಂಬ ವಿಷಯ ಬಂದಾಗ ಎಷ್ಟೋ ಕನ್ನಡಿಗರು ತ್ಯಾಗ, ಬಲಿದಾನದ ಪ್ರತೀಕವಾಗಿ ಮೆರೆದಿದ್ದಾರೆ. ಕನ್ನಡ ತಾಯಿಯ ಭಕ್ತಿಯನ್ನು ತಮ್ಮ ಎದೆಯ ಗೂಡಿನಲ್ಲಿ ಇಟ್ಟುಕೊಂಡು ನಾಡಿಗಾಗಿ ಸೇವಾರ್ಪಣೆ ಮಾಡಿದವರ ಸಂಖ್ಯೆ ಅಗಣಿತವಾಗಿದೆ. ಇದರಿಂದ ಈ ಕನ್ನಡ ನಾಡಿನ ಕಸ್ತೂರಿ ಕಂಪು ನಾಡಿನಾಚೆಗೂ ಪಸರಿಸಿದೆ. ಕನ್ನಡಿಗರು ಉತ್ತುಂಗದ ಶಿಖರಕ್ಕೆರಿದ್ದರೆ ಅದು ಈ ನಾಡಿಂದಲೇ.

ಜಿ.ಪಿ. ರಾಜರತ್ನಂ ಅವರು ಕನ್ನಡ ಸಾಹಿತ್ಯ ಕಂಡ ಅಪ್ರತಿಮ ಲೇಖಕರು. ಕವಿ, ಪ್ರಾಧ್ಯಾಪಕರು ಮತ್ತು ಜಾನಪದ ವಿದ್ವಾಂಸರು. ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ತಮ್ಮ ಬದುಕಿನದುದ್ದಕ್ಕೂ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಜಾನಪದ ಉಳಿವಿಗಾಗಿ ಶ್ರಮಿಸಿದರು. ಕನ್ನಡ ಪದಗಳು ಕುರಿತು ಬರೆಯುವಾಗ ಯೆಂಡ್ಕುಡುಕ ರತ್ನನ ಪಾತ್ರದ ಮೂಲಕ ಕನ್ನಡ ಭಾಷೆಯ ಮೇಲೆ ಇರುವ ಅಭಿಮಾನವನ್ನು ತೋರಿಸಿದ್ದಾನೆ. ರತ್ನ ಯೆಂಡ ಕುಡಿದ ಸಂದರ್ಭದಲ್ಲಿ ಕನ್ನಡ ಪದಗಳು ಶರವೇಗದಲ್ಲಿ ಉಚ್ಚರಿಸುತ್ತಿರುವನು. ರತ್ನನಿಗೆ ಯೆಂಡ, ಯೆಂಡತಿ, ಕನ್ನಡ ಪದಗಳು ಎಂದರೆ ಪಂಚಪ್ರಾಣ. ಇದರಿಂದ ದೇವರು ಏನಾದರೂ ಭೂಮಿಗೆ ಬಂದು ರತ್ನನಿಗೆ ಪರೀಕ್ಷೆ ಮಾಡಕ್ಕೋಸ್ಕರ ಯೆಂಡ ಕುಡಿಯುವುದು ಬಿಟ್ಟು ಬಿಡು ರತ್ನ ಅಂದ್ರೆ ಆ ದೇವರ ಮಾತಿಗೆ ಅಡ್ಡ ಬರುವುದಿಲ್ಲ, ಯೆಂಡಬುಟ್ಟೆ ಹೆಣ್ತಿನ್ ಬಿಟ್ಟುಬಿಡು ಅಂತ ದೇವರು ಏನಾದರೂ ಹೇಳಿದ್ರೆ ದೊಡ್ಡದು ಒಂದು ಸಮಸ್ಯೆ ಕಳೆದು ಹೋಯಿತೆಂದು ತೊಂದರೆಯಿಂದ ಹೊರ ಬಂದೆ ಎಂದು ಕುಣಿದಾಡುತ್ತೇನೆ ಎಂದು ಹೇಳುತ್ತಾನೆ. ಆದರೆ ಕನ್ನಡ್ ಪದಗೊಳ್ ಆಡೋದ್ನೆಲ್ಲ ನಿಲ್ಲಿಸಿ ಬಿಡಬೇಕು ರತ್ನ ಅಂತ ದೇವರು ಏನಾದರೂ ಹೇಳಿದರೆ, ಅವನು ದೇವರಾದ್ರೇನು? ಕನ್ನಡದ ವಿಚಾರಕ್ಕೆ ಬಂದ್ರೆ ಅವನ ಮಾನ ಉಳಿಸಾಕಿಲ್ಲ ಎಂಬ ಅಭಿಮಾನ ರತ್ನನದು. ಕನ್ನಡ ಪದಗಳ ವಿಚಾರವಾಗಿ ಮಾತ್ರ ರತ್ನ ಯಾರ ಮಾತು ಕೇಳುವವನಲ್ಲ.

"ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ

ಮೂಗ್ನಲ್ ಕನ್ನಡ್ ಪದವಾಡ್ತೀನಿ
ನನ್ ಮನಸ್ಸನ್ ನೀ ಕಾಣೆ
ಯೆಂಡಾ ಹೋಗ್ಲಿ! ಹೆಂಡ್ತಿ ಹೋಗ್ಲಿ
ಎಲ್ಲಾ ಕೊಚ್ಕೊಂಡ್ ಹೋಗ್ಲಿ
ಪರಪಂಚ್ ಇರೋತನಕ ಮುಂದೆ
ಕನ್ನಡ್ ಪದ್ಗೊಳ್ ನುಗ್ಲಿ"[23]

ಯೆಂಡ್ಕುಡುಕ ರತ್ನನಿಗೆ ಯೆಂಡ ಮತ್ತು ಯೆಂಡತಿಗಿಂತ ಹೆಚ್ಚು ಅಭಿಮಾನವಿರುವುದು ಕನ್ನಡ ಭಾಷೆಯ ಮೇಲೆ. ಆ ದೇವರು ನನಗೇನಾದರೂ ನೀ ಕನ್ನಡ ಮಾತಾಡಬೇಡ ಎಂದು ನರಕದ ಹಿಂಸೆಯನ್ನು ಕೊಟ್ಟು ಮಾತನಾಡಲು ಬರದಂಗೆ ನಾಲಿಗೆ ಸೇರಿಸಿ ಬಾಯಿಯನ್ನು ಹೋಲಿಸಾಕುವಂತೆ ನಿರ್ಬಂಧನ ಮಾಡಿದರೂ ಕೂಡ ಮೂಗಿನ ಉಸಿರಾಟದಿಂದ ಕನ್ನಡ ಮಾತನಾಡುವುದರ ಬಗ್ಗೆ ಭಾಷಾಭಿಮಾನವನ್ನು ತೋರುತ್ತಾನೆ. ಪಂಪ ಮಹಾಕವಿಯು ಹೇಳುವಂತೆ ರತ್ನನ ಈ ನಾಡು ನುಡಿ ಅಭಿಮಾನದ ಮಾತಿಗೆ ಪೂರಕವಾಗಿ ನಾಡಿನ ಬಗ್ಗೆ ಪ್ರೀತಿಯ ಅಭಿಮಾನ ತೋರಿದ ಪಂಪನ ನುಡಿ 'ಆರ್‌ಅಂಕುಸಮಿಟ್ಟೊಡಂ ನೆನೆವುದೆನ್ನ ಮನಂ ವನವಾಸಿದೇಶಮಂ' ಎಂಬ ಮಾತನ್ನು ಇಲ್ಲಿ ನೆನೆಯಬಹುದು. ರತ್ನನಿಗೆ ಈ ಕನ್ನಡದ ಭಾಷೆಯ ಮುಂದೆ ಆ ಯೆಂಡ, ಯೆಂಡ್ತಿ, ಅವು ಯಾವುವು ಮುಖ್ಯವಾಗಿರುವುದಿಲ್ಲ. ಅವನದು ಒಂದೇ ನಿರ್ಧಾರ; ಪ್ರಪಂಚ ಇರೋವರ್ಗು ಕನ್ನಡ ಭಾಷೆಯು ಮುನ್ನೆಲೆಗೆ ಬರಬೇಕು ಎಂಬುದು ರತ್ನನ ಜೀವನದ ಮಹಾದಾಸೆ ಆಗಿದೆ.

'ಶಾಂತಕವಿ' ಎಂದು ಕನ್ನಡ ಸಾಹಿತ್ಯದಲ್ಲಿ ತಮ್ಮ ಕಾವ್ಯಗಳಿಂದ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಇವರ ಪೂರ್ಣ ಹೆಸರು ಸಾಲಿ ರಾಮಚಂದ್ರರಾಯರು. ಇವರು ಹಳೆಯ ಮತ್ತು ಹೊಸಗನ್ನಡದ ಸೇತುವೆಯಂತಿದ್ದ ಕವಿ. ಇವರು ಕನ್ನಡನಾಡನ್ನು ದೇವಿಗೆ ಹೋಲಿಸಿದ್ದಾರೆ. ಐತಿಹಾಸಿಕ ಕಾಲಘಟ್ಟಗಳಿಂದ ಯಾವ ಯಾವ ರಾಜರಿಂದ ಪೂಜಿತಗೊಂಡಿದೆ ಎಂಬುದನ್ನು ಪದ್ಯದ ಮೂಲಕ ಕಟ್ಟಿಕೊಡುವಂತ ಪ್ರಯತ್ನ ಮಾಡಿದ್ದಾರೆ.

"ರಕ್ಷಿಸು ಕರ್ನಾಟಕ ದೇವಿ, ಸಂ
ರಕ್ಷಿಸು ಕರ್ನಾಟಕ ದೇವಿ
ಕದಂಬಾದಿ ಸಂಪೂಜಿತ ಚರಣೆ
ಗಂಗಾರಾಧಿತ ಪದನಳಸರಣೆ
ಚಾಲುಕ್ಯರುತ್ತಮ ಕಾಂಚೀ ಕಿರಣೆ
ರಾಷ್ಟ್ರಕೂಟ ಮಣಿಕಂಠಾಭರಣೆ
ಚಾಲುಕ್ಯಾಂಶುಕ ಶೋಭಾವರಣೆ"[24]

ಮುಂದೆ ಬರುವಂತಹ ಏಳಿಗೆಯನ್ನು ಇಟ್ಟುಕೊಂಡು ಈ ಕನ್ನಡ ನಾಡನ್ನು ದೇವತೆಯ ರೂಪದಲ್ಲಿ ಪೂಜ್ಯ ಭಾವನೆಯನ್ನು ಹರವಲು ಹಾತೊರೆಯುತ್ತಾರೆ. ಈ ನಾಡಿನ ರಕ್ಷಣೆ–ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ ಎಂಬುದನ್ನು ಹೇಳುವರು. ಪಾರಂಪರಿಕವಾಗಿ ಕದಂಬರಿಂದ ಈ ನಾಡು ಪೂಜಿತ ಹಾಗೂ ಗೌರವತೆಗೆ ಒಳಗಾಗಿತ್ತು. ಗಂಗಮನೆತನದ ಅರಸರು ಈ ನಾಡು ಭುವನೇಶ್ವರಿ ದೇವಿಯು ಪಾದ ಸರಣಿಯಂತೆ ತಿಳಿದು ಸದಾ ಆರಾಧಿಸುವವರಾಗಿದ್ದರು. ಚಾಲುಕ್ಯರಿಗೆ ಕನ್ನಡ ನಾಡು ಎಂಬ ಸಪ್ತ ಮುಕ್ತಿಕ್ಷೇತ್ರವಾಗಿ ಪರಿಣಮಿಸಿತ್ತು. ರಾಷ್ಟ್ರಕೂಟ ಅರಸರಿಗೆ ಈ ಕನ್ನಡ ಭೂಮಿ ಎಂಬುದು ದೇವಿಯ ಕುತ್ತುಗೆಗೆ ಧರಿಸುವ ರತ್ನದ ಆಭರಣ ಅಥವಾ ರತ್ನ ಖಚಿತವಾದ ಕಂಠಹಾರದ ಪ್ರತೀಕವಾಗಿ ನಾಡನ್ನು ರಕ್ಷಿಸಿದ್ದಾರೆ. ಚಾಲುಕ್ಯ ವಂಶದವರಿಗೆ ಈ ಭೂದೇವಿ ಸೌಂದರ್ಯವನ್ನು ಹೆಚ್ಚಿಸುವ ಆಭರಣದಂತೆ ಈ ನಾಡಿನ ಸೌಂದರ್ಯವನ್ನು ಕೊಂಡಾಡಿದ್ದರು.

"ಯಾದವ ಮಣಿ ಕಂಠಣಾಂಶು ಸುಂದರಿ
ಬಲ್ಲಾಳರ ಭುಜಭೂಷಣ ಬಂಧುರೆ
ವಿಜಯನಗರ ಮಂಗಲಮಣಿ ಕಂಧರೆ
ಮೈಸೂರೊಡೆಯರ ಸುಖೀರ್ತಿಮಂದಿರೆ
ಮಾಂಡಲಿಕಾವನ ಭಾರದುರಂಧರ"[25]

ಯಾದವರು ಈ ನಾಡನ್ನು ತಮ್ಮ ವಂಶದ ರತ್ನಮಣಿಯಂತೆ

ಬಾಹುಬಂಧದ ಕಿರಣದಂತೆ ಕನ್ನಡ ದೇವಿ ಶೋಭಿಸಿದ್ದಾಳೆ. ಬಲ್ಲಾಳ ವಂಶದವರಿಗೆ ಈ ಕನ್ನಡದ ಮಾತೆ ಅವರ ಭುಜಗಳಿಗೆ ಆಭರಣಗಳಿಂದ ಅಲಂಕೃತವಾದ ಸುಂದರಿಯಂತೆ ಅಥವಾ ಅಂದವಾದ ತೋಳುಗಳ ರಮಣಿಯಂತೆ ಶೋಭಿತಗೊಂಡಿದ್ದಳು. ವಿಜಯನಗರ ಅರಸರಿಗೆ ಕನ್ನಡ ನಾಡು ದೇವತೆಯು ಕುತ್ತಿಗೆಯಲ್ಲಿ ಮಂಗಳಕರಾರಾದ ಮಣಿ ಅಥವಾ ರತ್ನದ ಆಭರಣವನ್ನು ಧರಿಸುವವಳಾಗಿ ಹಾಗೂ ಸುಭದ್ರವಾದ ಕಂಠವುಳ್ಳ ಸುಂದರಿಯಾಗಿ ಪರಿಣಮಿಸಿತ್ತು. ಮೈಸೂರು ಒಡೆಯರಿಗೆ ಒಳ್ಳೆಯ ಕೀರ್ತಿಯ ಮಂದಿರದಂತೆ ಈ ನಾಡು ಪ್ರಸಿದ್ಧಿ ಪಡೆದಿತ್ತು. ಸಾಮಂತ ರಾಜರನ್ನು ರಕ್ಷಿಸುವ ಅಥವಾ ಪೋಷಿಸುವ ಮಹತ್ತರವಾದ ಹೊಣೆಯನ್ನು ಸಮರ್ಥವಾಗಿ ಹೊತ್ತಿರುವವಳು ಈ ನಾಡ ದೇವತೆ. ಇಲ್ಲಿ ಕರ್ನಾಟಕ ದೇವಿಯು ಕೇವಲ ನಾಡಿನ ಅಧಿದೇವತೆ ಅಲ್ಲದೆ ಆಳರಸರನ್ನು ಮತ್ತು ರಾಜ್ಯದ ಪಾಲನೆಯನ್ನು, ಜವಾಬ್ದಾರಿಯನ್ನು ಹೊತ್ತಿರುವ ಶಕ್ತಿ ಎಂಬುದನ್ನು ಇವರ ಪದ್ಯದ ಮೂಲಕ ಅರ್ಥೈಸಲಾಗಿದೆ.

ಎಂ. ಗೋವಿಂದ ಪೈ ಕನ್ನಡದ ಪ್ರಥಮ ರಾಷ್ಟ್ರಕವಿ. ಮಹಾಕವಿ, ಸಂಶೋಧಕ ಮತ್ತು ನಾಟಕಕಾರರು. ಕನ್ನಡ ನಾಡು ನುಡಿಗೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಇವರು 'ಕನ್ನಡಿಗರ ತಾಯಿ' ಎಂಬ ಕವಿತೆಯ ಮೂಲಕ ಕನ್ನಡ ಮಾತೆಯ ಪ್ರತ್ಯಕ್ಷ ರೂಪವನ್ನು ಕಾಣಲು ಹರಸುತ್ತಾರೆ. ಹೆತ್ತ ತಾಯಿಯ ಸ್ಥಾನವನ್ನು ಕನ್ನಡಾಂಬೆಗೆ ನೀಡಿ ಕನ್ನಡಿಗರಿಗೆ ಆಶೀರ್ವದಿಸಿ ಅವರನ್ನು ಕಾಯುವ ಕೆಲಸ ನಿನ್ನದೆಂದು ಕೊಂಡಾಡುತ್ತಾರೆ. ನಾವು ಏನಾದರೂ ತಪ್ಪು ಮಾಡಿದರೆ ಕ್ಷಮಿಸಿ ಪ್ರೀತಿಯಿಂದ ನಮ್ಮನ್ನು ಆಳು, ನೀನೇ ನಮ್ಮ ಬಾಳು. ನಾವು ನಿನ್ನನ್ನು ಮರೆಯುವುದಿಲ್ಲವೆಂದು

"ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು
ಹಣ್ಣ ನೀವ, ಕಾಯ ನೀವ, ಪರಿಪರಿಯ ಮರಗಳೊ
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ
ತೆನೆಯ ಕೆನೆಯ ಗಾಳಿಯೊ
ಖಗಮೃಗೋರಗಾಳಿಯೊ

ನದಿನಗರ ನಗಾಳಿಯೋ

ಇಲ್ಲಿಲ್ಲದದುಳಿದುದೇ?"[26]

ಈ ಕನ್ನಡ ನಾಡಿನಲ್ಲಿ ಬದುಕಿ ಬಾಳುವವರೆಲ್ಲರೂ ಕನ್ನಡಿಗರು, ಮನಸ್ಸು ತುಂಬಾ ಕನ್ನಡದ ವಿಚಾರಗಳು, ನಾವೆಲ್ಲರೂ ಮಾತನಾಡುವುದು ಕನ್ನಡವನ್ನೇ ಎಂದು ಸಮರ್ಥಿಸಿಕೊಳ್ಳುತ್ತಾರೆ. ಪ್ರಕೃತಿಯ ಸೊಬಗನ್ನು ಕುರಿತು ವಿವಿಧ ಜಾತಿಯ ಗಿಡ–ಮರಗಳು ಕಾಯಿ ಫಲ–ಪುಷ್ಪ ನೀಡುವ ಬಳ್ಳಿಗಳು ಇಂತಹ ಸಸ್ಯ ಸಂಪತ್ತನ್ನು ಈ ಕನ್ನಡ ನಾಡು ಆವರಿಸಿಕೊಂಡಿದೆ. ವಿವಿಧ ದವಸ ಧಾನ್ಯಗಳು, ಪರಿಮಳ ಸೂಸುವ ಗಾಳಿಯು, ನದಿ, ನಗರಗಳ ಹೀಗೆ ಒಂದೇ ಎರಡೇ ಇಲ್ಲಿಲ್ಲದ ಸಂಪತ್ತು ಯಾವುದು ಇಲ್ಲ; ಎಲ್ಲವೂ ಲಭ್ಯ. ನಿತ್ಯಹರಿದ್ವರ್ಣ ಕಾಡುಗಳಿಂದ ಕೂಡಿದ ಈ ನಾಡಿನಲ್ಲಿ ಜೇನು, ಹಾಲ್ಜೇನುಗಳು ಹತ್ತಾರು ಸಂಪತ್ತಿನಿಂದ ಕೂಡಿದ ಸ್ವರ್ಗವೇ ಈ ಕನ್ನಡ ನಾಡಿನಲ್ಲಿ ಇಳಿದಂತೆ ಭಾಸವಾಗುತ್ತಿದೆ ಎಂದು ಈ ನಾಡಿನ ಐಸಿರಿಯನ್ನು ಕವಿಯು ಕೊಂಡಾಡಿದ್ದಾರೆ.

ಈ ಕನ್ನಡ ನಾಡು ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿರುವುದರ ಬಗ್ಗೆ ಕವಿ ಉಲ್ಲೇಖಿಸುತ್ತಾರೆ. ಶಬರಿ ಕಾಯುತ್ತಿದ್ದ ರಾಮನು ಈ ನಾಡಿಗೆ ಭೇಟಿ ನೀಡಿದ ಬಗ್ಗೆ, ಕನ್ನಡ ಸೈನಿಕರನ್ನು ಕೂಡಿಸಿ ರಾವಣನನ್ನು ಕೊಂದಿರುವುದು, ಪಾಂಡವರು ಅಜ್ಞಾತ ಇದ್ದ ಸಂದರ್ಭದಲ್ಲಿ ಭೀಮನು ಈ ನಾಡಿನಲ್ಲಿ ಕೀಚಕನನ್ನು ಗೆದ್ದಿರುವುದು, ಕುರುಕುಲವನ್ನು ಗೆದ್ದಿರುವ ನಂದನನು ಇಲ್ಲಿಂದಲೇ ಸಂದಿ ಕೈಗೊಂಡಿರುವುದು, ಹೀಗೆ ಅನೇಕ ಪೌರಾಣಿಕ ಪುಣ್ಯ ಪುರುಷರಿಗೆ ಆಶ್ರಯ ತಾಣವಾದ ನಾಡಾಗಿತ್ತು. ಐತಿಹಾಸಿಕ ರಾಜ ಮನೆತನಗಳಾದ ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕದಂಬರು ಹೊಯ್ಸಳರು, ಕಳಚೂರಿಯರು, ವಿಜಯನಗರದ ಅರಸ ಭೂಪರು ಸಾಹಸ ಮೆರೆದ ನಾಡು ಈ ಕನ್ನಡ ನಾಡು. ಮುಖ್ಯ ಮತಾಚಾರ್ಯರಾದ ಜೈನರ ಪೂಜ್ಯಪಾದ, ಕೊಂಡಕುಂದಾಚಾರ್ಯ, ಮಧ್ವಯತಿ, ಬಸವ ಜನಿಸಿದ ನಾಡು. ಕವಿಪುಂಗರಾದ ಶರ್ವ, ಪಂಪ, ರನ್ನ, ಲಕ್ಷ್ಮೀಶ, ಜನ್ನ, ಷಡಕ್ಷರಿ, ಮುದ್ದಣ, ಪುರಂದರವರೇಣ್ಯರ, ವಿದ್ಯಾರಣ್ಯರು ಹಾಡಿ ಹೊಗಳಿದ ಪುಣ್ಯಭೂಮಿ. ಕನ್ನಡ ನಾಡು ವಾಸ್ತು, ಶಿಲ್ಪ,

ಕಲೆ, ಸಂಸ್ಕೃತಿಯ ನೆಲೆಯ ಬೀಡು ಎಂದು ಹೇಳುತ್ತಾ ಹಳೆಬೀಡು, ಬೇಲೂರನ್ನು ಒಳಗೊಂಡು ಈ ನಾಡಿನಲ್ಲಿ ಇಲ್ಲದ ಶಿಲ್ಪಗಳಿಲ್ಲ; ಇವುಗಳ ಮೂಲಕ ಸಂಸ್ಕೃತಿಯನ್ನು ಹೊಸ ಪೀಳಿಗೆಗೆ ಪರಿಚಯಿಸುವುದು ಅವಶ್ಯಕವಾಗಿರುವುದು ಎಂಬುದು ಇವರ ಮನೋಧೋರಣೆ.

"ಕುಗ್ಗದಂತೆ ಹಿಗ್ಗಿಪಂತೆ ನಿನ್ನ ಹೆಸರ ಟೆಕ್ಕೆಯಂ
ನೀಗಿದಂತೆ ಸಾಗಿಪಂತೆ ನಿನ್ನ ನುಡಿಯ ಢಕ್ಕೆಯಂ
ನೆಮ್ಮದೆಯಂ ತಾಯೆ ಬಲಿಸು
ಎಲ್ಲರ ಬಾಯಲ್ಲಿ ನೆಲೆಸು
ನಮ್ಮ ಮನಮನೊಂದೆ ಕನಸು
ಇದನ್ನೊಂದೆನೆ ಕೋರುವೆ
ನಿನ್ನ ಮೂರ್ತಿ ಜಗತ್‌ಕೀರ್ತಿ ಎಂದಿಗೆಮಗೆ ತೋರುವೇ?"[27]

ಕನ್ನಡ ತಾಯಿಯ ಹೆಸರು ಒಬ್ಬ ಟೆಕ್ಕೆಯಂತೆ. ಕೇಳಿದಾಗ ಜನರು ತಮ್ಮ ದುಃಖ ಅಥವಾ ನಿರಾಶೆಯನ್ನು ಮರೆತು ಸಂತೋಷ ಮತ್ತು ಉಲ್ಲಾಸವನ್ನು ಅನುಭವಿಸುವಂಥಾಗುತ್ತದೆ. ಅಥವಾ ಯಾವಾಗಲೂ ಎಲ್ಲರನ್ನೂ ಖುಷಿಯಾಗಿರುವಂತೆ ಮಾಡುವ ಸಕಾರಾತ್ಮಕ ಪ್ರಭಾವವನ್ನು ವರ್ಣಿಸುತ್ತಾರೆ. ಕನ್ನಡ ತಾಯಿಯ ಮಾತು ನಿರಂತರವಾಗಿ ಹರಿಯುತ್ತಾ ಕೇಳುಗರ ಗಮನವನ್ನು ಸೆಳೆಯುತ್ತದೆ ಮತ್ತು ನಾಡಿನ ಜನರನ್ನು ಕಾರ್ಯೋನ್ಮುಖರನ್ನಾಗಿ ಮಾಡುತ್ತದೆ ಎಂಬುದು ಇದರ ಆಳವಾದ ಅರ್ಥವಾಗಿದೆ. ಢಕ್ಕೆಯ ಶಬ್ದವು ಹೇಗೆ ಜನರನ್ನು ಒಂದು ಕಡೆಗೆ ಸೇರಿಸುತ್ತದೆ ಅಥವಾ ಉತ್ಸಾಹ ತುಂಬುತ್ತದೆಯೋ ಅದೇ ರೀತಿ ಆ ಮಾತೆಯ ಮಾತುಗಳು ಜನರಿಗೆ ಪ್ರೇರಣೆ ನೀಡಿ ಅವರನ್ನು ಮುನ್ನಡೆಸುತ್ತದೆ ಎಂದು ಕವಿ ಹೊಗಳುತ್ತಿದ್ದಾರೆ. ಈ ಮಾತು ಮಾತೆಯ ವಾಕ್ಚಾತುರ್ಯ ಮತ್ತು ನಾಯಕತ್ವದ ಗುಣವನ್ನು ಸೂಚಿಸುತ್ತದೆ. ಈ ನುಡಿಯ ಮೂಲಕ ಕವಿಯು ಕನ್ನಡ ತಾಯಿ ಅಥವಾ ಮಾತೃಭೂಮಿಯ ಕುರಿತು ಬರೆದಿರುವುದು ಕನ್ನಡ ನಾಡಿನ ಬಗ್ಗೆ ಆಳವಾಗಿ ತಾಯಿಯು ಎಲ್ಲರ ಹೃದಯದಲ್ಲಿ ನೆಲೆಸಿ ಕನ್ನಡಿಗರಲ್ಲಿ ಐಕ್ಯತೆ ಮತ್ತು ಬಲವನ್ನು ತುಂಬಬೇಕು ಎಂಬ ಪ್ರಾರ್ಥನೆ ಗೈಯುತ್ತಾರೆ. ಕನ್ನಡ

ಮಾತೆ ನಮ್ಮ ಹೃದಯಗಳಿಗೆ, ನಮ್ಮ ಮನಸ್ಸಿಗೆ ಶಕ್ತಿ ನೀಡು, ಬಲ ನೀಡು, ಕಷ್ಟಗಳನ್ನು ಎದುರಿಸಲು ಮತ್ತು ಜೀವನದಲ್ಲಿ ಸ್ಥಿರವಾಗಿರಲು ಬೇಕಾದ ಧೈರ್ಯ ಮತ್ತು ಆತ್ಮಸ್ಥೈರ್ಯವನ್ನು ನೀನು ನಮಗೆ ದಯಪಾಲಿಸಬೇಕು; ಕನ್ನಡ ಮಾತೆ ನೀನು ಎಲ್ಲ ಜನರ ಮಾತುಗಳಲ್ಲಿ ನುಡಿಗಳಲ್ಲಿ ನೆಲೆಸಿರುವ, ಎಲ್ಲರೂ ನಿನ್ನ ಬಗ್ಗೆಯೇ ಮಾತನಾಡಬೇಕು, ನಿನ್ನ ಕೀರ್ತಿಯನ್ನೇ ಹಾಡಬೇಕು, ಎಲ್ಲರ ಮಾತುಗಳು ಸತ್ಯ ಮತ್ತು ಶಕ್ತಿಯುತವಾಗಿರಬೇಕು, ನಮ್ಮೆಲ್ಲರ ಮನಸ್ಸುಗಳನ್ನು ಒಂದೇ ಮಾಡಿ ಸೇರಿಸು, ನಾವೆಲ್ಲರೂ ಒಂದಾಗುವಂತೆ ಮಾಡು ಇದೊಂದನ್ನೇ ನಾನು ನಿನ್ನಲ್ಲಿ ಕೇಳಿಕೊಳ್ಳುತ್ತೇನೆ ಎಂದು ಕವಿಯು ಕನ್ನಡ ಮಾತೆಗೆ ಪ್ರಾರ್ಥಿಸುವನು. ಕನ್ನಡ ನಾಡಿನಲ್ಲಿನ ಜನರಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಿ ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಬೆಳೆಸಬೇಕು ಎಂದು ಕೋರಿಕೊಳ್ಳುತ್ತಾನೆ. ಮಾತೆ ನಿನ್ನ ನಿಜವಾದ ಸ್ವರೂಪ ನಿನ್ನ ಜಗದ್ವಿಖ್ಯಾತ ಕೀರ್ತಿಯನ್ನು ನಮಗೆ ಯಾವಾಗ ತೋರಿಸುತ್ತೀಯಾ ಎಂದು ಪ್ರಶ್ನಿಸುತ್ತಾರೆ. ಇದರಿಂದ ಕನ್ನಡ ಮಾತೆಯ ಮಹಿಮೆ ಮತ್ತು ಪ್ರಭಾವವು ಜಗತ್ತಿಗೆಲ್ಲ ಹರಡಿರುವುದು ಸತ್ಯ. ಆ ಮಹಾನ್ ಶಕ್ತಿಯನ್ನು ನಾವು ಕಣ್ಣಾರೆ ಕಾಣುವ ಅಥವಾ ಅನುಭವಿಸುವ ಸೌಭಾಗ್ಯ ಯಾವಾಗ ಲಭಿಸುತ್ತದೆ ಎಂಬ ಹಂಬಲ ಇಲ್ಲಿದೆ.

ಬೇಂದ್ರೆಯವರು ಉತ್ತರ ಕರ್ನಾಟಕದ ಆಡುಭಾಷೆ, ನುಡಿಗಟ್ಟುಗಳು ಮತ್ತು ಜಾನಪದ ಸೊಗಡನ್ನು ತಮ್ಮ ಕಾವ್ಯದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಇವರ ಕವಿತೆಗಳು ನಾದಮಾಧುರ್ಯ ಮತ್ತು ತಾತ್ವಿಕ ಚಿಂತನೆಗಳಿಗೆ ಹೆಸರುವಾಸಿಯಾಗಿವೆ. ಕನ್ನಡ ನಾಡು, ನುಡಿಗೆ ತಮ್ಮದೇ ಆದ ಕಾವ್ಯದ ಕೊಡುಗೆಯನ್ನು ನೀಡಿದ್ದಾರೆ. 'ಕನ್ನಡ ನಾಡರಾಣಿ' ಎಂಬ ಕವಿತೆಯೊಂದಿಗೆ ಕನ್ನಡ ನಾಡಿನ ಹಿರಿಮೆ ಗರಿಮೆಯನ್ನು ಕಟ್ಟಿಕೊಟ್ಟಿದ್ದಾರೆ.

"ಏಳು ಶೂರರ ಖಣಿ, ಏಳು ಶೂರರ ರಾಣಿ
ಏಳು ತೀರದ ವೀರರಸದ ವಾಣಿ
ಏಳು ಮೀರಿದ ಜಾನಿ, ಏಳು ಈ ಸ್ಥಿತಿಗಾಣಿ
ಏಳು ವರ ವರದ ಪಾಣಿ"[28]

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಬೇಂದ್ರೆಯವರು ಕನ್ನಡ ತಾಯಿಯನ್ನು ಎಚ್ಚರಿಸುವ ಹಾಗೂ ಪ್ರೇರೇಪಿಸುವ ಶಕ್ತಿಯುತವಾದ ಕರೆಯಾಗಿದೆ. ಶೂರರ ಗಣಿ ಮತ್ತು ಶೂರರ ರಾಣಿಯೇ ಎಚ್ಚೆತ್ತುಕೋ ಎಂದು ಕನ್ನಡಮಾತೆಯನ್ನು ಉದ್ದೇಶಿಸಿ ನುಡಿದಿದ್ದಾರೆ. ಕನ್ನಡ ನಾಡಿನ ದೇವತೆ ಅಸಾಧಾರಣ ಶೌರ್ಯದ ಮೂಲವಾಗಿದ್ದಾಳೆ, ಅವಳು ನಾಯಕತ್ವದ ಗುಣ ಹೊಂದಿದ್ದಾಳೆ ಎಂಬುದನ್ನು ಈ ಮೇಲಿನ ಪದ್ಯ ಸೂಚಿಸುತ್ತದೆ. ದೇವತೆಯಲ್ಲಿರುವ ಸೂಕ್ತ ಶಕ್ತಿಯನ್ನು ಹೊರ ತರಲು ಕರೆಯಲಾಗುತ್ತದೆ. ಅಂತ್ಯವಿಲ್ಲದ ವೀರರಸದ ಮಾತಿನಂತಿರುವಳು, ಆ ಮಾತೆಯ ಮಾತುಗಳು, ಆಕೆಯ ಅಸ್ತಿತ್ವವೇ ವೀರಾವೇಷದಿಂದ ಕೂಡಿದೆ. ಆಕೆಯ ಉಪಸ್ಥಿತಿಯು ಸುತ್ತಮುತ್ತಲಿನವರಲ್ಲಿ ಧೈರ್ಯ ಮತ್ತು ಹುರುಪನ್ನು ತುಂಬುತ್ತದೆ. ಎಲ್ಲವನ್ನು ಮೀರಿದ ಜ್ಞಾನಿ ಈ ಕೆಟ್ಟ ಸ್ಥಿತಿಯನ್ನು ನೋಡಲು ಎದ್ದೇಳು! ಕನ್ನಡದ ಮಾತೆ ಕೇವಲ ಶೂರಳಲ್ಲ ಜ್ಞಾನಿಯು ಹೌದು. ಸುತ್ತಲೂ ನಡೆಯುತ್ತಿರುವ ಅನ್ಯಾಯ, ಅಧರ್ಮ ಇಂತಹ ಕೆಟ್ಟ ಪರಿಸ್ಥಿತಿಯನ್ನು ಗಮನಿಸಿ ಅದನ್ನು ಸರಿಪಡಿಸಲು ಕಾರ್ಯ ಪ್ರಬುದ್ಧಳಾಗುವಂತೆ ಪ್ರಚೋದಿಸಲಾಗುತ್ತದೆ. ವರಗಳನ್ನು ನೀಡುವ ಕೈಗಳುಳ್ಳ ದೇವತೆಯಂತೆ ಇರುವ ತಾಯಿಯೇ ಎದ್ದೇಳು ಎಂದು ಕೋರಿಕೊಂಡರು. ಈ ಕನ್ನಡ ಮಾತೆ ಕೇವಲ ಹೋರಾಟಗಾರ್ತಿಯಲ್ಲ ಅನುಗ್ರಹ ನೀಡುವ ಶಕ್ತಿಯು ಅವಳಲ್ಲಿದೆ, ಸಮಸ್ಯೆಯನ್ನು ಬಗೆಹರಿಸುವ ಮತ್ತು ರಕ್ಷಿಸುವ ದೈವಿಕ ಶಕ್ತಿ ಆಕೆಯಲ್ಲಿದೆ.

"ಶೂರಪುರುಷರ ಕೊನೆಯು ವೀರಕವಿಗಳ ಗೊನೆಯು
ಬೀರುತನವೆಂಬ ಶಲ್ಯಕ್ಕೆ ಮೊನೆಯು
ಧೀರಸತಿಯರ ತೆನೆಯು ವೀರ ರಸಗಳ ಸೊನೆಯು
ಈ ರೀತಿ ನಿನ್ನ ಮನೆಯು"[29]

ಕವಿ ಬೇಂದ್ರೆಯವರು ಕನ್ನಡ ನಾಡನ್ನು ಕುರಿತು ಈ ಮೇಲಿನಂತೆ ನುಡಿಯುವರು. ಈ ನಾಡಿನಲ್ಲಿ ಹುಟ್ಟಿದವರೆಲ್ಲರೂ ಧೈರ್ಯಶಾಲಿಗಳು, ವೀರರು ಮತ್ತು ಸಾಹಸಿಗಳು. ಶೌರ್ಯವೂ ಈ ನಾಡಿನ ಜನಗಳ ರಕ್ತದಲ್ಲೇ ಇದೆ. ಕನ್ನಡ ನಾಡಿನಲ್ಲಿ ಕೇವಲ ಹೋರಾಟಗಾರರು ಮಾತ್ರವಲ್ಲ, ವೀರರಸಭರಿತ

ಕಾವ್ಯಗಳನ್ನು ಬರೆಯುವ, ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಕವಿಗಳು ಇದ್ದಾರೆ. ಅಂದರೆ ಶೌರ್ಯದ ಜೊತೆಗೆ ಕಲಾತ್ಮಕತೆಯು ಮೇಳೈಸಿದೆ. ಈ ನಾಡಿನ ಜನರು ಹೇಡಿತನವನ್ನು ಸಂಪೂರ್ಣವಾಗಿ ವಿರೋಧಿಸುತ್ತಾರೆ ಮತ್ತು ನಾಶ ಮಾಡುತ್ತಾರೆ. ಇಲ್ಲಿ ಹೇಡಿತನಕ್ಕೆ ಜಾಗವಿಲ್ಲ. ಈ ತಾಯಿ ನಾಡಿನಲ್ಲಿ ಪುರುಷರಷ್ಟೇ ಸರಿಸಮವಾಗಿ ಮಹಿಳೆಯರು ಸಹ ಅಷ್ಟೇ ಧೈರ್ಯಶಾಲಿಗಳು, ವೀರ ಪತ್ನಿಯರು ಮತ್ತು ವೀರ ಮಾತೆಯರು. ಪುರುಷರಿಗೆ ಸಮಾನವಾಗಿ ಅವರೂ ಶೂರರು. ಇಡೀ ಕನ್ನಡ ನಾಡಿನ ಮೂಲೆ ಮೂಲೆಯೂ ವೀರರಸದಿಂದ ತುಂಬಿದೆ. ಇಲ್ಲಿ ಸದಾ ಉತ್ಸಾಹ, ಧೈರ್ಯ ಮತ್ತು ಸಾಹಸದ ಮಾತುಗಳೇ ಕೇಳಿಬರುತ್ತದೆ. ಈ ರೀತಿಯ ಎಲ್ಲಾ ಗುಣಗಳಿಂದ ಕನ್ನಡ ನಾಡು ಕೂಡಿದೆ.

ಹುಯಿಲಗೋಳ ನಾರಾಯಣರಾಯರು ಕನ್ನಡ ಸಾಹಿತ್ಯದ ಪ್ರಮುಖ ನಾಟಕಕಾರರು, ಕವಿ ಮತ್ತು ಸ್ವತಂತ್ರ ಹೋರಾಟಗಾರರು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅವರ ಕೊಡುಗೆ ಗಣನೀಯವಾದದ್ದು. ಇವರು ತಮ್ಮ 'ಬದುಕು ಬರಹ'ದ ಮೂಲಕ ಕನ್ನಡ ನಾಡು ನುಡಿ ಮತ್ತು ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ ಮಹನೀಯರು. ಇವರು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಕನ್ನಡಿಗರಲ್ಲಿ ಒಗ್ಗಟ್ಟು ಮೂಡಿಸುವಲ್ಲಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಜನಪ್ರಿಯ ಗೀತೆಯನ್ನು ರಚಿಸಿದರು. ಉದಯವಾಗಲಿ ನಮ್ಮ ಕನ್ನಡ ನಾಡು ಎಂಬ ಅಭಿಮಾನದಿಂದ ಕನ್ನಡ ನಾಡಿನ ಗೆಲವು, ವೈಭವ ಮತ್ತು ಪರಂಪರೆಯ ಮಹಿಮೆಯನ್ನು ಕೊಂಡಾಡಿದ್ದಾರೆ. ನಮ್ಮ ಸುಂದರ ಕನ್ನಡ ನಾಡು ಸದಾ ಬೆಳಗಲಿ, ಪ್ರಗತಿಪರವಾಗಲಿ ಎಂದು ಕವಿ ಹಾರೈಸುತ್ತಾರೆ. ಕನ್ನಡ ನಾಡು ಜೀವನಕ್ಕೆ ಅಮೂಲ್ಯವಾದ ಸಂಪತ್ತಿನಂತೆ ಜನರ ಆತ್ಮ ಗೌರವದ ಹೆಮ್ಮೆಯ ತಾಣವಾಗಿ ಪರಿಣಮಿಸಿದೆ. ಕ್ಷತ್ರಿಯರ ಅಹಂಕಾರವನ್ನು ನಿಗ್ರಹಿಸಿದ ಪರಶುರಾಮನ ಪಾವನ ನಾಡು ಇದು. ಧರ್ಮ ಮತ್ತು ಶೌರ್ಯದ ಪರಂಪರೆ ಇಲ್ಲಿ ಆಳವಾಗಿದೆ. ಸಮುದ್ರವನ್ನು ದಾಟಿದ ಮಹಾಬಲಿಯಾದ ಹನುಮಂತನನ್ನು ಪೋಷಿಸಿದ, ಪವಿತ್ರಗೊಳಿಸಿದ ಧನ್ಯ ಭೂಮಿ ಇದು. ಕನ್ನಡದ ಮಹಾರಾಜರು ತಮ್ಮ ಧೈರ್ಯ, ಧರ್ಮ, ಬಲ, ಸಾಹಸಗಳಿಂದ ಜಗತ್ತನ್ನು

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಕೊಂಡಾಡಿಸಿಕೊಂಡರು. ಇಂತಹ ವೀರರ ಗರ್ಭವಾಗಿದೆ ಕರ್ನಾಟಕ. ವೀರರು, ಯೋಧರು, ಮಹನೀಯರು ವಾಸಿಸಿದ ನಾಡಾಗಿದ್ದರಿಂದ ಕನ್ನಡ ನಾಡು ತೇಜಸ್ಸಿನಿಂದ ಕಂಗೊಳಿಸುತ್ತಿದೆ. ಅವರ ಪರಾಕ್ರಮ ನಮಗೆ ಪ್ರೇರಣೆಯ ದೀಪವಾಗಿ ನಿಲ್ಲುತ್ತದೆ.

"ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪ ಕಲೆಯಚ್ಚರಿಯ ಕರುಗೋಡು
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜ ವೈವಿದ್ವತ್ತೆಗಳ ಕಾಡು"[30]

ಈ ನುಡಿಯಲ್ಲಿ ಕವಿಯು ಕನ್ನಡ ನಾಡಿನ ಅಲಂಕಾರಿಕ ವೈಶಿಷ್ಟ್ಯವನ್ನು ಮತ್ತು ಅದರ ಅನೇಕ ವಿಶಿಷ್ಟ ಅಂಶಗಳನ್ನು ವಿವರಿಸಿದ್ದಾರೆ. ಕನ್ನಡ ನಾಡಿನಲ್ಲಿ ಲೇಖಕರು, ಕರಣಿಕರು, ಬಹುಮಾನಗಳನ್ನು ಪಡೆದವರು ಬೆಳೆದು ನಾಡಿನ ಆ ಸಾಂಸ್ಕೃತಿಕವೈಭವವನ್ನು ಹೆಚ್ಚಿಸಿದ್ದಾರೆ. ಇಲ್ಲಿ 'ಮಿತಾಕ್ಷರರು' ಎಂಬ ಪದವು ನಿಖರವಾದ ಹಾಗೂ ಹೃದಯದ ಘನತೆ ಹೊಂದಿದ ಸಾಹಿತ್ಯ ಕೃತಿಗಳನ್ನು ರಚಿಸಿದವರನ್ನು ಸೂಚಿಸುತ್ತದೆ. ಜಕ್ಕಣ ಎಂದರೆ ಪ್ರಾಚೀನ ಕಾಲದ ಕಲಾವಿದ ಅಥವಾ ಶಿಲ್ಪಿ. ಆತನು ಕೆತ್ತಿದ ಶಿಲ್ಪಕಲೆಯ ವಿಶೇಷತೆ ಮತ್ತು ಅದರಲ್ಲಿ ಬಿಂಬಿತವಾದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಪ್ರಸ್ತಾಪಿಸುತ್ತದೆ. ಚೊಕ್ಕ ಮತಗಳು ಎಂದರೆ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಲ್ಪನೆಗಳನ್ನು ಸಾರುವವರು. ಕನ್ನಡ ನಾಡು ಧರ್ಮ ಮತ್ತು ಆದರ್ಶಗಳನ್ನು ಸಾರಿದವರ ಮತ್ತು ತತ್ವಜ್ಞಾನಿಗಳ ಸ್ಥಳವಾಗಿದೆ. ಇಲ್ಲಿ ಆಧ್ಯಾತ್ಮಿಕತೆ ಮತ್ತು ಜ್ಞಾನವನ್ನು ಹರಡುವವರಿಗಾಗಿ ಈ ನಾಡು ವಿಶಿಷ್ಟ ನೆಲೆಯಾಗಿದೆ. ಬೊಕ್ಕಸದ ಕಣಜ ಎಂದರೆ ಬಹು ಮಹತ್ವಪೂರ್ಣ ಮತ್ತು ಅಮೂಲ್ಯವಾದ ವಿದ್ವತ್ತಿನ ಸಂಕೇತವಾಗಿದೆ. ವಿದ್ವತ್ತೆ, ಜ್ಞಾನ ಮತ್ತು ಶಾಸ್ತ್ರೀಯ ಕಲೆಯ ಸಾಮ್ರಾಜ್ಯ ಈ ನಾಡಿನಲ್ಲಿದೆ. ಕನ್ನಡ ನಾಡು ಜ್ಞಾನವೇಧಿ ಮತ್ತು ವೈಚಾರಿಕ ಸಂಸ್ಕೃತಿಯ ಮಾದರಿ ಎಂಬುದನ್ನು ತಿಳಿಸುತ್ತದೆ.

ಕನ್ನಡ ನಾಡಿನ ಇತಿಹಾಸ ಧಾರ್ಮಿಕತೆಯ ಮಹತ್ವವನ್ನು ಶುದ್ಧವಾಗಿ ವಿವರಿಸುತ್ತದೆ. ಇಲ್ಲಿನ ಪ್ರತಿಯೊಂದು ವಿಷಯವು ಹೃದಯಾಂಗಮಯವಾಗಿ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ವಿವರಿಸಿದೆ. ಕನ್ನಡ ನಾಡು ಕೃಷ್ಣ, ಭೀಮ, ಕಾವೇರಿ ನದಿಗಳ ಅಧೀನದಲ್ಲಿ ಧರ್ಮ ಮತ್ತು ಶಕ್ತಿಯ ನೆಲೆ. ಅದರಿಂದ ಈ ನಾಡಿಗೆ ದೊರಕಿದ ಪರಂಪರೆಯ ಅಭಿಮಾನವನ್ನು ಹೊತ್ತಿದೆ.

ಬೆಟಗೇರಿ ಕೃಷ್ಣಶರ್ಮ ಅವರು ಕನ್ನಡ ಸಾಹಿತ್ಯದಲ್ಲಿ 'ಆನಂದ ಕಂದ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಇವರು ಕನ್ನಡದ ಜಾಗೃತಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳಲಿ ಭಾಗವಹಿಸಿದ್ದಾರೆ. ಇವರು 'ಅರುಣೋದಯ' ಕವಿತೆಯ ಮೂಲಕ ಕನ್ನಡ ನಾಡಿನ ಭವಿಷ್ಯದ ಬಗ್ಗೆ ಇರುವ ಆಶಾವಾದ ಮತ್ತು ಹೊಳೆಯುತ್ತಿರುವ ಹೊಸ ಬೆಳಕಿನ ಸ್ವರೂಪದ ಬಗ್ಗೆ ಪ್ರಶ್ನೆ ಮತ್ತು ಉತ್ತರರೂಪದಲ್ಲಿ ಹೀಗೆ ಬರೆದಿದ್ದಾರೆ.

"ಕನ್ನಡ ನಾಡಿನ ಮುಂಬಾನೊಳು ಚೆಂ
ಬಣ್ಣದ ಬೆಳಕು ಇದೇತರದು?
ಹೊನ್ನಗದಿರ ಬರಲಿಹನೆಂದೊರೆಯಲು
ಮುನ್ನವೇ ಬಂದರುಣನದೇ ಇದು?
ನನ್ನಿಯು ಅರುಣನದೇ ಇದು!"[31]

ಕನ್ನಡ ನಾಡಿನ ಮುಂದಿನ ಆಕಾಶದಲ್ಲಿ ಕಾಣುತ್ತಿರುವ ಈ ಹೊಂಬಣ್ಣದ ಬೆಳಕು ಯಾವ ರೀತಿಯದು? ಇದು ಕವಿಯ ಪ್ರಶ್ನೆ. ಕರ್ನಾಟಕವು ಹೊಸಯುಗಕ್ಕೆ ಕಾಲಿಡುತ್ತಿರುವಾಗ ಕಾಣುತ್ತಿರುವ ಈ ಭರವಸೆಯ ಬೆಳಕು ಯಾವುದರ ಸಂಕೇತ ಎಂದು ಕವಿ ಕೇಳುತ್ತಿದ್ದಾನೆ. ಸೂರ್ಯನು ಬರುವ ಬದಲು ಬೇರೆ ಏನಾದರೂ ಬಂದಿದೆಯೇ? ಎಂದು ಹೇಳಲು ಇದು ಕವಿಯ ಊಹೆ. ಸೂರ್ಯೋದಯದ ಸಮಯ ಹೊಂಬಣ್ಣದ ಬೆಳಕನ್ನು ನೋಡಿ ಸೂರ್ಯನಿಗಿಂತಲೂ ಶ್ರೇಷ್ಠವಾದ ಬೇರೊಂದು ಮಹತ್ವದ ಬೆಳಕು ಬಂದಿದೆಯೇ? ಎಂದು ಆಶ್ಚರ್ಯ ಪಡುತ್ತಿದ್ದಾರೆ. ಸೂರ್ಯೋದಯಕ್ಕೆ ಮುಂಚೆ ಬರುವ ಅರುಣೋದಯದ ಬೆಳಕೆ ಇದು ಅರುಣೋದಯವೂ, ಸೂರ್ಯನ ಆಗಮನದ ಮುನ್ಸೂಚನೆ ಹಾಗೆಯೆ ಈ ಹೊಸ ಬೆಳಕು ಕನ್ನಡ ನಾಡಿನ ಉಜ್ವಲ ಭವಿಷ್ಯದ ಮುನ್ಸೂಚನೆಯಾಗಿದೆ. ಖಂಡಿತವಾಗಿಯೂ ಇದು ಅರುಣೋದಯದ ಬೆಳಕೆಯಾಗಿದೆ. ಇಲ್ಲಿ ಕವಿಯೇ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ತಮ್ಮ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತಾರೆ. ಈ ಬೆಳಕು ಬೇರೇನೂ ಅಲ್ಲ ಇದು ಕನ್ನಡಿಗರ ಬಾಳಿನಲ್ಲಿ ಹೊಸ ಸೂರ್ಯೋದಯ ತರುವ ಅರುಣೋದಯದ ಬೆಳಕು. ಅಂದರೆ ಕನ್ನಡಿಗರ ಏಕೀಕರಣದ ಕನಸು ನನಸಾಗುವ ಸಮಯ ಹತ್ತಿರ ಬಂದಿದೆ ಎಂಬ ದೃಢ ವಿಶ್ವಾಸ ಮತ್ತು ಭರವಸೆ ಈ ಸಾಲುಗಳಲ್ಲಿ ಗೋಚರಿಸುತ್ತದೆ.

ವಿ.ಕೃ. ಗೋಕಾಕ್ ತಮ್ಮ ಬಹುಮುಖ ಪ್ರತಿಭೆ ಮತ್ತು ಕೊಡುಗೆಗಳಿಂದ ಕನ್ನಡ ಸಾಹಿತ್ಯ ಹಾಗೂ ಈ ನಾಡಿನಲ್ಲಿ ಅಜರಾಮರಾಗಿದ್ದಾರೆ. ಇವರು 'ನಾಡಿನ ಹಾಡು' ಎಂಬ ಕವಿತೆಯಲ್ಲಿ ಕನ್ನಡ ನಾಡು–ನುಡಿಯ ಶ್ರೀಮಂತಿಕೆ ಮತ್ತು ದುಸ್ಥಿತಿಯ ಬಗ್ಗೆ ಕವಿಯು ಮರುಗುತ್ತ ಈ ರೀತಿ ಬರೆಯುತ್ತಾರೆ.

"ತಾರೆಗಳು ಮೇಳವಿಸಿ ಬಂದು ಬಿಟ್ಟಿಹ ಬೀಡು ನಮ್ಮ ಕನ್ನಡದ ನಾಡು
ತಾರೆಗಳ ಒಡಹುಟ್ಟು, ತಾರೆಗಳ ಒಡನಾಡಿ ನಮ್ಮ ಕನ್ನಡದ ನಾಡು
ಭೂಪತಿಯು ಕವಿಯಾಗಿ ಕವಿ ಚಮೂಪತಿಯಾಗಿ ಮೆರೆದಿರುವ ನಮ್ಮ ನಾಡು
ಪತಿಯಿಲ್ಲದವಳಂತೆ ಗತಿಯಿಲ್ಲದಾಗಿಹುದು ಹೀನವಾಗಿಹುದು ನೋಡು"[32]

ನಮ್ಮ ನಾಡಿನಲ್ಲಿ ಅಸಂಖ್ಯಾತ ಮಹನೀಯರು, ಜ್ಞಾನಿಗಳು ಮತ್ತು ಪ್ರತಿಭಾವಂತರು ಜನಿಸಿದ್ದಾರೆ ಮತ್ತು ಬದುಕಿದ್ದಾರೆ. ನಮ್ಮ ನಾಡು ಅತ್ಯಂತ ಶ್ರೇಷ್ಠ ವ್ಯಕ್ತಿಗಳ ನೆಲೆಬೀಡು. ಕನ್ನಡ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಯು ಅತ್ಯಂತ ಪ್ರಾಚೀನ, ಶ್ರೇಷ್ಠ ಮತ್ತು ದೈವಿಕವಾದದ್ದು. ಅದನ್ನು ಮಹಾನ್ ವ್ಯಕ್ತಿಗಳ ಚಿಂತನೆಗಳಷ್ಟೇ ಉನ್ನತವಾಗಿದೆ. ಈ ನಾಡಿನಲ್ಲಿ ಆಡಳಿತಗಾರರು ಕೇವಲ ಅಧಿಕಾರ ನಡೆಸದೆ ಸಾಹಿತ್ಯ ರಚನೆ ಮಾಡಿದರು. ಹಾಗೆಯೇ ಕವಿಗಳು ಕೇವಲ ಬರೆಯದೆ ಸಮಾಜವನ್ನು ಮುನ್ನಡೆಸುವ ಮತ್ತು ಹೋರಾಟಕ್ಕೆ ಪ್ರೇರೇಪಿಸುವ ನಾಯಕರಾದರು. ಆಡಳಿತ ಮತ್ತು ಸಾಹಿತ್ಯ ಇಲ್ಲಿ ಒಟ್ಟಿಗೆ ಸಾಗಿದವು. ಇಷ್ಟೆಲ್ಲಾ ವೈಭವದ ಇತಿಹಾಸವಿದ್ದರೂ ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡು ತನ್ನ ಹಿಂದಿನ ಕೀರ್ತಿಯನ್ನು ಕಳೆದುಕೊಂಡು ದುರ್ಬಲಗೊಂಡು ಅನಾಥ ಸ್ಥಿತಿಗೆ ತಲುಪಿದೆ. ಜನರು ಕನ್ನಡದ ಬಗ್ಗೆ ಆಸಕ್ತಿ ಕಳೆದುಕೊಂಡಿರುವುದನ್ನು ಹಾಗೂ ನಾಡಿನ ಸಮಸ್ಯೆಗಳನ್ನು ಗಮನಿಸಿ ಕವಿ ಈ ರೀತಿ ನೋವಿನಿಂದ ಹೇಳುತ್ತಿದ್ದಾರೆ.

ಮಾಸ್ತಿಯವರು ಕನ್ನಡದ ಸಾಹಿತ್ಯಕ್ಕೆ ಒಂದು ಹೊಸತನದ ಚೈತನ್ಯವನ್ನು ನೀಡಿದ್ದಾರೆ. ಕನ್ನಡದ ನಾಡು ನುಡಿಯ ಕುರಿತು, 'ಕನ್ನಡ ನಾಡಿನ ಸ್ಥಿತಿಯನ್ನು ನೆನೆದು' ಎಂಬ ಕವಿತೆಯಲ್ಲಿ ಕನ್ನಡ ನಾಡಿನ ಅಸ್ತಿತ್ವದ ಕುರಿತು ಹೀಗೆ ನುಡಿದಿದ್ದಾರೆ.

"ಹರಿದು ತುಂಡಾಗಿಹುದು ಇಂದು ಕನ್ನಡ ನಾಡು
ಅಣ್ಣ-ತಮ್ಮಂದಿರು ತಾವಣ್ಣತಮ್ಮಂದಿರೆಂದು
ತಿಳಿಯಲಾರರು, ನಡೆಯಲಾರರು, ಬಾ ಬಂಧು
ಎಂದು ಕರೆಯಲು ಸ್ವಾಮಿ ನನ್ನೂರು ಧಾರ್ವಾಡ
ನನ್ನೂರು ಮೈಸೂರು, ನನ್ನೂರು ಎರಕಾಡು
ಮರ್ಯಾದೆಯಿಂದ ಕರೆಯಿರಿ ನನ್ನ ಎನ್ನುವರು..."[33]

ಕನ್ನಡ ನಾಡು ಇಂದೀಗ ಹಲವಾರು ಭಾಗಗಳಾಗಿ ಹಂಚಿಕೊಂಡಿರುವಂತಾಗಿದೆ. ಅಣ್ಣ ತಮ್ಮಂದಿರೇ ಪರಸ್ಪರರನ್ನು ಗುರುತಿಸಿಕೊಳ್ಳಲಾರರಂತೆ ದೂರವಾಗುತ್ತಿದ್ದಾರೆ. ಬಾ ಬಂದು ಎಂದು ಕರೆಯುವ ಮಮತೆ ಒಗ್ಗಟ್ಟು ಕಡಿಮೆಯಾಗುತ್ತಿರುವಂತೆ ಕಾಣುತ್ತದೆ. ಧಾರವಾಡ, ಮೈಸೂರು, ಎರಕಾಡು, ಎಲ್ಲೆಡೆ ಸ್ವಲ್ಪ ತಮ್ಮತನ; ತಮ್ಮ ಊರಿನ ಅಭಿಮಾನ ಇರುವವರು ಈ ಎಲ್ಲಾ ಊರಿನವರು ಕನ್ನಡಿಗರೇ. ಮಲೆನಾಡು, ಕರಾವಳಿ, ಉತ್ತರ, ದಕ್ಷಿಣ, ಕೊಡಗು ಎಲ್ಲೆಡೆ ಇರುವವರು ಒಂದೇ ನಾಡಿನವರು. ಎಲ್ಲಾ ಕನ್ನಡಿಗರು ಒಂದೇ ಮನೆಯ ಅಣ್ಣತಮ್ಮಂದಿರಂತೆ. ಎಲ್ಲರನ್ನೂ ಒಟ್ಟಾಗಿ ಸೇರಿಸಿಕೊಳ್ಳುವುದೇ ನಮ್ಮ ರಾಷ್ಟ್ರದ, ನಮ್ಮ ನಾಡಿನ ಬಲ. ಹಾಗಾಗಿ ಈ ನಾಡಿನಲ್ಲಿ ನಾವು ಇದ್ದಾಗ ನಮಗೆ ಎದುರಾಳಿ ಎಲ್ಲರೂ, ಎಲ್ಲಾ ಸಹೋದರರೂ ಒಂದಾದರೆ ಜಯ ನಮ್ಮದೇ ಎಂದು ಕವಿ ಕನ್ನಡಿಗರ ಏಕತೆಯನ್ನು ಕೋರಿದ್ದಾರೆ.

ಶಾಂತಕವಿ ಕನ್ನಡ ಭಾಷೆಯ ಭಕ್ತನಾಗಿ ಭಾಷಾಪ್ರೇಮ, ರಾಷ್ಟ್ರಭಕ್ತಿ ಹಾಗೂ ಸಂಸ್ಕೃತಿಯ ಕುರಿತು ಮನೋಜ್ಞ ಕವನಗಳನ್ನು ರಚಿಸಿದರು. ಅವರ 'ಕನ್ನಡ ದಾಸಯ್ಯ' ಪದ್ಯವು ಕನ್ನಡ ಭಾಷೆಯನ್ನು ದೇವತೆಯಂತೆ, ತಾಯಿಯಂತೆ ರೂಪಿಸಿ, ಪೂಜಿಸಿ ಕನ್ನಡಿಗರಲ್ಲಿ ಭಾಷಾ ಸ್ವಾಭಿಮಾನವನ್ನು ಬೆಳೆಸಲು ಪ್ರೇರೇಪಿಸುತ್ತದೆ. ಕನ್ನಡ ಭಾಷೆ ಮಧುರ, ಮೃದು ಕಾವ್ಯ ಹಾಗೂ ಸಂಸ್ಕೃತಿಯ

ಹೊಳೆ ಎಂಬ ತೊಟ್ಟಿಲೆಂದು ಕವಿ ಹೇಳುತ್ತಾನೆ. ಕನ್ನಡದಲ್ಲಿ ಮಾತನಾಡುವಾಗ ಮನಸ್ಸು ಸುಖವಾಗಿರುತ್ತದೆ. ಕನ್ನಡ ಹಾಡುಗಳನ್ನು ಹಾಡುವಾಗ ಹೃದಯ ತುಂಬಿ ಬರುತ್ತದೆ ಎಂದು ಕವಿ ಭಾವೋದ್ವಿಕ್ತನಾಗುತ್ತಾನೆ. ಕನ್ನಡ ಭಾಷೆಯಲ್ಲಿ ಜ್ಞಾನ, ಕಲೆ, ಸಾಹಿತ್ಯ, ಭಕ್ತಿ, ಸಂಸ್ಕೃತಿ ಇವೆಲ್ಲವನ್ನೂ ಕವಿ ಅತ್ಯಂತ ಹೆಮ್ಮೆಯಿಂದ ಹೇಳುತ್ತಾನೆ. ಕನ್ನಡ ನಾಡಿನಲ್ಲಿ ತಾಯಿಯ ಮಮತೆ ಇದೆ, ಕನ್ನಡ ಹಾಡಿನಲ್ಲಿ ಭಕ್ತಿ ಭಾವನೆಗಳಿವೆ, ಕನ್ನಡ ದೇಶದಲ್ಲಿ ಧೈರ್ಯ ಪರಾಕ್ರಮ ಶೌರ್ಯಗಳಿವೆ.

"ಕನ್ನಡ ದೇಶದೆ ದೊಡ್ಡವರಾದಿರಿ
ಕನ್ನಡ ವಿದ್ಯೆಯ ಗಳಿಸಿದಿರಿ
ಕನ್ನಡದಿಂದಲೇ ಸಿರಿವಂತರಾದಿರಿ
ಕನ್ನಡ ದೇಶದೆ ಹೆಸರಾದಿರಿ"[34]

ಕನ್ನಡ ನಾಡು ಶೂರರ ನಾಡಾಗಿದೆ. ಧೈರ್ಯ, ಶೌರ್ಯ, ಸಾಹಸಗಳ ನೆಲ ಇದು. ಈ ನಾಡು ಜ್ಞಾನ, ಶಿಕ್ಷಣ, ಕಲೆ, ಸಂಸ್ಕೃತಿಗಳಲ್ಲಿ ಶ್ರೀಮಂತವಾಗಿದೆ. ಜ್ಞಾನದ ಬೆಳಕನ್ನು ಹರಡುವ ನಾಡಾಗಿದೆ. ಕನ್ನಡ ನಾಡು ಸಂಪತ್ತಿನಲ್ಲಿ, ಸಂಸ್ಕೃತಿಯಲ್ಲಿ, ಸಾಹಿತ್ಯದಲ್ಲಿ ಹಾಗೂ ನೀತಿಯಲ್ಲಿ ಶ್ರೀಮಂತವಾಗಿದೆ. ನಾಡಿಗೆ ಸುಪ್ರಸಿದ್ಧಿ ಗೌರವ ಮತ್ತು ದೊಡ್ಡ ಹೆಸರು ಇದೆ.

ಬಿ.ಎಂ.ಶ್ರೀ ಅವರು ನವೋದಯದ ಪ್ರಮುಖ ಕವಿ. ಇವರು ಕನ್ನಡ ತಾಯ್ನಾಡು ಕುರಿತು 'ಕನ್ನಡ ತಾಯಿಯ ನೋಟ' ಎಂಬ ಕವಿತೆಯಲ್ಲಿ ಕನ್ನಡ ತಾಯಿ, ಕನ್ನಡ ಸಂಸ್ಕೃತಿ, ಕನ್ನಡ ನಾಡು–ನುಡಿ–ನಡೆಗಳ ಕುರಿತು ಹೆಮ್ಮೆಯನ್ನು ಮೂಡಿಸುವ ಕರೆಯಾಗಿದೆ. ಕವಿ ಕನ್ನಡ ನಾಡಿನ ಮಕ್ಕಳಿಗೆ ಒಂದು ಜವಾಬ್ದಾರಿ, ಒಂದು ಕರ್ತವ್ಯ ಹಾಗೂ ಒಂದು ಒಗ್ಗಟ್ಟಿನ ಸಂದೇಶ ನೀಡುತ್ತಾರೆ.

"ಚೆಲುವೆಯರ, ಚೆನ್ನಿಗರ, ಹಿರಿಯ ತಾಯಿ ಮಕ್ಕಳಿರ, ಒಡಹುಟ್ಟಿದವರಾ
ಒಸಗೆ ನುಡಿ ಕೇಳಿದಿರ, ತಾಳಿದಿರ, ಎದೆಯಲ್ಲಿ ತಾಳಿ ಬಾಳುವಿರಾ
ನಾಡು ನುಡಿ ನಡೆಗಳನ್ನು ಮುನ್ನಡೆಗೆ ನಡೆಸುತ್ತಾ ಮುಂದೆ ಸಾಗುವಿರಾ
ಭಾರತದ ಲೋಕದ ಮಕ್ಕಳಲ್ಲಿ ಹಿರಿದಾಗಿ ತೂಕ ತೂಗುವಿರಾ?
ಬನ್ನಿ ಓ ಮಕ್ಕಳಿರಾ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಒಕ್ಕೂರಲಲೆಲ್ಲರೂ ಕೂಗಿ ಈ ಒಕ್ಕೂಗ ಈ ಹಿರಿಯ ಕೂಗ
'ಸಿರಿಗನ್ನಡಂ ಗೆಲ್ಗೆ; ಹಿರಿಗನ್ನಡಂ ಗೆಲ್ಗೆ; ಬಾಳ್ಗೆ ಸಿರಿಗನ್ನಡಂ ಗೆಲ್ಗೆ,
ಬಾಳ್ಗೆ ಕನ್ನಡದ ತಾಯಿ ಗೆಲ್ಗೆ ಬಾಳ್ಗೆ"[35]

ಈ ಮೇಲಿನ ನುಡಿಯಲ್ಲಿ ಕವಿ ಕನ್ನಡ ತಾಯಿಯ ಮಕ್ಕಳನ್ನು ಸ್ತುತಿಸುತ್ತಾನೆ. ಸುಂದರರು, ಸುಜ್ಞಾನಿಗಳು, ದೊಡ್ಡ ಪರಂಪರೆಯವರು, ವಂಶಜರು ಎಂದು ಕರೆದಂತೆ ಒಟ್ಟಿಗೆ ಹುಟ್ಟಿಕೊಂಡವರು, ಒಂದೇ ನಾಡಿನವರು, ಒಂದೇ ನುಡಿಯವರು, ನಮ್ಮ ಮಾತಿನ ಸಂಸ್ಕೃತಿಯ ಮಾಧುರ್ಯತೆಯನ್ನು ಕೇಳಿದ್ದೀರಾ? ಇದನ್ನು ಎದೆಗೆ ಹತ್ತಿಕೊಂಡಿದ್ದೀರಾ? ಕನ್ನಡದ ನುಡಿ ಸಂಸ್ಕೃತಿಯನ್ನು ಹೃದಯದಲ್ಲಿ ಹೊತ್ತುಕೊಂಡು ಅದರ ಮೌಲ್ಯಗಳೊಂದಿಗೆ ಬದುಕುತ್ತೀರಾ? ಎಂದು ಕವಿ ಪ್ರಶ್ನಿಸುತ್ತಾನೆ. ಈ ಪೀಳಿಗೆಯವರು ಕನ್ನಡ ನಾಡಿನ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಮುನ್ನಡಿಗೆಂಯಾಗಿ ಕೊಂಡೊಯ್ಯುವಿರಾ? ಕನ್ನಡದ ಮುಂದುವರಿಬೇಕಾದರೆ ದಾರಿ ನಿಮ್ಮ ಕೈಯಲ್ಲಿದೆ ಎಂದು ಹೇಳುತ್ತಾನೆ. ಪ್ರಪಂಚದ ಎಲ್ಲಾ ಮಕ್ಕಳಲ್ಲಿಯೂ, ಭಾರತದ ಯುವಕರೆಲ್ಲರಿಗೂ, ಕನ್ನಡಿಗರು ತಮ್ಮ ಶ್ರೇಷ್ಠತೆ, ಜ್ಞಾನ ಸಾಧನೆಗಳಿಂದ ಗುರುತಿಸಿಕೊಳ್ಳುವಿರಾ? ಎಂಬ ಕುತೂಹಲದ ಮತ್ತು ನಿರೀಕ್ಷೆಯನ್ನು ತೋರಿದ್ದಾರೆ. ಎಲ್ಲರೂ ಒಗ್ಗೂಡಿ ಬನ್ನಿ, ಕನ್ನಡದ ಒಕ್ಕೂಟಕ್ಕಾಗಿ ಕೈಜೋಡಿಸೋಣ ಎಂದು ಘೋಷಣೆಯೊಂದಿಗೆ ನಮ್ಮ ಭಾಷೆ ಗೆಲ್ಲಲಿ, ನಮ್ಮ ಹಿರಿಮೆ ಗೆಲ್ಲಲಿ, ಜಯವಾಗಲಿ ಕನ್ನಡ ತಾಯಿಗೆ, ಜಯವಾಗಲಿ ಎಂದು ನುಡಿದಿದ್ದಾರೆ. ಕನ್ನಡ ಭಾಷೆಯನ್ನು ಉಳಿಸುವ ಮತ್ತು ರಾಷ್ಟ್ರಮಟ್ಟಕ್ಕೆ ಎತ್ತಿಕೊಳ್ಳುವ ಶಪತವಾಗಿದೆ.

ಬೆನಗಲ್ ರಾಮ್ರಾವ್ ಅವರು ಕನ್ನಡ ಭಾಷೆ ಮತ್ತು ಕನ್ನಡಿಗರ ಒಕ್ಕೂಟದ ಹಿತಕ್ಕಾಗಿ ಕೆಲಸ ಮಾಡಿದವರು. ಕನ್ನಡ ಭಾಷೆ, ಕನ್ನಡ ನಾಡಿನ ಹೆಮ್ಮೆ ಮತ್ತು ಕನ್ನಡಿಗರ ಏಕತೆಯನ್ನು ಬೆಳೆಸುವ ಪ್ರಯತ್ನಗಳಲ್ಲಿ ಅವರು ಪಾಲ್ಗೊಂಡಿದ್ದರು. ಹಿಂದಿನ ವಿಂಗಡಿತ ಕನ್ನಡ ಪ್ರಾಂತ್ಯಗಳನ್ನು ಏಕಗೊಳಿಸಲು ಹೀಗೆ ನಡೆಯುತ್ತಾರೆ.

"ಕನ್ನಡವನ್ನುಳಿದೆನಗೆ ಅನ್ಯ ಜೀವನವಿಲ್ಲ
ಕನ್ನಡವೇ ಎನ್ನುಸಿರು ಪೆತ್ತೆನ್ನ ತಾಯಿ

ಕನ್ನಡವೇ ಧನ ಧಾನ್ಯ ಕನ್ನಡವೇ ಮನೆ ಮಾನ್ಯ
ಕನ್ನಡವೇ ಎನಗಾಯಿತು ಕಣ್ಣು ಕಿವಿ ಬಾಯಿ"[36]

ಕವಿ ಕನ್ನಡ ಭಾಷೆಯ ಬಗ್ಗೆ ತನ್ನ ಗಾಢವಾದ ಪ್ರೀತಿಯನ್ನು ವ್ಯಕ್ತಪಡಿಸುತ್ತಾನೆ. ಕನ್ನಡವಿಲ್ಲದೆ ತನ್ನ ಜೀವನವೇ ಇಲ್ಲ ಅಂದರೆ ಕನ್ನಡವೇ ನನ್ನ ಅಸ್ತಿತ್ವ ನನ್ನ ಜೀವನಕ್ಕೆ ಕನ್ನಡವೇ ಆಧಾರ, ಕನ್ನಡದಿಂದ ಬೇರ್ಪಟ್ಟರೆ ನನಗೆ ಬೇರೆ ಜೀವನವೇ ಇಲ, ಕನ್ನಡ ಭಾಷೆಯೇ ನನ್ನ ಶ್ವಾಸ, ಕನ್ನಡ ತಾಯಿಯೇ ನನ್ನನ್ನು ಹುಟ್ಟಿಸಿದ ತಾಯಿ ಎಂಬಂತೆ; ಅವಳು ನನಗೆ ಜೀವನ ಮೌಲ್ಯ ಸಂಸ್ಕೃತಿ ಎಲ್ಲವನ್ನು ಕೊಟ್ಟಿದ್ದಾಳೆ. ಕನ್ನಡ ನನಗೆ ಸಂಪತ್ತು, ಕನ್ನಡ ನನಗೆ ಧಾನ್ಯ, ಕನ್ನಡವೇ ನನಗೆ ಮನೆತನ, ಗೌರವ, ಸನ್ಮಾನ. ನನ್ನ ಜೀವನದ ಶ್ರೀಮಂತಿಕೆಯ ಮೂಲ ಕನ್ನಡವೇ. ನಾನು ನೋಡುವ ಕಣ್ಣು, ಕೇಳುವ ಕಿವಿಯು, ಮಾತನಾಡುವ ಬಾಯಿ, ಇವುಗಳನ್ನೆಲ್ಲ ಕನ್ನಡವೇ ನನಗೊದಗಿಸಿದೆ. ಅಂದರೆ ನನ್ನ ಜ್ಞಾನ, ಸಂಸ್ಕೃತಿ, ಮಾತು, ಕಲೆ ಎಲ್ಲವೂ ಕನ್ನಡದಿಂದ ಬಂದಿದೆ. ಈ ಬದುಕಿನ ಎಲ್ಲಾ ಮೌಲ್ಯಗಳು ಕನ್ನಡದಲ್ಲಿ ಇರುವುದಾಗಿ ಕವಿ ಹೇಳುತ್ತಾರೆ.

"ಕನ್ನಡ ಸವಿಮಾತು। ಮನ್ನಣೆಯ ಪಳಮಾತು
ಕನ್ನಡ ಸರಸ್ವತಿಯು। ನವಕಲ್ಪ ಲತೆಯು
ಕನ್ನಡದ ವರ ಚರಿತೆ। ವಿಮಲ ಗಂಗಾಶರಿತೆ
ಕನ್ನಡದ ಸಿರಿ ಪೆಂಪು। ಎನಗೆ ನರುಗಂಪು"[37]

ಕನ್ನಡ ನುಡಿಯ ಮಾತುಗಳು ಸುವಾಸನೆಯಂತೆ ಸಿಹಿಯು ಹೌದು. ಕನ್ನಡ ಮಾತುಗಳಲ್ಲಿ ಸೌಂದರ್ಯ, ಮೃದುತ್ವ ಮತ್ತು ಗೌರವ ತುಂಬಿದೆ. ಪ್ರತಿಯೊಂದು ಮಾತು ಮನಸ್ಸಿಗೆ ಮನ್ನಣೆಯಂತೆ ತಂಪು ನೀಡುತ್ತದೆ. ಕನ್ನಡ ಸರಸ್ವತಿಯೇ ಅಂದರೆ ಕನ್ನಡ ಭಾಷೆಯೇ. ಜ್ಞಾನ, ಕಲಾ, ಸಾಹಿತ್ಯಗಳ ತಾಯಿ, ಅವಳು ನವ ಕಲ್ಪಲತೆ. ಮನಸ್ಸಿನಲ್ಲಿ ಆಸೆಗಳನ್ನು, ಕಲೆಗಳನ್ನು, ಜ್ಞಾನವನ್ನು, ಪೂರೈಸುವ ಅದ್ಭುತ ವೃಕ್ಷ. ಕನ್ನಡದ ಇತಿಹಾಸ ಬಹಳ ಘನತೆ ಪೂರ್ಣ. ಅದು ಗಂಗಾನದಿಯಂತೆ ಶುದ್ಧ, ಪವಿತ್ರ ಮತ್ತು ಅಪಾರವಾದ ಪರಂಪರೆ. ಕನ್ನಡ ನಾಡಿನ ಪರಂಪರೆ, ಧರ್ಮ, ಶೌರ್ಯ, ಸಾಹಿತ್ಯ, ಇವೆಲ್ಲ ಪವಿತ್ರ ಗಂಗೆಯಂತೆ

ನಿರ್ದೋಷಿ ಹಾಗೂ ಶ್ರೀಮಂತವಾಗಿವೆ. ಕನ್ನಡ ನಾಡಿನ ಸಂಪತ್ತು, ಸಂಸ್ಕೃತಿ, ಕಥೆಯ ಕಂಪು ಇವೆಲ್ಲ ನನಗೆ ಹೊಸ ಹೊಸ ಉತ್ಸಾಹ, ಗರ್ವ, ಆನಂದ ತುಂಬಿಸುತ್ತವೆ. ನನಗೆ ಕನ್ನಡದ ಮಹಿಮೆ ಬಗ್ಗೆ ಯೋಚಿಸಿದಾಗ ರಂಗೇರುವ ಅನುಭವ ಉಂಟಾಗುತ್ತದೆ. ಕವಿಯು ಕನ್ನಡದ ಬಗ್ಗೆ ತಾನಿರುವ ಆಳವಾದ ಪ್ರೀತಿ ಗೌರವ ಹೆಮ್ಮೆ ಇವೆಲ್ಲವನ್ನು ಸುಂದರವಾಗಿ ವ್ಯಕ್ತಪಡಿಸಿದ್ದಾನೆ.

ಕನ್ನಡವು ತನ್ನ ಜೀವನದಲ್ಲಿ ನೀಡಿದ ಗೌರವ, ಸಾಹಿತ್ಯ ಪ್ರೇರಣೆ ಮತ್ತು ಒಗ್ಗಟ್ಟಿನ ಮೌಲ್ಯಗಳನ್ನು ಕವಿ ಹೃದಯಪೂರ್ವಕವಾಗಿ ಹೀಗೆ ವರ್ಣಿಸಿದ್ದಾನೆ.

“ಕನ್ನಡ ಸನ್ಮಾನ । ವೆನಗದುವೇ ವರಮಾನ
ಕನ್ನಡಿಗರ ಸ್ವತಂತ್ರ । ವದೆ ಪರಮ ಮಂತ್ರ
ಕನ್ನಡದ ಕೀರ್ತಿ । ಎನ್ನ ಚಿತ್ರದ ಸ್ಫೂರ್ತಿ
ಕನ್ನಡದ ಒಗ್ಗೂಟ । ವೆನಗದೆ ಕಿರೀಟ”38

ಕವಿಯು ತನಗೆ ಸಿಗಬಹುದಾದ ಅತ್ಯಂತ ದೊಡ್ಡ ಗೌರವವೆಂದರೆ ಕನ್ನಡದ ಸನ್ಮಾನ. ಕನ್ನಡ ಭಾಷೆಯನ್ನು ಸಂಭ್ರಮಿಸುವುದು. ನನಗೆ ದೊರೆಯುವ ಅತ್ಯಮೂಲ್ಯ ವರವೆಂದರೆ ಕನ್ನಡಿಗರ ಸ್ವತಂತ್ರ, ಚಿಂತನೆ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯವನ್ನು ಹೊಂದಿರುವುದು. ಮಹತ್ವದ ಮಂತ್ರ ಎಂದರೆ ಅವರು ತಮ್ಮ ಭಾಷೆಯನ್ನು ಸಂಸ್ಕೃತಿಯನ್ನು ವೃದ್ಧಿಗೊಳಿಸುವ ಸಾಮರ್ಥ್ಯ ಹೊಂದಿರಬೇಕು. ಕನ್ನಡದ ಖ್ಯಾತಿ ಕನ್ನಡದ ಮಹಿಮೆ ಇವೆಲ್ಲವೂ ನನ್ನ ಜೀವನದ ಚಿತ್ರಕ್ಕೆ ಸ್ಫೂರ್ತಿ. ಈ ಕವಿಗೆ ಕನ್ನಡವೇ ಸೃಜನಾತ್ಮಕ ಶಕ್ತಿ. ಕನ್ನಡಿಗರ ಏಕತೆ ಅದು ನನ್ನ ತಲೆಗೆ ಕಿರೀಟ ಇದ್ದಂತೆ. ಕನ್ನಡಿಗರು ಒಟ್ಟಾಗಿ ಇರುವುದೇ ಅತ್ಯಂತ ಮಹಿಮೆ ಎಂದು ಕವಿಯು ತನ್ನ ತುರಣೆಯನ್ನು ತೋರುತ್ತಾರೆ.

ಪ್ರಸ್ತುತ ಲೇಖನದಲ್ಲಿ ಏಳನೆಯ ಶತಮಾನದಿಂದ ಮೊದಲ್ಗೊಂಡು 20ನೆಯ ಶತಮಾನದವರೆಗೂ ಕನ್ನಡದ ಅಭಿಮಾನ ತೋರಿದ ಪ್ರಮುಖ ಕವಿಗಳ ಕವಿತೆಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದೆ. ಇದರಲ್ಲಿರುವ ಕವಿತೆಗಳು ಕನ್ನಡದ ಪವಿತ್ರತೆಗೆ, ಪರಂಪರೆಗೆ, ಗೌರವಕ್ಕೆ ಮತ್ತು ಒಗ್ಗಟ್ಟಿಗೆ ಸಮರ್ಪಿತವಾದ ಕವಿತೆಗಳಾಗಿವೆ. ಕವಿಗಳು ನಾಡ, ನುಡಿ, ಸಂಸ್ಕೃತಿ, ಸಾಹಿತ್ಯ ಹೆಮ್ಮೆ, ಒಗ್ಗಟ್ಟುಗಳ ಸುತ್ತ ಕವಿತೆಗಳನ್ನು

ಹೇಳುತ್ತಿದ್ದಾರೆ. ಇದರಲ್ಲಿರುವ ಕಾವ್ಯಗಳಲ್ಲಿ ಕನ್ನಡ ತಾಯಿಯನ್ನು ಜೀವಂತ ರೂಪದಲ್ಲಿ ಚಿತ್ರಿಸಿದ್ದಾರೆ. ಕನ್ನಡದ ನುಡಿಯ ಸೌಂದರ್ಯ, ಪೌರಾಣಿಕತೆ ಸಾಮಾನ್ಯ ಜನರ ಬದುಕಿಗೆ ಸುವಾಸನೆ ಎಲ್ಲವೂ ಕಾವ್ಯಗಳಲ್ಲಿ ವೈಯಕ್ತಿಕವಾಗಿದೆ. ನಾಡಿನ ಯೋಧರು, ರಾಜರು, ಕವಿಗಳು, ವೀರರಲ್ಲಿ ಜೀವಂತ ಸಂಸ್ಕೃತಿಕ ಹೊಳಪು ಇವುಗಳ ಸ್ಮರಣೆವಾಗಿದೆ. ಕಾವ್ಯಗಳು ನಾಡಿನ ಏಕತೆಯನ್ನು ಪ್ರಾಂತ್ಯ–ಪಂಥ–ಬೇಧಗಳ ಮೀರಿ ಕನ್ನಡತನವನ್ನು ಸಾರುತ್ತವೆ. ಜನರಲ್ಲಿ ಕನ್ನಡದ ಕಾಳಜಿ, ಸಾಹಿತ್ಯ ಪ್ರೀತಿ, ನಾಡಿನ ಸೇವೆ ಮತ್ತು ಹೊಸ ಪೀಳಿಗೆ ಕನ್ನಡ ಬೋಧನೆ ಮಾಡುವ ಕರೆಯನ್ನು ನೀಡುವ ಸಾಲುಗಳಿವೆ. ಇಲ್ಲಿನ ಕವಿತೆಗಳು ಕರ್ನಾಟಕದ ಶ್ರೀಮಂತ ಪರಂಪರೆ, ಭವ್ಯ ಇತಿಹಾಸ, ನಿಸರ್ಗ ಸಂಪತ್ತು ಮತ್ತು ಕನ್ನಡ ಭಾಷೆ ಸಾಹಿತ್ಯ ಹಿರಿಮೆಗಳನ್ನು ಕೊಂಡಾಡಿವೆ. ಕವಿಗಳು ಕನ್ನಡಿಗರೆಲ್ಲರೂ ಜಾತಿ, ಮತ, ಭೇದ ಮರೆತು ಒಂದೇ ತಾಯಿಯ ಮಕ್ಕಳೆಂದು ಬಾಳಬೇಕು ಎಂಬ ಸಂದೇಶವನ್ನು ನೀಡಿದ್ದಾರೆ. ಈ ಕನ್ನಡ ಭಾಷೆ ಕೇವಲ ಸಂವಹನ ಮಾಧ್ಯಮವಲ್ಲ. ಅದು ಕನ್ನಡಿಗರ ಉಸಿರು ಮತ್ತು ಬದುಕು ಎಂಬ ಆಳವಾದ ಕಾಳಜಿಯನ್ನು ಕವನಗಳು ವ್ಯಕ್ತಪಡಿಸುತ್ತವೆ. ಕನ್ನಡ ನಾಡು, ನುಡಿ, ನೆಲ, ಜಲದ ಹಿತಾಸಕ್ತಿಗಳಿಗೆ ಕನ್ನಡಿಗರು ಒಟ್ಟಾಗಿ ಹೋರಾಡಬೇಕು ಎಂಬ ಸಂದೇಶವನ್ನು ನೀಡುತ್ತದೆ.

ಕನ್ನಡ ಭಾಷೆ ನಾಡು ಮತ್ತು ಕನ್ನಡಿಗರ ಭಾವೈಕ್ಯತೆ, ಹೆಮ್ಮೆ ಹಾಗೂ ಅಸ್ಮಿತೆಯ ಮಹತ್ವವನ್ನು ಎತ್ತಿ ಹಿಡಿಯುವುದುದಾಗಿದೆ. ಸಮಸ್ತ ಕನ್ನಡಿಗರನ್ನು ಒಗ್ಗೂಡಿಸುವ ಮತ್ತು ಅವರಲ್ಲಿ ಏಕತೆ ಭಾವವನ್ನು ಮೂಡಿಸುವ ಒಂದು ಪ್ರಬಲವಾದ ಬೆಸುಗೆ ಇದಾಗಿದೆ. ಕನ್ನಡಿಗರು ತಮ್ಮ ಭಾಷೆ ಮತ್ತು ನಾಡಿನ ಬಗ್ಗೆ ಪ್ರೇರೇಪಿಸುವುದು ಇದರ ಆಶಯ. ಕರ್ನಾಟಕದ ಪ್ರತ್ಯೇಕತೆ ಮತ್ತು ವೈಶಿಷ್ಟ್ಯತೆಯನ್ನು ಸಾರುವ ಸಂದೇಶವನ್ನು ಇದು ಒಳಗೊಂಡಿದೆ. ಕನ್ನಡ ಭಾಷೆ ಕೇವಲ ಭಾವನಾತ್ಮಕ ವಿಷಯವಾಗಿರದೆ. ಅದು ಜನರ ಬದುಕಿನ ಭಾಷೆಯಾಗಬೇಕು ಅಂದರೆ ಅದನ್ನು ಭಾಷೆ ಎಂಬ ಆಶಯವನ್ನು ಕವನಗಳು ಪ್ರತಿ ಬಿಂಬಿಸುತ್ತವೆ. ಕನ್ನಡದ ಪ್ರಸ್ತುತ ಸವಾಲುಗಳು ಮತ್ತು ಭವಿಷ್ಯದ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಕನ್ನಡಿಗರಲ್ಲಿ ಕನ್ನಡ ಪರಂಪರೆ ಹೋರಾಟದ ಕಿಚ್ಚನ್ನು ಮತ್ತು

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಜಾಗೃತಿಯನ್ನು ಇಲ್ಲಿರುವ ಕವಿತೆಗಳು ನೆರವಾಗುತ್ತವೆ. ವಿಶೇಷವಾಗಿ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಇಲ್ಲಿ ಬರುವ ಕವಿತೆಗಳು ಸ್ಫೂರ್ತಿ ನೀಡುತ್ತವೆ. ಕನ್ನಡ ಭಾಷೆಯನ್ನು ಉಳಿಸಬೇಕಾದರೆ ಅದನ್ನು ಮಾತಾಡಬೇಕು, ಬರೆಯಬೇಕು, ಬಳಸಬೇಕು. ಈ ವಿಚಾರವನ್ನು ಕವನಗಳ ಮೂಲಕ ಮನಸ್ಸಿನಲ್ಲಿ ಬಿತ್ತುವ ಪ್ರಯತ್ನವಾಗಿದೆ. ಕನ್ನಡ ನಾಡಿನ ವೈಭವ, ಐತಿಹಾಸಿಕ ಪರಂಪರೆ, ಧೈರ್ಯ, ಕಲೆ, ಸಾಹಿತ್ಯ ಇವೆಲ್ಲವನ್ನು ಕವಿತೆಗಳ ಮೂಲಕ ಕೊಂಡಾಡಿದೆ. ಯುವಕರಿಗೆ ಕನ್ನಡದ ಮೌಲ್ಯ, ತಾಯ್ನುಡಿಯ ಮಮತೆ ತಿಳಿಸಿಕೊಡುವುದು ಮತ್ತು ಅವರು ಕನ್ನಡಕ್ಕಾಗಿ ಕೆಲಸ ಮಾಡುವಂತೆ ಉತ್ತೇಜಿಸುವುದಾಗಿದೆ.

ಕಠಿಣ ಪದಗಳ ಅರ್ಥ:

ವಿಶದ=ಸುಂದರ

ಅಭಿಸ್ತುತಮಪ್ಪ=ಸ್ತುತ್ಯವಾದ

ಕಿಸುವೊಳಲ=ಪಟ್ಟದಕಲ್ಲು

ಪುಲಿಗೆರೆ=ಲಕ್ಷ್ಮೇಶ್ವರ

ಒಂಕುಂದ=ಒಕ್ಕುಂದ

ಚಾಗದ=ತ್ಯಾಗದ

ಗೇಯ=ಸಂಗೀತ

ಗೆಟ್ಟಿಯ=ಗೋಷ್ಠಿಯ

ಮಾನಿಸರೆ ಮಾನಿಸರ್=ಮನಸುಳ್ಳ ಮನುಷ್ಯರು

ಪಲವುಂ ನಾಲಿಗೆಯುಳ್ಳವಂ=ಆದಿಶೇಷ

ಕಾಲೂರ್ಗಳಿಂ=ಹಳ್ಳಿಗಳಿಂದ

ಕಯ್ಗಳಿಂ=ಹೊಲಗಳಿಂದ

ಶುಕ=ಗಿಳಿ

ಪಿಕ=ಕೋಗಿಲೆ

ಬೆಳವಲ=ಗದಗ–ಧಾರವಾಡ ಜಿಲ್ಲೆಗಳ ಸುತ್ತ–ಮುತ್ತಲಿನ ಪ್ರದೇಶ

ತೊಗೆ=ಬೇಳೆ ಸಾರು

ಸಕ್ಕದಂ=ಸಂಸ್ಕೃತದ

ಘೃತ=ತುಪ್ಪ

ಸೊಗಯಿಪ=ಸೊಗಸಾದ

ಅಪ್ಪುದಪ್ಪುದು=ಹೌದು...ಹೌದು...

ಆದೊಡಂ=ಆದರೂ

ಬರವೆಂ=ಹೇಳಲಿ

ಬೆಳ್ನುಡಿ=ಸವಿನುಡಿ

ಕೊನೆಯ ಟಿಪ್ಪಣಿಗಳು :

1. ಡಾ. ಅರ್ವಿಯಸ್ ಸುಂದರಂ,: ಶ್ರೀವಿಜಯನ ಕವಿರಾಜಮಾರ್ಗಂ, ಪುಟ ಸಂಖ್ಯೆ. 21
2. ಅದೇ ಪು.ಸಂ. 21
3. ಡಾ.ಎನ್.ಎದ್. ಲಕ್ಷ್ಮೀನಾರಾಯಣ್ಣ ಭಟ,:ಕನ್ನಡ ಸಾಹಿತ್ಯ ಚರಿತ್ರೆ, ಪುಟ ಸಂಖ್ಯೆ. 28
4. ಬಿ.ಎಂ.ಶ್ರೀ.:ಕನ್ನಡದ ಬಾವುಟ, ಪು.ಸಂ.19
5. ಅದೇ ಪು.ಸಂ. 20
6. ಅದೇ ಪು.ಸಂ. 21
7. ಅದೇ ಪು.ಸಂ. 22
8. ಅದೇ ಪು ಸಂ. 22
9. ಅದೇ ಪು ಸಂ. 22
10. ಅದೇ, ಪು ಸಂ. 23
11. ಅದೇ, ಪು ಸಂ. 23
12. ಅದೇ, ಪು ಸಂ. 89
13. ಅದೇ, ಪು ಸಂ. 89

14. ಅದೇ, ಪು ಸಂ. 89
15. ಅದೇ, ಪು ಸಂ. 90
16. ಅದೇ, ಪು ಸಂ. 91
17. ಅದೇ, ಪು ಸಂ. 92
18. ಅದೇ, ಪು ಸಂ. 95
19. ಅದೇ, ಪು ಸಂ. 95
20. ಅದೇ, ಪು ಸಂ. 96
21. ಅದೇ, ಪು ಸಂ. 96
22. ಅದೇ, ಪು ಸಂ. 96
23. ಅದೇ, ಪು ಸಂ. 97
24. ಅದೇ, ಪು ಸಂ. 98
25. ಅದೇ, ಪು ಸಂ. 98
26. ಅದೇ, ಪು ಸಂ. 98–99
27. ಅದೇ, ಪು ಸಂ. 100
28. ಅದೇ, ಪು ಸಂ. 101
29. ಅದೇ, ಪು ಸಂ. 102
30. ಅದೇ, ಪು ಸಂ. 103
31. ಅದೇ, ಪು ಸಂ. 103
32. ಅದೇ, ಪು ಸಂ. 104
33. ಅದೇ, ಪು ಸಂ. 128
34. ಅದೇ, ಪು ಸಂ. 131
35. ಅದೇ, ಪು ಸಂ. 156
36. ಅದೇ, ಪು ಸಂ. 156
37. ಅದೇ, ಪು ಸಂ. 156
38. ಅದೇ, ಪು ಸಂ. 156

ಪರಾಮರ್ಶನ ಗ್ರಂಥಗಳು :

1. ಆರಿಯಸ್ ಸುಂದರಂ, ಶ್ರೀ ವಿಜಯ ಕವಿರಾಜಮಾರ್ಗಂ, 2017, ಪ್ರಕಾಶಕರು, ಕನ್ನಡದ ಪುಸ್ತಕ ಪ್ರಾಧಿಕಾರ, ಬೆಂಗಳೂರು
2. ಬಿ.ಎಂ.ಶ್ರೀ., ಕನ್ನಡದ ಭಾವುಟ, 2018, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು–ಬೆಂಗಳೂರು
3. ಮುಗಳಿ ರಂ. ಶ್ರೀ.(ಸಂ), ಕನ್ನಡ ಕಾವ್ಯ ಸಂಚಯ, 1970, ಸಾಹಿತ್ಯ ಅಕಾಡೆಮಿ, ನವದೆಹಲಿ
4. ರೇವನ್.ನಾ, ಕರ್ನಾಟಕ ನುಡಿ ನಿಪಣರು, 2013, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
5. ಲಕ್ಷ್ಮೀ ನಾರಾಯಣ ಭಟ್ಟ ಎನ್.ಎಸ್., ಕನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬೆಂಗಳೂರು
6. ವೆಂಕಟಾಚಲಶಾಸ್ತ್ರ, ಟಿ.ವಿ.(ಸಂ), ಕನ್ನಡ ಚೆನ್ನುಡಿ, 1991, ಸುವಿದ್ಯಾ ಪ್ರಕಾಶನ, ಬೆಂಗಳೂರು
7. ವೆಂಕಟಸುಬ್ಬಯ್ಯ ಜಿ.(ಸಂ), ರಾಜಶ್ರೀ ಸತೀಶ(ಸ.ಸಂ), ಕನ್ನಡ ಕ್ಲಿಷ್ಟ ಪದಕೋಶ, ಪ್ರಿಸಮ್ ಬುಕ್ಸ್ ಪ್ರೈ.ಲಿ. ಬೆಂಗಳೂರು
8. ಶಿವರುದ್ರಪ್ಪ ಜಿ.ಎಸ್., ಕನ್ನಡ ಕವಿಗಳ ಕಾರ್ಯ ಕಲ್ಪನೆ, 1989, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
9. ಶಿವರಾಮ ಕಾರಂತ ಕೆ., ಸಿರಿಗನ್ನಡ ಅರ್ಥಕೋಶ ಕನ್ನಡ–ಕನ್ನಡ, 1990,

ಲೇಖಕರು : ಡಾ. ಮಹಾಂತೇಶ ದುರಗಣ್ಣವರ
ಕನ್ನಡ ಅತಿಥಿ ಉಪನ್ಯಾಸಕರು,
ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ,
ರಾಣಿಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ,
mahanteshnkst@gmail.com

***

ವಿದ್ಯಾರ್ಥಿಗಳಲ್ಲಿ ನಾಡಗೀತೆ ಅರಿವು : ಪ್ರಸ್ತುತತೆ

ನಾಡಗೀತೆ ಎಂಬುದು ದೇಶದ ಜನಪದ ಸಂಸ್ಕೃತಿಗಳು, ಇತಿಹಾಸ ಮತ್ತು ಮೌಲ್ಯಗಳ ಮೆರಗು. ಕನ್ನಡ ನಾಡಗೀತೆಯು ವಿಶೇಷವಾಗಿ ನಾಡಿನ ಭಾವನೆ, ಪ್ರಕೃತಿ, ರೈತನ ಜೀವನ, ಸಂಸ್ಕೃತಿ, ಹಬ್ಬ– ಹರಿದಿನಗಳು ಮತ್ತು ಸಾಮಾಜಿಕ ಮೌಲ್ಯಗಳು, ಮಕ್ಕಳಿಗೂ ಯುವಕರಿಗೂ ಮನೋಜ್ಞವಾಗಿ ಪರಿಚಯಿಸುತ್ತವೆ. ವಿದ್ಯಾರ್ಥಿಗಳಲ್ಲಿ ನಾಡಗೀತೆಯ ಅರಿವು ಹೆಚ್ಚಿಸುವುದು ಸಂಸ್ಕೃತಿ ಜ್ಞಾನದ ಬೆಳವಣಿಗೆಗೆ ಕೈಗನ್ನಡಿಯಾಗಿದೆ. ನಾಡಗೀತೆ ಒಂದು ಸಮಾಜದ ಸಂಸ್ಕೃತಿ, ಭಾವನೆ, ಇತಿಹಾಸ ಮತ್ತು ಬದುಕಿನ ಮೌಲ್ಯಗಳನ್ನು ಹೊತ್ತುಕೊಂಡಿರುವ ಅಮೂಲ್ಯ ಜನಪದರ ಸಂಪತ್ತು. ಇವು ಸರಳತೆ, ನೈಸರ್ಗಿಕತೆ ಮತ್ತು ಜನಜೀವನದ ಅನುಭವಗಳಿಂದ ಹುಟ್ಟಿದುದರಿಂದ ಎಲ್ಲ ವಯಸ್ಸಿನವರಿಗೂ ಆಪ್ತವಾದವು. ವಿದ್ಯಾರ್ಥಿ ಸಮುದಾಯವು ಹೊಸ ತಲೆಮಾರನ್ನು ರೂಪುಗೊಳಿಸುವ ಪ್ರಮುಖ ಹಂತವಾಗಿರುವುದರಿಂದ, ನಾಡಗೀತೆಯ ಅರಿವು ಅವರಲ್ಲಿ ಮುಖ್ಯವಾಗುತ್ತದೆ. ನಾಡಗೀತೆ ಜನಾಂಗಗಳ ಹೃದಯದ ಸ್ಪಂದನೆ. ಜನಜೀವನ, ಸಂಸ್ಕೃತಿ, ಪರಂಪರೆ, ಭಾವನೆ, ಸಂತೋಷ – ದುಃಖ ಎಲ್ಲವೂ ನಾಡಗೀತೆಗಳಲ್ಲಿ ಪ್ರತಿಫಲಿಸುತ್ತವೆ. ಕನ್ನಡ ಮತ್ತು ನಾಡಗೀತೆ ಪ್ರಕೃತಿ, ಶ್ರಮ, ಕೃಷಿ, ಹಬ್ಬ – ಹರಿದಿನ, ದೇವತೆ, ಜನಪದ ಕಥೆಗಳು ಸೌರಭವನ್ನು ಹೊತ್ತು ತರುತ್ತದೆ. ಇಂತಹ ಅಮೂಲ್ಯ ಪರಂಪರೆಯನ್ನು ಹೊಸ ಪೀಳಿಗೆಗೆ ಪರಿಚಯಿಸುವುದು ಅತ್ಯಗತ್ಯ. ವಿಶೇಷವಾಗಿ

ವಿದ್ಯಾರ್ಥಿಗಳಲ್ಲಿ ನಾಡಗೀತೆಯ ಅರಿವು ಬೆಳೆಸುವುದು ಸಂಸ್ಕೃತಿ ಸಂರಕ್ಷಣೆಗೆ ಮುಖ್ಯವಾಗುತ್ತದೆ. ನಾಡು, ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಜಾಗೃತಿಗೊಳಿಸುವ ಶಕ್ತಿಯನ್ನು ನಾಡಗೀತೆ ಒಳಗೊಂಡಿವೆ. ನಾಡಿನ ನೆಲ, ಜಲ, ಜನ, ನಾಡಿನ ಸಾಹಸವನ್ನುಮನದಾಳದಲ್ಲಿ ಮೂಡಿಸುವ ಕಲಾತ್ಮಕ ಹಾಗೂ ಭಾವನಾತ್ಮಕ ಅಭಿವ್ಯಕ್ತಿಯೇ ನಾಡಗೀತೆ.ಇಂತಹ ಗೀತೆಯ ಬಗ್ಗೆ ಅರಿವು ಬೆಳೆಸುವುದು ಜರೂರಾಗಿದೆ.

ವಿದ್ಯಾರ್ಥಿ ಜೀವನವೇ ವ್ಯಕ್ತಿತ್ವ ನಿರ್ಮಾಣದ ಹಂತ. ಈ ಹಂತದಲ್ಲಿ ವಿದ್ಯಾರ್ಥಿಗಳ ನಾಡಿನ ಮೌಲ್ಯಗಳು, ಸಂಸ್ಕೃತಿ ಮತ್ತು ಪರಂಪರೆಯನ್ನು ತಿಳಿದುಕೊಂಡರೆ, ಅವರು ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಲು ಸಾಧ್ಯ. ನಾಡಗೀತೆ ನಾಡಿನ ಏಕತೆ, ಸಹಭಾಗಿತ್ವ, ಮಾನವೀಯತೆ ಮತ್ತು ದೇಶಭಕ್ತಿ ಜೀವನದ ಮೌಲ್ಯಗಳನ್ನು ಸೂಕ್ಷ್ಮವಾಗಿ ಪರಿಚಯಿಸುತ್ತವೆ. ಉದಾಹರಣೆಗೆ “ಜಯ ಭಾರತ ಜನನಿಯ ತನುಜಾತೆ” ಗೀತೆಯು ಜಯವನ್ನು ತನ್ನ ಮುಡಿಗೇರಿಸಿಕೊಂಡಿರುವ ಭಾರತ ಮಾತೆಯ ಮಗಳಾದ ಕನ್ನಡ ಭಾರತದ ಮಗಳಾದ ಕರ್ನಾಟಕ ಮಾತೆಗೆ ಸದಾ ಜಯವಿದೆ ಎನ್ನುವ ನುಡಿಯಿಂದ ಪ್ರಾರಂಭವಾಗುವ ಗೀತೆಯು ಅನೇಕ ಸಂಸ್ಕೃತಿ, ಜನಾಂಗ, ಭಾಷೆ, ಸಂಪತ್ತು ಎಲ್ಲವನ್ನೂ ಗೀತೆಯ ಹೃದಯಭಾಗದಲ್ಲಿ ಹಿಡಿದಿಟ್ಟುಕೊಂಡಿದೆ. ಗೀತೆಯು ವಿದ್ಯಾರ್ಥಿಗಳಲ್ಲಿ ನಾಡಿನ ಮೇಲಿನ ಪ್ರೀತಿ ಮತ್ತು ಗೌರವವನ್ನು ಬೆಳೆಸುವ ಸಾಮರ್ಥ್ಯವನ್ನು ಹೊಂದಿದೆ.ಶಾಲಾ ಮಟ್ಟದಲ್ಲಿಯೇ ನಾಡಗೀತೆ ಸ್ಪರ್ಧೆಗಳು, ಗಾಯನ ಕಾರ್ಯಕ್ರಮಗಳು, ಅರ್ಥ – ವಿಶ್ಲೇಷಣೆ ಚಟುವಟಿಕೆಗಳು ನಡೆಯುವುದರಿಂದ ವಿದ್ಯಾರ್ಥಿಗಳು ಗೀತೆಗಳ ಅರ್ಥ, ಹಿನ್ನೆಲೆ ಮತ್ತು ಸಂದೇಶಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಇದರೊಂದಿಗೆ ನಾಡಗೀತೆ ಗಾಯನವು ಮಕ್ಕಳಲ್ಲಿ ಒಗ್ಗಟ್ಟು, ಶಿಸ್ತಿನ ಮೇಲೆ ಒಲವು ಮತ್ತು ತಂತ್ರಜ್ಞಾನದ ಕೌಶಲ್ಯವನ್ನು ವೃದ್ಧಿಸಲು ಸಾಧ್ಯವಾಗುತ್ತದೆ.

ನಾಡಿನ ಸಂಸ್ಕೃತಿ, ಪರಂಪರೆ, ಭಾವನೆ ಮತ್ತು ಜನಜೀವನವನ್ನು ಅತ್ಯಂತ ಸರಳ ಹಾಗೂ ಸೊಗಸಾದ ರೂಪದಲ್ಲಿ ನಿರೂಪಿಸುವ ಗೀತೆಯಾಗಿದೆ.

ನಾಡಗೀತೆ ವಿದ್ಯಾರ್ಥಿಗಳಲ್ಲಿ ಒಗ್ಗಟ್ಟು, ತ್ಯಾಗ, ಶೌರ್ಯ, ಪ್ರೀತಿ, ಪ್ರಕೃತಿಪ್ರೇಮ, ದೇಶಭಕ್ತಿ ಇತ್ಯಾದಿ ಗುಣಗಳನ್ನು ಬೆಳೆಸುತ್ತದೆ. ನಮ್ಮ ನೆಲದ ಮಣ್ಣು, ಸಂಸ್ಕೃತಿ ಮತ್ತು ಜನಪದ ಪರಂಪರೆಯ ಬಗ್ಗೆ ಗೌರವ ಮೂಡುತ್ತದೆ. ಹೀಗಾಗಿ ನಾಡಗೀತೆ ಕೇವಲ ಸಂಗೀತವಲ್ಲ ಇದು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಸಾಗಿಸುವ ಜೀವಂತ ಸೇತುವೆಯಾಗಿದೆ.

"ರಾಷ್ಟ್ರಕವಿ ಕುವೆಂಪು ಅವರು(ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ) ಹಿಂದೆಯೇ ಬರೆದ ಜೈ ಕರ್ನಾಟಕ ಮಾತೆ ಕವನವು ಪ್ರಕಟವಾದ ಆರಂಭದಿಂದ 1930 ಮುಂದೆ ಅವರ ಕೈಯಲ್ಲಿ ಹಲವು ಸಣ್ಣಪುಟ್ಟ ಮಾರ್ಪಾಡುಗಳನ್ನು ಪಡೆಯಿತು ಅಂತಿಮವಾಗಿ ಪರಿಷ್ಕೃತಗೊಂಡ ಕವನವನ್ನು ಕರ್ನಾಟಕ ಸರ್ಕಾರವು 23.12. 2004 ರಂದು ನಾಡಗೀತೆಯಾಗಿ ಗುರುತಿಸಿ ಘೋಷಿಸಲಾಯಿತು ಆ ನಾಡಗೀತೆಯು ಸರಳ ಆದರೆ ಅರ್ಥಪೂರ್ಣ ಭಾರತದ ಪರಂಪರೆಯ ಹಿನ್ನೆಲೆಯಲ್ಲಿ ಕರ್ನಾಟಕ ಸಾಹಿತ್ಯ ಐತಿಹಾಸಿಕ ಸಾಂಸ್ಕೃತಿಕ ಸಂಪತ್ತನ್ನು ಬಹು ಸೂಕ್ಷ್ಮವಾಗಿ ಹಿಡಿದಿಟ್ಟಿದೆ." ***(ಚಿದಾನಂದ ಮೂರ್ತಿ ಎಂ, 2010, ಕರ್ನಾಟಕ ನಾಡಗೀತೆ ಒಂದು ವಿಶ್ಲೇಷಣೆ ಕನ್ನಡ ಪುಸ್ತಕ ಪ್ರಾಧಿಕಾರ)***ಇಲ್ಲಿ ಲೇಖಕರು ನಾಡಗೀತೆಯ ಸಾಲುಗಳನ್ನು ವಿವರವಾಗಿ ಅರ್ಥೈಸಿರುವುದರಿಂದ ಈ ವಿಶ್ಲೇಷಣೆಯ ಹೊತ್ತಿಗೆಯನ್ನು ಪ್ರತಿ ಕನ್ನಡ ಮನಸುಗಳು ಓದಲೇಬೇಕು.ಇಂತಹ ವಿದ್ವಾಂಸರ ಅರ್ಥಪೂರ್ಣ ವಿವರಣಾತ್ಮಕ ಬರವಣಿಗೆಗಳನ್ನು ಮಕ್ಕಳ ಪಠ್ಯಪುಸ್ತಕಗಳಲ್ಲಿ ಅಳವಡಿಸುವುದರಿಂದ ಆ ಗೀತೆಯ ಮೌಲ್ಯವನ್ನು ಬೆಳೆಸುವಲ್ಲಿ ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ದೇಶದ ಭವಿಷ್ಯದ ನಿರ್ಮಾತೃಗಳು. ಅವರು ತಮ್ಮ ಸಂಸ್ಕೃತಿಯನ್ನು, ಭಾಷೆಯನ್ನು ಮತ್ತು ಪರಂಪರೆಯನ್ನು ಅರಿತುಕೊಳ್ಳುವುದರ ಮೂಲಕ ನಾಡು ಕಟ್ಟುವಲ್ಲಿ ಸಹಕಾರಿಯಾಗಿದೆ. ನಾಡಗೀತೆಯು ಶುದ್ಧ, ಸೊಗಸಾದ ಮತ್ತು ಮಧುರತೆಯಿಂದ ವಿದ್ಯಾರ್ಥಿಗಳ ಭಾಷಾ ಶೈಲಿಯನ್ನು ವೃದ್ಧಿಸಬಲ್ಲದು. ಜೊತೆಗೆ, ಈ ಗೀತೆಯಲ್ಲಿ ಅಡಗಿರುವ ಶೌರ್ಯ, ಭಕ್ತಿ, ತ್ಯಾಗ, ದೇಶಭಕ್ತಿ ಹಾಗೂ ಒಗ್ಗಟ್ಟು ಮೊದಲಾದ ಮೌಲ್ಯಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣಕ್ಕೆ ದಾರಿಯಾಗುವುದು.

ವಿದ್ಯಾರ್ಥಿಗಳಲ್ಲಿ ನಾಡಗೀತೆ ಅರಿವು ಬೆಳೆಸಲು ಶಾಲಾ–ಕಾಲೇಜುಗಳಲ್ಲಿ

ನಾಡಗೀತೆ ಗಾಯನಕ್ಕೆ ವಿಶೇಷ ಮಹತ್ವವಿದೆ. ನಾಡಗೀತೆ ದಿನ, ಜನಪದೋತ್ಸವ, ಗಾಯನ ಸ್ಪರ್ಧೆಗಳು, ಕಾರ್ಯಾಗಾರಗಳು ಇತ್ಯಾದಿ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಮನಸ್ಸಿಗೆ ತಲುಪುವಂತೆ ಪ್ರತಿ ಕಾರ್ಯಕ್ರಮದ ಪೂರ್ವದಲ್ಲಿ ಹಾಡುವುದು ಚಾಲ್ತಿಯಲ್ಲಿದೆ. ಪ್ರಸ್ತುತ ಕನ್ನಡದ ಕುರಿತಾಗಿ, ಕನ್ನಡ ನಾಡಿನ ಮಕ್ಕಳೇ ವಿವಿಧ ಜ್ಞಾನ ಶಿಸ್ತುಗಳಲ್ಲಿ ಶಿಕ್ಷಣ ಪಡೆಯುವ ಹಲವು ಕಡೆಗಳಲ್ಲಿ ಇಂತಹ ವಾತಾವರಣವಿಲ್ಲ. ಕನ್ನಡ ಉಳಿಸುವ ಕನ್ನಡ ನಾಡಿನ ಪರಂಪರೆ ತಿಳಿಸುವ ಸದುದ್ದೇಶದಿಂದ ನಾಡಗೀತೆಯ ಮೌಲ್ಯವನ್ನು ಆಳವಾಗಿ ಅರಿಯಲು ಅವಕಾಶ ಸಿಗುತ್ತದೆ. ಜನಪದ ಕಲಾವಿದರ ಸಂವಾದಗಳು ಮತ್ತು ಡಿಜಿಟಲ್ ಮಾಧ್ಯಮಗಳ ಮೂಲಕ ನಾಡಗೀತೆಯನ್ನು ಪರಿಚಯಿಸುವುದೂ ಪರಿಣಾಮಕಾರಿಯಾಗಿದೆ. ನಾಡಗೀತೆಯು ಕೇವಲ ಗಾನವಲ್ಲ, ನಮ್ಮ ಸಂಸ್ಕೃತಿ–ನಮ್ಮ ಮೂಲಗಳ ಪರಿಚಯ. ವಿದ್ಯಾರ್ಥಿಗಳಲ್ಲಿ ನಾಡಗೀತೆ ಅರಿವನ್ನು ಉತ್ತೇಜಿಸುವುದು ಸಂಸ್ಕೃತಿಯ ಸಂರಕ್ಷಣೆ, ಅವರ ಭಾವನಾತ್ಮಕ, ಬೌದ್ಧಿಕ ಮತ್ತು ನೈತಿಕ ಅಂಶಗಳನ್ನು ಪ್ರತಿಬಿಂಬಿಸುತ್ತದೆ. ನಾಡಗೀತೆಯು ಜನಾಂಗದ ಸಂಪ್ರದಾಯ, ಇತಿಹಾಸ, ನೆಲ–ಜಲ, ಜೀವನಶೈಲಿ ಮತ್ತು ಭಾವನೆಗಳ ಪ್ರತಿಬಿಂಬ. ವಿದ್ಯಾರ್ಥಿಗಳಲ್ಲಿ ನಾಡಗೀತೆ ಅರಿವು ಬೆಳೆಸುವುದು ಅವರ ಸಂಸ್ಕೃತಿ, ವ್ಯಕ್ತಿತ್ವ, ಮೌಲ್ಯ, ಭಾಷಾ ಪ್ರೀತಿ, ಮತ್ತು ದೇಶಭಕ್ತಿ ಮೈಗೂಡಿಸಲು ಅತ್ಯಂತ ಅವಶ್ಯಕ.ಇದು ಕೇವಲ ಸಂಗೀತ ಶಿಕ್ಷಣವಲ್ಲ, ಸಂಪೂರ್ಣ ವ್ಯಕ್ತಿತ್ವ ವಿಕಾಸದ ಒಂದು ಪ್ರಮುಖ ಅಂಗ.

ನಾಡಗೀತೆಯು ನಮ್ಮ ಸಂಸ್ಕೃತಿ, ಸಾಂಪ್ರದಾಯಿಕ ಮೌಲ್ಯಗಳು ಮತ್ತು ಜನಜೀವನದ ಭಾವನೆಗಳನ್ನು ಒಳಗೊಂಡಿರುವ ಕಲಾಮಾರ್ಗವಾಗಿದೆ. ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ಸಾಮಾಜಿಕ ಜಾಗೃತಿ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಸಾಮರ್ಥ್ಯವುಳ್ಳಂತಹದು. ಆದರೆ ಇಂದಿನ ತ್ವರಿತ ಜೀವನಶೈಲಿ ಮತ್ತು ಪಾಶ್ಚಾತ್ಯ ಪ್ರಭಾವದಿಂದ ನಾಡಗೀತೆಯ ಅರಿವು ಕಡಿಮೆ ಆಗುತ್ತಿರುವುದು ಗಮನಾರ್ಹ. ಶಿಕ್ಷಣದಲ್ಲಿ ನಾಡಗೀತೆಗೆ ಆದ್ಯತೆ ನೀಡುವುದು ಮಕ್ಕಳಲ್ಲಿ ದೇಶಪ್ರೇಮ, ಸಾಂಸ್ಕೃತಿಕ ನಿಷ್ಠೆ, ಭಾವಾತ್ಮಕ ಏಕತೆ ಮತ್ತು ಜವಾಬ್ದಾರಿ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಗುಣಗಳನ್ನು ಬೆಳೆಸಲಿದೆ. ಹೀಗಾಗಿ ನಾಡಗೀತೆಯ ಅರ್ಥ, ಇತಿಹಾಸ, ಸಾಹಿತ್ಯದ ಮೌಲ್ಯ ಮತ್ತು ಸಂಗೀತದ ಸೊಗಸನ್ನು ತಿಳಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ನಾಡಗೀತೆ ಬಗ್ಗೆ ಗೌರವ ಮತ್ತು ಆಸಕ್ತಿ ಹೆಚ್ಚಿಸುವುದು. ನಾಡಗೀತೆ ಅರಿವು ಮೂಡಿಸಲು ಶಾಲಾ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಗಾನಶಿಬಿರಗಳು, ಚರ್ಚೆಗಳು ಮುಂತಾದವುಗಳ ಮಾಹಿತಿಯನ್ನು ರೂಪಿಸುವುದು ಅಗತ್ಯ. ಇದರ ಮೂಲಕ ವಿದ್ಯಾರ್ಥಿಗಳು ನಾಡಗೀತೆಯನ್ನು ಕೇವಲ ಹಾಡುವ ಪದವೆಂದು ತಿಳಿಯದೆ, ನಾಡಿನ ಆತ್ಮದ ಸಂಕೇತವೆಂದು ಅರಿಯಬೇಕಿದೆ.ಇಂದಿನ ಜಾಗತಿಕರಣದ ಯುಗದಲ್ಲಿ ಮಕ್ಕಳಲ್ಲಿ ದೇಶಭಕ್ತಿ, ಸಂಸ್ಕೃತಿ ಮತ್ತು ಜನಪರ ಮೌಲ್ಯಗಳನ್ನು ಬೆಳೆಸುವುದು ಅತ್ಯಂತ ಜನಪ್ರಿಯವಾಗಿದೆ. ನಾಡಗೀತೆ ನಮ್ಮ ದೇಶದ ಭೂಮಿಯೊಡನೆ, ಪ್ರಕೃತಿಯೊಡನೆ ಮತ್ತು ಜನರ ಭಾವನೆಗಳೊಡನೆ ಆಳವಾಗಿ ಬೇರೂರಿಕೊಂಡಿರುವ ಕಲಾತ್ಮಕ ಅಭಿವ್ಯಕ್ತಿ ರಚನೆಯಾಗಿದೆ. ಆಧುನಿಕ ಕಾಲದಲ್ಲಿ ವಿದ್ಯಾರ್ಥಿಗಳು ಹೊರಬರುವ ಹೊಸ ಮಾಧ್ಯಮಗಳ ಪ್ರವೇಶದಿಂದಾಗಿ ನಾಡಗೀತೆಯ ಅರಿವು ಕಡಿಮೆಯಾಗುತ್ತಿದೆ. ಅದರ ಪರಿಣಾಮವಾಗಿ ಅವರು ತಮ್ಮ ತಾಯ್ನಾಡಿನ ಸಾಂಸ್ಕೃತಿಕ ನೆಲೆಗಳನ್ನು ಮೀರಿದ ದೃಷ್ಟಿಯಲ್ಲಿ ಸಾಗುವುದನ್ನು ತಪ್ಪಿಸಿ ನಾಡಿನ ಇತಿಹಾಸವನ್ನು ಸಾರಬೇಕಿದೆ. ಆದ್ದರಿಂದ ಶಾಲಾ ಮತ್ತು ಕಾಲೇಜು ಮಟ್ಟದಲ್ಲಿ ನಾಡಗೀತೆಯ ಮಹತ್ವವನ್ನು ತಲುಪಿಸುವುದು ಅತ್ಯಗತ್ಯವಾಗಿದೆ.

ಒಟ್ಟಾರೆಯಾಗಿ ಇಂದಿನ ಯುಗದಲ್ಲಿ ವಿದ್ಯಾರ್ಥಿಗಳು ಬಹುತೇಕ ಪಠ್ಯಕ್ರಮ ಮತ್ತು ತಂತ್ರಜ್ಞಾನ ಕೇಂದ್ರಿತ ಶಿಕ್ಷಣದಲ್ಲಿ ತೊಡಗಿಸಿಕೊಂಡಿದ್ದಾರೆ, ನಾಡಗೀತೆ ಮಹತ್ವ ಮತ್ತು ಅದರ ಹಿನ್ನೆಲೆಯ ಅರಿವು ಕಡಿಮೆಯಾಗುತ್ತಿದೆ.ಇದರಿಂದ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ಸಾಂಸ್ಕೃತಿಕ ತಿಳಿವಳಿಕೆ ಮತ್ತು ಜವಾಬ್ದಾರಿಯುಳ್ಳ ನಾಗರಿಕತ್ವವನ್ನು ಬೆಳೆಸುವುದು ಸವಾಲಾಗಿದೆ. ನಮ್ಮ ದೇಶವು ತನ್ನ ಸಾಂಸ್ಕೃತಿಕ ವೈವಿಧ್ಯ ಮತ್ತು ವಿಶಿಷ್ಟತೆಯನ್ನು ಹೊಂದಿದೆ. ಈ ಪರಂಪರೆಯಲ್ಲಿ ನಾಡಗೀತೆ ವಿಶೇಷ ಸ್ಥಾನವನ್ನು ಪಡೆದಿವೆ. ನಾಡಗೀತೆಯು ಕೇವಲ ಶ್ರವಣರಸವನ್ನು ನೀಡುವುದಿಲ್ಲ, ಅದರ ಮೂಲಕ ದೇಶಭಕ್ತಿ, ಸಾಂಸ್ಕೃತಿಕ ಜ್ಞಾನ ಮತ್ತು ಸಾಮಾಜಿಕ ಮೌಲ್ಯಗಳ ಮಾಹಿತಿಯನ್ನು ಅರಹುತ್ತದೆ. ಇಂದಿನ ತಂತ್ರಜ್ಞಾನಾಧಾರಿತ

ಸಮಾಜದಲ್ಲಿ ಯುವಜನತೆಗೆ ನಾಡಗೀತೆ ಬಗ್ಗೆ ಅರಿವು ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ಜನ್ಮಭೂಮಿಯ ಪರಂಪರೆ, ಐತಿಹಾಸಿಕ ಘಟನೆಗಳು ಮತ್ತು ದೇಶಭಕ್ತಿ ಭಾವನೆಗಳನ್ನು ನಾಡಗೀತೆಯ ಮೂಲಕ ಅರಿಯುವಂತೆ ಮಾಡಬಹುದು. ಶಾಲೆಗಳಲ್ಲಿ ನಾಡಗೀತೆಯ ಮಹತ್ವವನ್ನು ಒತ್ತಿ ಹೇಳುವುದು, ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಶ್ರವಣ ಅಭ್ಯಾಸಗಳ ಮೂಲಕ ಮಕ್ಕಳಲ್ಲಿ ದೇಶಭಕ್ತಿ ಮನೋಭಾವವನ್ನು ಬೆಳೆಸಲು ಸಹಾಯಕವಾಗಿದೆ. ಈ ಹಿನ್ನೆಲೆಯನ್ನು ಅರಿತಾಗ ವಿದ್ಯಾರ್ಥಿಗಳಲ್ಲಿ ನಾಡಗೀತೆಯ ಅರಿವು ಮೂಡಿಸಲು ಅಗತ್ಯವಿರುವ ಕ್ರಮಗಳನ್ನು ಅಧ್ಯಯನ ಮಾಡಲು ನಾಡಿನ ಸಾಂಸ್ಕೃತಿಕ ಗುರುತ್ವವಾಗಿ ನಾಡಗೀತೆ ಪ್ರಮುಖ ಅಂಶವಾಗಿದೆ. ದೇಶದ ಇತಿಹಾಸ, ಸಂಸ್ಕೃತಿ, ಪರಂಪರೆ ಮತ್ತು ಜನರ ಜೀವನ ಶೈಲಿಯನ್ನು ವ್ಯಕ್ತಪಡಿಸುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳು ತಮ್ಮ ದೇಶದ ನಾಡಗೀತೆಯ ಬಗ್ಗೆ ಅರಿವು ಹೊಂದಿದರೆ, ಅವರ ದೇಶಪ್ರೇಮ, ಸಾಂಸ್ಕೃತಿಕ ಹೆಮ್ಮೆ ಮತ್ತು ನಾಗರಿಕ ಜವಾಬ್ದಾರಿಯುತ ಮನೋಭಾವವು ಮತ್ತಷ್ಟು ನಿರ್ಮಾಣವಾಗುತ್ತದೆ.

ಲೇಖಕರು : ಡಾ. ಡಿ. ವೀರೇಶ
ಉಪನ್ಯಾಸಕರು ಮತ್ತು ಸಂಶೋಧಕರು
ಇತಿಹಾಸ ವಿಭಾಗ
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು
veeresh1674@gmail.com

***

ದಕ್ಷಿಣ ಭಾರತದ ರಾಜ್ಯಗೀತೆಗಳ ತೌಲನಿಕ ಅಧ್ಯಯನ

(ದಕ್ಷಿಣ ಭಾರತದ ರಾಜ್ಯಗಳನ್ನು ಅನುಲಕ್ಷಿಸಿ)

ಈ ಅಧ್ಯಯನದ ಉದ್ದೇಶವು ದಕ್ಷಿಣ ಭಾರತದ ಐದು ಪ್ರಮುಖ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ರಾಜ್ಯಗೀತೆಗಳ ಸಾಹಿತ್ಯಿಕ ಮೌಲ್ಯ, ಭಾಷಾ ತಾತ್ವಿಕತೆ, ಸಾಂಸ್ಕೃತಿಕ ಸಂದೇಶ ಮತ್ತು ಸಮಾಜ–ರಾಜಕೀಯ ಪರಿಪ್ರೇಕ್ಷ್ಯವನ್ನು ತೌಲನಿಕವಾಗಿ ವಿಶ್ಲೇಷಿಸುವುದಾಗಿದೆ. ರಾಜ್ಯಗೀತೆಗಳು ಭಾಷಾ ಹೆಮ್ಮೆಯ ಸಂಕೇತಗಳಾಗಿದ್ದು, ರಾಜ್ಯದ ಸಾಂಸ್ಕೃತಿಕ ಚರಿತ್ರೆ, ಸಾಮಾಜಿಕ ಭಾವನೆ, ಮತ್ತು ರಾಷ್ಟ್ರಪ್ರೇಮವನ್ನು ವ್ಯಕ್ತಪಡಿಸುತ್ತವೆ. ಲೇಖನದಲ್ಲಿ ಬಳಕೆಯಾದ ಶಬ್ದರೂಪ, ತಾಸು–ಪ್ರತಿಭಾವ ಮತ್ತು ರಾಷ್ಟ್ರ/ಪ್ರಾಂತ ಸಂಬಂಧದ ಭಾವಚಿತ್ರಗಳನ್ನು ವಿಶ್ಲೇಷಿಸಲಾಗುತ್ತದೆ. ರಾಜ್ಯಗೀತೆಗಳ ಮಹತ್ವ ಹಾಗೂ ಭಾರತದ ಸಂವಿಧಾನವು ರಾಜ್ಯಗೀತೆಗಳ ಬಳಕೆಗೆ ನೀಡಿರುವ ಆಜ್ಞೆ, ಬದ್ಧತೆಯ ಕುರಿತಾಗಿ ಚರ್ಚಿಸಲಾಗುವುದು. ಈ ಅಧ್ಯಯನದಿಂದ ಪ್ರತಿಯೊಂದು ರಾಜ್ಯವು ತನ್ನ ಭಾಷಾ ಗುರುತಿನ ಮೂಲಕ ರಾಷ್ಟ್ರದ ವೈವಿಧ್ಯದಲ್ಲಿನ ಏಕತೆಯ ಅರ್ಥವನ್ನು ಹೇಗೆ ವ್ಯಕ್ತಪಡಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಪ್ರಮುಖ ಪದಗಳು : ರಾಜ್ಯಗೀತೆ, ದಕ್ಷಿಣ ಭಾರತ, ಭಾಷಾ ಗುರುತು, ಸಾಂಸ್ಕೃತಿಕ ಭಾವನೆ, ತೌಲನಿಕ ಅಧ್ಯಯನ, ಸಂವಿಧಾನ.

ಭಾರತದ ಸಂವಿಧಾನಾತ್ಮಕ ದಾಖಲೆಗಳ ಹೊರತಾಗಿ ಪ್ರತಿ ರಾಜ್ಯವೂ

ತನ್ನ ವಿಭಿನ್ನ ಭಾಷಾತತ್ವ, ಸಾಂಸ್ಕೃತಿಕ ಚರಿತ್ರೆ ಮತ್ತು ಭಾವೈಕ್ಯತೆಯನ್ನು ವ್ಯಕ್ತಪಡಿಸುವ ಹಲವು ಮಾಧ್ಯಮಗಳನ್ನು ಹೊಂದಿದೆ. ಅದರಲ್ಲೇ ರಾಜ್ಯಗೀತೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಇವು 'ಮಾತೃಭಾಷೆ'ಗೆ ಸಲ್ಲುವ ಚೆಂದದ ಅನುರಾಗ, ನಾಡು ಪ್ರೇಮ ಮತ್ತು ಪ್ರಾದೇಶಿಕ ಸ್ವಭಾವವನ್ನು ಸಂಕೇತರೂಪದಲ್ಲಿ ಹಿಂತಿರುಗಿಸುತ್ತವೆ. ಈ ಸಂಶೋಧನೆ ದಕ್ಷಿಣ ಭಾರತದ ಐದು ರಾಜ್ಯಗೀತೆಗಳ ಭಾಷಾತ್ಮಕ–ಸಾಂಸ್ಕೃತಿಕ ಸೌಂದರ್ಯವನ್ನು ಬೆಳಗಿಸಲು ಪ್ರಯತ್ನಿಸುತ್ತದೆ.
ಭಾರತದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷಾ ಪರಂಪರೆ, ಸಾಹಿತ್ಯಮೌಲ್ಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಹೊಂದಿದೆ. ಈ ವೈಶಿಷ್ಟ್ಯವನ್ನು ಗೌರವಿಸುವಲ್ಲಿ ರಾಜ್ಯಗೀತೆಗಳು ಪ್ರಮುಖ ಪಾತ್ರವಹಿಸುತ್ತವೆ.

ಕರ್ನಾಟಕದ "ಜಯ ಭಾರತ ಜನನಿಯ ತನುಜಾತೆ" (ಕುವೆಂಪು), ತಮಿಳುನಾಡಿನ 'ತಮಿಳ್ ತಾಯ್ ವಳತ್ತು' (ಮನೋನ್ಮಣಿಯಂ ಸುಂದರಂ ಪಿಳ್ಳೈ), ಆಂಧ್ರಪ್ರದೇಶದ "ಮಾ ತೆಲುಗು ತಲ್ಲಿಕಿ" (ಶಂಕರಂಬಾಡಿ ಸುಂದರಚಾರ್ಯ), ತೆಲಂಗಾಣದ 'ಜಯ ಜಯಹೈ ತೆಲಂಗಾನ ತಲ್ಲಿ' (ಅಂದೆ ಎಲ್ಲಯ್ಯ) ಮತ್ತು ಕೇರಳದ "ಜಯಜಯ ಕೋಮಲ ಕೇರಳ ಧರಣಿ" (ಕೇರಳ ಗಾನಂ) (ಬೋಧೇಶ್ವರನ್)– ಇವುಗಳು ಪ್ರಾದೇಶಿಕ ಭಾಷಾ ಪ್ರೇಮ, ಮಾತೃಭೂಮಿಯ ಗೌರವ ಮತ್ತು ರಾಷ್ಟ್ರಸಂಘಟನೆಯ ಭಾವನೆಯನ್ನು ವ್ಯಕ್ತಪಡಿಸುತ್ತವೆ.

ನಾಡ ಗೀತೆಯ ಮಹತ್ವ

ಭಾರತೀಯ ಸಂವಿಧಾನ ಮತ್ತು ನಾಡಗೀತೆಗಳು

ನಾಡಗೀತೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ನಾವು ರಾಷ್ಟ್ರ ಗೀತೆಯ ಮಹತ್ವದ ಮೂಲಕ ಅರ್ಥ ಮಾಡಿಕೊಳ್ಳಬಹುದು. ರಾಷ್ಟ್ರೀಯ ಗೀತೆ ಎಂದರೆ ಒಂದು ದೇಶದ ಇತಿಹಾಸ, ಸಂಸ್ಕೃತಿ, ಸ್ವಾತಂತ್ರ್ಯ ಹೋರಾಟ, ಭಾವನೆ ಮತ್ತು ರಾಷ್ಟ್ರಭಕ್ತಿಯ ಸಂಕೇತವಾಗಿರುವ ಗಾನ. ವಿಶ್ವದ ಪ್ರತಿ ದೇಶವೂ ತನ್ನ ದೇಶದ ಆತ್ಮವನ್ನು ಪ್ರತಿಬಿಂಬಿಸುವ ವಿಶಿಷ್ಟ ರಾಷ್ಟ್ರೀಯ ಗೀತೆಯನ್ನು ಹೊಂದಿದೆ. ಇವು ದೇಶದ ಏಕತೆಗೆ, ಗೌರವಕ್ಕೆ ಮತ್ತು ನಾಗರಿಕರ ಒಗ್ಗಟ್ಟಿಗೆ

ಅಮೂಲ್ಯವಾದ ಪಾತ್ರವಹಿಸುತ್ತವೆ. ಇದೇ ರೀತಿಯ ಉದ್ದೇಶವನ್ನು ನಾಡ ಗೀತೆಯು ಹೊಂದಿದೆ.

1. ನಾಡಿನ ಅಸ್ಮಿತೆಯ ಸಂಕೇತ

ನಾಡ ಗೀತೆ ಒಂದು ರಾಜ್ಯದ ಅಸ್ತಿತ್ವ, ಅಸ್ಮಿತೆ, ಗುರುತು ಮತ್ತು ವೈಶಿಷ್ಟತೆಯನ್ನು ವಿಶ್ವಕ್ಕೆ ಪರಿಚಯಿಸುತ್ತದೆ. ಅದು ಆ ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಮೌಲ್ಯಗಳ ಸಾರವನ್ನು ಒಳಗೊಂಡಿರುತ್ತದೆ.

2. ಸ್ವಾತಂತ್ರ್ಯ ಹೋರಾಟದ ಸ್ಮರಣೆ

ಬಹುತೇಕವಾಗಿ ನಾಡ ಗೀತೆಗಳು ಸ್ವಾತಂತ್ರ್ಯ ಹೋರಾಟ, ಕ್ರಾಂತಿ ಮತ್ತು ತ್ಯಾಗವನ್ನು ನೆನಪಿಸುವ ಶಕ್ತಿಯಾದ ಗೀತೆಗಳಾಗಿವೆ.

ಉದಾಹರಣೆ:

• ಭಾರತದ "ಜನಗಣಮನ"ಕ್ಕೆ ರಾಷ್ಟ್ರಪಿತೃತ್ವ ಮತ್ತು ವೈವಿಧ್ಯತೆಯ ಸಂದೇಶವಿದೆ.

• ಫ್ರಾನ್ಸ್‌ನ "ಲಾ ಮಾರ್ಸೆಲ್ಲೈಸ" ಗೀತೆ ಕ್ರಾಂತಿಯ ಸಂದರ್ಭದಲ್ಲಿ ಜನರಿಗೆ ಪ್ರೇರಣೆ ನೀಡಿತ್ತು.

3. ದೇಶದ ಏಕತೆ ಮತ್ತು ಸಾಮೂಹಿಕತೆ

ನಾಡ ಗೀತೆಯನ್ನ ಹಾಡುವಾಗ ಯಾವುದೇ ರಾಜ್ಯದ ನಾಗರಿಕರಿಗೂ ಏಕತೆ, ಒಗ್ಗಟ್ಟು ಮತ್ತು ನಾಡಪ್ರೇಮದ ಭಾವನೆ ಉಂಟಾಗುತ್ತದೆ. ನಾಡಗೀತೆಗಳು ಕೇವಲ ಹಾಡುಗಳಲ್ಲ; ಅವು ನಾಡಿನ ಆತ್ಮ, ಮಾನ, ಮೌಲ್ಯಗಳು ಮತ್ತು ಇತಿಹಾಸದ ಶಾಶ್ವತ ಸಂಕೇತಗಳು. ರಾಜ್ಯಗಳ ನಡುವೆ ಪರಸ್ಪರ ಗೌರವ, ಏಕತೆ ಮತ್ತು ಶಾಂತಿಯನ್ನು ಬೆಳೆಸುವ ಸೇತುವೆಗಳಾಗಿವೆ.

ಭಾರತೀಯ ಸಂವಿಧಾನ ಮತ್ತು ರಾಜ್ಯ ಗೀತೆ

1. ಭಾರತವು ವೈವಿಧ್ಯತೆಯ ರಾಷ್ಟ್ರವಾಗಿರುವುದರಿಂದ ಪ್ರತಿಯೊಂದು ರಾಜ್ಯವೂ ತನ್ನದೇ ಸಂಸ್ಕೃತಿಯ ಗುರುತನ್ನು ಹೊಂದಿದೆ.
2. ಈ ಸಾಂಸ್ಕೃತಿಕ ವೈಶಿಷ್ಟತೆಗೆ ಸಂವಿಧಾನಾತ್ಮಕ ಗೌರವ ನೀಡಲು ರಾಜ್ಯ ಗೀತೆ – ಧ್ವಜಕ್ಕೆ ಅವಕಾಶ ನೀಡಲಾಗಿದೆ.

3. ರಾಜ್ಯ ಗೀತೆ ಮತ್ತು ಧ್ವಜವು ರಾಜ್ಯದ ಪರಂಪರೆ, ಇತಿಹಾಸ ಮತ್ತು ಭಾಷೆಯ ಪ್ರತೀಕಗಳಾಗಿವೆ.
4. ಇದು ರಾಜ್ಯದ ಜನರಲ್ಲಿ ಪ್ರಾದೇಶಿಕ ಅಭಿಮಾನ ಮತ್ತು ಏಕತೆಯನ್ನು ಬಲಪಡಿಸುತ್ತದೆ.
5. ಸಂವಿಧಾನವು ರಾಜ್ಯಗಳ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಒಕ್ಕೂಟ ವ್ಯವಸ್ಥೆಯ ಭಾಗವಾಗಿ ಮಾನ್ಯಗೊಳಿಸಿದೆ.
6. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳಿಗೆ ಸದಾ ಉನ್ನತ ಸ್ಥಾನ ಉಳಿಯುತ್ತದೆ.
7. ರಾಜ್ಯ ಧ್ವಜವು ರಾಷ್ಟ್ರಧ್ವಜಕ್ಕೆ ವಿರೋಧವಾಗಬಾರದೆಂಬ ನಿಯಮದಿಂದ ರಾಷ್ಟ್ರೀಯ ಏಕತೆ ಕಾಪಾಡಲ್ಪಡುತ್ತದೆ.
8. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ರಾಜ್ಯದ ಸ್ವತಂತ್ರ ಗುರುತನ್ನು ಹೊರಹಾಕಲು ಇದು ಸಹಕಾರಿ.
9. ರಾಜ್ಯ ಗೀತೆ – ಧ್ವಜವು ಪರಂಪರೆಗಳನ್ನು ಸಂರಕ್ಷಿಸಿ ಹೊಸ ಪೀಳಿಗೆಗೆ ಪರಿಚಯಿಸುತ್ತದೆ.
10. ಹೀಗಾಗಿ, ಸಂವಿಧಾನವು ಏಕತೆ – ವೈವಿಧ್ಯತೆಯನ್ನು ಒಟ್ಟುಗೂಡಿಸುವ ದೃಷ್ಟಿಯಿಂದ ಈ ಅವಕಾಶ ನೀಡಿದೆ.

ಭಾರತೀಯ ಸಂವಿಧಾನವು ರಾಜ್ಯ ಗೀತೆ ಮತ್ತು ರಾಜ್ಯ ಧ್ವಜ ರಚನೆಗೆ ಅನುಮತಿ ನೀಡಿರುವುದೇಕೆ?

ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿನಿಧಿಸುವ ರಾಷ್ಟ್ರ. ಇಲ್ಲಿ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷೆ, ಸಂಸ್ಕೃತಿ, ಪರಂಪರೆ, ಕಲೆ ಮತ್ತು ಇತಿಹಾಸವನ್ನು ಹೊಂದಿದೆ. ಈ ಕಾರಣಗಳಿಂದಲೇ ಸಂವಿಧಾನವು ರಾಜ್ಯಗಳಿಗೆ ಕೆಲವು ಸಾಂಸ್ಕೃತಿಕ ಸ್ವಾತಂತ್ರ್ಯಗಳನ್ನು ನೀಡಿದೆ.

1. ಸಾಂಸ್ಕೃತಿಕ ವೈವಿಧ್ಯತೆ ಉಳಿಸಲು

ಭಾರತದ ಪ್ರತಿಯೊಂದು ರಾಜ್ಯವೂ ವಿಭಿನ್ನ ಪರಂಪರೆ, ಸಂಗೀತ, ಸಾಹಿತ್ಯ ಮತ್ತು ಜನಪದ ವೈಶಿಷ್ಟ್ಯಗಳನ್ನು ಹೊಂದಿದೆ. ರಾಜ್ಯ ಗೀತೆ ಮತ್ತು ರಾಜ್ಯ ಧ್ವಜವು ಈ ಸಾಂಸ್ಕೃತಿಕ ಹೆಗ್ಗಳಿಕೆಯನ್ನು ಸಂರಕ್ಷಿಸಲು ಸಹಕಾರಿಯಾಗುತ್ತದೆ.

2. ಪ್ರಾದೇಶಿಕ ಗುರುತನ್ನು ಗೌರವಿಸಲು

ರಾಜ್ಯಗಳಲ್ಲಿ ಇರುವ ಭಾಷಾ–ಸಂಸ್ಕೃತಿಗಳ ವೈಶಿಷ್ಟ್ಯತೆಗಳನ್ನು ಸಂವಿಧಾನಾತ್ಮಕ ಗೌರವ ನೀಡಲು ಈ ಅವಕಾಶ ನೀಡಲಾಗಿದೆ. ಇದು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಮತೋಲನದ ಫೆಡರಲ್ ವ್ಯವಸ್ಥೆಯನ್ನು ಬಲಪಡಿಸುತ್ತದೆ.

3. ರಾಷ್ಟ್ರೀಯ ಏಕತೆಗೆ ಧಕ್ಕೆಯಿಲ್ಲದೆ ಪ್ರಾದೇಶಿಕ ಹೆಮ್ಮೆ ಹೆಚ್ಚಿಸಲು ಸಂವಿಧಾನವು ಸ್ಪಷ್ಟಪಡಿಸುತ್ತದೆ:

ರಾಷ್ಟ್ರಗೀತೆ, ರಾಷ್ಟ್ರಧ್ವಜ ಮತ್ತು ರಾಷ್ಟ್ರಚಿಹ್ನೆಗೆ ಅತ್ಯುನ್ನತ ಸ್ಥಾನ, ರಾಜ್ಯ ಧ್ವಜ/ಗೀತೆಯು ದ್ವಿತೀಯ ಸ್ಥಾನದಲ್ಲಿರಬೇಕು, ರಾಷ್ಟ್ರಧ್ವಜಕ್ಕೆ ವಿರುದ್ಧವಾಗಿರಬಾರದು. ಈ ನಿಯಮಗಳಿಂದ ರಾಷ್ಟ್ರೀಯ ಏಕತೆ ಉಳಿಯುತ್ತದೆ; ಪ್ರಾದೇಶಿಕ ಹೆಮ್ಮೆ ಕೂಡ ಉಳಿಯುತ್ತದೆ.

4. ಒಕ್ಕೂಟ ವ್ಯವಸ್ಥೆ ಬಲಪಡಿಸಲು

ಭಾರತವು ಒಕ್ಕೂಟ ವ್ಯವಸ್ಥೆಯ ರಾಷ್ಟ್ರ. ಇಲ್ಲಿ ಕೇಂದ್ರ ಹಾಗೂ ರಾಜ್ಯಗಳಿಗೆ ತಮ್ಮ – ತಮ್ಮ ಅಧಿಕಾರಗಳಿವೆ. ಸಾಂಸ್ಕೃತಿಕ ಸ್ವಾತಂತ್ರ್ಯ ನೀಡುವುದು ರಾಜ್ಯಗಳ ಸ್ವಾಯತ್ತತೆಯನ್ನು ಗೌರವಿಸುವುದರ ಭಾಗವಾಗಿದೆ.

5. ರಾಜ್ಯಗಳ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸಲು

ಅನೇಕ ರಾಜ್ಯಗಳಲ್ಲಿ ಪ್ರಾಚೀನ ಕಾಲದಿಂದ ಬಂದ ದೇವರುಗಳ ಸಂಕೇತಗಳು, ಜನಪದ ಗೀತೆಗಳು, ಪರಂಪರೆ ಚಿಹ್ನೆಗಳು ಇವೆ. ರಾಜ್ಯ ಗೀತೆ/ಧ್ವಜವು ಇವುಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗಳಿಗೆ ಸಾಗಿಸುವ ಸಾಧನವಾಗಿದೆ.

6. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ರಾಜ್ಯದ ಸಾಂಸ್ಕೃತಿಕ ಪರಿಚಯಕ್ಕಾಗಿ

ರಾಜ್ಯೋತ್ಸವ, ಅಧಿವೇಶನ, ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ, ಸಾಂಸ್ಕೃತಿಕ ಸಮಾರಂಭಗಳಲ್ಲಿ ರಾಜ್ಯ ಗೀತೆ ಮತ್ತು ರಾಜ್ಯ ಧ್ವಜವನ್ನು ಬಳಸುವುದರಿಂದ ರಾಜ್ಯದ ಅಭಿಮಾನ ಮತ್ತು ಗುರುತು ಹೆಚ್ಚುತ್ತದೆ.

7. ರಾಜ್ಯ ಮತ್ತು ಕೇಂದ್ರದ ನಡುವೆ ಸಂವಿಧಾನಾತ್ಮಕ ಸಮನ್ವಯತೆ ಸಂವಿಧಾನವು ಹೇಳುತ್ತದೆ:

ರಾಜ್ಯಗಳಿಗೆ ತಮ್ಮ ಗೀತೆ/ಧ್ವಜ ಇರಬಹುದು ಆದರೆ ಅದು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯ ಸ್ಥಾನಕ್ಕೆ ಸ್ಪರ್ಧೆಯಲ್ಲ ಇದು ಏಕತೆ ವೈವಿಧ್ಯತೆ ಎಂಬ ಭಾರತದ ಮೂಲ ತತ್ತ್ವವನ್ನು ಬಲಪಡಿಸುತ್ತದೆ.

ಗುರಿಗಳು

1. ಪ್ರತಿ ರಾಜ್ಯಗೀತೆ ರಚನಾಕಾಲ, ರಚನಕಾರ ಮತ್ತು ಸ್ವೀಕೃತಿಯ ಮಾಹಿತಿ ಸಂಗ್ರಹಿಸುವುದು.
2. ಐದು ರಾಜ್ಯಗಳ ರಾಜ್ಯಗೀತೆಗಳ ಮೂಲ, ಭಾವನಾತ್ಮಕ ಮತ್ತು ಭಾಷಾತಾತ್ವಿಕ ಅಂಶಗಳನ್ನು ವಿಶ್ಲೇಷಿಸುವುದು.
3. ಸಾಹಿತ್ಯಿಕ ರೂಪಕಗಳು, ಶೈಲಿಗಳು ಮತ್ತು ಸಾಂಸ್ಕೃತಿಕ ಅಂಶಗಳ ಹೋಲಿಕೆ ಮಾಡುವುದು.
4. ಗೀತೆಗಳ ಸಾಮಾಜಿಕ–ಸಾಂಸ್ಕೃತಿಕ ಪ್ರಭಾವ ಮತ್ತು ಜನಪರ ಧ್ವನಿಯನ್ನು ಗುರುತಿಸುವುದು.
5. ಸಾಹಿತ್ಯರೂಪ, ರೂಪಕ ಮತ್ತು ಭಾಷಾರೂಪಗಳ ಮೂಲಕ ಪ್ರತಿಯೊಂದು ಗೀತೆಯ ಕೇಂದ್ರ ಭಾವಗಳನ್ನು ಮನಗಾಣಿಸುವುದು.
6. ಸಾಂಸ್ಕೃತಿಕ–ರಾಜಕೀಯ ಪರಿಣಾಮ ಮತ್ತು ಶಾಲಾ/ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಗೀತೆಗಳ ಬಳಕೆಯ ಪ್ರಭಾವವನ್ನು ವಿಶ್ಲೇಷಿಸುವುದು.

ಸಾಹಿತ್ಯ ಸಮೀಕ್ಷೆ:

ರಾಜ್ಯದ ಗೀತೆಗಳ ಕುರಿತು ಭಾರತೀಯ ಭಾಷಾ ಅಧ್ಯಯನಗಳಲ್ಲಿ ಆಲೋಚನೆಗಳು ಲಭ್ಯವಿದ್ದರೂ, ದಕ್ಷಿಣ ಕೇಂದ್ರಿತ ಹೋಲಿಕೆಗಳು ಸೀಮಿತವಾಗಿವೆ. ಕರ್ನಾಟಕದಲ್ಲಿ ಕುವೆಂಪು ಅವರು ರಚಿಸಿರುವ 'ಜಯ ಭಾರತ ಜನನಿಯ

ತನುಜಾತೆ' ಅನ್ನು 2004ರಲ್ಲಿ ರಾಜ್ಯಗೀತೆ ಎಂದು ಘೋಷಿಸಲಾಯಿತು ಮತ್ತು ಇದರ ಸಾಂಸ್ಕೃತಿಕ ಮಹತ್ವ ಮತ್ತು ಧ್ವನಿಗಳ ಕುರಿತು ಹಲವಾರು ಲೇಖನಗಳು ಇವೆ. ತಮಿಳುನಾಡಿನ 'ತಮಿಳ್ ತಾಯ್ ವಳತ್ತು', ಆಂಧ್ರದ "ಮಾ ತೆಲುಗು ತಲ್ಲಿಕಿ" ಮತ್ತು ತೆಲಂಗಾಣದ 'ಜಯ ಜಯಹೈ ತೆಲಂಗಾನ ತಲ್ಲಿ' ಕೂಡ ಪ್ರಾದೇಶಿಕ ಭಾಷಾ ಪ್ರೇಮ ಮತ್ತು ತಾಯ್ನುಡಿಯ ವೈಭವೀಕರಣದ ಮೇಲೆಯೇ ಕೇಂದ್ರೀಕೃತವಾಗಿವೆ. ಕೇರಳದ 'ಕೇರಳಗಾನಂ' 'ಜಯ ಜಯ ಕೋಮಲ ಕೇರಳ ಧಾರಿಣಿ' 1938 ರಲ್ಲಿ ಬೋಧೇಶ್ವರನ್ ಅವರಿಂದ ರಚಿಸಲ್ಪಟ್ಟಿದ್ದು, 2014 ರವರೆಗೆ ಸಾಂಸ್ಕೃತಿಕ ಗೀತೆಯಾಗಿ ಅಧಿಕೃತೀಕರಣವಾಗಿದೆ. ಇದರ ಪ್ರಯೋಗ ಮತ್ತು ಆಡಳಿತಾತ್ಮಕ ನಿರ್ದೇಶನದ ಬಗ್ಗೆ ಪತ್ರಿಕಾ ವರದಿಗಳು ಲಭ್ಯವಿದೆ.

ರಾಜ್ಯಗೀತೆಗಳ ಕುರಿತು ಪ್ರಕಟಿತ ಅಧ್ಯಯನಗಳು ಮುಖ್ಯವಾಗಿ ಭಾಷಾತತ್ತ್ವ ಅಥವಾ ಸಂಗೀತಶಾಸ್ತ್ರೀಯ ದೃಷ್ಟಿಯಿಂದ ನಡೆದಿವೆ. ಕುವೆಂಪು ಅವರ "ಜಯ ಭಾರತ ಜನನಿಯ ತನುಜಾತೆ" ಕುರಿತು ಡಾ. ಎಂ. ಚಿದಾನಂದಮೂರ್ತಿ (2005) ಅವರು ಅದನ್ನು "ಸಾಂಸ್ಕೃತಿಕ ಏಕತೆಯ ಘೋಷಣಾ ಕಾವ್ಯ" ಎಂದು ವಿಶ್ಲೇಷಿಸಿದ್ದಾರೆ.

ತಮಿಳುನಾಡಿನ 'ತಮಿಳ್ ತಾಯ್ ವಳ್ತು' ಕುರಿತು ಪಿ. ಮರುಮುಥು (2010) ಅವರ ಸಂಶೋಧನೆ, "ಭಾಷಾ ಮಾತೆ" ಪರಿಕಲ್ಪನೆಯ ತತ್ವಶಾಸ್ತ್ರವನ್ನು ವಿಶ್ಲೇಷಿಸುತ್ತದೆ.

ಆಂಧ್ರಪ್ರದೇಶದ 'ಮಾ ತೆಲುಗು ತಲ್ಲಿಕಿ' ಕುರಿತು ರಾಜಗೋಪಾಲ್ (2012) ಅವರು "ತೆಲುಗು ಸಂಸ್ಕೃತಿ ಮತ್ತು ಮಾತೃಭಾವನೆಯ ಪರಿಪೂರ್ಣ ಮೂರ್ತೀಕರಣೆ" ಎಂದು ವರ್ಣಿಸಿದ್ದಾರೆ.

ಕೇರಳದ ಕೇರಳಗಾನಂ ಕುರಿತು 2014 ರಲ್ಲಿ ನಡೆದ ರಾಜ್ಯಮಟ್ಟದ ಸಾಂಸ್ಕೃತಿಕ ಚರ್ಚೆಗಳು – ಅದರ ಸಮಾಜಪ್ರೇಮಿ, ನೈಸರ್ಗಿಕ ಚಿತ್ರಣದ ಆಯಾಮಗಳನ್ನು ವಿವರಿಸುತ್ತವೆ.

ಆಂಧ್ರಪ್ರದೇಶದಿಂದ ಹೊಸ ರಾಜ್ಯವಾಗಿ ಉದಯಿಸಿದ ತೆಲಂಗಾಣ

ರಾಜ್ಯದ ಶಾಲಾ–ಕಾಲೇಜು, ಸರ್ಕಾರಿ ಸಭೆ ಸಮಾರಂಭಗಳಲ್ಲಿ 'ಮಾ ತೆಲುಗು ತಲ್ಲಿ' ಗೀತೆಯನ್ನೇ ಹಾಡುತ್ತಿದ್ದರು ನಂತರ ಹಲವಾರು ಚರ್ಚೆಗಳ ನಂತರ ಅಂದೇಶ್ರೀ ಅವರಿಂದ ರಚಿಸಲ್ಪಟ್ಟಿದ್ದ 'ಜಯ ಜಯಹೈ ತೆಲಂಗಾಣ ತಲ್ಲಿ' ಗೀತೆಯನ್ನು ಫೆಬ್ರವರಿ 4, 2024ರಂದು ರಾಜ್ಯಗೀತೆಯಾಗಿ ವಿಧಾನಸಭೆಯಲ್ಲಿ ಅಂಗೀಕೃತವಾಯಿತು.

ಶೊಧನ ವಿಧಾನ

ದತ್ತಾಂಶ ಮೂಲಗಳು: ರಾಜ್ಯಸರ್ಕಾರಿ ಪ್ರಕಟಣೆಗಳು, ಗೀತೆಗಳ ಮೂಲ ಪಠ್ಯ, ಸೂಕ್ತವಾದ ಸುದ್ದಿ ಲೇಖನಗಳು, ಅನುವಾದಗಳು, ಆಡಿಯೋ ದಾಖಲೆಗಳು ಮತ್ತು ಭಾಷಾಶಾಸ್ತ್ರ/ಸಾಹಿತ್ಯ ವಿಮರ್ಶಾ ಕೃತಿಗಳು.

ವಿಷಯ ವಿಶ್ಲೇಷಣೆ: ಪ್ರತಿಯೊಂದು ಗೀತೆಯಲ್ಲಿನ ಪ್ರಮುಖ ರೂಪಕ, ಭಾವಚಿತ್ರ, ಭಾಷಾಶೈಲಿ, ಮತ್ತು ನೈತಿಕ ಅಂಶಗಳನ್ನು ವಿಶ್ಲೇಷಣೆ.

ವಿಶ್ಲೇಷಣಾತ್ಮಕ ತಂತ್ರ: ಸಾಮೂಹಿಕ ವಿವರಣೆ – ಪ್ರತಿ ಗೀತೆಯಲ್ಲಿನ ಪ್ರಮುಖ ವಿಷಯ ರೂಪಕಗಳು (ಮಾತೃಭೂಮಿ, ಮಾತೃಭಾಷೆ, ಪ್ರಕೃತಿ ಮತ್ತು ಐಕ್ಯತೆ), ಭಾಷಾ ಶೈಲಿ (ಭಾವಾವೇಶ, ಗೌರವವಾಚಕ, ನುಡಿವ್ಯವಸ್ಥೆ), ಮತ್ತು ಉಪಯೋಗದ ಸಾಂಸ್ಕೃತಿಕ–ಶೈಲೀಯ ಪರಿಣಾಮಗಳನ್ನು ಗುರುತಿಸಲಾಗುವುದು.

ಆಧಾರ: ಶಾಲಾ–ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅನುಷ್ಠಾನದ ಉದಾಹರಣೆಗಳು ಮತ್ತು ಪತ್ರಿಕಾ ವರದಿಗಳ ಮೂಲಕ ಪ್ರಮಾಣೀಕರಣ.

ವಿಶ್ಲೇಷಣಾ ಘಟಕಗಳು:

* ಭಾವಾನಾತ್ಮಕ ಕೇಂದ್ರೀಕರಣ
* ಭಾಷಾ ಶೈಲಿ ಮತ್ತು ರೂಪಕಗಳು
* ಸಾಮಾಜಿಕ / ಸಾಂಸ್ಕೃತಿಕ ಅಂಶಗಳು
* ರಾಷ್ಟ್ರಪ್ರೇಮ ಮತ್ತು ಪ್ರಾದೇಶಿಕ ಗೌರವಭಾವ

ಕರ್ನಾಟಕ ರಾಜ್ಯಗೀತೆಯ ವಿಶೇಷತೆಗಳು

ಹೆಸರು: "ಜಯ ಭಾರತ ಜನನಿಯ ತನುಜಾತೆ" – ಕರ್ನಾಟಕದ ಅಧಿಕೃತ ರಾಜ್ಯಗೀತೆಯಾಗಿದೆ.

ರಚನೆ: ಗೀತೆಯನ್ನು ರಾಷ್ಟ್ರಕವಿ ಕುವೆಂಪು ಅವರು ರಚಿಸಿದ್ದಾರೆ.

ಸಂಗೀತ: ಗೀತೆಗೆ ಮೈಸೂರು ಅನಂತಸ್ವಾಮಿ ಅವರು ಶ್ರಾವ್ಯವಾದ ಶಾಸ್ತ್ರೀಯ ಸಂಗೀತ ನೀಡಿದ್ದಾರೆ.

ಅರ್ಥ: ಗೀತೆ ಕರ್ನಾಟಕದ ಮಣ್ಣು, ಸಂಸ್ಕೃತಿ, ಸಾಹಿತ್ಯ ಮತ್ತು ಜನರ ಗೌರವವನ್ನು ಕೊಂಡಾಡುತ್ತದೆ.

ಭಾವನಾತ್ಮಕ ಅಂಶ: ಇದು ರಾಜ್ಯದ ಏಕತೆ, ಸೌಹಾರ್ದತೆ ಮತ್ತು ಗರ್ವದ ಸಂಕೇತವಾಗಿದೆ.

ಅಧಿಕೃತ ಘೋಷಣೆ: 2004ರಲ್ಲಿ ಕರ್ನಾಟಕ ಸರ್ಕಾರವು ಈ ಗೀತೆಯನ್ನು ಅಧಿಕೃತ ರಾಜ್ಯಗೀತೆಯಾಗಿ ಘೋಷಿಸಿತು.

ಭಾಷಾ ಶೈಲಿ: ಗೀತೆ ಕಾವ್ಯಮಯ ಶೈಲಿಯಲ್ಲಿದ್ದು, ಕನ್ನಡದ ಸಾಹಿತ್ಯಿಕ, ಭಾಷಿಕ, ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ.

ಸಾಂಸ್ಕೃತಿಕ ಅರ್ಥ: ಗೀತೆ ಕರ್ನಾಟಕದ ಭೂಮಿ, ನದಿ, ಪರ್ವತ ಮತ್ತು ಸಂಸ್ಕೃತಿಯ ಆತ್ಮೀಯ ಚಿತ್ರಣ ನೀಡುತ್ತದೆ.

ತಮಿಳುನಾಡು ರಾಜ್ಯಗೀತೆಯ ವಿಶೇಷತೆಗಳು

ಹೆಸರು ಮತ್ತು ಅರ್ಥ: ತಮಿಳುನಾಡು ರಾಜ್ಯಗೀತೆ 'ತಮಿಳ್ ತಾಯಿ ವಳತ್ತು' ಎಂದರೆ "ತಮಿಳ್ ತಾಯಿಗೆ ವಂದನೆ" ಎಂಬ ಅರ್ಥವನ್ನು ಹೊಂದಿದೆ.

ರಚನೆ ಮತ್ತು ಕವಿ: ಈ ಗೀತೆಯನ್ನು ಪ್ರಸಿದ್ಧ ಕವಿ ಮನೋನ್ಮಣಿಯಂ ಸುಂದರನಾರ್ ಅವರು ರಚಿಸಿದ್ದಾರೆ. ಗೀತೆಯು ಅವರ ಮಹಾಕಾವ್ಯ "ಮನೋನ್ಮಣಿಯಂ"ನ ಮೊದಲ ಭಾಗದಿಂದ ತೆಗೆದುಕೊಳ್ಳಲಾಗಿದೆ.

ಭಾವನಾತ್ಮಕ ಅಂಶ: ಈ ಗೀತೆ ತಮಿಳು ಭಾಷೆ ಮತ್ತು ತಮಿಳು ಸಂಸ್ಕೃತಿಗೆ ತಾಯಿಯಂತೆ ಗೌರವ ಸಲ್ಲಿಸುವ ಭಕ್ತಿಗೀತೆ ಆಗಿದೆ. ಇದು ದೇಶಭಕ್ತಿ ಮತ್ತು ಭಾಷಾಭಿಮಾನವನ್ನು ಒಂದಾಗಿ ಒಳಗೊಂಡಿದೆ.

ಸಂಗೀತ ಸಂಯೋಜನೆ: ಗೀತೆಗೆ ಎಂ. ಎಸ್. ವಿಶ್ವನಾಥನ್ ಅವರು ಸಂಗೀತ ನೀಡಿದ್ದಾರೆ. ಅದರ ಧಾಟಿ ಶಾಂತ, ಗೌರವಪೂರ್ಣ ಮತ್ತು ಸಾಂಸ್ಕೃತಿಕ ಗಂಭೀರತೆಯುಳ್ಳದು.

ಅಧಿಕೃತ ಸ್ಥಾನಮಾನ: ತಮಿಳುನಾಡು ಸರ್ಕಾರವು 1970ರಲ್ಲಿ ಈ ಗೀತೆಯನ್ನು ರಾಜ್ಯಗೀತೆ ಎಂದು ಘೋಷಿಸಿತು. ರಾಜ್ಯದ ಎಲ್ಲ ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಷ್ಟ್ರಗೀತೆಗೆ ಮುನ್ನ ಇದು ಹಾಡಲಾಗುತ್ತದೆ.

ಭಾವನಾತ್ಮಕ ಅರ್ಥ: ಈ ಗೀತೆ ತಮಿಳು ಜನರ ಭಾಷಾ ಪ್ರೇಮ, ಸಂಸ್ಕೃತಿಯ ಹೆಮ್ಮೆ ಮತ್ತು ರಾಜ್ಯದ ಐಕ್ಯತೆಯ ಸಂಕೇತವಾಗಿದೆ.

ಕೇರಳ ರಾಜ್ಯಗೀತೆಯ ವಿಶೇಷತೆಗಳು

ಹೆಸರು: ಜಯ ಜಯ ಕೇರಳಂ/ಕೇರಳಗಾನಂ–ಕೇರಳ ರಾಜ್ಯಗೀತೆ.

ರಚನೆ: ಪ್ರಸಿದ್ಧ ಕವಿ ಎನ್. ಬಲಕೃಷ್ಣನ್ ನಾಯರ್ ಅವರು ಈ ಗೀತೆಯನ್ನು ರಚಿಸಿದ್ದಾರೆ.

ಸಂಗೀತ: ಈ ಗೀತೆಗೆ ಸಂಗೀತವನ್ನು ಪ್ರಸಿದ್ಧ ಸಂಗೀತಗಾರ ಎಂ. ಕೆ. ಅರಜುಮನ್ ನಾಯರ್ ನೀಡಿದ್ದಾರೆ.

ಅರ್ಥ: ಗೀತೆಯು ಕೇರಳದ ನೈಸರ್ಗಿಕ ಸೌಂದರ್ಯ, ಸಂಸ್ಕೃತಿ, ಮತ್ತು ಜನರ ಏಕತೆಯನ್ನು ಕೊಂಡಾಡುತ್ತದೆ.

ಭಾವನಾತ್ಮಕ ಅಂಶ: ಇದು ರಾಜ್ಯದ ಸೌಹಾರ್ದತೆ, ಸಹಿಷ್ಣುತೆ ಮತ್ತು ಪ್ರಗತಿಯ ಸಂಕೇತವಾಗಿದೆ.

ಅಧಿಕೃತ ಸ್ಥಾನಮಾನ: ಕೇರಳ ಸರ್ಕಾರವು ಈ ಗೀತೆಯನ್ನು ರಾಜ್ಯಗೀತೆ ಎಂದು ಅಧಿಕೃತವಾಗಿ ಘೋಷಿಸಿದೆ.

ಸಾಂಸ್ಕೃತಿಕ ಅರ್ಥ: ಕೇರಳದ ಜನಜೀವನ, ಹಸಿರು ನೈಸರ್ಗಿಕ ಪರಿಸರ ಮತ್ತು ಕಲೆಗಳ ಪರಂಪರೆಯು ಇದರ ಮುಖ್ಯ ವಿಷಯ.

ಆಂಧ್ರಪ್ರದೇಶ ರಾಜ್ಯಗೀತೆಯ ವಿಶೇಷತೆಗಳು

ಹೆಸರು: ಮಾ ತೆಲುಗು ತಲ್ಲಿಕಿ ಆಂಧ್ರಪ್ರದೇಶ ರಾಜ್ಯಗೀತೆ.

ರಚನೆ: ಪ್ರಸಿದ್ಧ ಕವಿ ಶ್ರೀ. ಸಂಭಮೂರ್ತಿ (Sankarambadi Sundarachari) ಅವರು ಈ ಗೀತೆಯನ್ನು 1942ರಲ್ಲಿ ರಚಿಸಿದರು.

ಸಂಗೀತ: ಸಂಗೀತವನ್ನು ಸಮುದ್ರಾಲಾ ರಾಘವಚಾರ್ಯ ಅವರು ನೀಡಿದ್ದಾರೆ.

ಅರ್ಥ: ಈ ಗೀತೆ “ತೆಲುಗು ತಾಯಿ”ಗೆ ಸಮರ್ಪಿತವಾಗಿದ್ದು, ತೆಲುಗು ಭಾಷೆ,

ಸಂಸ್ಕೃತಿ ಮತ್ತು ಜನರ ಗೌರವವನ್ನು ಕೊಂಡಾಡುತ್ತದೆ.

ಭಾವನಾತ್ಮಕ ಅಂಶ: ಇದು ರಾಜ್ಯದ ಐಕ್ಯತೆ, ಗರ್ವ, ಹಾಗೂ ಭಾಷಾಭಿಮಾನದ ಪ್ರತೀಕವಾಗಿದೆ.

ಅಧಿಕೃತ ಸ್ಥಾನಮಾನ: 1956ರಲ್ಲಿ ರಾಜ್ಯ ರಚನೆಯ ನಂತರ, ಈ ಗೀತೆಯನ್ನು ಆಂಧ್ರಪ್ರದೇಶದ ಅಧಿಕೃತ ರಾಜ್ಯಗೀತೆಯಾಗಿ ಅಂಗೀಕರಿಸಲಾಯಿತು.

ಸಾಂಸ್ಕೃತಿಕ ಅಂಶ: ತೆಲುಗು ಭಾಷೆಯ ಮಧುರತೆ, ಕಾವ್ಯದ ಶೈಲಿ ಮತ್ತು ತಾಯಿಯ ಭಾವನೆಗಳು ಈ ಗೀತೆಯ ಹೃದಯ.

ತೆಲಂಗಾಣ ರಾಜ್ಯಗೀತೆಯ ವಿಶೇಷತೆಗಳು

ಹೆಸರು: ಜಯ ಜಯ ಹೈ ತೆಲಂಗಾಣ ತಲ್ಲಿ – ತೆಲಂಗಾಣ ರಾಜ್ಯಗೀತೆ.

ರಚನೆ: ಪ್ರಸಿದ್ಧ ಕವಿ ಅಂದೆಶ್ರೀ ರವಿ ಶಂಕರ್ ಅವರು ಈ ಗೀತೆಯನ್ನು ರಚಿಸಿದ್ದಾರೆ.

ಸಂಗೀತ: ಗೀತೆಗೆ ಸಂಗೀತ ಸಂಯೋಜನೆ ಪ್ರಸಿದ್ಧ ಸಂಗೀತ ನಿರ್ದೇಶಕ ಎಂ. ಎಂ. ಕೀರವಾಣಿ ಅವರು ಮಾಡಿದ್ದಾರೆ.

ಅರ್ಥ: ಈ ಗೀತೆ ತೆಲಂಗಾಣದ ಇತಿಹಾಸ, ಸಂಸ್ಕೃತಿ, ರೈತರ ಶ್ರಮ ಮತ್ತು ಸ್ವಾತಂತ್ರ್ಯ ಹೋರಾಟದ ಗೌರವವನ್ನು ಕೊಂಡಾಡುತ್ತದೆ.

ಭಾವನಾತ್ಮಕ ಅಂಶ: ಇದು ರಾಜ್ಯದ ಸ್ವಾಭಿಮಾನ, ಶೌರ್ಯ ಮತ್ತು ಪುನರುತ್ಥಾನದ ಸಂಕೇತವಾಗಿದೆ.

ಅಧಿಕೃತ ಸ್ಥಾನಮಾನ: 2014ರಲ್ಲಿ ತೆಲಂಗಾಣ ರಾಜ್ಯ ರಚನೆಯ ನಂತರ ಈ ಗೀತೆಯನ್ನು ಅಧಿಕೃತ ರಾಜ್ಯಗೀತೆಯಾಗಿ ಘೋಷಿಸಲಾಯಿತು.

ಸಾಂಸ್ಕೃತಿಕ ಅಂಶ: ತೆಲಂಗಾಣದ ಭೂಮಿಯ ಸೌಂದರ್ಯ, ಭಾಷೆಯ ಮಧುರತೆ ಮತ್ತು ಜನರ ಹೋರಾಟದ ಸ್ಫೂರ್ತಿ ಗೀತೆಯಲ್ಲಿದೆ.

ವಿಶ್ಲೇಷಣೆ:

1. ಭಾವನಾತ್ಮಕ ಕೇಂದ್ರೀಕರಣ:

ಕರ್ನಾಟಕ ಮತ್ತು ಆಂಧ್ರ ಗೀತೆಗಳು ತಾಯ್–ಭಾಷೆ/ಮಾತೃಭೂಮಿಯ ವೈಭವೀಕರಣದ ಮೂಲಕ ನಾಡಿನ ಬಗೆಗಿನ ಸನ್ಮಾನವನ್ನು, ಗೌರವವನ್ನು

ಮೂಡಿಸುತ್ತವೆ; ಕರ್ನಾಟಕದ ಗೀತೆನಲ್ಲಿ ಕುವೆಂಪು ಅವರ ಸರ್ವಮಾನವೀಯ ಸಂದೇಶ ಸಹ ಅರಳಿದೆ.

* ತಮಿಳುನಾಡಿನ 'ತಮಿಳ್ ತಾಯ್ ವಳತ್ತು' ಭಾಷಾ–ಮಾತೃಭಾವವನ್ನು ಉದ್ದೀಪನಗೊಳಿಸುವ ಮೂಲಕ ತಮಿಳು ಚೇತನವನ್ನು ಉತ್ಕರ್ಷಿಸುತ್ತದೆ.

* ಕೇರಳದ 'ಕೇರಳಗಾನಂ' ಸಮುದಾಯ–ಕೇಂದ್ರಿತ ಶ್ರದ್ಧಾಭಾವ ಮತ್ತು ಪ್ರಕೃತಿ–ಪ್ರೇಮದ ಮೂಲಕ ರಾಜ್ಯದ ಸಾಂಸ್ಕೃತಿಕತೆಯನ್ನು ಪ್ರತಿಬಿಂಬಿಸುತ್ತದೆ.

* ತೆಲಂಗಾಣದ 'ಜಯ ಜಯಹೈ ತೆಲಂಗಾಣ ತಲ್ಲಿ' ಗೀತೆಯು ರಾಜ್ಯ ಪುನರ್ರಚನೆ, ಅಸ್ಮಿತೆಯ ಹೋರಾಟದ ಬಗ್ಗೆ ಚಿಂತಿಸುತ್ತದೆ.

2. ಭಾಷಾ ಶೈಲಿ ಮತ್ತು ರೂಪಕಗಳು:

ಹೆಚ್ಚಿನ ಗೀತೆಗಳಲ್ಲಿಯೂ ತಾಯಿ/ಭೂಮಿಯನ್ನು ಪುನಃ ವ್ಯಕ್ತಿಯಾಗಿ ಕಾಣುವುದು; ವ್ಯಕ್ತಿಗೋಪುರದ ರೂಪಕಗಳು (ಮಾತೃಭಾಷೆ, ನದಿ, ಮಣ್ಣು, ಪ್ರಕೃತಿ) ಸಾಮಾನ್ಯವಾಗಿ ಕಂಡುಬರುತ್ತವೆ. ಇವು ಪ್ರಾದೇಶಿಕ ಗುರುತನ್ನು ಸಾಂಕೇತಿಕವಾಗಿ ವೃದ್ಧಿಸುತ್ತವೆ.

3.ಸಾಮಾಜಿಕ–ಸಾಂಸ್ಕೃತಿಕ ಅಂಶಗಳು

ರಾಷ್ಟ್ರವ್ಯಾಪಿ ಏಕತೆಯ ವಿಚಾರಗಳೊಡನೆ ಪ್ರಾದೇಶಿಕ ಅಹಂ/ಗೌರವದ ಸಮತೋಲನವನ್ನು ಈ ಗೀತೆಗಳು ತೋರಿಸುತ್ತವೆ. ಕೆಲವು ಸಂದರ್ಭಗಳಲ್ಲಿ ಗೀತೆಗಳ ಆಯ್ಕೆ, ಹಾಡುವ ವಿಧಾನ ಮತ್ತು ಸರ್ಕಾರಿ ಸೂಚನೆಗಳು ಸಾಮಾಜಿಕ ಚರ್ಚೆಗಳಿಗೆ ದಾರಿದೀಪವಾಗಿವೆ (ಉದಾ. ಕರ್ನಾಟಕದಲ್ಲಿ ಗೀತೆಯ ಆವೃತ್ತಿ/ಪಠನದಲ್ಲಿ ನಡೆದ ವಿವಾದಗಳು).

4. ರಾಷ್ಟ್ರಪ್ರೇಮ ಮತ್ತು ಪ್ರಾದೇಶಿಕ ಗೌರವಭಾವ

ಭಾರತ ಒಕ್ಕೂಟ ವ್ಯವಸ್ಥೆಯಾಗಿರುವುದರಿಂದ ರಾಷ್ಟ್ರ ಪ್ರೇಮ ಎಷ್ಟು ಮುಖ್ಯವಾಗಿರುತ್ತದೋ, ಪ್ರಾದೇಶಿಕತೆಯು ಅಷ್ಟೇ ಮುಖ್ಯವಾಗಿರುತ್ತದೆ. ಈ ಪ್ರಾದೇಶಿಕತೆಗೆ ಕೇಂದ್ರದ ಅಧಿಕಾರ ವರ್ಗವೂ ಗೌರವಿಸುವುದು ಅವರ ಕರ್ತವ್ಯವಾಗಿದೆ. ವೈವಿಧ್ಯಮಯತೆಯಿಂದ ಕೂಡಿರುವ ಭಾರತ ದೇಶದಲ್ಲಿ ಎಲ್ಲರಿಗೂ ಸ್ವನಾಡಿನ ಪ್ರೇಮ ಸರ್ವೇಸಾಮಾನ್ಯವಾದುದು ಅದನ್ನು ಎಲ್ಲರು ಆದರಿಸುವುದು

ಮುಖ್ಯವಾಗಿದೆ.

ಎಲ್ಲಾ ರಾಜ್ಯಗೀತೆಗಳಲ್ಲಿಯೂ ಮಾತೃಭಾಷೆಯ ಮತ್ತು ಜನ್ಮಭೂಮಿಯ ಆರಾಧನೆ ಮುಖ್ಯಭಾವವಾಗಿದೆ.

ಕರ್ನಾಟಕ ಮತ್ತು ಕೇರಳ ಗೀತೆಗಳಲ್ಲಿ ಸರ್ವಮಾನವೀಯತೆ ಮತ್ತು ನೈಸರ್ಗಿಕತೆಯ ಅಂಶಗಳು ಹೆಚ್ಚು ಪ್ರಬಲ.

ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ಗೀತೆಗಳಲ್ಲಿ ಭಾಷಾ ಗುರುತಿನ ಹಾಗೂ ತಾಯ್–ಭಾಷೆಯ ಆಧ್ಯಾತ್ಮಿಕೀಕರಣ ಕಂಡುಬರುತ್ತದೆ. ಸಾಹಿತ್ಯರೂಪದ ದೃಷ್ಟಿಯಿಂದ ಕನ್ನಡ ಮತ್ತು ತಮಿಳು ಗೀತೆಗಳು ಕಾವ್ಯಮಯವಾದರೆ, ತೆಲುಗು ಮತ್ತು ಮಲಯಾಳಂ ಗೀತೆಗಳು ಹಾಡುಗಾರಿಕ ಶೈಲಿಗೆ ಒತ್ತು ನೀಡುತ್ತವೆ.

ಈ ಅಧ್ಯಯನವು ದಕ್ಷಿಣ ಭಾರತದ ರಾಜ್ಯಗೀತೆಗಳು ವಿಭಿನ್ನ ಭಾಷಾ ಗುರುತು ಮತ್ತು ಸಾಂಸ್ಕೃತಿಕ ಪರಂಪರೆಗಳ ಸಂಕೇತವಾದರೂ, ಅವುಗಳಲ್ಲಿ ಅಂತರ್ನಿಹಿತವಾದ ರಾಷ್ಟ್ರೀಯ ಏಕತೆಯ ಭಾವನೆ ಒಂದೇ ರೀತಿಯಾಗಿ ಸ್ಪಂದಿಸುತ್ತದೆ. ಪ್ರಾದೇಶಿಕ ಗರ್ವ, ಮಾತೃಭಾಷೆಯ ಪ್ರೀತಿ, ಮತ್ತು ಸಾಂಸ್ಕೃತಿಕ ಗೌರವದ ನಾದ. ಇವುಗಳೆಲ್ಲ ಭಾರತೀಯ ಏಕತೆಯ ಭಾವವನ್ನೇ ಬಲಪಡಿಸುತ್ತವೆ. ಮುಂದಿನ ಸಂಶೋಧನೆಗಳಲ್ಲಿ ಸಂಗೀತಾತ್ಮಕ ವಿಶ್ಲೇಷಣೆ ಮತ್ತು ಸಾರ್ವಜನಿಕ ಗ್ರಹಿಕೆಯ ಕುರಿತು ಆಧಾರಿತ ಅಧ್ಯಯನಗಳನ್ನು ಮಾಡಬಹುದು.

ಈ ತೌಲನಿಕ ಅಧ್ಯಯನವು ದಕ್ಷಿಣ ಭಾರತದ ಐದು ರಾಜ್ಯಗೀತೆಗಳಲ್ಲಿನ ಸಾಮಾನ್ಯ ತಂತುಗಳು– ಮಾತೃಭಾಷೆ/ಮಾತೃಭೂಮಿ–ಪ್ರೇಮ, ನೈಸರ್ಗಿಕ ವರ್ಣನೆ, ಸಾಂಸ್ಕೃತಿಕ ಘನತೆ ಮತ್ತು ಜಾತ್ಯಾತೀತ ಐಕ್ಯತೆಯ ಪ್ರಚಾರವನ್ನು ಸಾದರಪಡಿಸುತ್ತದೆ. ಪ್ರತ್ಯೇಕವಾಗಿ ಪ್ರತಿಯೊಂದು ಗೀತೆ ತನ್ನ ಭಾಷಾ ಪರಂಪರೆ ಮತ್ತು ಸಾಮಾಜಿಕ, ಇತಿಹಾಸಕ್ಕೆ ಅನುಗುಣವಾಗಿ ವಿಭಿನ್ನ ಶೈಲಿಯನ್ನು ಸ್ಥಾಪಿಸಿಕೊಳ್ಳುತ್ತದೆ.

ಪರಾಮರ್ಶನ ಗ್ರಂಥಗಳು

1. ಡಾ.ಎಂ.ಚಿದಾನಂದ ಮೂರ್ತಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲ ತತ್ವಗಳು, ಸಾಹಿತ್ಯ ಪ್ರಕಾಶನ, ಬೆಂಗಳೂರು, 2005
2. Marimuthu, P. Tamil Thai Valthu: A Cultural Analysis.

Chennai: University of Madras. 2010.
3. Rajagopal, S. Language and Identity in Andhra Pradesh. Hyderabad: Telugu Academy. 2012.
4. Press Trust of India. Keralaganam declared cultural song of Kerala*. The Hindu, July 14. 2014.

ಲೇಖಕರು : ಡಾ. ಸೈಯದ್ ಮುಯಿನ್
ಸಹಾಯಕ ಪ್ರಾಧ್ಯಾಪಕ
ಸಮಾಜ ವಿಜ್ಞಾನ ಮತ್ತು ಭಾಷಾ ವಿಭಾಗ
ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯ
ಬೆಂಗಳೂರು

***

ಕನ್ನಡ ಏಕೀಕರಣ ಚಳವಳಿಯ ಹಾಡುಗಳಲ್ಲಿ : ಕನ್ನಡ–ಕನ್ನಡಿಗ–ಕರ್ನಾಟಕ

ಪ್ರಸ್ತಾವನೆ :

ಕನ್ನಡ ಭಾಷಾ ಚಳವಳಿಗಳು ದೇಶದಲ್ಲಿ ನಡೆದಿರುವ ಭಾಷಾ ಚಳವಳಿಗಳಲ್ಲಿ ವಿಶಿಷ್ಟ ಸ್ಥಾನಮಾನವನ್ನು ಪಡೆದುಕೊಂಡಿವೆ. ಬಹುಭಾಷಿಕರು ನೆಲೆಸಿರುವ ಸ್ಥಳಗಳಲ್ಲಿ ಸ್ಥಳೀಯರು ಅನ್ಯಭಾಷಿಕರ ಆಕ್ರಮಣವನ್ನು ತಡೆಗಟ್ಟಿ ತಮ್ಮ ಸಾರ್ವಭೌಮತ್ವವನ್ನು ಕಾಯ್ದುಕೊಳ್ಳಲು ಹುಟ್ಟಿಕೊಂಡ ಕನ್ನಡ ಹೋರಾಟ–ಚಳವಳಿ ವಿಭಿನ್ನ ಸ್ವರೂಪದ್ದಾಗಿದೆ.

ಕನ್ನಡಿಗರು ತಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನು ರಕ್ಷಿಸಿಕೊಂಡು ಉಳಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಹಲವಾರು ಚಳುವಳಿಗಳನ್ನು ನಡೆಸಿದ್ದಾರೆ. ಈ ಚಳವಳಿಗೆ ಅನೇಕ ಮುಖಗಳು ಮತ್ತು ಮಗ್ಗಲುಗಳಿವೆ. ಕನ್ನಡ ಭಾಷಾ ಚಳವಳಿಯು ಸಾಹಿತಿಗಳ ಬೌದ್ಧಿಕತೆ, ಸಾಮಾನ್ಯರ ಬಾವುಕತೆಗಳನ್ನು ಮೇಳೈಯಿಸಿಕೊಂಡು, ಭಾಷಣ, ಘೋಷಣೆ, ಸಾಂಕೇತಿಕ ಪ್ರತಿಭಟನೆಗಳ ಜೊತೆಗೆ ನೇರ ಹೋರಾಟಗಳು ನಡೆದಿದ್ದಾವೆ.

ಕನ್ನಡ–ಕನ್ನಡಿಗ–ಕರ್ನಾಟಕತ್ವಗಳ ಅನನ್ಯತೆ ಇವತ್ತಿನ ಮುಖ್ಯ ಚರ್ಚೆಗಳಲ್ಲಿ ಒಂದಾಗಿದ್ದಾವೆ. ಈ ತತ್ವಗಳು ರಾಜಪ್ರಭುತ್ವ, ಪರಕೀಯ ಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಇಂದಿನ ಕಾಲಘಟ್ಟದಲ್ಲೂ ವಿವಿಧ ರೂಪದ ಸಾಂಸ್ಕೃತಿಕ

ದಾಳಿಗಳನ್ನು ಎದುರಿಸುತ್ತಿವೆ. ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಸೇವಣರು, ವಿಜಯನಗರದ ಅರಸರ ಕಾಲದಲ್ಲಿ ಕನ್ನಡ ಭಾಷೆ–ಸಾಹಿತ್ಯ, ಸಂಸ್ಕೃತಿಗಳು ವಿಕಾಸಗೊಂಡವು. ಆದರೆ ವಿಜಯನಗರದ ಅವನತಿಯ ಅನಂತರ ಕನ್ನಡದ ಭೂಪ್ರದೇಶಗಳು ಹಲವು ಆಡಳಿತ ಘಟಕಗಳಾಗಿ ಹಂಚಿಹೋದವು. ಹೀಗೆ ಹಂಚಿ ಹೋಗಿದ್ದ ಕನ್ನಡ ಭೂಪ್ರದೇಶಗಳನ್ನು ರಾಜಸತ್ತಾತ್ಮಕ ನೆಲೆಯಲ್ಲಿ ಒಂದುಗೂಡಿಸಲು ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಪ್ರಯತ್ನ ಪಟ್ಟರು. ಕ್ರಿ.ಶ. 1565ರ ಅನಂತರ ಕನ್ನಡ ಭೂಪ್ರದೇಶಗಳನ್ನು ಸಣ್ಣಪುಟ್ಟ ರಾಜ ಮನೆತನಗಳು ಸ್ವತಂತ್ರವಾಗಿ ಆಳಲಾರಂಭಿಸಿದವು. ವಾಣಿಜ್ಯ ವ್ಯಾಪಾರಕ್ಕೆಂದು ಆಗಮಿಸಿದ ಬ್ರಿಟಿಷರು ಕನ್ನಡ ಭೂಪ್ರದೇಶಗಳ ಮೇಲೆ ಹಿಡಿತವನ್ನು ಸಾಧಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ಆಡಳಿತ ಘಟಕಗಳನ್ನು ರೂಪಿಸಿಕೊಂಡರು. ಹೀಗೆ ರೂಪಿಸಿಕೊಂಡ ಆಡಳಿತ ಘಟಕಗಳಲ್ಲಿ ಹಂಚಿ ಹೋಗಿದ್ದ ಕನ್ನಡಿಗರು ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಲವು ತೊಂದರೆಗಳನ್ನು ಎದುರಿಸಿದರು.

ಸ್ವಾತಂತ್ರ್ಯ ನಂತರದಲ್ಲಿ 'ವೈವಿಧ್ಯತೆಯಲ್ಲಿ ಏಕತೆ' ಎಂಬ ಮಂತ್ರವನ್ನು ಸಂವಿಧಾನ ಘೋಷಿಸಿತು. ಆದರೂ ಕರ್ನಾಟಕದಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ, ಭಾಷಿಕ ಕಲಹಗಳು, ವೈಷಮಗಳು, ದಬ್ಬಾಳಿಕೆಗಳು ಮುಂದುವರಿದವು. ನವವಸಾಹತುಶಾಹಿ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಭಾಷಾನೀತಿ, ಆರ್ಥಿಕ ನೀತಿ, ಬಹುರಾಷ್ಟ್ರೀಯ ಕಂಪನಿಗಳ ಧಾಳಿ, ಕೈಗಾರಿಕೀಕರಣ, ಅನ್ಯ ಭಾಷಾ ಸಂಸ್ಕೃತಿಗಳ ಲಗ್ಗೆ, ಇಂಗ್ಲಿಷ್ ಶಿಕ್ಷಣದ ವ್ಯಾಪಕತೆ, ಹೊಸ ಸಮೂಹ ಮಾಧ್ಯಮಗಳ ಪ್ರಭಾವ, ಗಡಿ ಸಮಸ್ಯೆಗಳ ತೀವ್ರತೆಯಲ್ಲಿ ಉಸಿರು ಹಿಡಿದು ನಿಂತಿರುವ ಕನ್ನಡಿಗ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದಾನೆ. ಇದರಿಂದ ಎಚ್ಚೆತ್ತುಕೊಂಡ ಕನ್ನಡಿಗನು 'ಕನ್ನಡ–ಕನ್ನಡಿಗ–ಕರ್ನಾಟಕ'ಎಂಬ ಪರಿಕಲ್ಪನೆಗಳ ಈಡೇರಿಕೆಗಾಗಿ ಮುಂದಾದನು.

'ಕನ್ನಡ'ವೆಂದರೆ ಭಾಷೆ, 'ಕನ್ನಡಿಗ' ಎಂದರೆ ಭಾಷೆಯನ್ನು ಮಾತನಾಡುವವನು, 'ಕರ್ನಾಟಕ'ವೆಂದರೆ ಕನ್ನಡ ಭಾಷೆಯನ್ನಾಡುವ ಜನಸಮುದಾಯ ವಾಸಿಸುವ ಪ್ರದೇಶ. ಈ ಮೂರು ಪರಿಕಲ್ಪನೆಗಳಿಗೆ ಅನ್ಯ

ಭಾಷೆಗಳಿಂದ, ಅನ್ಯ ಭಾಷಿಕರಿಂದ, ಅನ್ಯ ರಾಜ್ಯಗಳಿಂದ ತೊಂದರೆಯಾಗುತ್ತಿದ್ದು ಈ ತೊಂದರೆಗಳನ್ನು ನಿವಾರಿಸುವ ನೆಲೆಯಲ್ಲಿ ಕನ್ನಡಿಗರು ಚಳವಳಿಗಳನ್ನು ಹಮ್ಮಿಕೊಳ್ಳುವ ಪರಿಸ್ಥಿತಿ ಎದುರಾಯಿತು. ಈ ಹಿನ್ನೆಲೆಯಲ್ಲಿ 1890ರಲ್ಲಿ ಸ್ಥಾಪನೆಯಾದ 'ಕರ್ನಾಟಕ ವಿದ್ಯಾವರ್ಧಕ ಸಂಘ', 1915 ರಲ್ಲಿ ಪ್ರಾರಂಭವಾದ 'ಕರ್ನಾಟಕ ಸಾಹಿತ್ಯ ಪರಿಷತ್ತು' ಕನ್ನಡ, ಕನ್ನಡಿಗ, ಕರ್ನಾಟಕತ್ವಗಳ ಏಳಿಗೆ ಮತ್ತು ಉಳಿವಿಗಾಗಿ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಈ ಸಂದರ್ಭದಲ್ಲಿ ಹುಟ್ಟಿಕೊಂಡ ಹಲವು ಕನ್ನಡಪರ ಸಂಘಗಳಾದ 1916ರ 'ಕರ್ನಾಟಕ ಸಭಾ', 1960ರ 'ಕನ್ನಡ ಯುವಜನಾ ಸಭಾ', 1961 'ಕರ್ನಾಟಕ ಸಂಯುಕ್ತ ರಂಗ', 1964ರ 'ಕನ್ನಡ ಚಳವಳಿ ಕೇಂದ್ರ ಮಂಡಳಿ' ಹಾಗೂ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ, ಹಾಗೂ 'ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ' ಇನ್ನು ಮುಂತಾದವು ಬೀದಿಗಳಲ್ಲಿ ಸಭೆ ನಡೆಸಿ ಕನ್ನಡದ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಗೋಕಾಕ್ ಚಳವಳಿಯ ಕಾಲದಲ್ಲಿ ಪ್ರತಿ ವಾರದ ಬುಧವಾರದ ದಿನ ಸಭೆ ನಡೆಯುತ್ತಿತ್ತು. ಈ ಸಭೆಯು 1998ರ ವರೆಗೆ ಸತತವಾಗಿ ನಡೆಯಿತು. ಈ ಸಭೆಯಲ್ಲಿ ಕನ್ನಡ ಚಳವಳಿಯ ಧ್ಯೇಯೋದ್ದೇಶಗಳ ಬಗ್ಗೆ ಚರ್ಚಿಸುವುದರ ಜೊತೆಗೆ ಕನ್ನಡಪರ ಗೀತೆಗಳನ್ನು ಭಾವನಾತ್ಮಕವಾಗಿ ಹಾಡುತ್ತಿದ್ದರು. ಪ್ರಸಿದ್ಧ ಗಾಯಕರಾದ 'ಬಾಳಪ್ಪಹುಕ್ಕೇರಿ' ಅವರು ಸ್ವ-ಪ್ರೇರಣೆಯಿಂದ ಬುಧವಾರ ಸಭೆಯಲ್ಲಿ ಪಾಲ್ಗೊಂಡು ಹಾಡುಗಳನ್ನು ಹಾಡುತ್ತಿದ್ದರು. ಹೀಗೆ ಕನ್ನಡಪರ ಕವಿತೆಗಳು ಹಾಡುಗಳಾಗಿ ರೂಪಾಂತರಗೊಂಡವು. ಗೇಯತೆ ಮತ್ತು ಭಾವನಾತ್ಮಕವಾಗಿ ಕೂಡಿರುವ ಈ ಹಾಡುಗಳು ಕನ್ನಡ, ಕನ್ನಡಿಗ–ಕರ್ನಾಟಕತ್ವ ಪರಿಕಲ್ಪನೆಗಳನ್ನು ಪ್ರತಿಬಿಂಬಿಸುತ್ತವೆ. ಹೀಗೆ ಕನ್ನಡ, ಕನ್ನಡಿಗ, ಕರ್ನಾಟಕತ್ವ ಪರಿಕಲ್ಪನೆಗಳನ್ನು ಬಿಂಬಿಸುವಂತಹ ಹಾಡುಗಳನ್ನು ಏಕೀಕರಣ ಪೂರ್ವ ಮತ್ತು ಏಕೀಕರಣೋತ್ತರ ಹಾಡುಗಳೆಂದು ವಿಭಾಗಿಸಿಕೊಂಡು ವಿವರಣಾತ್ಮಕ ಮಾದರಿಯನ್ನು ಅನುಸರಿಸಿ ವಸ್ತುನಿಷ್ಠವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿರುತ್ತೇನೆ.

ಕನ್ನಡ ಭಾಷಾ ಏಕೀಕರಣ ಚಳವಳಿಯ ಪ್ರೇರಕಾಂಶಗಳು :

ಯಾವುದೇ ಚಳವಳಿಯ ಅಸ್ತಿತ್ವವು ಸಮಕಾಲಿನ ಸನ್ನಿವೇಶದ ಆತಂಕದ ನೆಲೆಗಳನ್ನು ಪರೋಕ್ಷವಾಗಿ ಧ್ವನಿಸುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಚಳವಳಿ ಎಂಬ ಮಾತು ಸಹ ಕನ್ನಡ–ಕರ್ನಾಟಕತ್ವದ ಅನನ್ಯತೆಯು ಎದುರಿಸುತ್ತಿರುವ ಆತಂಕಗಳನ್ನು ಕುರಿತೆ ಪರೋಕ್ಷವಾಗಿ ಮಾತನಾಡುತ್ತಿರುತ್ತದೆ.

"ಕನ್ನಡ ಚಳವಳಿ ಏನೂ ಸಾಧಿಸಿಲ್ಲವೆಂದು ಯಾರೂ ಹೇಳುವಂತಿಲ್ಲ. ಇವತ್ತು ಕರ್ನಾಟಕದಲ್ಲಿ ಸ್ವಲ್ಪವಾದರೂ ಕನ್ನಡ ಪರವಾದ ಜಾಗೃತಿ ಇದ್ದರೆ ಅದು ಕನ್ನಡ ಚಳವಳಿಯ ಫಲಿತವೆಂದೆ ಹೇಳಬೇಕು. ಆದರೆ ಕರ್ನಾಟಕ ಏಕೀಕರಣೋತ್ತರ ಸಂದರ್ಭದ ಚಳವಳಿಯಲ್ಲಿ ಕೇಳಿ ಬಂದ ಆಡಳಿತದಲ್ಲಿ ಕನ್ನಡ, ಶಿಕ್ಷಣದಲ್ಲಿ ಕನ್ನಡ, ನ್ಯಾಯಾಲಯದಲ್ಲಿ ಕನ್ನಡ, ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ, ರೈಲ್ವೆ, ಜಲ, ಗಡಿ ಮುಂತಾದ ಅನೇಕ ಸಮಸ್ಯೆಗಳು ಇಂದಿಗೂ ಅವತ್ತಿನ ಸ್ವರೂಪದಲ್ಲಿ ಉಳಿದಿರುವುದು ಕನ್ನಡ ಚಳವಳಿಯ ಚಲನಶೀಲತೆಯನ್ನು ಪ್ರಶ್ನಿಸುತ್ತದೆಯಲ್ಲವೇ! ಆದ್ದರಿಂದ ಕನ್ನಡ ಚಳವಳಿಯ ಮುಂದಿನ ದಿಕ್ಕು ದೆಶಗಳನ್ನು ಚಿಂತಿಸಿ, ಕ್ರಿಯಾಶೀಲವಾಗುವುದು ಇಂದಿನ ಅನಿವಾರ್ಯವೆನಿಸುತ್ತದೆ. ಈ ನಿಟ್ಟಿನಲ್ಲಿ ಯೋಜನ ಬದ್ಧ ಸಂಘಟನಾತ್ಮಕ ಕೆಲಸ ನಡೆಯುವುದು ಉಚಿತವೆನಿಸಿದೆ"[1] ಯಾಕೆಂದರೆ ಕನ್ನಡ ಚಳವಳಿಯು ಎದುರಿಗಿಟ್ಟುಕೊಂಡಿರುವ ಸಮಸ್ಯೆ ಮತ್ತು ಸವಾಲುಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿವೆ.

ಏಕೀಕರಣದ ಪರಿಕಲ್ಪನೆಯು ಪ್ರಾದೇಶಿಕ ಭಾಷಿಕ ನೆಲೆಯಲ್ಲಿ ಅನನ್ಯತೆಗೆ ಬಂದಿದ್ದು ರಾಷ್ಟ್ರೀಯತೆಯ ಪರಿಕಲ್ಪನೆಯ ಪರದಿಯಲ್ಲಿ ಹುಟ್ಟಿಕೊಂಡಿದೆ. ಏಕೀಕರಣ ಪರಿಕಲ್ಪನೆಯನ್ನು ಭಾಷಿಕ ಮಾಧ್ಯಮದ ಮೂಲಕ ಗುರುತಿಸಿಕೊಂಡ ಪ್ರಕ್ರಿಯೆಯಾಗಿದೆ. ಕನ್ನಡ ಭಾಷಿಕರು ವಾಸಿಸುತ್ತಿದ್ದ ಭೂಪ್ರದೇಶಗಳಲ್ಲಿನ ವಿದ್ರತೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದು ಈ ಪರಿಕಲ್ಪನೆಯ ಹುಟ್ಟು ಹಾಗೂ ನಿರ್ವಹಣೆಯನ್ನು ಅಂದಿನ ಚಳವಳಿಗಾರರೆ ಬಳಕೆಗೆ ತಂದರು.

'ಈ ಹದಗೆಟ್ಟ ಪರಿಸ್ಥಿತಿಯನ್ನು ಬದಲಿಸಿ ನಾಡಿನ ಬೇರೆ ಬೇರೆ ತುಂಡುಗಳನ್ನು ಒಂದುಗೂಡಿಸಿ ಒಂದು ಪ್ರಕಾರದ ರಾಜಕೀಯ ಏಕತಂತ್ರತೆಯನ್ನು

ತರುವುದೇ ಅರ್ಥಾತ್ ರಾಜಕೀಯ ದೃಷ್ಟಿಯಿಂದ ಒಂದೇ ಪ್ರಾಂತಿಕ ಆಡಳಿತಕ್ಕೆ ಒಳಪಡುವಂತೆ ವಿಕಲ ನಾಟಕವನ್ನು ಸಂಯೋಜಿಸುವುದೇ ಏಕೀಕರಣ' ಎಂದು ನಿರ್ವಚಿಸಿದ್ದಾರೆ. ಇಲ್ಲಿ ಒಂದೇ ರಾಜಕೀಯ ಪರಧಿಯಲ್ಲಿ ಅಡಕವಾಗುವ ಇಂಗಿತ ಅಭಿವ್ಯಕ್ತಿಗೊಂಡಿದೆ. ಅಂದರೆ ತುಂಡಾಗಿದ್ದ ಕನ್ನಡದ ಭೌಗೋಳಿಕ ಪರಿಸರವು ಹಾಗೂ ಭಾಷಿಕರು ಒಂದೇ ಆಡಳಿತದಡಿಯಲ್ಲಿ ಬೆರೆತು ಆ ಮೂಲಕ ತಮ್ಮ ಅನನ್ಯತೆ–ಆಸ್ಮಿತೆ (ಖಜಜಟಿಣುಣಥಿ)ಗಳನ್ನು ಕಂಡುಕೊಳ್ಳುವುದೇ ಆಗಿದೆ. ಇಲ್ಲಿ ಭಾಷೆಯೇ ಪ್ರಧಾನವಾದದು. ಆ ಮೂಲಕ ತಮ್ಮ ಸಾಹಿತ್ಯ, ಸಂಸ್ಕೃತಿಗಳನ್ನು ಗ್ರಹಿಕೆಗೆ ತೆಗೆದುಕೊಂಡು ಗುರುತಿಸಿಕೊಳ್ಳುವ ಪ್ರಯತ್ನಗಳು ನಡೆದವು"[2]

ಕರ್ನಾಟಕದ ಏಕೀಕರಣ ಪರಿಕಲ್ಪನೆಯು ನೆರೆ–ಹೊರೆ ರಾಜ್ಯಗಳಲ್ಲಿ ಆಗುತ್ತಿದ್ದ ಸ್ಥಿತ್ಯಂತರಗಳ ಪರಿಣಾಮವೂ ಹೌದು. ಭಾಷಾವಾರು ಪ್ರಾಂತ್ಯ ರಚನೆಗಳ ಮೂಲಕ ಬಂಗಾಳ, ಅಸ್ಸಾಂ (1874) ಮತ್ತು ಒರಿಸ್ಸಾ (1876) ರಲ್ಲಿ ಏಕೀಕರಣಗೊಂಡ ರಾಜ್ಯಗಳಾಗಿದ್ದವು. ಅದೇ ರೀತಿಯಾಗಿ ಕರ್ನಾಟಕದಲ್ಲಿ ಏಕೀಕರಣದ ಪರಿಕಲ್ಪನೆಯನ್ನು ಮತ್ತು ಚಿಂತನೆಯನ್ನು ಮಾಡಿದವರು ಧಾರವಾಡದ ಡಿಪ್ಯೂಟಿ ಚೆನ್ನಬಸಪ್ಪನವರು. ಇವರು 1856ರಲ್ಲಿ ಧಾರವಾಡ, ಬಿಜಾಪುರ, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಚಳವಳಿ ಆರಂಭಿಸಿದರು.

ಮತ್ತೊಂದು ಕಡೆ ಕನ್ನಡ ನಾಡು–ನುಡಿಗಳ ಉದ್ಧಾರವನ್ನು ಮತ್ತು ಕರ್ನಾಟಕ ಏಕೀಕರಣವನ್ನು ಗುರಿಯಾಗಿಸಿಕೊಂಡು 1990 ಜುಲೈ 20ರಂದು ಧಾರವಾಡದಲ್ಲಿ ರಾ.ಹ ದೇಶಪಾಂಡೆ ರವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಈ ಸಂಘವು ಕನ್ನಡಿಗರ ಶ್ರೇಯೋಭಿವೃದ್ಧಿಯ ಉದ್ದೇಶವನ್ನು ಹೊಂದಿದ್ದು ಕನ್ನಡ ನಾಡು–ನುಡಿ–ಸಂಸ್ಕೃತಿಗಳ ಪ್ರಚಾರ, ಜಾಗೃತಿಗೆ ಆದ್ಯತೆ ನೀಡಿತ್ತು. "ವಾಗ್ಭೂಷಣ"ಎಂಬ ಮಾಸಿಕ ಪತ್ರಿಕೆಯನ್ನು ಹೊರಡಿಸಿತು. ವಾಗ್ಭೂಷಣ ಪತ್ರಿಕೆಯು ಕ್ರಮೇಣ "ಕರ್ನಾಟಕ ವಿದ್ಯಾವರ್ಧಕ ಸಂಘ"ವು ಸಮಸ್ತ ಕನ್ನಡಿಗರ ಸಂಸ್ಥೆ ಎಂಬ ಅರಿವನ್ನು ಮೂಡಿಸಿತು. ಮೈಸೂರು ಮಹಾರಾಜ ಮತ್ತು ದಿವಾನ್ ವಿಶ್ವೇಶ್ವರಯ್ಯನವರ ಬೆಂಬಲದಿಂದಾಗಿ ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ 03.05.1915 ರಿಂದ 05.05.1915ರ ವರೆಗೆ ನಡೆದ

ಮೂರು ದಿನಗಳ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಮಾತನಾಡುವ ವಿವಿಧ ಭೂ ಪರಿಸರದ ಜನರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನಾಡು–ನುಡಿ–ಸಂಸ್ಕೃತಿಗಳ ಅಭಿವೃದ್ಧಿಗಾಗಿ 05.05.1915 ರಂದು ಅಧಿಕೃತವಾಗಿ "ಕರ್ನಾಟಕ ಸಾಹಿತ್ಯ ಪರಿಷತ್" ನ್ನು ಹುಟ್ಟು ಹಾಕಿದರು. ಈ ಸಂಸ್ಥೆ ಕನ್ನಡಿಗರಲ್ಲಿ ಕನ್ನಡಾಭಿಮಾನ, ರಾಷ್ಟ್ರಾಭಿಮಾನ, ಸ್ವಾಭಿಮಾನ ಮೂಡಿಸುವ ಉದ್ದೇಶವನ್ನು ಹೊಂದಿದ್ದು ಚಳುವಳಿಗೆ ಆನೆ ಬಲ ಬಂದಂತಾಯಿತು. 1916ರಲ್ಲಿ "ಕರ್ನಾಟಕ ಸಭಾ"ವನ್ನು ಹುಟ್ಟು ಹಾಕಿದ್ದು ಏಕೀಕರಣದ ಚಳವಳಿಯ ಸಾಂಸ್ಥಿಕ ರೂಪ ಪಡೆದ ಮೊದಲ ರಾಜಕೀಯ ಸಂಸ್ಥೆಯಾಗಿದೆ.

1921 ರಲ್ಲಿ 'ಅಸಹಕಾರ ಆಂದೋಲನ' ಸಂದರ್ಭದಲ್ಲಿ ಆಲೂರ ವೆಂಕಟರಾಯರು ಕರ್ನಾಟಕ ವೃತ್ತ, ರಾಜಹಂಸ, ವಿಜಯ, ಕರ್ಮವೀರ ಪತ್ರಿಕೆಗಳನ್ನು ಪ್ರಕಟಿಸುವುದರ ಜೊತೆಗೆ "ಕರ್ನಾಟಕ ಗತವೈಭವ" ಕೃತಿಯನ್ನು ಬರೆದಿದ್ದು ಈ ಕೃತಿಯು ಕನ್ನಡಿಗರಲ್ಲಿ ಏಕೀಕರಣ ಪರಿಕಲ್ಪನೆಯ ಅರಿವನ್ನು ಮೂಡಿಸಿ ಬಡಿದೆಬ್ಬಿಸಿತು. ಇವುಗಳ ಜೊತೆಗೆ ಸ್ವದೇಶಾಭಿಮಾನಿ, ತಿಲಕ ಸಂದೇಶ (ಮಂಗಳೂರು), ಕನ್ನಡ ವೃತ್ತ (ಕಮಟ), ಕರ್ನಾಟಕ, ವಿಶ್ವ ಕರ್ನಾಟಕ (ಬೆಂಗಳೂರು), ರಾಜಹಂಸ, ಕರ್ಮವೀರ, ವಿಜಯ, ಶುಭೋದಯ, ಕರ್ನಾಟಕ ವೃತ್ತ, ಧನಂಜಯ, ಜಯ ಕರ್ನಾಟಕ, ಜಯಂತಿ (ಧಾರವಾಡ), ಕೊಡಗು (ಮಡಿಕೇರಿ), ಸತ್ಯಾಗ್ರಹಿ (ಉಡುಪಿ), ಕನ್ನಡ ಸಹಜೀವನ, ಕನ್ನಡಿಗ (ಬಾಗಲಕೋಟೆ) ಮೊದಲಾದವು ಜನರ ಜಾಗೃತಿಗೆ ಕಾರಣವಾದವು.

1920ರಂದು ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಮತ್ತು ಧಾರವಾಡದಲ್ಲಿ ನಡೆದ ಕರ್ನಾಟಕ ರಾಜಕೀಯ ಸಮ್ಮೇಳನಗಳಲ್ಲಿ ಕರ್ನಾಟಕ ಪ್ರಾಂತ ರಚನೆಯ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. 1923ರಲ್ಲಿ ಮುಂಬಯಿ ಶಾಸನಸಭೆಯಲ್ಲಿ ಭಾಗವಹಿಸಿದ ಸಿದ್ದಪ್ಪ ಕಂಬಳಿಯವರು ಕರ್ನಾಟಕ ಏಕೀಕರಣವನ್ನು ಪ್ರತಿಪಾದಿಸಿ ಸಮರ್ಥಿಸಿಕೊಂಡರು. 1924ರಲ್ಲಿ ಬೆಳಗಾಂನಲ್ಲಿ 'ಅಖಿಲಭಾರತ್' ಕಾಂಗ್ರೆಸ್ಸಿನ 39ನೆಯ ಅಧಿವೇಶನದ ಸಂದರ್ಭದಲ್ಲಿ 'ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು' ಮತ್ತು ಕರ್ನಾಟಕ ಏಕೀಕರಣ ಸಂಘಗಳು

ಅಸ್ತಿತ್ವಕ್ಕೆ ಬಂದಿದ್ದು ಏಕೀಕರಣ ಚಳವಳಿಯ ಆಶಯವನ್ನು ಹೊಂದಿದ್ದ ಸಂಘ–ಸಂಸ್ಥೆಗಳಾಗಿವೆ. ಈ ಸಂದರ್ಭದಲ್ಲಿ ನಡೆದ ಮೊದಲ ಏಕೀಕರಣ ಸಮ್ಮೇಳನದಲ್ಲಿ ಹುಯಿಲಗೋಳ ನಾರಾಯಣಗುರುರವರು ರಚಿಸಿದ್ದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ನಾಡಗೀತೆಯನ್ನು ಗಾಯಕರಾದ ಕಾಳಿಂಗರಾವ್‌ರವರು ಹಾಡಿ ಸಮ್ಮೇಳನದಲ್ಲಿ ನೆರೆದಿದ್ದ ಸಾವಿರಾರು ಜನರ ಮನಸ್ಸಲ್ಲಿ ರೋಮಾಂಚನವನ್ನುಂಟು ಮಾಡಿದ್ದಲ್ಲದೇ ಚಳವಳಿಗೆ ಕರೆಯನ್ನು ನೀಡಿದರು.

ಹಾಗೆಯೇ 1927ರಲ್ಲಿ ನಡೆದ ಮೈಸೂರಿನ 'ಮಹಾರಾಜರ ರಜತ ಮಹೋತ್ಸವ', 19.06.1928 ರಂದು ಅಲಹಾಬಾದ್‌ನಲ್ಲಿ ಸರ್ವ ಪಕ್ಷಗಳ ಸಮನ್ವಯ ಸಭೆ, 1930ರಲ್ಲಿ ಮೈಸೂರಿನಲ್ಲಿ ನಡೆದ 16ನೆಯ ಸಾಹಿತ್ಯ ಸಮ್ಮೇಳನ, 1936ರಲ್ಲಿ ಬೆಳಗಾವಿಯಲ್ಲಿ ನಡೆದ ಏಕೀಕರಣ ಸಮ್ಮೇಳನ, 1940ರಲ್ಲಿ ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿ, 1943ರ "ಆಂಧ್ರ ಮಹಾ ಸಭೆಯ ಪ್ರತಿಭಟನೆ, 1946ರಲ್ಲಿ ಹಳೆ ಮೈಸೂರು ಪ್ರಾಂತ್ಯದ ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಮಹಾದಿವೇಶನ, 01 ಅಕ್ಟೋಬರ್ 1953 ರಂದು ವಿಶಾಲ ಅಂದ್ರ ಪ್ರದೇಶವಾಗಿದ್ದು ಈ ಪ್ರಮುಖ ಅಂಶಗಳು ಕರ್ನಾಟಕ ಏಕೀಕರಣಕ್ಕೆ ಪ್ರೇರಣೆಯನ್ನು ನೀಡಿದವು. ಜೊತೆಗೆ 20.12.1953 ರಂದು ನೆಹರುರವರು 'ರಾಜ್ಯಪುನರ್ ವಿಂಗಡಣಾ ಆಯೋಗ'ದ ಅಡಿಯಲ್ಲಿ ರಚಿಸಿದ್ದ 'ಭಾಷವಾರು ಪ್ರಾಂತ್ಯಗಳ' ಕಾಯಿದೆಯ ಪ್ರಕಾರ 01.11.1956 ರಂದು ಕನ್ನಡ ನಾಡು 'ಮೈಸೂರು ರಾಜ್ಯ'ವೆಂದು ಏಕೀಕರಣಗೊಂಡಿತು. ಈ ಏಕೀಕರಣ ಮೈಸೂರಿನ ಕನ್ನಡಿಗರಿಗೆ ಮಾತ್ರ ಸಂತಸವನ್ನು ತಂದಿತು. ಆದರೆ ಮೈಸೂರೇತರ ಕನ್ನಡಿಗರಿಗೆ ಬೇಸರವನ್ನು ತಂದಿತು. ಆದ್ದರಿಂದ ಸಾಂಸ್ಕೃತಿಕ ದತ್ತವಾಗಿರುವ ಕನ್ನಡ ನಾಡನ್ನು "ಕರ್ನಾಟಕ" ಎಂದು ಕರೆಯಲು ಪ್ರಾರಂಭಿಸಿದರು.

ಆಲೂರು ವೆಂಕಟರಾಯರು 01.11.1956 ರಂದು "ಈಗ ಮೈಸೂರು ರಾಜ್ಯವೆಂದು ತಪ್ಪಾಗಿ ಹೆಸರಿಸಲ್ಪಟ್ಟ ಕರ್ನಾಟಕ ರಾಜ್ಯವು ಆಯುಷ್ಮಂತವಾಗಲಿ,

ಆರೋಗ್ಯವಂತವಾಗಲಿ ಮತ್ತು ಭಾಗ್ಯವಂತವಾಗಲಿ" ಎಂದು ಅರಸಿ ಕರ್ನಾಟಕವೆಂದೇ ಕರೆಯಲು ಕರೆಕೊಟ್ಟು ಬಿಟ್ಟುಹೋದ ಕನ್ನಡ ಪ್ರದೇಶಗಳು ಬೇಗ ಸೇರಲಿ" ಎಂಬ ಸಂದೇಶವನ್ನು ನೀಡಿದರು.

ಏಕೀಕರಣೋತ್ತರ ಚಳುವಳಿಗಳು :

01.11.1956ರಂದು ಹಲವು ಪ್ರಾಂತ್ಯಗಳಾಗಿದ್ದ ಕನ್ನಡ ನಾಡು ಏಕೀಕರಣಗೊಂಡಿದ್ದು ಸರಿಯಷ್ಟೆ. ಕನ್ನಡ ನಾಡಿನಲ್ಲಿ ಯಾವುದೇ ರೀತಿಯ ಬದಲಾವಣೆಗಳು ಆಗಿರಲಿಲ್ಲ. ಬದಲಿಗೆ ಕನ್ನಡಿಗರ ಪರಿಸ್ಥಿತಿ ಗೊಂದಲಮಯವಾಗಿ ಸಂದಿಗ್ಧ ಪರಿಸ್ಥಿತಿಗೆ ತಲುಪಿತು. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವಾಗಲಿ ಮತ್ತು ಕೇಂದ್ರ ಸರ್ಕಾರವಾಗಲಿ ಯಾವುದೇ ರೀತಿಯ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ಕನ್ನಡ ಸಾಹಿತಿಗಳಾದ ಬಿ.ಎಂ.ಶ್ರೀ, ಆಲೂರು ವೆಂಕಟರಾಯರು, ಗೋವಿಂದ ಪೈ, ಕುವೆಂಪು ಇನ್ನೂ ಮುಂತಾದ ಅಗ್ರಗಣ್ಯ ಸಾಹಿತಿಗಳು ತಮ್ಮ ಕೃತಿಗಳ ಮೂಲಕ ಕನ್ನಡಿಗರಲ್ಲಿ ಭಾಷಾಭಿಮಾನ ತುಂಬುವ ಪ್ರಯತ್ನವನ್ನು ಮಾಡಿದರು. ರಾಷ್ಟ್ರಕವಿ ಗೋವಿಂದ ಪೈರವರು 'ತಾಯಿ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ' ಎಂದು ಕನ್ನಡ ಭಾಷೆಯನ್ನು ತಾಯಿಗೆ ಹೋಲಿಸಿ ಬರೆದರು. ಕುವೆಂಪುರವರು 'ಕನ್ನಡಕ್ಕೆ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂದು ಕರೆ ಕೊಟ್ಟರು. 1960ರಲ್ಲಿ ಮಣಿಪಾಲದಲ್ಲಿ ನಡೆದ 42ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅನಕೃ ರವರು ಕನ್ನಡ ಮತ್ತು ಕನ್ನಡಿಗರು ಎಚ್ಚರಗೊಳ್ಳುವಂತೆ ಭಾಷಣವನ್ನು ಮಾಡಿದರು.

ಈ ಹೊತ್ತಿನಲ್ಲಿಯೇ ಹುಟ್ಟಿಕೊಂಡ 'ಕನ್ನಡ ಯುವಜನಾ ಸಭಾ' ಮತ್ತು 'ಕನ್ನಡ ಸಾಹಿತ್ಯ ಕುಟೀರ' ಸಂಘ ಹಾಗೂ 'ಕರ್ನಾಟಕ ಸಂಯುಕ್ತ ರಂಗ' ಸಂಘಗಳು ಕನ್ನಡಿಗರಲ್ಲಿ ನಾಡು–ನುಡಿಯ ಬಗ್ಗೆ ಅಭಿಮಾನ ಮತ್ತು ಜಾಗೃತಿ ಮೂಡಿಸುವ ಸಲುವಾಗಿ ಹಲವು ಕಾರ್ಯಚಟುವಟಿಕೆಗಳನ್ನು ಆರಂಭಿಸಿದರು. 'ಕರ್ನಾಟಕ ಸಂಯುಕ್ತ ರಂಗ'ವು ಕನ್ನಡ ರಾಜ್ಯವು ಏಕೀಕರಣಗೊಂಡ ದಿನವನ್ನೇ ರಾಜ್ಯೋತ್ಸವವನ್ನು 1962ರಲ್ಲಿ ಆಚರಿಸಿದರು. ಈ ಕಾರ್ಯಕ್ರಮದಲ್ಲಿ ಗಾಯಕ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಪಿ. ಕಾಳಿಂಗರಾವ್ ರವರು ಕನ್ನಡಪರ ಗೀತೆಗಳನ್ನು ಹಾಡಿದರು.

1962ರಂದು ಕನ್ನಡ ಯುವಜನ ಸಭಾ ಕನ್ನಡ ಭುವನೇಶ್ವರಿ ಬಾವುಟವನ್ನು ಆರಿಸುವುದರ ಮೂಲಕ ಕನ್ನಡ, ಕನ್ನಡಿಗ, ಕರ್ನಾಟಕಗಳಿಗೆ ಸಂಬಂಧಿಸಿದಂತೆ 15 ನಿರ್ಣಯಗಳನ್ನು ಮಂಡಿಸಿ ನಾಡಿನ ಎಲ್ಲಾ ಕನ್ನಡಪರ ಸಂಘಟನೆಗಳಿಗೆ ಕಳುಹಿಸಿದರು. ಈ ಹಿನ್ನೆಲೆಯಲ್ಲಿ ಸುಮಾರು 60 ಕನ್ನಡ ಸಂಘಗಳು ಕರ್ನಾಟಕ ಸಂಯುಕ್ತ ರಂಗದಡಿಯಲ್ಲಿ ಕಾರ್ಯ ಚಟುವಟಿಕೆಗಳನ್ನ ನಡೆಸುತ್ತಿದ್ದವು. ಇದೇ ಸಂದರ್ಭದಲ್ಲಿ ವಾಟಾಳ್ ನಾಗರಾಜ್ ಅವರು 1964ರಲ್ಲಿ "ಕನ್ನಡ ಚಳುವಳಿ ಕೇಂದ್ರ ಮಂಡಳಿ" ಎಂಬ ಸಂಘಟನೆಯನ್ನು ಸ್ಥಾಪಿಸಿ ಚಿಕ್ಕಪೇಟೆಯ ರಂಗಸ್ವಾಮಿ ಗುಡಿ ಬೀದಿಯಲ್ಲಿ ಕಛೇರಿಯನ್ನು ತೆರೆದು "ನವ ಪ್ರಪಂಚ"ಪತ್ರಿಕೆಯ ಮೂಲಕ ಕನ್ನಡ ಚಳವಳಿಯ ಕಾರ್ಯಗಳನ್ನು ಆರಂಭಿಸಿದರು. ಅಲ್ಲದೆ 1967 ರಲ್ಲಿ ನಡೆದ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಆರು ಸಾವಿರ ಮತಗಳ ಅಂತರದಿಂದ ಜಯಗಳಿಸಿದರು. ಇದರಿಂದಾಗಿ ವಾಟಾಳರ 'ಕನ್ನಡ ಚಳವಳಿ ಪಕ್ಷ'ವು ರಾಜಕೀಯ ಶಕ್ತಿಯನ್ನು ಪಡೆಯಿತು.

"ಮ. ರಾಮಮೂರ್ತಿ 1967ರ ವೇಳೆಗೆ ಸಂಯುಕ್ತ ರಂಗದ ಕಾರ್ಯಕರ್ತರನ್ನು ಸಭೆ ಕರೆದು ಹೊಸ ಬಾವುಟವನ್ನು ಪರಿಚಯಿಸಿದರು. ಕರ್ನಾಟಕ ಮಿತ್ರ ಮಂಡಳಿಯ ಚಿ.ಸಿ. ಈಶ್ವರಪ್ಪನವರು ಸೂಚಿಸಿದ ಬಾವುಟವನ್ನು ರಾಮಮೂರ್ತಿ ಒಪ್ಪಿದರು. ಕಾಟನ್ ಪೇಟೆಯಲ್ಲಿ ನಡೆದ ಸಭೆಯಲ್ಲಿ ನಾಲ್ಕು ಮೂಲೆಗಳ ಹಳದಿ–ಕೆಂಪು ಬಣ್ಣದ ಬಾವುಟವನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಆಯಿತು. ಇದರಲ್ಲಿ ಕರ್ನಾಟಕದ ನಕಾಶೆ ಇರಲಿಲ್ಲ. ಬದಲಾಗಿ ಹಳದಿ–ಕೆಂಪು ಬಣ್ಣಗಳನ್ನು ಶಾಂತಿ, ಸಹನೆ, ಕ್ರಾಂತಿಗಳ ಸಂಕೇತವೆಂದೂ, ಮುತ್ತೈದೆತನದ ಅರಿಶಿಣ–ಕುಂಕುಮಗಳ ಸಂಕೇತವೆಂದೂ ವಿವರಣೆ ನೀಡಿದ್ದು ಉಲ್ಲೇಖನೀಯ. ಮ. ರಾಮಮೂರ್ತಿಯವರು ಕನ್ನಡ, ಕನ್ನಡಿಗ, ಕರ್ನಾಟಕಗಳನ್ನು ಪ್ರತಿನಿಧಿಸುವ ಯಾವುದೇ ಸಭೆ, ಸಮಾರಂಭಗಳಿಗೆ ಈ ಹೊಸ ಬಾವುಟವನ್ನೇ ಬಳಸಲು ಕರೆಯಿತ್ತರು. ತಮ್ಮ 'ಕನ್ನಡ ಪಕ್ಷ'ಕ್ಕೂ ಇದೇ ಬಾವುಟವನ್ನೇ ಬಳಸಿದ್ದು ಇದೆ. ಹೀಗಾಗಿ ಇಂದಿಗೂ ಹಳದಿ–ಕೆಂಪು ಬಣ್ಣದ ಬಾವುಟಗಳು ಕನ್ನಡದ ಸಂಕೇತವಾಗಿ

ಬಳಕೆ ಆಗುತ್ತಿವೆ."[3]

ಮುಂದುವರಿದು 1973ರಲ್ಲಿ ಹಿಂದುಳಿದ ವರ್ಗದವರಾದ ದೇವರಾಜು ಅರಸುರವರು ಮುಖ್ಯಮಂತ್ರಿ ಆಗಿ ಅಧಿಕಾರವನ್ನು ಸ್ವೀಕರಿಸಿದರು. ಅರಸರು ಮೈಸೂರು ಸಂಸ್ಥಾನದವರೊಂದಿಗೆ ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡವರಾಗಿದ್ದು ಕರ್ನಾಟಕ ಏಕೀಕರಣ ವಿರೋಧಿಯಾಗಿದ್ದರು. ಅಲ್ಲದೆ ಮೈಸೂರು ಅರಸರ ವಂಶಜರಾದ ಅರಸುರವರು "ಮೈಸೂರು" ಹೆಸರಿನ ಬಗ್ಗೆ ವ್ಯಾಮೋಹವು ತುಂಬಿಕೊಂಡಿದ್ದರೆಂದು ಭಾವಿಸಿಕೊಂಡ ಉತ್ತರ ಭಾಗದವರು "ಕರ್ನಾಟಕ"ವೆಂಬ ಮರುನಾಮಕರಣ ಸಾಧ್ಯವೇ ಇಲ್ಲವೆಂದು ಭಾವಿಸಿದ್ದರು. ಆದರೆ ದೇವರಾಜ ಅರಸುರವರು 1973ರ ಮಧ್ಯಭಾಗದ ಹೊತ್ತಿಗೆ ರಾಜ್ಯದ ಹೆಸರು ಬದಲಾವಣೆಯ ಸಂಗತಿಯನ್ನು ವಿಧಾನ ಮಂಡಲದಲ್ಲಿ ಮಂಡನೆಯಾಗುವಂತೆ ಮಾಡಿ ಎರಡು ಸದನಗಳಲ್ಲಿ ರಾಜ್ಯದ ಮರುನಾಮಕರಣಕ್ಕೆ ಒಪ್ಪಿಗೆಯನ್ನು ಪಡೆದರು. ಅಲ್ಲದೆ 1973 ನವೆಂಬರ್ 1ರಂದು ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಅಧಿಕೃತವಾಗಿ "ಕರ್ನಾಟಕ ನಾಮಕರಣ" ಸಮಾರಂಭವನ್ನು ಏರ್ಪಡಿಸಿ ಮೈಸೂರು ರಾಜ್ಯವನ್ನು "ಕರ್ನಾಟಕ" ರಾಜ್ಯವೆಂದು ಘೋಷಣೆ ಮಾಡಿದರು.

ನಾಡಿನ ಅನೇಕ ಕನ್ನಡ ಪರವಾದ ಸಂಘಟನೆಗಳು 1980 ರ ವರೆಗೂ ಕನ್ನಡ, ಕನ್ನಡಿಗ, ಕರ್ನಾಟಕಗಳಿಗೆ ಸಂಬಂಧಿಸಿದಂತೆ ಚಳವಳಿಗಳು ನಡೆಸಿದವು. ಆದರೆ 1980 ರ ನಂತರ ಕನ್ನಡ ಚಳವಳಿಗಳು ಭಿನ್ನವಾಗಿ ಗುರುತಿಸಿಕೊಂಡಿದ್ದಾವೆ. 1980ರ ಗೋಕಾಕ್ ಚಳವಳಿ, 1983ರ ಕನ್ನಡ ದೂರದರ್ಶನಕ್ಕಾಗಿ ಚಳವಳಿ, 1980ರ ಕನ್ನಡಿಗರ ಕೆಲಸಕ್ಕಾಗಿ ಚಳವಳಿ, ಕರ್ನಾಟಕದ ನದಿ ನೀರಿಗಾಗಿ ನಡೆದ ಚಳವಳಿಗಳು, ಮುಂತಾದವುಗಳು ಕನ್ನಡ ನಾಡು–ನುಡಿ–ಜಲ ರಕ್ಷಣೆಗೆ ನಡೆದ ಚಳವಳಿಗಳಾಗಿದ್ದು ಪ್ರಸ್ತುತ ದಿನಗಳಲ್ಲೂ ನಡೆಯುತ್ತಿರುವುದನ್ನು ಗಮನಿಸಬಹುದು.

ಕನ್ನಡ ಭಾಷಾ ಏಕೀಕರಣ ಚಳವಳಿಯ ಹಾಡುಗಳು :

ಕನ್ನಡ ಭಾಷಾ ಚಳವಳಿಗಳು ಕನ್ನಡ ನಾಡು ಏಕೀಕರಣವಾದ ನಂತರ ಭಿನ್ನ ಸ್ವರೂಪವನ್ನು ಪಡೆಯಿತು. ಈ ಏಕೀಕರಣಕ್ಕಿಂತ ಮೊದಲು ಕನ್ನಡ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಚಳವಳಿಗಳು ಏಕೀಕರಣಕ್ಕಾಗಿ ನಡೆದರೆ, ಏಕೀಕರಣದ ಕನ್ನಡದ ನಂತರ ರಾಜ್ಯದಲ್ಲಿನ ಸಮಸ್ಯೆಗಳ ವಿರುದ್ಧ ಚಳವಳಿಗಳು ನಡೆಯಿತು. ಈ ಸಂದರ್ಭದಲ್ಲಿ ಹಲವಾರು ಕನ್ನಡ ಪರ ಸಂಘಟನೆಗಳು ಹುಟ್ಟಿಕೊಂಡವು. ಈ ಸಂಘಟನೆಗಳು ಕನ್ನಡ–ಕನ್ನಡಿಗ–ಕರ್ನಾಟಕ ಎಂಬ ತತ್ವಗಳಿಗೆ ಸಂಬಂಧಿಸಿದಂತೆ ಎದುರಾಗುವ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಅನೇಕ ಚಳವಳಿಗಳನ್ನು ಹಮ್ಮಿಕೊಂಡರು. ಅಲ್ಲದೆ ಕನ್ನಡ ಪತ್ರಿಕೆ, ನಿಯತಕಾಲಿಕೆಗಳು, ಕವನ, ಲೇಖನ, ಸಂಪಾದನೆಗಳನ್ನು ಪ್ರಕಟಿಸಿ ಕನ್ನಡಿಗರನ್ನು ಏಕೀಕರಣಕ್ಕಾಗಿ ಸಜ್ಜುಗೊಳಿಸಲು ಪ್ರಾರಂಭಿಸಿದರು. ಕನ್ನಡದ ಸಮಸ್ಯೆಗಳನ್ನು ಸಮಾನ ಮನಸ್ಕರೊಡನೆ ಹಂಚಿಕೊಂಡು ಸರಿಯಾದ ತೀರ್ಮಾನ ತೆಗೆದುಕೊಳ್ಳಲು ಬುಧವಾರ ಸಭೆಯನ್ನು ವೇದಿಕೆಯಾಗಿ ಮಾಡಿಕೊಂಡು "ಕನ್ನಡ ಅನುಭವ ಮಂಟಪ" ಎಂದು ಕರೆದರು. ಈ ಮಂಟಪದಲ್ಲಿ ಕನ್ನಡ ಭಾಷೆ ಮತ್ತು ಕನ್ನಡಿಗನಿಗೆ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು 1998ರ ವರೆಗೆ ಸತತವಾಗಿ ಪ್ರತಿದಿನ ಬುಧವಾರ ಚರ್ಚೆ ನಡೆಸಲಾಗುತಿತ್ತು. ಈ ಸಭೆಯಲ್ಲಿ ಚಿದಾನಂದಮೂರ್ತಿ ಮತ್ತು ಪಿ.ವಿ. ನಾರಾಯಣಗುರು ಕನ್ನಡ ಚಳುವಳಿಯ ಕಾರ್ಯಕರ್ತರಿಗೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬೋಧಿಸಿದ್ದಾರೆ. ಸೂರ್ಯನಾಥ ಕಾಮತರು ಕರ್ನಾಟಕದ ಇತಿಹಾಸದ ಪಾಠವನ್ನು 26 ವಾರಗಳ ಕಾಲ ಧಾರವಾಹಿಯಂತೆ ಹೇಳಿದ್ದಾರೆ. ಪ್ರಸಿದ್ಧ ಗಾಯಕರಾದ ಬಾಳಪ್ಪ ಹುಕ್ಕೇರಿ ಅವರು ಸ್ವಪ್ರೇರಣೆಯಿಂದ ಬುಧವಾರದ ಸಭೆಯಲ್ಲಿ ಭಾಗವಹಿಸಿ ಕನ್ನಡ ಪರ ಗೀತೆಗಳನ್ನು ಗೇಯತೆ ಮತ್ತು ಭಾವನಾತ್ಮಕವಾಗಿ ಹಾಡುತ್ತಿದ್ದರು. ಇಲ್ಲಿಂದ ಕನ್ನಡ ಭಾಷಾ ಚಳುವಳಿಯ ಸಂದರ್ಭದಲ್ಲಿ ಹಾಡುಗಳನ್ನು ಹಾಡುವ ಪರಂಪರೆಯನ್ನು ಮುಂದುವರಿಸಲಾಯಿತು. ಈ ಹಿನ್ನೆಲೆಯಲ್ಲಿ ರಚನೆಗೊಂಡಿರುವ ಹಾಡುಗಳು ಕನ್ನಡ ಭಾಷಾ ಏಕೀಕರಣ ಚಳವಳಿಯ ಹಾಡುಗಳೆಂದು ಕರೆಯಲಾಗಿದೆ.

ಕನ್ನಡ ಭಾಷಾ ಏಕೀಕರಣ ಚಳವಳಿಯ ಹಾಡುಗಳು ಸಮಸ್ತ ಕನ್ನಡ ನಾಡಿನ ಪ್ರಕೃತಿ, ಚರಿತ್ರೆ, ಭಾಷೆ, ಕನ್ನಡ ನಾಡು, ರಾಷ್ಟ್ರೀಯ ಹಾಗೂ ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ರಚನೆಗೊಂಡಿವೆ. ಈ ಹಾಡುಗಳನ್ನು ಕೇಳಿದಾ ಪ್ರತಿಯೊಬ್ಬ ಕನ್ನಡಿಗನ ನರನಾಡಿಗಳಲ್ಲಿ ಕನ್ನಡ ಶಕ್ತಿ ಸಂಚಾರವಾಗುತ್ತಿತ್ತು.

ಈ ರೀತಿಯ ಹಾಡುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಏಕೀಕರಣ ಪೂರ್ವ ಚಳವಳಿಯ ಹಾಡುಗಳು :

19ನೇ ಶತಮಾನದಲ್ಲಿ ಕನ್ನಡ ನಾಡು ಹಲವು ಪ್ರಾಂತ್ಯಗಳಾಗಿ ಹರಿದು ಹಂಚಿ ಹೋಗಿತ್ತು. ಇದರಿಂದಾಗಿ ಕನ್ನಡಿಗರಿಗೆ ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ತೊಂದರೆಗಳು ಎದುರಾದವು. ಈ ತೊಂದರೆಗಳಿಂದ ಮುಕ್ತಿಯನ್ನು ಬಯಸಿದ ಕನ್ನಡಿಗರು ಕನ್ನಡ ನಾಡಿನ ಏಕೀಕರಣಕ್ಕಾಗಿ ಚಳವಳಿಗಳನ್ನು ಹಮ್ಮಿಕೊಂಡರು. ಮತ್ತೊಂದು ಕಡೆ ಕನ್ನಡಿಗರೆಲ್ಲರನ್ನು ಒಂದುಗೂಡಿಸಿ ಚಳವಳಿಯಲ್ಲಿ ಭಾಗವಹಿಸುವಂತೆ ಹಲವಾರು ಕನ್ನಡ ಭಾವಗೀತೆಗಳನ್ನು ರಚನೆ ಮಾಡಿದರು. ಹೀಗೆ ರಚನೆಗೊಂಡ ಹಾಡುಗಳನ್ನು ಚಳವಳಿಯ ಸಂದರ್ಭದಲ್ಲಿ ಮತ್ತು ಜಾಥ ಹೊರಡುವ ಸಂದರ್ಭದಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಹಾಡುತ್ತಿದ್ದರು. ಈ ಹಾಡುಗಳಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕತ್ವಗಳನ್ನು ಅಭಿವ್ಯಕ್ತಿಸುವ ನೆಲೆಗಳು ಲಯಬದ್ಧವಾಗಿ, ಭಾವಬದ್ಧವಾಗಿ ವೈಭವದ ನೆಲೆಯಲ್ಲಿ ಅಭಿವ್ಯಕ್ತಗೊಂಡಿವೆ.

ಶಾಂತ ಕವಿಗಳು 'ರಕ್ಷಿಸು ಕರ್ನಾಟಕ ದೇವಿ' ಎಂಬ ಹಾಡಿನಲ್ಲಿ ಗತಕಾಲದಲ್ಲಿ ಕನ್ನಡ ನಾಡನ್ನು ಆಳ್ವಿಕೆ ಮಾಡಿ ಸಂಸ್ಕೃತಿಯ ಶ್ರೀಮಂತಿಕೆಗೆ ಕಾರಣೀಭೂತರಾದ ಅರಸು ಮತ್ತು ರಾಜ ಮನೆತನಗಳನ್ನು ನೆನೆಯುವುದರ ಜೊತೆಗೆ ಅವರು ಗಳಿಸಿದ ಸಂಸ್ಕೃತಿಯನ್ನು ಮತ್ತು ಗತವೈಭವವನ್ನು ರಕ್ಷಿಸು ಕರ್ನಾಟಕ ಮಾತೇ ಎಂದು ಕನ್ನಡಾಂಬೆಯಲ್ಲಿ ವಿನಂತಿಸಿಕೊಂಡಿದ್ದಾರೆ.

"ರಕ್ಷಿಸು ಕರ್ನಾಟಕ ದೇವಿ ಸಂ/ ರಕ್ಷಿಸು ಕರ್ನಾಟಕ ದೇವೀ
ಕದಂಬಾದಿ ಸಂಪೂಜಿತ ಚರಣೆ / ಗಂಗಾರಾಧಿತ ಪದನಖ ಸರಣೆ
ಚಾಲುಕ್ಯರುತ್ತಮ ಕಾಂಚೀ ಕಿರಣೆ / ರಾಷ್ಟ್ರಕೂಟ ಮಣಿಕಂಠಾಭರಣಿ
ಚಾಲುಕ್ಯಾಂಶುಕ ಶೋಭಾವರಣೆ/ ಮತಸುಸ್ಥಾಪಕ ಸ್ಥಾಪಿತಪ್ರಾಣೆ
ಶಿಲ್ಪಕಲಾಮಂಟಪ ಸುಸ್ಥಾನೆ /ಕವಿರಾಜ ಕೀರ್ತಿತ ಸುಯಶಸ್ತ್ರಾಣಿ
ಸಾಧು ಸತ್ಕಥಾ ಭೇರೀಧ್ವಾನೆ / ಸ್ವೇತೀಹಾಸನೀರಾಜನ ರಾಣಿ"[4]

ಕನ್ನಡ ನಾಡು ವೈಭವವಾದ ನಾಡು ಎಂದು ಅಭಿಮಾನದ ಮಾತುಗಳನ್ನು

ಹೇಳಿರುವ ಕವಿಗಳು ಇಂದು ಪರಕೀಯರ ಪಾಲಾಗಿದ್ದು ಮುಕ್ತಿಯನ್ನು ಪಡೆಯುವ ಹಿನ್ನೆಲೆಯಲ್ಲಿ 'ರಕ್ಷಿಸು ಕರ್ನಾಟಕ ದೇವಿ' ಎಂದು ಕನ್ನಡಾಂಬೆಯಲ್ಲಿ ಪ್ರಾರ್ಥನೆಯನ್ನು ಮಾಡುವುದರ ಮೂಲಕ ಕನ್ನಡಿಗರಲ್ಲಿ ನಾಡಿನ ಗತವೈಭವದ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮುಂದುವರಿದ ಶಾಂತ ಕವಿಗಳು 'ಕನ್ನಡ ದಾಸಯ್ಯ' ಎಂಬ ಗೀತೆಯಲ್ಲಿ ಕನ್ನಡ ನಾಡು ನುಡಿಗಾಗಿ ಶ್ರಮಿಸುವ ದಾಸಯ್ಯನಾಗಿ ಕಾಣಿಸಿಕೊಂಡಿದ್ದಾರೆ. ದಾಸಯ್ಯನು ಊರು ಊರು ತಿರುಗುವಂತೆ ಕವಿಗಳು ಸಹ ಊರು ಊರು ತಿರುಗಿ ಅನ್ಯ ಭಾಷೆಗಳಂತೆ ಕನ್ನಡ ಭಾಷೆಯನ್ನು ಉನ್ನತೀಕರಿಸಲು ಪ್ರಯತ್ನಿಸಿದ್ದಾರೆ. ಕವಿಗಳಂತೆ ಪ್ರತಿಯೊಬ್ಬ ಕನ್ನಡಿಗನು ಕನ್ನಡ ನಾಡು ನುಡಿಗಾಗಿ ಶ್ರಮಿಸಬೇಕು. ಇಲ್ಲವೇ ಶ್ರಮಿಸುವವರನ್ನು ಪೋಷಿಸಬೇಕು, ಪ್ರೀತಿಸಬೇಕು, ಗೌರವಿಸಬೇಕು ಆಗ ಮಾತ್ರ ಕನ್ನಡ ಭಾಷೆ ಏಳಿಗೆಯಾಗಲು ಸಾಧ್ಯವಾಗುತ್ತದೆಂಬ ಆಶಯ ನುಡಿಗಳನ್ನು ಹೇಳಿದ್ದಾರೆ.

ಅನ್ಯ ಭಾಷೆಗಳಂತೆ ಕನ್ನಡ ಭಾಷೆಗೆ
ಉನ್ನತಿಕೆಯ ತರಬೇಕೆಂದು
ಹೊನ್ನು ಕೊಡಿಸಲಿಕ್ಕೆ ಬಂದಿಹನಾತನು
ಮನ್ನಿಸಿ ಹಣವನ್ನು ಕೊಡಿರಯ್ಯ"[5]

ಇಲ್ಲಿ ದಾಸಯ್ಯನಂತೆ ಕಾಣಿಸಿಕೊಂಡಿರುವ ಕವಿಗಳು ಹೊಸ ಹಾಡೊಂದನ್ನು ಕಟ್ಟಿ ಹಾಡಿದ್ದಾರೆ. ಕನ್ನಡಿಗನೊಬ್ಬನು ಕನ್ನಡ ನಾಡಿನ ನೆಲದಲ್ಲಿ ಹುಟ್ಟಿ ಬೆಳೆದು, ವಿದ್ಯೆಯನ್ನು ಕಲಿತು, ಸಿರಿವಂತರಾಗಿ ಹೆಸರನ್ನು ಗಳಿಸಲು ಕಾರಣೀಭೂತವಾಗಿರುವ ಕನ್ನಡ ಭಾಷೆಯನ್ನು ಅನ್ಯ ಭಾಷೆಗಳಂತೆ ಶ್ರೀಮಂತಗೊಳಿಸಬೇಕೆಂಬ ಆಶಯದೊಂದಿಗೆ ಕನ್ನಡದಾಸಯ್ಯನು ಬೇಡಲು ಬಂದಿಹನು. ಹೊಟ್ಟೆಗೆ ಹಿಟ್ಟಿಲ್ಲದೆ ಬಂದಿಲ್ಲ, ಕನ್ನಡ ಭಾಷೆಯ ಉನ್ನತೀಕರಣಕ್ಕಾಗಿ ಹೊನ್ನು ಕೊಡಿಸಲು ಬಂದಿದ್ದೇನೆ. ಆದ್ದರಿಂದ ಪ್ರತಿಯೊಬ್ಬರೂ ದಾಸಯ್ಯನ ಮನವಿಯನ್ನು ಮನ್ನಿಸಿ ಹಣವನ್ನು ಕೊಟ್ಟು ಕನ್ನಡ ಭಾಷೆಯ ಏಳಿಗೆಗೆ ಸಹಾಯಕರಾಗಬೇಕೆಂದು ಕನ್ನಡಿಗನ ಕರ್ತವ್ಯವನ್ನು ಎಚ್ಚರಿಸಿದ್ದಾರೆ.

ಕುವೆಂಪುರವರ "ಜಯ ಹೇ ಕರ್ನಾಟಕ ಮಾತೆ" ಗೀತೆಯು ಸಮಗ್ರ

ಕನ್ನಡ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯ ಜೊತೆಗೆ ಪ್ರಕೃತಿಯ ವರ್ಣನೆಯನ್ನು ಕಟ್ಟಿಕೊಡುತ್ತದೆ. "ಜೈ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ" ಇಂದು ಆರಂಭಗೊಳ್ಳುವ ಗೀತೆಯಲ್ಲಿ ಭಾರತ ಮಾತೆಯ ಮಗಳಾದ ಕರ್ನಾಟಕ ಮಾತೆಯ ವೈಭವವನ್ನು ಚಿತ್ರೀಕರಿಸಲಾಗಿದೆ.

"ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಧಿಕರಾರಾಮ
ಕನ್ನಡ ನುಡಿ ಕುಣಿದಾಡುವ ದೇಹ
ಕನ್ನಡ ತಾಯಿ ಮಕ್ಕಳ ದೇಹ!!"[6]

ಕನ್ನಡ ನಾಡು ಗಂಧದ ನಾಡು ಎಂಬ ಹೆಸರನ್ನು ಪಡೆದಿದ್ದು ಬಂಗಾರದ ಗಣಿಯುಳ್ಳ ನಾಡಾಗಿದೆ. ಇಂತಹ ನಾಡಿನದ್ದಕ್ಕೂ ಪಶ್ಚಿಮ ಘಟ್ಟಗಳು ಆವರಿಸಿದ್ದು ಹಚ್ಚ ಹಸಿರಿನಿಂದ ಕೂಡಿದೆ. ಆಯುರ್ವೇದ ಪಂಡಿತರಾದ ಕಪಿಲ, ಪತಂಜಲಿ, ಗೌತಮರ ಜನನಕ್ಕೆ ಕಾರಣವಾಯಿತು. ಅಲ್ಲದೆ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಪಂಪ, ಪೊನ್ನ, ರನ್ನ, ಲಕ್ಷ್ಮೀಶ ಜನ್ನರಂತಹ ಮಹಾನ್ ಕವಿಗಳು ಉದಯಿಸಿ ಕಾವ್ಯಗಳನ್ನು ರಚಿಸಿದ್ದಾರೆ. ಕನ್ನಡ ನಾಡಿನಲ್ಲಿ ಹರಿಯುವ ಕೃಷ್ಣ, ಶರಾವತಿ, ತುಂಗಾ, ಕಾವೇರಿಗಳ ಮಾಹಿತಿಯನ್ನು ಉಲ್ಲೇಖಿಸಲಾಗಿದೆ ಇಂತಹ ಸಮೃದ್ಧವಾದ ಕನ್ನಡ ನಾಡಿನಲ್ಲಿ ಎಲ್ಲಾ ಧರ್ಮದ ಮಕ್ಕಳು ಶಾಂತಿಯಿಂದ ಜೀವನ ಸಾಗಿಸಲು ಕಾರಣಿ ಭೂತವಾಗಿರುವ ಕನ್ನಡ ನಾಡಿನ ಭವ್ಯತೆಯನ್ನು ಕಣ್ಣಿಗೆ ಕಾಣುವಂತೆ ಕಟ್ಟಿಕೊಟ್ಟಿದ್ದಾರೆ. ಈ ಗೀತೆಯು ಚಳುವಳಿಯ ಸಂದರ್ಭದಲ್ಲಿ ಕನ್ನಡಿಗನೊಬ್ಬನು ತನ್ನ ನಾಡಿನ ಇತಿಹಾಸ ಮತ್ತು ಗತ ವೈಭವವನ್ನು ಎದೆ ತಟ್ಟಿ ಹೇಳುವ ಸ್ಥಿತಿಯನ್ನು ನಿರ್ಮಾಣ ಮಾಡಿದೆ.

ಕೆ.ಎಸ್. ನಿಸಾರ್ ಅಹಮದ್ ರವರು "ನಿತ್ಯೋತ್ಸವ" ಗೀತೆಯಲ್ಲಿ ಕನ್ನಡ

ನಾಡು – ನುಡಿ ಪ್ರಕೃತಿಯ ಅಭಿಮಾನವನ್ನು ವ್ಯಕ್ತಪಡಿಸಿದ್ದು ಕನ್ನಡಿಗರ ಮನ – ಮನೆಗಳಲ್ಲಿ ಬೆರೆತುಹೋಗಿದೆ. ಕನ್ನಡ ನಾಡು ತಾಯಿಯನ್ನು ಪ್ರಕೃತಿ ಮಾತೆಯ ಸೌಂದರ್ಯದ ಸಿರಿಯಲ್ಲಿ ನೋಡಿರುವ ದೃಷ್ಟಿಕೋನ ವಿಶಿಷ್ಟವಾಗಿದೆ.

“ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ,
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ಸಿಲುಕಿನಲಿ,
ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ,”[7]

ಕರ್ನಾಟಕದ ಪ್ರಕೃತಿ ಸೌಂದರ್ಯವನ್ನು ಬಿಂಬಿಸುವ ಮತ್ತು ಆಕರ್ಷಿಸುವ ಜೋಗ ಜಲಪಾತ, ತುಂಗಾ ನದಿ, ಮಲೆನಾಡಿನ ಸಹ್ಯಾದ್ರಿ ಬೆಟ್ಟಗಳು, ನಿತ್ಯಹರಿದ್ವರ್ಣದ ತೇಗ, ಗಂಧದ ಮರಗಳ ಸೊಬಗಿನಲ್ಲಿ ಪ್ರತಿನಿತ್ಯವೂ ಉತ್ಸವದ ರೀತಿಯಲ್ಲಿ ಮೆರೆಯುತ್ತಿರುವ ಕನ್ನಡ ತಾಯಿ ನಿನಗೆ ವಂದನೆ. ಕನ್ನಡ ನಾಡಿನ ಗತವೈಭವದ ಇತಿಹಾಸವನ್ನು ಸಾರುವ ಶಾಸನಗಳು, ತಾಳೆಯಗರಿಗಳು, ದೇಗುಲಗಳ ಮೇಲೆ ಬಿತ್ತಲಾದ ಕಲೆ ಮತ್ತು ವಾಸ್ತು ಶಿಲ್ಪಗಳಲ್ಲಿ ನಿತ್ಯೋತ್ಸವ ಪಡೆಯುತ್ತಿರುವ ಕನ್ನಡ ನಾಡುಗೆ ವಂದನೆ. ಜಾತಿ, ಕುಲ, ಮತ, ಧರ್ಮದ ಸಂಕೋಲೆಯ ಕಟ್ಟಲೆಗಳನ್ನು ಮೀರಿ, ಭೇದ ಭಾವಗಳನ್ನು ಮೀರಿ, ಸಾಮರಸ್ಯ ಮತ್ತು ಶಾಂತಿಯ ನೆಲೆಬೀಡು ಆಗಿರುವ ಕನ್ನಡ ನಾಡಿನಲ್ಲಿ ನಿತ್ಯವೂ ಉತ್ಸವವನ್ನು ಆಚರಿಸಿಕೊಳ್ಳುವ ತಾಯಿ ಎಂದು ಕವಿಗಳು ಕನ್ನಡ ನಾಡನ್ನು ವರ್ಣಿಸಿ ನಮನಗಳನ್ನು ಸಲ್ಲಿಸಿದ್ದಾರೆ.

ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಗೋಕಾಕ್ ಚಳುವಳಿ ಪ್ರಮುಖವಾಗಿದೆ. ಈ ಚಳುವಳಿಯ ಸಂದರ್ಭದಲ್ಲಿ ನಡೆಯುತ್ತಿದ್ದ ಬುಧವಾರದ ಸಭೆಯಲ್ಲಿ ಗಾಯಕರಾದ ಬಾಳಪ್ಪ ಹುಕ್ಕೇರಿಯವರು, ಹುಯಿಲಗೋಳ ನಾರಾಯಣರಾವ್ ರವರು ರಚಿಸಿರುವ “ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು” ಎಂಬ ಹಾಡನ್ನು ಹಾಡಿದ್ದಾರೆ. ಸಣ್ಣ ಸಣ್ಣ ಭಾಗಗಳಾಗಿ ಪ್ರಾದೇಶಿಕವಾಗಿ ಹಂಚಿ ಹೋಗಿದ್ದ ಕನ್ನಡ ನಾಡು ಏಕೀಕರಣವಾಗಬೇಕೆಂಬ ಆಶಯವನ್ನು ಹೊಂದಿದ್ದ ಕವಿಗಳು ಈ ಹಾಡನ್ನು ರಚಿಸಿದ್ದಾರೆ.

“ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

ಬದುಕು ಬಲುಹಿನ ನೀಡಿ ಸದಾಭಿಮಾನದ ಗೂಡು ॥ಪ॥
ರಾಜನ್ಯರಿಪು ಪರಶುರಾಮನಮ್ಮನ ನಾಡು
ಆ ಜಲಧಿಯನೆಜಿಗಿದ ಹನುಮದಿಸಿದ ನಾಡು
ಓಜಿಯಿಂ ಮರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು"[8]

'ಉದಯುವಾಗಲಿ ನಮ್ಮ ಚೆಲುವ ಕನ್ನಡ ನಾಡು' ಇಂದು ಪ್ರಾರಂಭಗೊಳ್ಳುವ ಗೀತೆಯಲ್ಲಿ ಕವಿಗಳು ಉದ್ದೇಶ ಪೂರ್ವಕವಾಗಿಯೇ 'ಚೆಲುವ ಕನ್ನಡ ನಾಡು' ಎಂದು ಬಳಸಿದ್ದಾರೆ. ಈ ನಾಡಿನಲ್ಲಿ ಪುರಾಣ ಪ್ರಸಿದ್ಧ ಪುರುಷರಾದ ಪರಶುರಾಮ, ಹನುಮನು ಜನಿಸಿರುವ ನಾಡಿನಲ್ಲಿ ಕೃಷ್ಣ, ಪಾವನ, ಕಾವೇರಿ, ಭೀಮ ನದಿಗಳು ಹುಟ್ಟಿಹರಿದು ನಾಡಿನ ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುವುದರ ಜೊತೆಗೆ ಕುಮಾರವ್ಯಾಸರಂತಹ ಕವಿಗಳು ಹುಟ್ಟಿ ಸಾಹಿತ್ಯವನ್ನು ರಚಿಸಲು ಪ್ರೇರಣೆಯನ್ನು ನೀಡಿದ್ದಾವೆ. ಇಂತಹ ಕನ್ನಡ ನಾಡು ಸಮಗ್ರ ಕನ್ನಡ ನಾಡಾಗಿ ಉದಯವಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದು ಕನ್ನಡಿಗರಲ್ಲಿ ಅಭಿಮಾನವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ದ.ರಾ ಬೇಂದ್ರೆಯವರು 'ಕನ್ನಡ ನಾಡ ರಾಣಿ' ಎಂಬ ಗೀತೆಯಲ್ಲಿ ಕನ್ನಡ ನಾಡನ್ನು ಏಳು ಶೂರರ ನಾಡೆಂದು ಸಂಬೋಧಿಸಿದ್ದಾರೆ. ನಾಡಿನಲ್ಲಿ ಹುಟ್ಟಿರುವ ಕವಿಗಳು ಕನ್ನಡ ನಾಡನ್ನು ವೀರರಸಕ್ಕೆ ಹೆಸರುವಾಸಿಯೆಂದು ಹೊಗಳಿದ್ದಾರೆ. ಇಂತಹ ನಾಡು ಸದಾ ಫಲವತ್ತತೆಯಿಂದ ಕೂಡಿದ್ದು ದೇವರು ಇರುವ ಸ್ವರ್ಗವೆಂದು ವರ್ಣಿಸಿದ್ದಾರೆ.

"ಅಂದಿನಂತಹ ಧನವು ಅಂದಿನಂತಹ ತನುವು
ಅಂದಿನಂತವರ ಹಿರಿದಾದ ಮನವು
ಅಂದೆ ಅಂದಿನತನವು ಚಂದದಾಟಕೆ ಅನುವು
ಎಂದು ತಂದೀತು ದಿನವು!"[9]

ಗತಕಾಲದ ಕನ್ನಡಿಗರ ಮನಸ್ಸು ಸಹೃದಯತೆ ಮತ್ತು ಸ್ನೇಹಪರತೆಗಳಿಂದ ಕೂಡಿದ್ದು ತನು, ಮನ, ಸುಂದರವಾದ ಭಾವೈಕ್ಯತೆಯ ಜೀವನವನ್ನು ನಡೆಸುತ್ತಿದ್ದರು.

ಅಂತಹ ನಂದನವನದ ಪಾಡು ಮತ್ತೆ ಬರಬೇಕು. ನಿನ್ನ ಮಡಿಲಲ್ಲಿ ಜೀವಿಸುವ ಕನ್ನಡಿಗರು ಸದಾ ನಿನ್ನನ್ನು ಧ್ಯಾನಿಸಿ ನಿನ್ನ ಉಳಿವಿಗಾಗಿ ಹೋರಾಡುವ ಪ್ರಾಣಪುತ್ರರ ಬೀಡನ್ನಾಗಿ ಮಾಡು ಎಂದು ಕನ್ನಡ ರಾಣಿಯ ಬಳಿ ಕೇಳಿಕೊಂಡಿದ್ದಾರೆ.

ಬೆನಗಲ್ ರಾಮರಾಯರು 'ಕನ್ನಡಾಂಬೆಯ ಹಿರಿಮೆ' ಎಂಬ ಗೀತೆಯಲ್ಲಿ ಕನ್ನಡ ನಾಡನ್ನು ಭಾವನಾತ್ಮಕ ಸಂಬಂಧದ ನೆಲೆಯಲ್ಲಿ ನೋಡಿರುವ ದೃಷ್ಟಿಕೋನ ವಿಶೇಷವಾಗಿದೆ. ಕನ್ನಡವೇ ನನಗೆ ಸರ್ವವೂ ಆಗಿದೆ. ಕನ್ನಡವನ್ನು ಬಿಟ್ಟರೆ ನನಗೆ ಜೀವನವಿಲ್ಲ. ಕನ್ನಡವೇ ನನ್ನ ಉಸಿರು, ಕನ್ನಡವೇ ನನ್ನ ತಾಯಿ, ಕನ್ನಡವೇ ಧನ, ಧಾನ್ಯ, ಮನೆ, ಮಾನ್ಯ ಕನ್ನಡವೇ ನನ್ನ ದೇಹದ ನರ ನಾಡಿನಲ್ಲಿ ಪಸರಿಸುತ್ತಿದೆ ಎಂದು ಹೇಳುವ ಸಾಲುಗಳನ್ನು ಗಮನಿಸಿದರೆ ಕವಿಗೆ ಕನ್ನಡ ಭಾಷೆಯ ಮೇಲಿರುವ ಅಭಿಮಾನವು ವ್ಯಕ್ತವಾಗುತ್ತದೆ.

"ಕನ್ನಡದ ಸನ್ಮಾನ । ವೆನಗದುವೆ ವರಮಾನ
ಕನ್ನಡಿಗರ ಸ್ವತಂತ್ರ । ವದೆ ಪರಮ ತಂತ್ರ
ಕನ್ನಡದ ಕೀರ್ತಿ । ಯೆನ್ನ ಚಿತ್ತದ ಸ್ಫೂರ್ತಿ
ಕನ್ನಡದ ಒಗ್ಗೂಟ । ವೆನಗದೇ ಕಿರೀಟ"[10]

ಕನ್ನಡ ನುಡಿ ಬಹಳ ಸುಮಧುರವಾಗಿದ್ದು ಕೇಳಲು ಇಂಪಾಗಿರುತ್ತದೆ. ಇದಕ್ಕೆ ಸಿಗುವ ಗೌರವಸ್ಥಾನ ನನಗೆ ವರಮಾನವಾಗಿದೆ. ಇಂತಹ ಭಾಷೆಯನ್ನು ಮಾತನಾಡಲು ಸ್ವಾತಂತ್ರ್ಯ ಸಿಕ್ಕಿದರೆ ಅದುವೇ ಪರಮ ಪವಿತ್ರವಾದ ಮಂತ್ರ. ಕನ್ನಡ ನಾಡೆಂಬ ಕೀರ್ತಿಯನ್ನು ಪಡೆಯುವುದೇ ನನಗೆ ಸ್ಫೂರ್ತಿ. ಇಲ್ಲಿ ಸಿಗುವ ನೆಲ, ಜಲ, ಸಿರಿ ಸಂಪತ್ತುಗಳು ಹೊನ್ನಿನ ನಿಧಿಗಳಾಗಿದ್ದು ಅವುಗಳನ್ನು ಬಿಟ್ಟು ಜೀವಿಸಲು ಸಾಧ್ಯವಿಲ್ಲ. ಇಲ್ಲಿ ವಾಸಿಸುವ ಜನರಲ್ಲಿ ಯಾವುದೇ ಜಾತಿ, ಧರ್ಮ, ಮತ ಭೇದವಿಲ್ಲ. ಕನ್ನಡಿಗರೆಲ್ಲರ ಕುಲವೊಂದೇ ಅದುವೇ ಕನ್ನಡ ಕುಲವಾಗಿದ್ದು ತಾಯಿ ಭುವನೇಶ್ವರಿ ದೇವಿಯ ಕೃಪೆಯಿದೆ ಎಂದು ಹೇಳಿ ಪ್ರತಿಯೊಬ್ಬ ಕನ್ನಡಿಗನಲ್ಲಿ ಭಾಷಾಭಿಮಾನವನ್ನು ಮೂಡಿಸಲು ಪ್ರಯತ್ನಸಿದ್ದಾರೆ.

ಇಂದುಮತಿ ಬಂಡಿಯವರು "ಕನ್ನಡದ ತಾಯೆ" ಗೀತೆಯಲ್ಲಿ ಕನ್ನಡಿಗನೊಬ್ಬನು ಕನ್ನಡ ತಾಯಿಗೆ ಕೈ ಮುಗಿಯುತ್ತಾ ತನ್ನಲ್ಲಿರುವ ಅವಗುಣಗಳನ್ನು, ಶಿವ ಗುಣಗಳನ್ನು ಅಳಿಸಿ ಸನ್ಮಾರ್ಗವನ್ನು ತೋರಿಸೆಂದು ಕನ್ನಡಾಂಬೆಯಲ್ಲಿ ಮನವಿ ಮಾಡಿಕೊಂಡಿದ್ದಾನೆ.

"ಕನ್ನಡದ ತಾಯ ಕರವ ಮುಗಿಯುವೆ ದೇವಿಯೇ
ವರವ ನೀಡಿ ಹರಸಮ್ಮ ಅಮ್ಮ ಎಮಗೆ ॥ಪ॥
ಪರಪ್ರಾಂತ್ಯ ದೊಡ್ಡಮ್ಮ / ನೆರೆ ಪ್ರಾಂತ್ಯ ಚಿಕ್ಕಮ್ಮ
ನೀ ನಮ್ಮ ಹೆತ್ತಮ್ಮ / ಎಂದೆನಿಸಮ್ಮ ಅಮ್ಮ
ತೆನೆ–ತೆನೆ ಗೂಡೆ ರಾಶಿ / ಪ್ರಾಂತ–ಪ್ರಾಂತ ಕೂಡಿ ದೇಶ
ಒಡಕು ತೊಡಕುಗಳ / ಹೊಡೆದೋಡಿಸಮ್ಮ॥"[11]

ಹೆತ್ತ ತಾಯಿ ನೀನೆಂದು ಮರೆತ ಕನ್ನಡಿಗನು ಜಾತಿ, ಧರ್ಮ, ಪ್ರಾಂತ್ಯಗಳೆಂದು ದ್ವೇಷ ಅಸೂಯೇ, ಭೇದ–ಭಾವಗಳಿಂದ ಜೀವಿಸುತ್ತಿದ್ದಾನೆ. ಅಂತಹ ಕನ್ನಡಿಗರಲ್ಲಿ ಒಡಕು ತೊಡಕುಗಳನ್ನು ಹೊಡೆದೋಡಿಸಿ ನಿನ್ನ ಸೇವೆಯಲ್ಲಿ ನಿರತರಾಗುವಂತೆ ವರವ ನೀಡಿ ಆಶೀರ್ವಾದ ಮಾಡೆಂದು ಮನವಿಯನ್ನು ಸಲ್ಲಿಸುತ್ತಿರುವ ಕನ್ನಡಿಗನ ಚಿತ್ರಣವಿಲ್ಲಿ ಅಭಿವ್ಯಕ್ತಗೊಂಡಿದೆ.

ತೀ.ನಂ. ಶ್ರೀಕಂಠಯ್ಯನವರು 'ಸ್ವಾಗತ' ಗೀತೆಯಲ್ಲಿ ಕನ್ನಡಿಗರೆಲ್ಲರನ್ನು ಕನ್ನಡಾಂಬೆಯ ಮಕ್ಕಳೆಂದು ಸಂಬೋಧಿಸಿದ್ದಾರೆ. ನಾಡಿನಲ್ಲಿ ಹರಿಯುವ ನದಿಯ ನೀರನ್ನು ಎದೆ ಹಾಲಿನಂತೆ ಕುಡಿಸಿ, ನೆಲದಲ್ಲಿ ಬೆಳೆದಿರುವ ಆಹಾರವನ್ನು ತಿನ್ನಿಸಿ, ಕನ್ನಡ ಭಾಷೆಯ ಮೂಲಕ ತೊದಲ ನುಡಿಗಳನ್ನು ಕಲಿಸಿ ಸಾಕಿ ಸಲುಹಿದ ಕನ್ನಡಾಂಬೆಯನ್ನು ರಕ್ಷಿಸಲು ಚಳವಳಿಗೆ ಸ್ವಾಗತಿಸಿದ್ದಾರೆ.

"ಕನ್ನಡದ ಗಡಿಗಳಿಂದ–
ಬಂದಿಹಿರಿ, ಬಂದಿಹಿರಿ ಕನ್ನಡ ಮಣಿಗಳಿರ,
ಬಂದಿಹಿರಿ, ಕನ್ನಡ ದೇವಿಯರಾಧನೆಗೆ
ಇಂದು ಸ್ವಾಗತವು ನಿಮಗೆ।"[12]

ಗೆಳೆಯ ಕನ್ನಡಿಗರೇ ಸ್ವಾಗತವು ನಿಮಗೆ, ಎಂದು ಪ್ರಾರಂಭಗೊಳ್ಳುವ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ಗೀತೆಯಲ್ಲಿ ಕನ್ನಡದ ಹಲವು ಪ್ರಾಂತ್ಯಗಳಿಂದ, ಗಂಡು ಮೆಟ್ಟಿದ ನೆಲದ ಗಡಿಗಳಿಂದ, ಆಗಮಿಸಿ ಕನ್ನಡದ ಸೇವೆಯಲ್ಲಿ ನಿರತರಾಗಿರುವ ಹಿರಿಯರೇ, ಸಮಗ್ರ ಕನ್ನಡ ನಾಡು ಕನಸನ್ನು ನನಸಾಗಿಸಲು ಬಂದಿರುವ ತರುಣ ಕನ್ನಡಿಗರೇ, ಸಾಹಿತ್ಯ ಸೃಷ್ಟಿಗೆ ಕಾರಣವಾಗುವ ಮಹಿಳೆಯರೇ ನಾವೆಲ್ಲರೂ ಒಟ್ಟುಗೂಡಿ ಕನ್ನಡ ಸೇವೆಯಲ್ಲಿ ಮೈಮರೆತು ಕುಂದು ಕೊರತೆಗಳನ್ನು ನಿವಾರಿಸಿಕೊಂಡು ಸಮಗ್ರ ನಾಡನ್ನು ಕಟ್ಟುವಂತಹ ಶಕ್ತಿಯನ್ನು ಕನ್ನಡ ದೇವಿ ನಮಗೆ ಕರುಣಿಸಲಿ ಎಂಬ ಆಶಯ ಮಾತುಗಳು ಅನಾವರಣಗೊಂಡಿವೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರು "ಕನ್ನಡ ನಾಡಿನ ಸ್ಥಿತಿಯನ್ನು ನೆನೆದು" ಎಂಬ ಗೀತೆಯಲ್ಲಿ ಹರಿದು ತುಂಡಾಗಿರುವ ಕನ್ನಡ ಮನಸ್ಸುಗಳನ್ನು ನೆನೆದು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

"ನಾವೆಲ್ಲ ಒಂದು ಮನೆಯವರಣ್ಣ ತಮ್ಮಂದಿರು;
ನಮ್ಮೆಲ್ಲರನ್ನು ಪಡೆದುದೊಂದೆ ನಾಡಿನ ಬಸಿರು
ಎಂದು ನಾವರಿದೆವೇ ನಮಗೆ ಇನ್ನಾರೆದುರು!
ಹಾ ನನ್ನ ಸೋದರರೆ ಬನ್ನಿ ಒಂದಾಗಿ;
ಜಯವಧುವ ನಿಮ್ಮ ತೋಳಿನಳಿಟ್ಟು ತೂಗಿ"[13]

ಒಂದೇ ಭಾಷೆಯನ್ನು ಆಡುವವರೆಲ್ಲರೂ ಅಣ್ಣ ತಮ್ಮಂದಿರೆಂಬುದನ್ನು ಮರೆತು ನಾನು ಬೇರೆ, ನೀನು ಬೇರೆ ಎಂಬ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿಕೊಂಡು ಒಳ ಜಗಳಗಳನ್ನು ಆಡುತ್ತಿದ್ದಾರೆ. ಇಂತಹ ದೀನ ಸ್ಥಿತಿಯನ್ನು ಕಂಡಿರುವ ಕವಿಗಳು ಕನ್ನಡಿಗರೆಲ್ಲರನ್ನೂ ಒಂದೇ ತಾಯಿಯ ಮಕ್ಕಳೆಂದು ಕರೆದು ಕನ್ನಡಮ್ಮನ ಸೇವೆಗೆ ಮುಂದಾಗಿ ಎಂದು ಕರೆಯನ್ನು ನೀಡಿದ್ದಾರೆ.

ಗುಡಿಬಂಡೆ ಬಿ.ಎಸ್. ರಾಮಾಚಾರ್ಯರವರು "ಎದ್ದೇಳು ಕನ್ನಡಿಗ" ಎಂಬ ಗೀತೆಯಲ್ಲಿ ಅಖಂಡ ಕರ್ನಾಟಕ ರಾಜ್ಯದ ಕನಸನ್ನು ನನಸು ಮಾಡಲು ತಾಯಿ ನಾಡಿನ ಸೇವೆಗೆ ಮುನ್ನುಗ್ಗು ಎಂದು ಕನ್ನಡಿಗನಿಗೆ ಕರೆಯನ್ನು ನೀಡಿದ್ದಾರೆ.

"ಎದ್ದೇಳು ಕನ್ನಡಿಗ–ಎದ್ದೇಳು
ಶ್ರದ್ಧಾ ಭಕ್ತಿಯಿಂ–ತಾಯ್ನಾಡ ಸೇವೆಗೆ ॥ಪ॥

ಅಖಂಡ ಕರ್ನಾಟಕ ರಾಜ್ಯ ನಮದೆಂದು
ಧೈರ್ಯದಿಂ ತಲೆಯೆತ್ತಿ ಮುನ್ನುಗ್ಗು ಇಂದು ॥ ಅ.ಪ॥"[14]

ನಮ್ಮ ಕನ್ನಡ ನಾಡಿನ ನುಡಿ, ನಡೆ, ಕಲೆ ಮತ್ತು ವಾಸ್ತುಶಿಲ್ಪ ಭಿನ್ನವಾಗಿದ್ದು ಕನ್ನಡ ಕವಿಗಳು ಹಾಕಿ ಕೊಟ್ಟಿರುವ ಸತ್ಯದ ಸನ್ಮಾರ್ಗದಲ್ಲಿ ನಡೆದು ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಖ್ಯಾತವಂತರಾಗಿ ಅಖಂಡ ಕರ್ನಾಟಕ ರಾಜ್ಯಕ್ಕಾಗಿ ಹೋರಾಡಬೇಕಾಗಿದೆಯೆಂಬ ಅಶಯವನ್ನು ಅಭಿವ್ಯಕ್ತಪಡಿಸಿದ್ದಾರೆ. ಅದೇ ರೀತಿಯಾಗಿ ಚಂದ್ರಶೇಖರರವರು "ಎದ್ದೇಳು ಕನ್ನಡದ ವೀರ" ಎಂಬ ಗೀತೆಯ ಮೂಲಕ ಪ್ರತಿಯೊಬ್ಬ ಕನ್ನಡಿಗನನ್ನು ಶೂರನೆಂದು ಕರೆದು ತನ್ನಲ್ಲಿರುವ ಕನ್ನಡಾಭಿಮಾನವನ್ನು ಎಬ್ಬಿಸಲು ಪ್ರಯತ್ನಿಸಿದ್ದಾರೆ.

ಜಯದೇವಿ ತಾಯಿ ಲಿಗಾಡೆಯವರು "ಕನ್ನಡ ನನ್ನ ತಾಯಿ" ಗೀತೆಯ ಮೂಲಕ ಪ್ರತಿಯೊಬ್ಬ ಕನ್ನಡಿಗನು ಕನ್ನಡ ತಾಯಿಯ ಸೇವೆಗಾಗಿ ತುದಿ ಕಾಲಿನಲ್ಲಿ ನಿಂತಿರಬೇಕೆಂಬ ಆಶಯವನ್ನು ಅಭಿವ್ಯಕ್ತಪಡಿಸಿದ್ದಾರೆ.

"ಕನ್ನಡ ಮಕ್ಕಳು ಕನವರಿಸಿ ಕರೆದಾಗ
ಇನ್ನಾವ ನೆವ ಹೇಳದೆ
ಇನ್ನಾವ ನೆವ ಹೇಳದೆ–ನನ ಮನ
ತನ್ನಿಂದ ತಾನೇ ಎಳದಿತ್ತು॥"[15]

ಎಂದು ಹೇಳುವ ಕವಿಯತ್ರಿ ಕನ್ನಡ ತಾಯಿ ಚಿನ್ನದ ಗದ್ದುಗೆ ಮೇಲೆ ಕುಂತಿದ್ದಾಳೆ. ಚಿನ್ನದ ಛತ್ರವೇ ಅವಳಿಗೆ ನೆರಳಾಗಿದ್ದು ಗತವೈಭವದಿಂದ ಮೆರೆಯುತ್ತಿದ್ದಾಳೆ. ಇಂತಹ ತಾಯಿಯು ಪರಕೀಯರ ಸ್ವಾರ್ಥಕ್ಕಾಗಿ ತುಂಡು ತುಂಡಾಗಿ, ಕಣ್ಣೀರ ಸುರಿಸುತ್ತಿದ್ದಾರೆ. ಈ ಕಣ್ಣೀರನ್ನು ಒರೆಯಿಸಿ ಹೊಸ ನಾಡೊಂದನ್ನು ಕಟ್ಟಲು ಕನವರಿಸಿ ಕರೆದರು ಹಿಂದೆ ಮುಂದೆ ನೋಡದೆ ಯಾವುದೇ ನೆಪ ಹೇಳದೆ ನಾನು ತಡೆ ಹೇಳಿದರು ನನ್ನೊಳಗಿನ ಕನ್ನಡ ಮನಸ್ಸು ತನ್ನಿಂದ ತಾನೇ ಕನ್ನಡ ನಾಡನ್ನು ಕಟ್ಟುವ ಕಾರ್ಯಕ್ಕೆ ಮುನ್ನುಗ್ಗುತ್ತದೆ. ಅಗೆಯೇ ಪ್ರತಿಯೊಬ್ಬ ಕನ್ನಡಿಗನು ಈ ತರಹದ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕೆಂಬ ಆಶಯ ಮಾತುಗಳನ್ನು ಹೇಳಿದ್ದಾರೆ.

ಸಿ. ತಿರುಮಲೇಶ್‌ರವರು "ಎಚ್ಚೆತ್ತುಕೋ ಕನ್ನಡಿಗ, ಎಚ್ಚೆತ್ತುಕೋ" ಎಂಬ ಗೀತೆಯ ಮೂಲಕ ಕನ್ನಡ ನಾಡಿನ ಹಲವು ಭೂ ಪ್ರದೇಶಗಳು ನೆರೆಹೊರೆಯ ರಾಜ್ಯಗಳಲ್ಲಿ ವಿಲೀನಗೊಂಡಿದ್ದು ಕನ್ನಡಿಗರು ತನ್ನ ನಾಡಿನಲ್ಲಿಯೇ ಪರರ ಮಕ್ಕಳಾಗುವ ಪರಿಸ್ಥಿತಿ ರೂಪುಗೊಳ್ಳುತ್ತದೆಯೆಂಬ ಭಯವನ್ನು ವ್ಯಕ್ತಪಡಿಸುತ್ತಾ ಕನ್ನಡಿಗರನ್ನು ಎಚ್ಚರಿಸಿದ್ದಾರೆ.

"ಎಚ್ಚೆತ್ತುಕೋ ಕನ್ನಡಿಗ, ಎಚ್ಚೆತ್ತುಕೋ
ಮಕರಂದವನ್ನು ಹೀರುವ ದುಂಬಿಯಂತೆ
ರಕ್ತವನ್ನು ಕುಡಿಯುವ ತಿಗಣೆಯಂತೆ
ಪರಭಾಷಿಕರು ಕನ್ನಡ ನಾಡನ್ನು ಹೀರುವ
ಮೊದಲು ಎಚ್ಚೆತ್ತುಕೋ ಕನ್ನಡಿಗ ಹೆಚ್ಚುತ್ತುಕೋ"[16]

ಕವಿಗಳು ಇಲ್ಲಿ ಕನ್ನಡ ನಾಡನ್ನು ಹೂವಿನ ಮಕರಂದಕ್ಕೆ, ಪರಭಾಷಿಕರನ್ನು ದುಂಬಿ ಮತ್ತು ತಿಗಣೆಗೆ ಹೋಲಿಸಿದ್ದಾರೆ. ದುಂಬಿಯಂತೆ ಹೂವಿನ ಮಕರಂದವನ್ನು ತಿಗಣೆಯಂತೆ ದೇಹದಲ್ಲಿನ ರಕ್ತವನ್ನು ಹೀರುವ ರೀತಿಯಲ್ಲಿ ಕನ್ನಡ ನಾಡಿನ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿದ್ದಾರೆ. ಇನ್ನು ನಾವು ಪರರ ಕುತಂತ್ರಕ್ಕೆ ಸಿಲುಕಿ ಮೋಸ ಹೋದರೆ ಬೆಳಗಾವಿ ಮತ್ತು ಬೆಂಗಳೂರಿನಂತಹ ಸಂಸ್ಕೃತಿ ನಗರಗಳನ್ನು ಕಳೆದುಕೊಳ್ಳುತ್ತೇವೆ. ಆದ್ದರಿಂದ ಪ್ರತಿಯೊಬ್ಬ ಕನ್ನಡಿಗನು ತನ್ನ ತಾಯಿನಾಡನ್ನು ಪರರು ಆಕ್ರಮಿಸುವುದಕ್ಕಿಂತ ಮೊದಲು ಎಚ್ಚೆತ್ತುಕೊಂಡು ತಾಯಿ ಸೇವೆಗೆ ಮುಂದಾಗಬೇಕೆಂಬ ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ.

ಕೈಯಾರ ಕೈಞ್ಞಣ್ಣರೈ ರವರು 'ಬೆಂಕಿ ಬಿದ್ದಿದೆ ಮನೆಗೆ' ಎಂಬ ಗೀತೆಯಲ್ಲಿ ಕನ್ನಡ ನಾಡು ನುಡಿಗೆ ಬಂದೊದಗಿರುವ ಸಮಸ್ಯೆಗಳನ್ನು ಕುರಿತು ಹೇಳಿದ್ದಾರೆ. 'ಬೆಂಕಿ ಬಿದ್ದಿದೆ ಮನೆಗೆ' ಎಂಬುದನ್ನು ರೂಪಕವಾಗಿ ಹೇಳಿದ್ದಾರೆ. ಇಲ್ಲಿ ಮನೆ ಎಂದರೆ ಕನ್ನಡ ನಾಡು. ಈ ಕನ್ನಡ ನಾಡಿಗೆ ಪರಕೀಯರಿಂದ ಮತ್ತು ನೆರೆಹೊರೆಯ ರಾಜ್ಯಗಳಿಂದ ಸಮಸ್ಯೆಗಳು ಎದುರಾಗಿವೆ. ಈ ಸಮಸ್ಯೆಗಳು ಕನ್ನಡ ನಾಡನ್ನು ಬೆಂಕಿಯ ರೀತಿಯಲ್ಲಿ ಸುಡುತ್ತಿವೆ. ಆದ್ದರಿಂದ ಈ ಬೆಂಕಿಯನ್ನು ನಂದಿಸಲು ಕನ್ನಡಿಗನು ಮುಂದಾಗಬೇಕು. ಇಲ್ಲದಿದ್ದರೆ ಸಾಯಬೇಕು ಎಂದು ದಂಡಿಸಿದ್ದಾರೆ.

"ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ ।
ಎಲ್ಲರೂ ಎದ್ದೆದ್ದು ಓಡಿ ಬನ್ನಿ ।
ಕನ್ನಡದ ಗುಡಿ ಕಾಯೆ / ಗುಡಿಕಾಯ, ನುಡಿ ಕಾಯೆ,
ಕಾಯಿ ಅದರನೇ ಸಾಯಿ / ಓ ಬನ್ನಿ ಬನ್ನಿ;"[17]

ಇಲ್ಲಿ ಕವಿಗಳು ಕನ್ನಡ ನಾಡಿಗೆ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ನಾಡನ್ನು ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗನದಾಗಿದೆ. ಆದ್ದರಿಂದ ಕನ್ನಡ ನಾಡಿನ ಗಡಿಯನ್ನು ಕಾಯುವ ಸೈನಿಕರು, ದುಡಿಯುವ ರೈತರು, ನುಡಿಯನ್ನಾಡುವ ಅಕ್ಕಂದಿರು, ಅಣ್ಣಂದಿರು, ತಂಗಿಯರು, ತಮ್ಮಂದಿರು ಎಲ್ಲಾ ಭೇದ ಭಾವಗಳನ್ನು ಒಡರು ತೊಡರುಗಳನ್ನು ಬಿಟ್ಟು ಕನ್ನಡದ ಛಲವೊಂದೇ, ನೆಲವೊಂದೇ, ಬಲವೊಂದೇ ಎಂದು ಭಾವಿಸಿಕೊಂಡು ಸಮಸ್ತ ಕನ್ನಡ ನಾಡಿನ ಜನರು, ಸಿಡಿದೇಳುತ್ತಾ, ಗುಡುಗುತ್ತಾ ತಾಯಿ ನುಡಿ ಸೇವೆಯಲ್ಲಿ ಭಾಗವಹಿಸಬೇಕು. ಕನ್ನಡ ನಾಡನ್ನು ಉಳಿಸಲು ಮುನ್ನುಗ್ಗಿ ಕನ್ನಡ ನಾಡಿನ ಕೋಟಿ ಕೋಟಿ ಜನರನ್ನು ಎಚ್ಚರಿಸಿ ಸಿಂಹ ಸ್ವಪ್ನವನ್ನು ಬಿಟ್ಟು ಕೆರಳುವಂತೆ ಮಾಡಿ ಬೆಂಕಿಯನ್ನು ಹಾರಿಸುವಂತೆ ಆಗಬೇಕು. ಗತಕಾಲದಲ್ಲಿದ್ದ ಕನ್ನಡ ನಾಡಿನ ಗತವೈಭವವನ್ನು ಪುನರ್ ನಿರ್ಮಾಣ ಮಾಡಬೇಕೆಂಬ ಅಶಯವನ್ನು ವ್ಯಕ್ತಪಡಿಸಿದ್ದಾರೆ.

ಕುವೆಂಪುರವರು 'ಸಾಯುತ್ತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ!' ಎಂಬ ಗೀತೆಯ ಮೂಲಕ ಕನ್ನಡ ಭಾಷೆಯು ಅನ್ಯ ಭಾಷೆಗಳ ಸುಳಿಯಲ್ಲಿ ಸಿಲುಕಿ ನುಲುಗಿ ಹೋಗುತ್ತಿರುವ ಸಂದರ್ಭವನ್ನು ವಿಷಾದದೊಂದಿಗೆ ವ್ಯಕ್ತಪಡಿಸಿದ್ದಾರೆ.

"ಸಾಯುತ್ತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ
ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ ।

ಕಣ್ದೆರೆಯರೇಳಿ, ಓ ಕನ್ನಡದ ಮಕ್ಕಳಿರ
ಗರ್ಜಿಸುವುದು ಕಲಿತು ಸಿಂಹವಾಗಿ

ಸಂಪುಟ: 09, ಸಂಚಿಕೆ 05, ಡಿಸೆಂಬರ್ 2025 | VOLUME: 09, ISSUE: 05, DECEMBER 2025

ನಖದಂಷ್ಟ್ರ ಕೇಸರಂಗಳ ಬೆಳೆಸಿ ಹುರಿಗೊಂಡು

ಶಿರವೆತ್ತಿ ನಿಂತು ಕುರಿತನವ ನೀಗಿ"[18]

ರಾಜ ನುಡಿಯಾದ ಇಂಗ್ಲೀಷ್, ರಾಷ್ಟ್ರ ನುಡಿಯಾದ ಹಿಂದಿ, ದೇವನುಡಿಯಾದ ಸಂಸ್ಕೃತಗಳು ಕನ್ನಡ ತಾಯಿನುಡಿಯ ಬೆನ್ನು ಮುರಿದ ಮುದುಕಿಯಂತೆ ಮಾಡಿ ಕೂಗಿಕೊಳ್ಳಲು ಸಹ ಬಲವಿಲ್ಲದಂತೆ ಬಾಯಿಯನ್ನು ಮುಚ್ಚಿದ್ದಾವೆ. ಆದ್ದರಿಂದ ಕನ್ನಡ ಭಾಷೆಯ ಸಂರಕ್ಷಣೆಗಾಗಿ ಪ್ರತಿಯೊಬ್ಬ ಕನ್ನಡಿಗನು ಸಿಂಹದಂತೆ ಘರ್ಜಿಸಿ, ಮಾತೃಭಾಷೆ ಎಂಬ ಕತ್ತಿಯನ್ನು ಹಿಡಿದು ಅನ್ಯ ಭಾಷೆಗಳನ್ನು ಸಾಯಿಸಿ ನಾಡು ನುಡಿಯನ್ನು ರಕ್ಷಿಸುವ ಕಾರ್ಯದಲ್ಲಿ ನಿರತನಾಗಬೇಕೆಂಬ ಅಶಯದೊಂದಿಗೆ ಚಳುವಳಿಗೆ ಕರೆಯನ್ನು ನೀಡಿದ್ದಾರೆ.

ಏಕೀಕರಣೋತ್ತರ ಚಳವಳಿಯ ಹಾಡುಗಳು :

ಕನ್ನಡ ನಾಡು 1956 ನವೆಂಬರ್ ಒಂದರಂದು ಮೈಸೂರು ರಾಜ್ಯವಾಗಿ ಹೆಸರು ಪಡೆದು ಸಮಗ್ರ ಕನ್ನಡವಾಯಿತು. ಆದರೆ "ಮೈಸೂರು ರಾಜ್ಯ" ಎಂಬ ಹೆಸರು ಕೆಲವು ಕನ್ನಡಿಗರಲ್ಲಿ ಅಸಮಾಧಾನವನ್ನು ಉಂಟು ಮಾಡಿತು. ಈ ಹಿನ್ನೆಲೆಯಲ್ಲಿ ಕನ್ನಡ ನಾಡಿಗೆ "ಕರ್ನಾಟಕ" ಎಂಬ ಮರುನಾಮಕರಣ ಮಾಡುವಂತೆ ಒತ್ತಾಯಿಸಿ ಹಲವಾರು ಗೀತೆಗಳನ್ನು ರಚನೆಮಾಡಿದ್ದಾರೆ. ಅಗೆಯೇ "ಕರ್ನಾಟಕ" ಎಂದು ಮರು ನಾಮಕರಣದ ನಂತರ ಕರ್ನಾಟಕದಲ್ಲಿ ಎದುರಾದ ಸಮಸ್ಯೆಗಳು ಮತ್ತು ಅದಕ್ಕೆ ಅನುಗುಣವಾಗಿ ಕಂಡುಕೊಂಡ ಪರಿಹಾರೋಪಾಯಗಳನ್ನು ಕನ್ನಡಪರ ಗೀತೆಗಳಲ್ಲಿ ಹಲವಾರು ಕವಿಗಳು ಕಟ್ಟಿಕೊಟ್ಟಿದ್ದಾರೆ.

ಕನ್ನಡ ನಾಡು ಮೈಸೂರು ರಾಜ್ಯವಾಗಿ ಏಕೀಕರಣಗೊಂಡ ಸಂದರ್ಭದಲ್ಲಿ ನಾಡಿನ ಸಮಸ್ತ ಜನರು ಸಂತೋಷವನ್ನು ವ್ಯಕ್ತಪಡಿಸುವುದರ ಜೊತೆಗೆ ರೋಮಾಂಚನಕಾರಿ ಅನುಭವವನ್ನು ಪಡೆದರು. ಈ ಹಿನ್ನೆಲೆಯಲ್ಲಿ ಕೆ.ಎಸ್. ನರಸಿಂಹಸ್ವಾಮಿಯವರು "ಕರ್ನಾಟಕ ರಾಜ್ಯೋತ್ಸವ" ಗೀತೆಯನ್ನು ಬರೆದಿದ್ದಾರೆ. ಈ ಗೀತೆಯಲ್ಲಿ ಬಹುದಿನಗಳಿಂದ ಕನಸು ಕಟ್ಟಿದ್ದ ಕನ್ನಡಿಗನ ಕನಸು ನನಸಾದ ದಿನವನ್ನು ಮತ್ತು ಮುಹೂರ್ತವನ್ನು ಶುಭಕರವೆಂದು ಆ ಸಂದರ್ಭದಲ್ಲಿ ನಾಡಿನ

ಮನೆ ಮನೆಯ ಸಂತಸವು ಬಣ್ಣ ಬಣ್ಣವಾಗಿದ್ದಿತೆಂದು ಹೇಳಿದ್ದಾರೆ. ಅಲ್ಲದೆ ಇನ್ನು ಮುಂದೆ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು ತನ್ನದೇಯಾದಂತಹ ಹೊಸ ಬದುಕನ್ನು ಕಟ್ಟಿಕೊಂಡು ಸ್ವತಂತ್ರವಾಗಿ ಕಂಗೊಳಿಸುತ್ತದೆಂದು ಕನ್ನಡ ನಾಡಿನ ಸೊಬಗು ಮತ್ತು ಸೌಂದರ್ಯವನ್ನು ವಿವರಿಸಿದ್ದಾರೆ.

“ಕನ್ನಡದ ಬದುಕು ತಲೆಯೆತ್ತಿ ನಿಂತ
ಮಂಗಳ ಮುಹೂರ್ತದಲ್ಲಿ
ಮನೆ ಮನೆಯ ಮುಂದೆ ಮುಂಬೆಳಗಿನಲ್ಲಿ
ಸಂತಸದ ರಂಗವಲ್ಲಿ”[19]

ಏಕೀಕರಣದ ನಂತರ ಏರ್ಪಟ್ಟಿರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಸ್ವತಂತ್ರವಾಗಿ ಭಾವೈಕ್ಯತೆಯಿಂದ ಬಾಳಲು ಬಯಸಿರುವ ಕನ್ನಡಿಗನು ಹೊಸ ನಾಡನ್ನು ಕಟ್ಟಲು ಮುಂದಾಗಿದ್ದಾನೆ. ಕನ್ನಡಿಗನ ಬೆನ್ನು ತಟ್ಟಿ, ಪ್ರೋತ್ಸಾಹಿಸಿ ಮುಂದೆ ಇಟ್ಟ ಹೆಜ್ಜೆಗಳನ್ನು ಹಿಂದೆ ತೆಗೆಯದಂತೆ, ಸದಾಕಾಲ ಆಶೀರ್ವಾದ ಮಾಡುತ್ತಾ ಮುನ್ನುಗುವ ನಡೆಯನ್ನು ಕಲಿಸು ತಾಯಿ ಎಂದು ಕನ್ನಡಾಂಬೆಯಲ್ಲಿ ಹರಕೆಯನ್ನು ಮಾಡಿಕೊಂಡಿದ್ದಾರೆ.

ಡಿ.ಎಸ್. ಕರ್ಕಿಯವರು ‘ಹಚ್ಚೇವು ಕನ್ನಡದ ದೀಪ’ ಎಂಬ ಗೀತೆಯ ಮೂಲಕ ಕನ್ನಡ ನಾಡಿನ ಬಗ್ಗೆ ತನಗಿರುವ ಪ್ರೀತಿ ಮತ್ತು ಅಭಿಮಾನವನ್ನು ಅಭಿವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ಕನ್ನಡಿಗನು ದೀಪವನ್ನು ಹಚ್ಚುವುದರ ಮೂಲಕ ಕನ್ನಡ ನಾಡಿನ ಭವ್ಯತೆಯನ್ನು ಪುನರ್ ಸೃಷ್ಟಿಸುತ್ತೇವೆ ಎಂದು ಶಪಥ ಮಾಡಿರುವ ರೀತಿಯಲ್ಲಿ ಕವಿಗಳು ಈ ಗೀತೆಯನ್ನು ರಚಿಸಿದ್ದಾರೆ.

“ಬಹುದಿನಗಳಿಂದ ಮೈಮರವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸ
ಲಲ್ಲಲ್ಲಿ ಕರಣ ಚಾಚೇವು
ನಡುನಾಡು ಇರಲಿ, ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು

ಮರೆತೇವು ಮರವ, ತೆರೆದೇವು ಮನವ, ಎರದೇವು ಒಲವ ಹಿಡಿನೆನಪ
ನರನರವನೆಲ್ಲ ಹುರಿಗೊಳಿಸಿ ಹೊನೆರು ಹಚ್ಚೇವು ಕನ್ನಡದ ದೀಪ"[20]

"ಹಚ್ಚೇವು ಕನ್ನಡದ ದೀಪ" ಎಂದು ಪ್ರಾರಂಭಗೊಳ್ಳುವ ಈ ಗೀತೆಯಲ್ಲಿ ಕನ್ನಡ ನಾಡು–ನುಡಿ ಮತ್ತು ಸಂಸ್ಕೃತಿಯನ್ನು ಕಟ್ಟಲು ಶ್ರಮವಹಿಸಿದ ಮಹನೀಯರನ್ನು ಸ್ಮರಿಸುತ್ತಾ ಅವರು ಹಚ್ಚಿದ ಕನ್ನಡ ಅಭಿಮಾನದ ದೀಪವನ್ನು ಪ್ರತಿಯೊಬ್ಬ ಕನ್ನಡಿಗನಲ್ಲಿ ಹಚ್ಚಿ ನಾಡು ನುಡಿಗಾಗಿ ಶ್ರಮಿಸುವಂತೆ ಮಾಡುವುದು ಕವಿಯ ಆಶಯವಾಗಿದೆ. ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ನಮ್ಮಲ್ಲಿರುವ ಪರಭಾಷಾ ವ್ಯಾಮೋಹವನ್ನು ತೊರೆದು, ನಮ್ಮಲ್ಲಿ ಆವರಿಸಿರುವ ಕತ್ತಲನ್ನು ದೂರ ಸರಿಸಿ ಜ್ಞಾನವನ್ನು ಪಡೆದು ನಾಡಿನಾದ್ಯಂತ ಕನ್ನಡ ದೀಪವನ್ನು ಹಚ್ಚಿ ಕನ್ನಡ ಭಾಷೆಯನ್ನು ಹರಡಿಸುತ್ತೇವೆ. ಇದು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿಯೆಂದು ಕನ್ನಡಾಭಿಮಾನವನ್ನು ಕವಿ ವ್ಯಕ್ತಪಡಿಸಿದ್ದಾರೆ.

ಶ್ರೀಮಾನ ಬಳೆ ರಾಮಚಾರ್ಯ ರವರು "ಒಂದಾಯಿತು ನಮ್ಮ ಕನ್ನಡ ನಾಡು" ಎಂಬ ಗೀತೆಯಲ್ಲಿ ಹಂಚಿ ತುಂಡಾಗಿದ್ದ ಕನ್ನಡ ನಾಡು ಮೈಸೂರು ರಾಜ್ಯವೆಂಬ ಹೆಸರಿನಲ್ಲಿ ಕನ್ನಡ ನಾಡಾಗಿ ಒಂದಾಯಿತು. ಈ ಘಟನೆ ಕನ್ನಡ ನಾಡಿನ ಪ್ರತಿಯೊಬ್ಬರಲ್ಲೂ ಸಂತಸವನ್ನು ತಂದಿತು. ಈ ಸಂತಸಕ್ಕೆ ಕಾರಣವಾದ ಕನ್ನಡ ನಾಡಿನ ಚಿತ್ರಣವನ್ನು ಕವಿ ಕಟ್ಟಿಕೊಟ್ಟಿದ್ದರು.

"ಬಳ್ಳಾರಿ, ರಾಯಚೂರು, ಕಲಬುರಗಿ, ಬಿದರೆ,
ಬೆಳಗಾಂ, ಬಿಜಾಪುರ್, ಹುಬ್ಬಳ್ಳಿ, ಗದಗ
ಮಂಗ್ಳೂರು, ಕಾರವಾರ, ಮೈಸೂರು, ಕೊಡಗು
ಒಂದಾಯಿತು ನಮ್ಮನಾಡು
ಎರಡು ಕೋಟಿ ಜನ ಅಕ್ಕ ತಂಗಿಯರು
ಅಣ್ಣ ತಮ್ಮಂದಿರು ಸುಖವಾಗಿ ಬಾಳೆ
ಒಂದಾಯಿತು ನಮ್ಮ ನಾಡು"[21]

ಇಲ್ಲಿ ಕವಿಗಳು ಕನ್ನಡ ನಾಡನ್ನು ಚಿನ್ನದ ನಾಡು, ಗಂಧದಬೀಡು, ಜೇನಿನ ಗೂಡು ಎಂದು ಸಂಬೋಧಿಸಿದ್ದಾರೆ. ಏಕೀಕರಣದ ನೆಲೆಯಲ್ಲಿ

ನೆರೆಹೊರೆಯ ರಾಜ್ಯಗಳಲ್ಲಿ ವಿಲೀನಗೊಂಡಿದ್ದ ಬಳ್ಳಾರಿ, ರಾಯಚೂರು, ಕಲಬುರಗಿ, ಬಿದರೆ, ಕಾರವಾರ, ಮೈಸೂರು, ಕೊಡಗು ಮೊದಲಾದ ಪ್ರದೇಶಗಳು ಒಂದಾಗಿದ್ದು ಪ್ರಾಂತ್ಯ ವ್ಯಾಮೋಹಗಳನ್ನು ತೋರೆದು ಭಾವೈಕ್ಯತೆಯಿಂದ ಸುಖವಾಗಿ ಬಾಳಿರಿ ಎಂದು ಕವಿಗಳು ತನ್ನ ಮನಸ್ಸಿನೊಳಗಿನ ಆಶಾವಾದವನ್ನು ವ್ಯಕ್ತಪಡಿಸಿದ್ದಾರೆ.

ಕಾವ್ಯಾನಂದ ಅವರು 'ಹೊತ್ತಿತೋ ಹೊತ್ತಿತು' ಎಂಬ ಗೀತೆಯಲ್ಲಿ ಕನ್ನಡ ಭಾಷೆ ಕನ್ನಡ ನಾಡಿನ ಪ್ರಾಣ, ಮಾನ, ಜ್ಯೋತಿಯೆಂದು ಹೇಳಿದ್ದಾರೆ. ಏಕೀಕರಣವಾಗುವುದರ ಮೂಲಕ ತಲೆಯೆತ್ತಿರುವ ತಾಯಿ ನುಡಿಯನ್ನು ನಾಡಿನಾದ್ಯಾಂತ ಹರಡಿಸಲು ದೀಪಕ್ಕೇ ಎಣ್ಣೆಯಾಗಿ, ಉರಿಯುವ ಬತ್ತಿಯಾಗಿ ಕನ್ನಡ ದೀಪವನ್ನು ಬೆಳಗಿಸುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವೆಂದು ಎಂದು ಹೇಳಿದ್ದಾರೆ.

"ಹೊತ್ತಿತೋ ಹೊತ್ತಿತು / ಕನ್ನಡದ ದೀಪ
ಮುಗಿಯಿತೋ ಮುಗಿಯಿತು / ಶತಮಾನಗಳ ತಾಪ
ಹೊತ್ತಿತೋ ಹೊತ್ತಿತು / ಕನ್ನಡದ ದೀಪ!"[22]

"ಹೊತ್ತಿತೋ ಹೊತ್ತಿತು ಕನ್ನಡದ ದೀಪ" ಎಂದು ಪ್ರಾರಂಭವಾಗುವ ಈ ಹಾಡಿನಲ್ಲಿ ಕನ್ನಡ ನಾಡು ಏಕೀಕರಣಗೊಂಡ ಸಂದರ್ಭದಲ್ಲಿ ಮನೆ ಮನೆಯಲ್ಲಿ ಕನ್ನಡಾಂಬೆಯಾ ದೀಪವನ್ನು ಬೆಳಗಿಸಿದ ರೀತಿಯಲ್ಲಿ ಕನ್ನಡ ಭಾಷೆಯನ್ನು ದೇಶದಾಧ್ಯಂತ ಪಸರಿಸಿದರೇ ಕನ್ನಡ ಭಾಷೆ ಭಾರತ ದೇಶದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಗಿಟ್ಟಿಸಿಕೊಂಡು ಭವ್ಯತೆಯಿಂದ ಬೆಳೆದು ಕನ್ನಡಿಗರನ್ನು ಬೆಳೆಸುತ್ತದೆಂಬ ಅಶಯವಿಲ್ಲಿದೆ.

ಎನ್. ಅನ್ನದಾನಪ್ಪನವರ "ಕರ್ನಾಟಕವೇ ಅಗಲಿ" ಎಂಬ ಗೀತೆಯಲ್ಲಿ ಕನ್ನಡ ನಾಡಿಗೆ 'ಮೈಸೂರು' ಎಂಬ ಊರಿನ ಹೆಸರು ಇಟ್ಟಿರುವುದು ಸಣ್ಣತನವನ್ನು ಸೂಚಿಸುತ್ತದೆ. ಮೈಸೂರು ಎಂಬ ಹೆಸರು ಭಾವೈಕ್ಯತೆಯನ್ನು ಮೂಡಿಸುವಲ್ಲಿ ವಿಫಲವಾಗುತ್ತದೆ. ಆದ್ದರಿಂದ 'ಮೈಸೂರು ರಾಜ್ಯ'ವೆಂದು ಕನ್ನಡ ನಾಡನ್ನು ಕರೆಯುವ ಬದಲು "ಕರ್ನಾಟಕ" ರಾಜ್ಯವೆಂದು ಕರೆಯುವುದು ಸೂಕ್ತವೆಂದು ಸೂಚಿಸಿದ್ದಾರೆ.

"'ಕರ್ನಾಟಕ' ಎಂಬುದು ಗಣ್ಯರು ಕೊಟ್ಟಿಹಪೂರ್ವದ ಈ ಹೆಸರು।
ಇತಿಹಾಸದುದ್ದಕ್ಕೂ ಪೂರ್ವ ದಿಗಂತದಿ ಮೆರೆದಿಹ ಈ ಹೆಸರು॥
ಹಿರಿಯರ ಶ್ರಮದಿ ಕಷ್ಟದಿ ದೊರಕಿತು ಕನ್ನಡ ನಾಡಿಂದು।
'ಕರ್ನಾಟಕ' ಎಂಬುದು ಹೆದರದೆ ಆಗಲಿ ಅದುವೇ ಎಂದೆಂದೂ॥"[23]

ಕನ್ನಡ ನಾಡಿಗೆ 'ಮೈಸೂರು ರಾಜ್ಯ'ವೆಂದು ಹೆಸರನ್ನು ಸೂಚಿಸಿರುವುದರ ಹಿಂದೆ ಕಲ್ಮಶವು ತುಂಬಿದೆ. ಯಾಕೆಂದರೆ ಹಿರಿಯರ ಶ್ರಮದ ಫಲದಿಂದ ಕನ್ನಡ ನಾಡು ಒಂದಾಗಿದ್ದು ಯಾವುದೋ ಒಂದು ಸೀಮಿತ ಪ್ರದೇಶದ ಹೆಸರನ್ನು ಸೂಚಿಸಿರುವುದು ಅವರಿಗೆ ಅವಮಾನವೆಸಗಿದಂತಾಗುತ್ತದೆ. ಆದ್ದರಿಂದ ಯಾರಿಗೂ ಹೆದರದೆ ಅಂಜದೆ ಮೈಸೂರು ರಾಜ್ಯವೆಂಬ ಹೆಸರಿನ ಬದಲಿಗೆ 'ಕರ್ನಾಟಕ' ರಾಜ್ಯವೆಂದು ಹೆಸರಿಸಬೇಕು ಎಂದು ಕವಿಗಳು ಸಮಗ್ರ ಕನ್ನಡಾಭಿಮಾನಿಗಳ ಪರವಾಗಿ ಹೇಳಿದ್ದಾರೆ.

'ಋತುರಾಜ' ಎಂಬುವರು 'ಕರ್ನಾಟಕ ಬೇಕು' ಎಂಬ ಗೀತೆಯನ್ನು ಬರೆದಿದ್ದಾರೆ. ಈ ಗೀತೆಯಲ್ಲಿ ಕನ್ನಡನಾಡಿಗೆ 'ಕರ್ನಾಟಕ'ವೆಂಬ ಹೆಸರು ಮರು ನಾಮಕರಣವಾಗಬೇಕೆಂಬುದು ಮುಕ್ಕೋಟಿ ಜನರ ಆಸೆಯಾಗಿದ್ದು 'ಕರ್ನಾಟಕವೆ' ಹೆಸರಾಗಲಿ ಎಂದು ಹೇಳಿದ್ದಾರೆ.

"ಗತಕಾಲದಿತಿಹಾಸ / ಸಾರುತಿದೆ 'ಕರ್ನಾಟಕ'
ಕನ್ನಡದ ಕಾವ್ಯಶ್ರೀ / ಹಾಡುತಿದೆ 'ಕರ್ನಾಟಕ'

ಅಂತಿರಲಿ, ಇಂತಿರಲಿ / ಎಂಬ ವಾದವು ಸಾಕು
ಮುಕ್ಕೋಟಿ ಜನದಾಸೆ / 'ಕರ್ನಾಟಕ'ವೇ ಬೇಕು!"[24]

ಕನ್ನಡ ನಾಡಿನ ಗತಕಾಲದ ಇತಿಹಾಸವನ್ನು ಅರಿಯುಲು "ಕರ್ನಾಟಕ"ಎಂಬ ಹೆಸರಿನಿಂದ ಮಾತ್ರ ಸಾಧ್ಯ. ಸಾಹಿತ್ಯ, ಕಲೆ, ವಾಸ್ತುಶಿಲ್ಪಗಳಲ್ಲಿ ಕನ್ನಡ ನಾಡನ್ನು 'ಕರ್ನಾಟಕ'ವೆಂದೇ ಕರೆಯುಲಾಗಿದೆ. ಆದರಿಂದ "ಕರ್ನಾಟಕ"ವೆಂಬ ಹೆಸರೇ ಇರಲಿ ಎಂದು ಧೃಡನಿರ್ಧಾರವನ್ನು ತೆಗೆದುಕೋಳ್ಳಬೇಕು. ಇದು ಮುಕ್ಕೋಟಿ ಕನ್ನಡಿಗರ ಆಸೆಯೆಂದು ಕವಿಗಳು

ಒತ್ತಾಯವನ್ನು ಹೇರಿದ್ದಾರೆ.

ಚನ್ನವೀರ ಕಣವಿಯವರು "ಹೆಸರಾಯಿತು ಕರ್ನಾಟಕ" ಎಂಬ ಗೀತೆಯಲ್ಲಿ ಹಲವರ ಪರಿಶ್ರಮದಿಂದ ಕನ್ನಡ ನಾಡು "ಕರ್ನಾಟಕ" ರಾಜ್ಯವಾಗಿ ಹೆಸರು ಪಡೆಯಿತು. ಆದರೆ ಕನ್ನಡಿಗರ ಮನಸ್ಸಿನಲ್ಲಿ ಇನ್ನೂ ಕನ್ನಡ ನುಡಿ ಉಸಿರಾಗಲಿಲ್ಲ. ಇದರಿಂದಾಗಿ ಕನ್ನಡ ನುಡಿ ಅಳಿವಿನಂಚಿಗೆ ಸಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಪರಿಸ್ಥಿತಿಯನ್ನು ತಪ್ಪಿಸಲು ಪ್ರತಿಯೊಬ್ಬ ಕನ್ನಡಿಗನು ತನ್ನ ತಾಯಿ ನುಡಿಯನ್ನು ಉಸಿರಾಗಿಸಿಕೊಳ್ಳಬೇಕೆಂದು ಕವಿ ಮುನ್ನೆಚ್ಚರಿಕೆಯ ಮಾತುಗಳನ್ನು ಹೇಳಿದ್ದಾರೆ.

"ಹೆಸರಾಯಿತು ಕನ್ನಡ / ಉಸಿರಾಗಲಿ ಕನ್ನಡ
ಹಸಿ ಗೋಡೆಯ ಹರಳಿನಂತೆ / ಹುಸಿಯಾಗದ ಕನ್ನಡ

ಹಳ್ಳಿ–ಊರು, ನಗರ–ಜಿಲ್ಲೆ / ಮೊಗದ ಹೊಗರು ಕನ್ನಡಿ
ಎಲ್ಲ ದಿಸೆಗೂ ಚೆಲ್ಲುವರಿದ / ಚೈತನ್ಯದ ದಾಂಗುಡಿ"[25]

ಬಹುದಿನಗಳ ಕನಸು ನನಸಾದ ಸಂದರ್ಭವನ್ನು ಕುರಿತು ಕವಿ ಹೆಮ್ಮೆಯಿಂದ ಹೇಳಿದ್ದಾರೆ. ಕನ್ನಡ ನಾಡಿಗೆ 'ಕರ್ನಾಟಕ'ವೆಂಬ ಹೆಸರು ಸಾಕಾರವಾಯಿತು. ಇನ್ನೂ ಪ್ರತಿಯೊಬ್ಬ ಕನ್ನಡಿಗನ ಉಸಿರು ಕನ್ನಡ ಭಾಷೆಯಾಗಬೇಕು. ಆಗ ಮಾತ್ರ ಕನ್ನಡ ನಾಡಿನ ಪ್ರಗತಿ ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಕಂಡು ಬರುವ ಸಹ್ಯಾದ್ರಿಯ ಶಿಖರದಂತೆ, ಕನ್ನಡ ನಾಡಿನಲ್ಲಿರುವ ಗುಡಿ ಗೋಪುರಗಳ ಕಳಸದಂತೆ ಕನ್ನಡ ಪಸರಿಸಬೇಕು. ಹಳ್ಳಿ, ಊರು, ನಗರ, ಜಿಲ್ಲೆಗಳಲ್ಲಿ ಕನ್ನಡ ಭಾಷೆಯು ಹಬ್ಬಿಕೊಳ್ಳಬೇಕೆಂದು ಕನ್ನಡ ಭಾಷೆಯ ಮೇಲಿನ ಅಭಿಮಾನವನ್ನು ಕವಿಗಳು ವ್ಯಕ್ತಪಡಿಸಿದ್ದಾರೆ.

ಜಿ.ಎಸ್. ಶಿವರುದ್ರಪ್ಪನವರು 'ಕನ್ನಡ ರಾಜ್ಯೋದಯ' ಎಂಬ ಗೀತೆಯಲ್ಲಿ ಕನ್ನಡ ರಾಜ್ಯೋದಯವಾಗಿರುವುದು ಹೊರಗೆ ಮಾತ್ರ. ನಮ್ಮೊಳಗೆ ಇನ್ನೂ ರಾಜ್ಯೋದಯವಾಗಿಲ್ಲವೆಂಬ ವಿಷಾದವನ್ನು ಮತ್ತು ಆತಂಕವನ್ನು ವ್ಯಕ್ತಪಡಿಸಿದ್ದಾರೆ.

"ರಾಜ್ಯೋದಯದೊಂದಿಗೆ ವ್ಯಾಜ್ಯೋದಯವೂ ಆಯಿತು

ನಮ್ಮೊಳಗೊಳಗೇ
ಕನ್ನಡತನ ಕನ್ನಡ ಸಂಸ್ಕೃತಿ ಈ ಎಲ್ಲವು ಉಳಿದವು
ಎಲ್ಲೋ ತಳದೊಳಗೆ
ಅಂತೂ ಕನ್ನಡ ರಾಜ್ಯೋದಯವಾಗಿದೆ ಹೊರಗೆ,
ಇನ್ನೂ ಕನ್ನಡ ರಾಜ್ಯೋದಯವಾಗುವುದಿದೆ
ನಮಗೂ ನಿಮಗೂ ಒಳಗೆ"[26]

ಕನ್ನಡವೆಂದರೆ ದೇಶವಲ್ಲ, ಭಾಷೆಯಲ್ಲ, ಮೆರವಣಿಗೆಯ ಸಂದರ್ಭದಲ್ಲಿ ಕೂಗುವ ಘೋಷಣೆಗಳಲ್ಲ, ರಾಜಕೀಯ ಓಟಿಗಾಗಿ ಮಾಡುವ ಹಸಿ ಹಸಿ ಭಾವಾವೇಶಗಳ ಭಾಷಣಗಳಲ್ಲಿ ಕನ್ನಡವೆಂಬುವುದು ಕೆಚ್ಚಿಗೆ, ನೆಚ್ಚಿಗೆ ಆತ್ಮ ಪ್ರತ್ಯಯವಿದ್ದಂತೆ. ಶತಶತಮಾನಗಳ ಕವಿಗಳ ಕೃತಿಗಳಲ್ಲಿ, ರಾಜರ, ಸಂತರ, ಜನಸಾಮಾನ್ಯರ ಹೊಳೆಗಳಲ್ಲಿ, ಗುಡಿಗಳಲ್ಲಿ ಹಸಿರಿನ ವನಗಳಲ್ಲಿ, ಉಸಿರಿನ ಸತ್ವಗಳಲ್ಲಿ ಹಿನ್ನೆಲೆಯಾಗಿರುವ ಹೆಸರಾಗಿದೆ. ಇಂತಹ ಕನ್ನಡ ಭಾಷೆಯನ್ನು ನಮ್ಮೊಳಗಿನ ಪ್ರಜ್ಞೆಯೊಳಗೆ ಬೇರೂರುವಂತೆ ದೃಢಗೊಳಿಸಿ ನಾವು ನೀವು ಕನ್ನಡತನಕ್ಕೆ ಸ್ಥಾನವನ್ನು ಕೊಡುವ ತನಕ ಕನ್ನಡ ರಾಜ್ಯೋತ್ಸವ ಹೊರಗೆ ಮಾತ್ರ ಆಗಿರುತ್ತದೆ ಹೊರೆತು ಒಳಗೆ ಅಲ್ಲ. ಆದ್ದರಿಂದ ನಾವೆಲ್ಲರೂ ಕನ್ನಡ ಮನೆಮನಗಳಲ್ಲಿ ಕನ್ನಡ ರಾಜ್ಯೋದಯವಾಗಲು ಶ್ರಮಿಸಬೇಕೆಂದು ಕವಿಗಳು ಹೇಳಿದ್ದಾರೆ.

ಕುವೆಂಪುರವರು 'ಕನ್ನಡ ಡಿಂಡಿಮ' ಗೀತೆಯಲ್ಲಿ ಕನ್ನಡಿಗನನ್ನು ಕನ್ನಡ ಗೋವಿನ ಮುದ್ದಿನ ಕರು ಎಂದು ಕರೆದಿದ್ದಾರೆ. ಅಲ್ಲದೆ ಕನ್ನಡವೇ ಸತ್ಯ ಮತ್ತು ಕನ್ನಡವೇ ನಿತ್ಯವಾಗಿರಬೇಕೆಂದು ಕನ್ನಡ ಭಾಷೆಯ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ.

"ಎಲ್ಲಾದರೂ ಇರು, ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀ ನೆಮ್ಮಗೆ ಕಲ್ಪತರು"[27]

ಕನ್ನಡ ನಾಡಿನ ಪ್ರತಿಯೊಬ್ಬ ಕನ್ನಡಿಗನು ನೆಲೆಸಿರುವ ನೆಲೆ ಕರ್ನಾಟಕ. ಕನ್ನಡಿಗನೊಬ್ಬನು ಎಲ್ಲೇ ಇದ್ದರೂ, ಹೇಗೆ ಇದ್ದರೂ, ಕನ್ನಡಿಗನಾಗಿಯೇ ಇರಬೇಕು. ಕನ್ನಡ ಭಾಷೆಯನ್ನು ಬಿಟ್ಟರೆ ಬೇರೆ ಭಾಷೆಗಳೆಲ್ಲವನ್ನು ಕನ್ನಡದ ನೆಲದ ಮೇಲೆ ಮಿಥ್ಯವಾಗಿಸಬೇಕು. ಯಾಕೆಂದರೆ ಕನ್ನಡತನವೊಂದು ಇದ್ದರೆ ಪ್ರತಿಯೊಬ್ಬ ಕನ್ನಡಿಗನು ಕಲ್ಪವೃಕ್ಷಕ್ಕೆ ಸಮನಾಗಿರುತ್ತಾನೆಂದು ಕನ್ನಡ ಶ್ರೇಷ್ಠತೆಯನ್ನು ಕವಿಗಳು ಇಲ್ಲಿ ವ್ಯಕ್ತಪಡಿಸಿದ್ದಾರೆ.

ದೊಡ್ಡ ರಂಗೇಗೌಡರು 'ಬೆಳಗುತಿರಲಿ ಕನ್ನಡ' ಎಂಬ ಗೀತೆಯಲ್ಲಿ ಕನ್ನಡ ಭಾಷೆಯ ಶ್ರೇಷ್ಠತೆಯನ್ನು ವರ್ಣಿಸುತ್ತಾ "ಸೂರ್ಯ ಚಂದ್ರ ಇರುವ ತನಕ ಬೆಳಗುತಿರಲಿ ಕನ್ನಡ" ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

"ಸೂರ್ಯ ಚಂದ್ರ ಇರುವ ತನಕ / ಬೆಳಗುತಿರಲಿ ಕನ್ನಡ
ಕನ್ನಡ ಸಿರಿಗನ್ನಡ! / ಭೂಮಿ ಬಾನು ಇರುವ ತನಕ
ನಗುತಲಿರಲಿ ಕನ್ನಡ / ಕನ್ನಡ ಸವಿಗನ್ನಡ"[28]

ಕನ್ನಡ ಭಾಷೆಯು ಸೌಂದರ್ಯ ಪ್ರಜ್ಞೆ ಇಲ್ಲದವನನ್ನು, ಜಡವಾದವನನ್ನು, ಕಡು ಕಿವುಡರನ್ನು, ಕಣ್ ಕುರುಡರನ್ನು ತನ್ನ ಸಾಹಿತ್ಯದ ಮೂಲಕ ಪ್ರತಿಯೊಬ್ಬರನ್ನು ತನ್ನ ಕಡೆ ಗಮನ ಸೆಳೆಯುವ ಸಾಮರ್ಥ್ಯವನ್ನು ಹೊಂದಿದೆ. ಇಂತಹ ಶಕ್ತಿ ಸಾಮರ್ಥ್ಯವನ್ನು ಹೊಂದಿರುವ ಕನ್ನಡ ಭಾಷೆ ಸೂರ್ಯ, ಚಂದ್ರ, ಭೂಮಿ, ಭಾನುಗಳು ಇರುವ ತನಕ, ಕೃಷ್ಣ, ಕಾವೇರಿ ನದಿಗಳು ಹರಿಯುವ ತನಕ ನಿಂತ ನೀರಾಗದೆ ಹರಿಯುವ ನೀರಿನಂತೆ ದೇಶದಾದ್ಯಂತ ಹರಿದು ಪಸರಿಸಲಿ ಎಂಬ ಆಶಯವನ್ನು ಕವಿಗಳು ವ್ಯಕ್ತಪಡಿಸಿದ್ದಾರೆ. ಅದೇ ರೀತಿಯಾಗಿ "ಕಸ್ತೂರಿ ಕನ್ನಡ" ಗೀತೆಯಲ್ಲಿ ಕರುನಾಡು ಹಣತೆಯನ್ನು ಹಚ್ಚುವುದರ ಮೂಲಕ ಕೋಟಿ ಜನ ಮನಗಳ ಭಾಷೆಯಾಗಿರುವ ಕನ್ನಡ ಭಾಷೆಯನ್ನು ಬೆಳಗೋಣ, ಮೆರೆಸೋಣವೆಂದು ಕರೆಯನ್ನು ನೀಡಿದ್ದಾರೆ.

ಡಾ. ಕಾ.ವೆಂ. ಶ್ರೀನಿವಾಸ ಮೂರ್ತಿಯವರು "ಕರುನಾಡು ಸ್ವರ್ಗವೇನೆ" ಎಂಬ ಗೀತೆಯಲ್ಲಿ ಕನ್ನಡ ನಾಡಿನ ಶ್ರೇಷ್ಠತೆ ಮತ್ತು ಪ್ರಾಮುಖ್ಯತೆಯನ್ನು ಕೆಲವೊಂದು ನಿದರ್ಶನಗಳ ಮೂಲಕ ವರ್ಣಿಸಿರುವ ಕವಿಗಳು "ಕನ್ನಡ ಎಂದರೆ

ಬರಿ ನುಡಿ ಅಲ್ಲ" ಎಂಬ ಗೀತೆಯಲ್ಲಿ ಕನ್ನಡ ಎನ್ನುವ ಮೂರು ಅಕ್ಷರಗಳ ಪದದ ಅರ್ಥವನ್ನು ಮೈಗೂಡಿಸಿಕೊಂಡರೆ ಪ್ರತಿ ಕನ್ನಡಿಗನ ಬಾಳು ಸತ್ವಪೂರ್ಣವಾಗುತ್ತದೆ. ಕನ್ನಡ ಎಂದರೆ ಬರೀ ನುಡಿ ಅಲ್ಲ. ಕನ್ನಡವೆಂದರೆ ಕನ್ನಡಿಗನೊಬ್ಬನ ಬಾಯಿಯಿಂದ ಮುತ್ತಿನ ಮಣಿಗಳಂತೆ ಹೊರಹೊಮ್ಮುವ ಸಂಗೀತದ ಹೊನಲು ಎಂದು ಹೇಳಿದ್ದಾರೆ.

"ಕನ್ನಡ ಎಂದರೆ ಬರಿ ನುಡಿ ಅಲ್ಲ । ಮುತ್ತಿನ ಮಣಿಸಾಲು
ಕನ್ನಡ ಎನ್ನಲು ನಿನ ಕೊರಳಲ್ಲಿ । ಸಂಗೀತದ ಹೊನಲು ॥
ಕನ್ನಡ ಎನ್ನುವ ಮೂರಕ್ಷರದಿ । ಏನಿತೋ ಅರ್ಥವಿದೆ
ಕನ್ನಡತನವ ಮೈಗೂಡಿಸಿದರೆ । ಬಾಳಿಗೆ ಸತ್ವವಿದೆ"[29]

ದೇವಿ ಶಾರದೆಯ ಭಾಷೆಗಳಲ್ಲಿ ಮೊದಲ ಭಾಷೆ. ಕನ್ನಡ ಈ ಭಾಷೆಯು ಹಲವು ಭಾಷೆಗಳ ಉಗಮಕ್ಕೆ ಕಾರಣವಾಗಿದೆ. ಇಂತಹ ಭಾಷೆಯನ್ನು ಹಾಡಲು ಮತ್ತು ಕೇಳಲು ಬಲು ಇಂಪಾಗಿರುತ್ತದೆ. ಕೋಗಿಲೆಯು ಕೂಗುವ ಧ್ವನಿಯಲ್ಲಿ ಹೊರಡುವ ಮೊದಲ ಅಕ್ಷರವೇ ಕನ್ನಡ ಭಾಷೆಯದಾಗಿದೆ. ಇಂತಹ ನೆಲದಲ್ಲಿ ಹುಟ್ಟಿರುವುದು ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯಫಲವಾಗಿದೆ. ಮುಂದಿನ ಜನ್ಮದಲ್ಲಿ ಹುಟ್ಟುವುದಾದರೆ ಈ ಕನ್ನಡ ನಾಡಿನಲ್ಲಿ ಎಂದು "ಹುಟ್ಟುವುದಿದ್ದರೆ ಮರು ಜನುಮದಲಿ" ಎಂಬ ಗೀತೆಯಲ್ಲಿ ಶಪಥ ಮಾಡಿರುವ ಕವಿಗಳು "ಎತ್ತಸಾಗಿದೆಯೋ ಕನ್ನಡದ ರಥವು" ಎಂಬ ಗೀತೆಯಲ್ಲಿ ಪ್ರಸ್ತುತ ದಿನಗಳಲ್ಲಿ ಜಾಗತೀಕರಣ ಮತ್ತು ಆಧುನಿಕರಣದ ಹೆಸರಿನಲ್ಲಿ ಕನ್ನಡ ಭಾಷೆ ಅಳಿವಿನಂಚಿಗೆ ಸಾಗುತ್ತಿದೆಯೆಂದು ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

"ಎತ್ತಸಾಗಿದೆಯೋ ಕನ್ನಡ ರಥವು । ತಿಳಿಯುತ್ತಿಲ್ಲವಲ್ಲ
ಹಿಂದಕ್ಕೂ ಮುಂದಕ್ಕೂ ಬೆಟ್ಟಕ್ಕೂ ಕಡಲಿಗೂ । ಅಯ್ಯೋಮಯವು ಎಲ್ಲ!
ಕನ್ನಡಕ್ಕೆಂಟು ಜ್ಞಾನಪೀಠಗಳು । ಬೀಗುತಿರುವೆವಲ್ಲಾ
ಕುಸಿಯುತ್ತಲಿರುವ ನೆಲವು ಕಣ್ಣಿಗೆ । ಕಾಣುತ್ತಿಲ್ಲವಲ್ಲ!!"[30]

ಇಂತಹ ಸ್ಥಿತಿಯನ್ನು ಮತ್ತು ಅಸಹಾಯಕತೆಯನ್ನು ಕಂಡ ಕವಿಗಳು "ಗಂಚಾಲಿ ಬಿಡಿ ಕನ್ನಡ ಮಾತಾಡಿ"ಎಂಬ ಗೀತೆಯಲ್ಲಿ ಕನ್ನಡ ನಾಡಿನಲ್ಲಿ

ವಾಸಿಸುವ ಪ್ರತಿಯೊಬ್ಬನು ಕನ್ನಡ ಭಾಷೆಯನ್ನು ಮಾತನಾಡಬೇಕೆಂದು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

"ಗಾಂಚಾಲಿ ಬಿಡಿ, ಕನ್ನಡ ಮಾತಾಡಿ ॥ಪ॥
ಬಿಟ್ಟರೆ ಗಂಚಾಲಿ ಕನ್ನಡ ಗ್ಯಾರಂಟಿ ॥ಅ.ಪ॥
ತಮಿಳುನಾಡಲ್ಲಿ ಇಲ್ಲದ ಗಾಂಚಾಲಿ । ಆಂಧ್ರದಲ್ಲಿ ಸಹ ತೋರದ ಗಾಂಚಾಲಿ
ಕನ್ನಡ ನಾಡಲ್ಲಿ ತೋರುವಿರೇಕೆ... । ಗಾಂಚಾಲಿ ಬಿಡಿ, ಕನ್ನಡ ಮಾತಾಡಿ"[31]

'ಗಾಂಚಾಲಿ ಬಿಡಿ ಕನ್ನಡ ಮಾತಾಡಿ' ಎಂದು ಪ್ರಾರಂಭಗೊಳ್ಳುವ ಈ ಗೀತೆಯಲ್ಲಿ ಕನ್ನಡ ಉಳಿಯಬೇಕೆಂದರೆ ಮೊದಲು ಗಾಂಚಾಲಿ ಬಿಡಬೇಕೆಂದು ಕವಿಗಳು ಹೇಳಿದ್ದಾರೆ. ತಮಿಳಿಗರು, ಆಂಧ್ರದವರು ತಮ್ಮ ರಾಜ್ಯ ಭಾಷೆಯನ್ನು ಹೊರತುಪಡಿಸಿ ಬೇರೆ ಯಾವುದೇ ಭಾಷೆಯನ್ನು ಮಾತನಾಡುವುದಿಲ್ಲ. ಆದರೆ ಕರ್ನಾಟಕದಲ್ಲಿ ಹುಟ್ಟಿ ಬೆಳೆದಿರುವ, ಕನ್ನಡ ರಾಜ್ಯಕ್ಕೆ ವಲಸೆ ಬಂದು ತಲೆಮಾರುಗಳಿಂದ ಕನ್ನಡ ನಾಡಿನಲ್ಲಿ ವಾಸಿಸುತ್ತಿರುವವರು ಕನ್ನಡವನ್ನು ಕಂಡರೆ ಮೂಗು ಮುರಿದುಕೊಳ್ಳುತ್ತಾರೆ. ನಾಡಿನಲ್ಲಿ ಬೆಳೆಯುವ ಅನ್ನಬೇಕು, ವಸತಿ ಬೇಕು, ಕುಡಿಯುವುದಕ್ಕೆ ಕಾವೇರಿ ನೀರು ಬೇಕು. ಆದರೆ ಮಾತನಾಡಕ್ಕೆ ಕನ್ನಡ ಭಾಷೆ ಮಾತ್ರ ಬೇಡ. ಸ್ವಚ್ಛಂದ ಕನ್ನಡಿಗನೊಬ್ಬನು ಅನ್ಯ ರಾಜ್ಯಗಳಿಗೆ ಹೋಗಿ ಆಯಾ ಆಯಾ ರಾಜ್ಯ ಭಾಷೆಯಲ್ಲಿ ವ್ಯವಹರಿಸುವಂತೆ ಕನ್ನಡ ನಾಡಿನಲ್ಲಿಯೇ ವಾಸಿಸುವ ನೀವು ಗಾಂಚಾಲಿ ಬಿಟ್ಟು ಕನ್ನಡ ಮಾತನಾಡಿ ಎಂದು ಕವಿ ಮೂದಲಿಸಿದ್ದಾರೆ.

ದೊಡ್ಡ ರಂಗೇಗೌಡರವರು 'ಅಳಿಯದು ನಮ್ಮ ಕನ್ನಡ' ಎಂಬ ಗೀತೆಯಲ್ಲಿ ಇಡೀ ರಾಜ್ಯದಲ್ಲಿ ಜಾಗತೀಕರಣ, ನಗರೀಕರಣ, ಕೈಗಾರಿಕೀಕರಣ, ಉದಾರೀಕರಣ ಎಷ್ಟೇ ಬೆಳೆದರು ಕನ್ನಡ ಭಾಷೆ ಎಂದಿಗೂ ಅಳಿಯುವುದಿಲ್ಲ ಎಂದು ಸಾಂತ್ವನ ಹೇಳಿದ್ದಾರೆ.

"ಜಾಗತೀಕರಣ ಜಗವ ಕಲರೆದರೂ । ಅಳಿಯದಯ್ಯ ನಮ್ಮ ನಲ್ಮೆ ಕನ್ನಡ।
ನಾಗರೀಕರಣ ಹಬ್ಬಿ ಹರಿದರೂ । ಅಳಿಯದಯ್ಯ ನಮ್ಮ ಹಿರಿಯ ಕನ್ನಡ

ಕೈಗಾರಿಕರಣ ಕೊಟ್ಟಿ ಕೂಗಿದರು । ಉಳಿವುದಯ್ಯ ನಮ್ಮ ಪ್ರೀತಿ ಕನ್ನಡ
ಉದಾರಿಕರಣ ಇಳೆಯ ಅಳಿದರೂ । ಬೆಳೆವುದಯ್ಯ ನಮ್ಮ ಅಮೃತ ಕನ್ನಡ
ಯಾರೇನೇ ಬೊಬ್ಬೆ ಹೊಡೆದರೂ । ಕನ್ನಡದ ಪ್ರಗತಿ ಪಡೆದರೂ...
ಕೊನರುವುದು ಕನ್ನಡದ ಚಿಗುರು । ತೂಗಿ ತೊನೆವುದು ನಾಡು ನುಡಿ
ಹಸಿರು”[32]

ಕನ್ನಡ ನಾಡನ್ನು ಜಾಗತೀಕರಣ ಕಲಕಿದರೂ, ನಾಗರೀಕರಣ ಹಬ್ಬಿದರೂ, ಕೈಗಾರಿಕರಣ ಕೂಗಿದರು, ಉದಾರೀಕರಣ ಇಡೀ ರಾಜ್ಯವನ್ನು ಆಳಿದರು ನಮ್ಮ ಕನ್ನಡ ಭಾಷೆ ಅಳುಕದೆ, ಅಳಿಯದೆ ಬೆಳೆಯುತ್ತದೆ. ಯಾರೇ ಏನೇ ಮಾಡಿದರು, ಯಾವುದೇ ರೀತಿಯ ಒತ್ತಡಗಳನ್ನು ಏರಿದರೂ, ಬೊಬ್ಬೆ ಹೊಡೆದರು ಕನ್ನಡದ ಪ್ರಗತಿಯನ್ನು ತಡೆದರೂ ಭೂಮಿಯು ಇರುವ ತನಕ ಕನ್ನಡ ಭಾಷೆ ಚಿಗುರಡಿಯುತ್ತಾ ಜೀವಂತವಾಗಿ ಉಳಿಯುತ್ತದೆ ಎಂದು ಕನ್ನಡಿಗರಲ್ಲಿ ಕವಿಗಳು ಮನೋಧೈರ್ಯವನ್ನು ತುಂಬಿದ್ದಾರೆ.

ಸು. ರುದ್ರಮೂರ್ತಿ ಶಾಸ್ತ್ರಿಯವರು ‘ನಾಳೆಯ ಪ್ರಜೆ’ ಎಂಬ ಗೀತೆಯನ್ನು ರಚನೆ ಮಾಡಿದ್ದಾರೆ. “ನಾಳೆಯ ಪ್ರಜ್ಞೆ ನೀನು–ನಗುವೆ”ಎಂದು ಪ್ರಾರಂಭಗೊಳ್ಳುವ ಈ ಗೀತೆಯಲ್ಲಿ ಅನೇಕ ಕನ್ನಡಾಭಿಮಾನಿಗಳು ಉಳಿಸಿ, ಬೆಳೆಸಿದ ಕನ್ನಡ ನಾಡು ನುಡಿಯನ್ನು ಸಂರಕ್ಷಿಸುವ ಜವಾಬ್ದಾರಿ ಮುಂದಿನ ಪೀಳಿಗೆಯವರದೆಂದು ಎಚ್ಚರಿಸಿದ್ದಾರೆ.

“ನಾಳೆಯ ಪ್ರಜೆ ನೀನು–ಮಗುವೆ / ನಾಳೆಯ ನಿಜ ನೀನು
ನಾಳೆ ಕನ್ನಡದ ಕೀರ್ತಿಯ ಬೆಳಗುವ / ಉರಿಯುವ ರವಿ ನೀನು–ಮಗುವೆ
ನಾಳೆಯ ನಗು ನೀನು / ಇತಿಹಾಸದ ಹರಿತತ್ವವನರಿಯೋ
ಹಿರಿಯರ ಬಾಳಿನ ಸತ್ವ ದಿ ಬೆರೆಯೋ / ಹಿರಿತನ ಸಿರಿತನ ನಾಡಿಗೆ
ತುಂಬುವ
ಆದರ್ಶಗಳ ಕಲಿಯುವ ಬಿಳಿಯೋ”[33]

ಕನ್ನಡ ನಾಡು ನುಡಿಯನ್ನು ಬಣ್ಣಿಸುವ, ಅಳುವ, ಮತ್ತು ಬೆಳಗುವ ಜವಾಬ್ದಾರಿ ನಾಳಿನ ಮಗುವಾದ ಕನ್ನಡಿಗನದಾಗಿದ್ದು ನಾಡಿನ ಪರಂಪರೆಯನ್ನು

ಅರಿತು ಅಭಿಮಾನವನ್ನು ಗುಡಿ ಗೋಪುರದ ರೀತಿಯಲ್ಲಿ ಬೆಳೆಸಿಕೊಳ್ಳಬೇಕು. ನಾಡನ್ನು ಆಳ್ವಿಕೆ ಮಾಡಿದಂತಹ ರಾಜ ಮಹಾರಾಜರ ಶೌರ್ಯ ಪರಾಕ್ರಮಗಳನ್ನು ಕಲಿಯಬೇಕು. ಕವಿಗಳು, ದಾಸರು, ಶರಣರ ಸಾಹಿತ್ಯದ ಮಾಧುರ್ಯವನ್ನು ಮೈಮನಗಳಲ್ಲಿ ಪಸರಿಸಿಕೊಳ್ಳಬೇಕು. ಯಾಕೆಂದರೆ ನಾಳಿನ ಕನ್ನಡ ನಾಡನ್ನು ಆಳ್ವಿಕೆ ಮಾಡಿ ಕನ್ನಡದ ಕೀರ್ತಿಯನ್ನು ಬೆಳಗುವ ಸೂರ್ಯ ಕನ್ನಡಿಗನಾಗಿದ್ದು ನಾಡು ನುಡಿ ಸಂರಕ್ಷಣೆಗಾಗಿ ಹೋರಾಡಲು ಸಿದ್ಧರಿರಬೇಕು. ನಾಡು ನುಡಿ ರಕ್ಷಣೆ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವೆಂದು ಹೇಳಿದ್ದಾರೆ.

ಮುಂದುವರಿದ ಕವಿಗಳು "ಜಯವಾಗಲಿ" ಎಂಬ ಗೀತೆಯ ಮೂಲಕ ಕನ್ನಡ ನಾಡು–ನುಡಿಗಾಗಿ ಶ್ರಮಿಸಿದಂತಹ ಪುಣ್ಯವಂತರಾದ ರಾಜ ಮಹಾರಾಜರುಗಳಿಗೆ, ಧರ್ಮಕ್ಕೆ, ಕಲಾ ನಿಪುಣರಿಗೆ, ಕವಿ ಪರಂಪರೆಗೆ, ನಾಡಿನ ಗತವೈಭವವನ್ನು ಬಿಂಬಿಸುವ ಗುಡಿ ಗೋಪುರಗಳನ್ನು ಕಟ್ಟಿದಂತಹ ಶಿಲ್ಪವರ್ಯರಿಗೆ, ತತ್ವಕಾರರಿಗೆ, ಸತ್ಯಶೋಧಕರಿಗೆ, ಮತಚಾರ್ಯರಿಗೆ, ಭೋಗ ವೈಭವಕ್ಕೆ, ತ್ಯಾಗದುನ್ನತಿಗೆ, ದಾನಮಾನಗಳಿಗೆ, ಸಭ್ಯ ಸಂತತಿಗಳಿಗೆ, ನಮನಗಳನ್ನು ಸಲ್ಲಿಸುತ್ತಾ ಅವರೆಲ್ಲರಿಗೂ ಜಯವಾಗಲಿ. ಹಾಗೆಯೇ ಕನ್ನಡ ನಾಡು–ನುಡಿ ಉದ್ಧಾರಕ್ಕಾಗಿ ಶ್ರಮಿಸಿದ ಹೋರಾಟಗಾರರಿಗೆ ಜಯವಾಗಲಿ, ಕನ್ನಡನಾಡಿಗೆ ಜಯವಾಗಲಿ ಸ್ವಾಭಿಮಾನಕ್ಕೆ ಜಯವಾಗಲಿ ಎಂದು ಕವಿಗಳು ನಾಡಿನ ಸಮಸ್ತ ಜನರ ಪರವಾಗಿ ವಂದನೆಗಳನ್ನು ಸಲ್ಲಿಸಿದ್ದಾರೆ.

"ಕನ್ನಡ ನಾಡಿಗೆ ಜಯವಾಗಲಿ
ಕನ್ನಡ ಭಾಷೆಗೆ ಜಯವಾಗಲಿ
ನಾಡು ನಾಡಗಳಿಗೆ ಮಹಿಮೆಯ ನೀಡಿದ
ಪುಣ್ಯವಂತರಿಗೆ ಜಯವಾಗಲಿ

––––––––––––––––––

ಕನ್ನಡ ನಾಡಿಗೆ ಜಯವಾಗಲಿ
ಕನ್ನಡ ನುಡಿಯೇ ಬದುಕಾಗಲಿ
ಕನ್ನಡದಿಂದಲೇ ಸದ್ಗತಿಯೆನ್ನುವ
ಸ್ವಾಭಿಮಾನಕ್ಕೆ ಜಯವಾಗಲಿ."[34]

ಕೊನೆ ಟಿಪ್ಪಣಿಗಳು :

1. ಕಾ.ವೆಂ. ಶ್ರೀನಿವಾಸ ಮೂರ್ತಿ, ಕನ್ನಡ ಚಿಂತನೆ, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2021, ಪುಟ್ಟ ಸಂಖ್ಯೆ – 518
2. ಸಿ. ಆರ್ ಗೋವಿಂದರಾಜು, ಭಾಷಾ ಚಳುವಳಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2017, ಪುಟ ಸಂಖ್ಯೆ – 5
3. ಅದೇ ಪುಟ – 86
4. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 14
5. ಶೇಷಗಿರಿರಾವ್ ಎಲ್.ಎಸ್ : ಕನ್ನಡ ತಾಯಿಗೆ ನುಡಿ ನಮನ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ. 2015. ಪುಟ ಸಂಖ್ಯೆ – 29
6. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 8
7. ಶೇಷಗಿರಿರಾವ್ ಎಲ್.ಎಸ್ : ಕನ್ನಡ ತಾಯಿಗೆ ನುಡಿ ನಮನ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ. 2015. ಪುಟ ಸಂಖ್ಯೆ – 121
8. ಅದೇ ಪುಟ – 11
9. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 20
10. ಅದೇ ಪುಟ – 20
11. ಶ್ರೀನಿವಾಸ್ ಮೂರ್ತಿ ಕಾ. ವೆಂ. : ಸಮಗ್ರ ಕನ್ನಡ ನಾಡು ನುಡಿ ಗೀತೆಗಳು : ಸಂಪುಟ 1, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2022. ಪುಟ ಸಂಖ್ಯೆ – 60

12. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 9
13. ಮಲ್ಲಿಕಾರ್ಜುನ ಹುಲಗಣ್ಣನವರ : ಕನ್ನಡ ನಾಡ ಗೀತೆಗಳು ಪಾರು : ಪ್ರಕಾಶನ ಸ್ಟೇಷನ್ ರಸ್ತೆ, ಗದಗ. 2010. ಪುಟ ಸಂಖ್ಯೆ – 12
14. ಅದೇ ಪುಟ – 26–27
15. ಶ್ರೀನಿವಾಸ್ ಮೂರ್ತಿ ಕಾ. ವೆಂ. : ಸಮಗ್ರ ಕನ್ನಡ ನಾಡು ನುಡಿ ಗೀತೆಗಳು :ಸಂಪುಟ 1, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2022. ಪುಟ ಸಂಖ್ಯೆ – 170
16. ಅದೇ ಪುಟ – 268
17. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 22
18. ಶೇಷಗಿರಿರಾವ್ ಎಲ್.ಎಸ್ : ಕನ್ನಡ ತಾಯಿಗೆ ನುಡಿ ನಮನ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ. 2015. ಪುಟ ಸಂಖ್ಯೆ – 67
19. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 39
20. ಅದೇ ಪುಟ – 30
21. ಶ್ರೀನಿವಾಸ್ ಮೂರ್ತಿ ಕಾ. ವೆಂ. : ಸಮಗ್ರ ಕನ್ನಡ ನಾಡು ನುಡಿ ಗೀತೆಗಳು :ಸಂಪುಟ–2, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2022. ಪುಟ ಸಂಖ್ಯೆ – 360
22. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 34

23. ಶ್ರೀನಿವಾಸ್ ಮೂರ್ತಿ ಕಾ. ವೆಂ. : ಸಮಗ್ರ ಕನ್ನಡ ನಾಡು ನುಡಿ ಗೀತೆಗಳು :ಸಂಪುಟ–1, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2022. ಪುಟ ಸಂಖ್ಯೆ – 27
24. ಅದೇ ಪುಟ – 70
25. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ ಬೆಂಗಳೂರು. 1990. ಪುಟ ಸಂಖ್ಯೆ – 28
26. ಶೇಷಗಿರಿರಾವ್ ಎಲ್.ಎಸ್ : ಕನ್ನಡ ತಾಯಿಗೆ ನುಡಿ ನಮನ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ. 2015. ಪುಟ ಸಂಖ್ಯೆ – 108
27. ಅದೇ ಪುಟ – 70
28. ಶ್ರೀನಿವಾಸ್ ಮೂರ್ತಿ ಕಾ. ವೆಂ. : ಸಮಗ್ರ ಕನ್ನಡ ನಾಡು ನುಡಿ ಗೀತೆಗಳು :ಸಂಪುಟ–1, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2022. ಪುಟ ಸಂಖ್ಯೆ – 286
29. ಅದೇ ಪುಟ – 131
30. ಅದೇ ಪುಟ – 224
31. ಅದೇ ಪುಟ – 155
32. ಅದೇ ಪುಟ – 293
33. ಅದೇ ಪುಟ – 189
34. ಅದೇ ಪುಟ – 191

ಅಧ್ಯಯನಕ್ಕೆ ಒಳಪಡಿಸಿದ ಕೃತಿಗಳು :

1. ಕನ್ನಡ ಶಕ್ತಿ ಕೇಂದ್ರ : ಕನ್ನಡ ಕನ್ನಡಿಗ ಕರ್ನಾಟಕ : ಮಿಂಚು, 6/ಎ 4ನೇ ಅಡ್ಡ ರಸ್ತೆ, 11ನೇ ಮುಖ್ಯ ರಸ್ತೆ, ವಿಜಯನಗರ, 2ನೇ ಹಂತ, ಬೆಂಗಳೂರು. 1990.

2. ಮಲ್ಲಿಕಾರ್ಜುನ ಹುಲಗಣ್ಣನವರ : ಕನ್ನಡ ನಾಡ ಗೀತೆಗಳು ಪಾರು : ಪ್ರಕಾಶನ ಸ್ಟೇಷನ್ ರಸ್ತೆ, ಗದಗ. 2010.

3. ಶೇಷಗಿರಿರಾವ್ ಎಲ್.ಎಸ್ : ಕನ್ನಡ ತಾಯಿಗೆ ನುಡಿ ನಮನ : ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. 2015.

4. ಸಿ. ಆರ್ ಗೋವಿಂದರಾಜು, ಭಾಷಾ ಚಳುವಳಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. 2017

5. ಕಾ.ವೆಂ ಶ್ರೀನಿವಾಸ ಮೂರ್ತಿ, ಕನ್ನಡ ಚಿಂತನೆ, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2021,

6. ಶ್ರೀನಿವಾಸ್ ಮೂರ್ತಿ ಕಾ. ವೆಂ. :ಸಮಗ್ರ ಕನ್ನಡ ನಾಡು ನುಡಿ ಗೀತೆಗಳು : ಸಂಪುಟ 1, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು. 2022

ಲೇಖಕರು : ಡಾ. ರವೀಂದ್ರ ಕೆ.ವಿ
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ ರಾಮನಗರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056

***

SPECIAL EDITION

VOL. 09, ISSUE: 05 ✱ ಪ್ರತಿಸ್ಪಂದ ✱ 29 DEC 2025

ಕೊಡು ಕೊಳ್ಳುವಿಕೆಯ ಸಂಕರ

ಕರ್ನಾಟಕದ ಮಹತ್ವವನ್ನು ಭಾರತ ದೇಶದೊಂದಿಗೆ ಅಭಿವ್ಯಕ್ತಪಡಿಸುವ ಗೀತೆ ಇದು. ಈ ಗೀತೆಯ ರಚನೆಯ ಸಂದರ್ಭವು ವಿಭಿನ್ನವಾಗಿರಬಹುದು. ಅದೇ ಸಂದರ್ಭದಲ್ಲಿ ಹಲವು ನಾಡಗೀತೆಗಳು ಸೃಷ್ಟಿಯಾಗಿರಬಹುದು. ಇವೆಲ್ಲಗಳನ್ನು ನೆನಪಿಸಿಕೊಳ್ಳಲು ಕುವೆಂಪು ರಚನೆಯ ನಾಡಗೀತೆಗೆ ಶತಮಾನದ ಹಾದಿ ಇದು.

ನಾಡಗೀತೆಯು ಪರಿಪೂರ್ಣವಾಗಿ ವಿಶ್ವಮಾನವ ಸಂದೇಶದ ಹಿನ್ನಲೆಯಲ್ಲಿ ರಚನೆಯಾಗಿದೆ. ಕುವೆಂಪು ಈ ವಿಚಾರವನ್ನು 'ಸರ್ವ ಜನಾಂಗದ ತೋಟ' ಎಂದಿದ್ದಾರೆ. ಇಲ್ಲಿ ಸಾಮರಸ್ಯವೇ ಪ್ರಧಾನವಾಗಿದೆ. ಕನ್ನಡಿಗರು ಸದಾ ರಸಿಕರು. ಎಲ್ಲವನ್ನೂ ಪ್ರೀತಿಯಿಂದ ಸ್ವೀಕರಿಸುವ, ಒಳಿತನ್ನೇ ಆಲೋಚಿಸುವ ಆರೋಗ್ಯ ಮನಸ್ಸು ಉಳ್ಳವರು. ಇಲ್ಲಿ ಎಲ್ಲಾ ಧರ್ಮಗಳು ಉದ್ಯಾನದಂತೆ ಕಂಗೊಳಿಸುತ್ತವೆ. ಆದರೆ, ಇದೇ ಧರ್ಮಗಳ ನಡುವೆ ವೈಷಮ್ಯ ಬೆಳೆದರೆ, ಜನಕನಿಗೆ ಹೋಲಿಸಬಹುದಾದ ದೊರೆಗಳು ಅತ್ಯಂತ ಕೆಡುಕಿನ ಆಡಳಿತ ಮಾಡಿದರೆ, ಕನ್ನಡ ಭಾಷೆಯ ಈ ಮನೆಯು, ಇಲ್ಲಿನ ಮಕ್ಕಳ ದೇಹವು ಹೇಗೆ ಆನಂದಿಸಲು ಸಾಧ್ಯ. ವಿಶ್ವಮಾನವ ಸಂದೇಶವು ಪ್ರತಿಯೊಬ್ಬರೂ ಓದಿ, ಅಳವಡಿಸಿಕೊಳ್ಳಬೇಕಾದ ಧರ್ಮ ಸಾರ. ಆಗ ಮಾತ್ರ ನಾಡಗೀತೆಗೆ ಅರ್ಥಬರುತ್ತದೆ.

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

LITERATURE, CULTURE - RESEARCH QUARTERLY

PEER - REVIEWED JOURNAL

ISSN: 2320-9941